ಸೋಮವಾರ, ಜುಲೈ 5, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 186 | ಪುಟ 10 + 2

● www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ
ಕೋವಿಡ್ ಸಂದರ್ಭದಲ್ಲಿ ಪ್ರಾಯೋಗಿಕ ಕಲಿಕೆಗೆ ಕೌಶಲ ಪ್ರಯೋಗಾಲಯಗಳು ವೈದ್ಯಕೀಯ ವಿದ್ಯಾರ್ಥಿಗಳ ನೆರವಿಗೆ ಬಂದಿವೆ

ಆಳ-ಅಗಲ
ರಾಜ್ಯದಲ್ಲಿ ಈಜುಕೊಳಗಳ ವ್ಯವಸ್ಥೆ- ಅವ್ಯವಸ್ಥೆ

ಪೈಪ್‌ಲೈನ್‌ನಲ್ಲಿ ಸಿಲುಕಿದ್ದ ರೈತನ ರಕ್ಷಣೆ 4

ಯೋಗಿಗೆ ಅಭಿನಂದನೆ: ಆರ್‌ಎಲ್‌ಡಿ ಮುಖಂಡ ಜಯಂತ್ ಲೇವಡಿ

ಕೋವಿಡ್ ದೃಢ ಪ್ರಮಾಣ ಶೇ 1.02ಕ್ಕೆ ಇಳಿಕೆ 8

‘ಸೈನಾ ನೆಹ್ವಾಲ್ ಸರ್ಕಾರಿ ಶಟ್ಲರ್’ 9

SL Jewellers
ನೀವು ಗಿರವಿಯಿಟ್ಟು ಬಿಡಿಸಿಕೊಳ್ಳಲಾಗದ ಚಿನ್ನಾಭರಣಗಳನ್ನು ನಾವೆ ಹಣಕೊಟ್ಟು ಬಿಡಿಸಿ ಮಾರುಕಟ್ಟೆಗಿಂತ ಅಧಿಕ ಬೆಲೆಗೆ ತೆಗೆದುಕೊಂಡು ಉಳಿದ ಹಣ ತಕ್ಷಣ ಕೊಡುತ್ತೇವೆ ಮತ್ತು ನಮ್ಮ S.L Jewellers ಗೆ ಕೆಲಸ ಮಾಡಲು ಬೆಂಗಳೂರಿನ ಪುರುಷರು ಮತ್ತು ಮಹಿಳೆಯರು ಬೇಕಾಗಿದ್ದಾರೆ. ಬೈಕ್ ಇರಬೇಕು ಯಾವುದೇ ಟಾರ್ಗೆಟ್ ಇಲ್ಲ. ಬೆಂಗಳೂರಿನಲ್ಲಿ ಇಂಟರ್‌ವ್ಯೂ ಇರುತ್ತದೆ. ತಕ್ಷಣ ಕೆಲಸ ಕೊಡುತ್ತೇವೆ.
ಸಂಬಳ: 25,000
8904769265

ರಾಜ್ಯ ಕೋವಿಡ್ ಅಂಕಿ–ಅಂಶ

28,53,643 ▲	ಒಟ್ಟು ಸೋಂಕಿತರು (28,52,997 ನಿನ್ನೆಯ ವಿವರ)
44,846 ▼	ಸಕ್ರಿಯ ಪ್ರಕರಣಗಳು
27,73,407 ▲	ಗುಣಮುಖರಾದವರು
35,367 ▲	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	1,564 ▼
ಗುಣಮುಖ	4,775 ▼
ಸಾವು	59 ▼

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ರನ್ ಶಿಖರದ ಒಡತಿ ಮಿಥಾಲಿ ರಾಜ್ 10

ಇಂದಿನ ಪಾಡ್‌ಕಾಸ್ಟ್ ವಿಶೇಷ
ಪ್ರಜಾವಾಣಿ ಕನ್ನಡ ಧ್ವನಿ
ವಚನವಾಣಿ
ಪ್ರತೀ ದಿನ: ದಿನದ ಸೂಕ್ತಿ, ಸಂಪಾದಕೀಯ, ಪ್ರಚಲಿತ
Prajavani.net/podcast

ಚಿನಕುರಳಿ
ಪ್ರಕಾಶ್ ಶೆಟ್ಟಿ

ಎಲ್ಲೆಡೆ ನಿರಾಳ ● ಕೊಡಗು, ಹಾಸನ – ನಿರ್ಬಂಧ ಮುಂದುವರಿಕೆ

ಸಹಜ ಸ್ಥಿತಿಯತ್ತ ಕರ್ನಾಟಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊಡಗು ಮತ್ತು ಹಾಸನ ಜಿಲ್ಲೆಗಳನ್ನು ಹೊರತು ಪಡಿಸಿ ರಾಜ್ಯದಾದ್ಯಂತ ಸೋಮವಾರ ಬೆಳಿಗ್ಗೆಯಿಂದ ಲಾಕ್‌ಡೌನ್ ಸಡಿಲಿಕೆಯ ಮೂರನೇ ಹಂತ ಜಾರಿಗೆ ಬರಲಿದೆ. ದೇವಸ್ಥಾನ, ಮಾಲ್ ತೆರೆಯಲು ಅವಕಾಶ ದೊರೆಯಲಿದ್ದು, ಬಹುತೇಕ ನಿರ್ಬಂಧಗಳು ರದ್ದಾಗಲಿವೆ.

ಕೋವಿಡ್ ಎರಡನೇ ಅಲೆಯು ರಾಜ್ಯವ್ಯಾಪಿ ಹರಡಿದ ಕಾರಣದಿಂದ ಮೇ 10ರಂದು ಲಾಕ್‌ಡೌನ್ ಜಾರಿಗೊಳಿಸಲಾಗಿತ್ತು. ಅಂದಿನಿಂದಲೂ ಬಂದ್ ಆಗಿದ್ದ ದೇವಸ್ಥಾನಗಳು ಸೋಮವಾರ ಸಾರ್ವಜನಿಕರ ಪ್ರವೇಶಕ್ಕೆ ಮುಕ್ತವಾಗಲಿವೆ. ಭಕ್ತರು ದೇವರ ದರ್ಶನವನ್ನಷ್ಟೇ ಪಡೆಯಲು ಅವಕಾಶವಿದ್ದು, ಯಾವುದೇ ಸೇವೆಗಳಿಗೆ ಅನುಮತಿ ಇರುವುದಿಲ್ಲ. ಮಾಲ್‌ಗಳಲ್ಲೂ ವ್ಯಾಪಾರ ವಹಿವಾಟು ನಡೆಸಲು ಅವಕಾಶ ದೊರೆಯಲಿದೆ. ದೇವಸ್ಥಾನಗಳು ಮತ್ತು ಮಾಲ್‌ಗಳನ್ನು ತೆರೆಯಲು ಕೋವಿಡ್ ಮಾರ್ಗಸೂಚಿಯ ಅನುಸಾರ ಸಿದ್ಧತೆ ಮಾಡಿಕೊಳ್ಳುತ್ತಿದ್ದ ದೃಶ್ಯಗಳು ರಾಜ್ಯದೆಲ್ಲೆಡೆ ಕಂಡುಬಂದಿವೆ.

ಬೆಳಿಗ್ಗೆ 5ರಿಂದ ರಾತ್ರಿ 9 ಗಂಟೆಯವರೆಗೆ ಎಲ್ಲ ವಾಣಿಜ್ಯ ಚಟುವಟಿಕೆಗಳನ್ನು ನಡೆಸಲು ಅವಕಾಶ ದೊರೆಯಲಿದೆ. ಇದರಿಂದಾಗಿ ರಾಜ್ಯದಾದ್ಯಂತ ವಾಣಿಜ್ಯ ಚಟುವಟಿಕೆಗಳು ಚುರುಕಾಗಲಿವೆ. ಇನ್ನು ವಾರಾಂತ್ಯದ ಕರ್ಫ್ಯೂ ಕೂಡ ರದ್ದಾಗಲಿದೆ. ರಾತ್ರಿ 9ರಿಂದ ಬೆಳಿಗ್ಗೆ 5ರವರೆಗೆ ‘ರಾತ್ರಿ ಕರ್ಫ್ಯೂ’ ಮಾತ್ರ ಇರಲಿದೆ. ಇದರಿಂದಾಗಿ ಆರ್ಥಿಕ ಚಟುವಟಿಕೆಗಳು ಬಿರುಸಾಗುವ ನಿರೀಕ್ಷೆ ಇದೆ.

ಎಲ್ಲ ಸರ್ಕಾರಿ, ಖಾಸಗಿ ಕಚೇರಿಗಳು, ಕೈಗಾರಿಕೆಗಳು ಮತ್ತು ವಾಣಿಜ್ಯ ಸಂಸ್ಥೆಗಳಲ್ಲಿ ಸಂಪೂರ್ಣ ಸಿಬ್ಬಂದಿಯನ್ನು ಬಳಸಿಕೊಂಡು ಚಟುವಟಿಕೆ ನಡೆಸಲು ಅವಕಾಶ ಲಭ್ಯವಾಗಲಿದೆ. ನಗರ ಮತ್ತು ಪಟ್ಟಣಗಳಿಂದ ಹಳ್ಳಿಗಳತ್ತ ವಲಸೆ ಹೋಗಿದ್ದವರಲ್ಲಿ ಕೆಲವು ಮಂದಿ ಸೋಮವಾರದಿಂದ ಪುನಃ ನಗರಗಳತ್ತ ಮುಖ ಮಾಡಲಿದ್ದಾರೆ.

ಸಾರ್ವಜನಿಕ ಸಾರಿಗೆ ಸಂಪೂರ್ಣ ಲಭ್ಯ: ರಾಜ್ಯದಾದ್ಯಂತ ಬಸ್ ಸೇವೆ ಪೂರ್ಣ ಪ್ರಮಾಣದಲ್ಲಿ ಲಭ್ಯವಾಗಲಿದೆ. ಎಲ್ಲ ಆಸನಗಳನ್ನೂ ಭರ್ತಿ ಮಾಡಿಕೊಂಡು ಬಸ್ ಓಡಿಸಲು ಅನುಮತಿ ನೀಡಿದ್ದು, ರಾಜ್ಯದ ಎಲ್ಲ ಸಾರಿಗೆ ನಿಗಮಗಳೂ ಹೆಚ್ಚಿನ ಸಂಖ್ಯೆಯ ಬಸ್‌ಗಳನ್ನು ರಸ್ತೆಗಿಳಿಸಲು ಸಿದ್ಧತೆ ಮಾಡಿಕೊಂಡಿವೆ.

8ನೇ ಪುಟ ನೋಡಿ

ಸೋಮವಾರದಿಂದ ಈಜುಕೊಳಗಳನ್ನು ತೆರೆಯಲು ಸರ್ಕಾರ ಅನುಮತಿ ನೀಡಿರುವ ಕಾರಣ ಬೆಂಗಳೂರಿನ ಬಸವನಗುಡಿಯ ಈಜುಕೊಳವನ್ನು ಸಿಬ್ಬಂದಿ ಭಾನುವಾರ ಸ್ವಚ್ಛಗೊಳಿಸಿದರು ಪ್ರಜಾವಾಣಿ ಚಿತ್ರ/ರಂಜು ಪಿ.

ಪ್ರಮುಖ ದೇವಸ್ಥಾನಗಳಲ್ಲಿ ಇಂದಿನಿಂದ ದರ್ಶನ

ರಾಜ್ಯದ ಪ್ರಮುಖ ದೇವಸ್ಥಾನಗಳಲ್ಲಿ ಸೋಮವಾರದಿಂದ (ಜು. 5) ಭಕ್ತರಿಗೆ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿದೆ. ಆದರೆ, ಉಡುಪಿಯ ಕೃಷ್ಣ ಮಠ ಹಾಗೂ ಸವದತ್ತಿ ಯಲ್ಲಮ್ಮ ದೇವಸ್ಥಾನದ ಪ್ರವೇಶಕ್ಕೆ ನಿರ್ಬಂಧ ಮುಂದುವರಿದಿದೆ.

ಶೃಂಗೇರಿ ಶಾರದಾಂಬೆ ದೇಗುಲ, ಹೊರನಾಡಿನ ಅನ್ನಪೂರ್ಣೇಶ್ವರಿ ದೇವಸ್ಥಾನ, ಕೊಲ್ಲೂರು ಮೂಕಾಂಬಿಕಾ ದೇವಸ್ಥಾನ, ಮಂದಾರ್ತಿಯ ದುರ್ಗಾ ಪರಮೇಶ್ವರಿ ದೇವಸ್ಥಾನ, ಧರ್ಮಸ್ಥಳದ ಮಂಜುನಾಥೇಶ್ವರ ದೇವಸ್ಥಾನ, ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನಗಳಲ್ಲಿ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿದೆ.

8ನೇ ಪುಟ ನೋಡಿ

ಏನೆಲ್ಲಾ ಇರಲಿದೆ?

- ಸರ್ಕಾರಿ, ಖಾಸಗಿ ಕಚೇರಿಗಳು, ಕೈಗಾರಿಕೆ ಮತ್ತು ವಾಣಿಜ್ಯ ಸಂಸ್ಥೆಗಳು ಪೂರ್ಣ ಪ್ರಮಾಣದಲ್ಲಿ ಕಾರ್ಯನಿರ್ವಹಿಸಬಹುದು.
- ದೇವಸ್ಥಾನ, ಮಾಲ್, ವಾಣಿಜ್ಯ ಸಂಕೀರ್ಣಗಳು ಸಾರ್ವಜನಿಕರ ಪ್ರವೇಶಕ್ಕೆ ಮುಕ್ತವಾಗಲಿವೆ.
- ಮೆಟ್ರೊ, ಬಸ್ ಸೇರಿದಂತೆ ಸಾರ್ವಜನಿಕ ಸಾರಿಗೆಯಲ್ಲಿ ಶೇ 100ರಷ್ಟು ಸೀಟುಗಳ ಭರ್ತಿಗೆ ಅವಕಾಶ
- ಮದುವೆ ಮತ್ತಿತರ ಸಮಾರಂಭಗಳಿಗೆ 100 ಜನ ಮತ್ತು ಅಂತ್ಯಸಂಸ್ಕಾರದಲ್ಲಿ 20 ಜನ ಪಾಲ್ಗೊಳ್ಳಬಹುದು
- ಈಜು ಕೊಳ, ಕ್ರೀಡಾ ಸಂಕೀರ್ಣಗಳು ಕ್ರೀಡಾಪಟುಗಳಿಗೆ ಮಾತ್ರ ತೆರೆಯಲಿವೆ
- ಬಾರ್‌ಗಳಲ್ಲಿ ಕುಳಿತು ಮದ್ಯ ಸೇವನೆಗೆ ಅವಕಾಶ

ಏನೆಲ್ಲಾ ಇರುವುದಿಲ್ಲ?

- ಚಿತ್ರಮಂದಿರ, ಪಬ್ ತೆರೆಯುವಂತಿಲ್ಲ
- ರಾಜಕೀಯ, ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಸಮಾರಂಭ ನಡೆಸುವಂತಿಲ್ಲ
- ಕ್ರೀಡಾಕೂಟಗಳಲ್ಲಿ ಪ್ರೇಕ್ಷಕರು ಪಾಲ್ಗೊಳ್ಳಲು ಅನುಮತಿ ಇಲ್ಲ
- ಶಾಲೆ, ಕಾಲೇಜುಗಳಲ್ಲಿ ಭೌತಿಕ ತರಗತಿಗಳನ್ನು ನಡೆಸುವಂತಿಲ್ಲ

ಕೋವಿಡ್ 3ನೇ ಅಲೆಗೆ ಬಿರುಸು ಕಡಿಮೆ

ನವದೆಹಲಿ (ಪಿಟಿಐ): ಕೋವಿಡ್–19ರ ಮೂರನೇ ಅಲೆಯು ದೇಶದಲ್ಲಿ ಕಾಣಿಸಿಕೊಂಡರೆ, ಅದು ಎರಡನೇ ಅಲೆಯಷ್ಟು ತೀವ್ರವಾಗಿ ಇರಲಿಕ್ಕಿಲ್ಲ ಎಂದು ಸರ್ಕಾರ ನೇಮಿಸಿರುವ ಸಮಿತಿಯೊಂದರ ವಿಜ್ಞಾನಿಗಳು ಹೇಳಿದ್ದಾರೆ.

ಕೋವಿಡ್ ತಡೆ ಕ್ರಮಗಳನ್ನು ಸರಿಯಾಗಿ ಪಾಲಿಸದಿದ್ದಲ್ಲಿ ಸಂಭಾವ್ಯ ಮೂರನೇ ಅಲೆಯು ಆಗಸ್ಟ್ ಮಧ್ಯಭಾಗದಲ್ಲಿ ಶುರುವಾಗಿ, ಅಕ್ಟೋಬರ್–ನವೆಂಬರ್ ವೇಳೆಗೆ ಗರಿಷ್ಠ ಮಟ್ಟವನ್ನು ಮುಟ್ಟಲಿದೆ ಎಂದು ವಿಜ್ಞಾನಿಗಳು ಅಂದಾಜಿಸಿದ್ದಾರೆ.

ಮೂರನೇ ಅಲೆ ಸಂದರ್ಭದಲ್ಲಿ ದಿನನಿತ್ಯ ದಾಖಲಾಗುವ ಪ್ರಕರಣಗಳ ಸಂಖ್ಯೆಯು ಎರಡನೇ ಅಲೆಯ ದೈನಂದಿನ ಪ್ರಕರಣಗಳ ಅರ್ಧದಷ್ಟು ಇರಬಹುದು. ಸಾರ್ಸ್ ಕೋವ್–2 ವೈರಾಣುವು ಹೊಸ ರೂಪಾಂತರ ಹೊಂದಿದರೆ, ಮೂರನೇ ಅಲೆಯಲ್ಲಿ ಸೋಂಕು ವೇಗವಾಗಿ ಹರಡಬಹುದು ಎಂದು ‘ಸೂತ್ರ’ ಮಾದರಿ ಆಧರಿಸಿ ವಿಜ್ಞಾನಿ ಮನೀಂದ್ರ ಅಗರ್‌ವಾಲ್ ತಿಳಿಸಿದ್ದಾರೆ.

ಕೋವಿಡ್ ಪ್ರಕರಣಗಳ ಮಾದರಿಯನ್ನು ನಿರ್ವಹಿಸುವ ಸರ್ಕಾರಿ ಸಮಿತಿಯ ವಿಜ್ಞಾನಿಗಳು ಗಣಿತಶಾಸ್ತ್ರೀಯವಾಗಿ ಅಧ್ಯಯನ ನಡೆಸಿದ್ದಾರೆ. ಗಣಿತದ ಮಾದರಿಗಳನ್ನು ಬಳಸಿಕೊಂಡು ಕೊರೊನಾ ಪ್ರಕರಣಗಳ ಉಲ್ಬಣವನ್ನು ಲೆಕ್ಕಹಾಕಲು ಈ ಸಮಿತಿಯನ್ನು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯು ಕಳೆದ ವರ್ಷ ರಚಿಸಿತ್ತು.

ಎರಡನೇ ಅಲೆಯ ತೀವ್ರತೆಯನ್ನು ಅಂದಾಜಿಸುವಲ್ಲಿ ಸಮಿತಿ ವಿಫಲವಾಗಿತ್ತು ಎಂಬ ಆರೋಪಗಳು ಕೇಳಿಬಂದಿದ್ದವು.

‘ನಾವು ಮೂರು ಸನ್ನಿವೇಶಗಳನ್ನು ಊಹಿಸಿದ್ದೇವೆ. ಮೊದಲನೆಯದು ಆಶಾದಾಯಕ. ಇದರ ಪ್ರಕಾರ, ಆಗಸ್ಟ್ ವೇಳೆಗೆ ಜನಜೀವನವು ಸಾಮಾನ್ಯ ಸ್ಥಿತಿಗೆ ಮರಳುತ್ತದೆ. ಹೊಸ ರೂಪಾಂತರ ವೈರಾಣು ಕಂಡುಬರುವುದಿಲ್ಲ. ಎರಡನೆಯದು, ಲಸಿಕೆಯ ಪರಿಣಾಮವು ಅಂದುಕೊಂಡಿದ್ದಕ್ಕಿಂತ ಶೇ 20ರಷ್ಟು ಕಡಿಮೆ ಎಂದು ಭಾವಿಸಿದ್ದರೂ ಆಶಾದಾಯಕವಾದ ಚಿತ್ರಣ’

‘ಮೂರನೆಯ ಸನ್ನಿವೇಶವು ಭಿನ್ನವಾಗಿದ್ದು, ನಿರಾಶಾದಾಯಕವಾಗಿದೆ. ಆಗಸ್ಟ್‌ನಲ್ಲಿ ಹೊಸದಾಗಿ ಶೇ 25ಕ್ಕೂ ಹೆಚ್ಚು ರೂಪಾಂತರ ವೈರಾಣುಗಳು (ಡೆಲ್ಟಾ ಪ್ಲಸ್ ಅಲ್ಲದೆ) ಹರಡುವ ಸಾಧ್ಯತೆಯಿದೆ. ಈ ವೇಳೆ ನಿತ್ಯ 1.5 ಲಕ್ಷದಿಂದ 2 ಲಕ್ಷ ಪ್ರಕರಣ ದಾಖಲಾಗಬಹುದು’ ಎಂದು ಅಗರ್‌ವಾಲ್ ಹೇಳಿದ್ದಾರೆ.

ಐಐಟಿ-ಕಾನ್ಪುರದ ವಿಜ್ಞಾನಿಯಾಗಿರುವ ಅಗರ್‌ವಾಲ್ ಅವರ ಜೊತೆ ಐಐಟಿ-ಹೈದರಾಬಾದ್‌ನ ವಿಜ್ಞಾನಿ ಎಂ. ವಿದ್ಯಾಸಾಗರ್ ಮತ್ತು ಸಮಗ್ರ ರಕ್ಷಣಾ ಸಿಬ್ಬಂದಿಯ ಉಪ ಮುಖ್ಯಸ್ಥರಾದ (ವೈದ್ಯಕೀಯ) ಲೆಫ್ಟಿನೆಂಟ್ ಜನರಲ್ ಮಾಧುರಿ ಕಾನಿಟ್ಕರ್ ಅವರು ಸಮಿತಿಯ ಸದಸ್ಯರಾಗಿದ್ದಾರೆ.

ತುಂಬಿದ ಸಿಲಿಂಡರ್ ಖರೀದಿಸದ ಅನಿಲಭಾಗ್ಯ ಫಲಾನುಭವಿಗಳು

ಏರಿದ ದರ: ಒಲೆ ಉರಿಸದ ‘ಅನಿಲ’

● ಅಕ್ರಂ ಮೊಹಮ್ಮದ್

ಬೆಂಗಳೂರು: ಎಲ್‌ಪಿಜಿ ಸಿಲಿಂಡರ್‌ಗಳ ದರದ ಸತತ ಏರಿಕೆಯಿಂದ ರಾಜ್ಯ ಸರ್ಕಾರದ ‘ಮುಖ್ಯಮಂತ್ರಿ ಅನಿಲ ಭಾಗ್ಯ’ ಯೋಜನೆಯ ಫಲಾನುಭವಿಗಳು ಕಂಗಾಲಾಗಿದ್ದಾರೆ. ಬಡತನ ರೇಖೆಗಿಂತ ಕೆಳಗಿರುವ (ಬಿಪಿಎಲ್) ಕುಟುಂಬಗಳು ದುಬಾರಿ ದರ ಪಾವತಿಸಲಾಗದೇ ಯೋಜನೆಯಿಂದ ದೂರ ಸರಿಯುತ್ತಿವೆ.

ಅನಿಲ ಭಾಗ್ಯ ಯೋಜನೆಯಡಿ 97,256 ಫಲಾನುಭವಿಗಳಿಗೆ ಅನಿಲ ಸಂಪರ್ಕ ಕಲ್ಪಿಸಲಾಗಿತ್ತು. ಈ ಪೈಕಿ 13,461 (ಶೇ 13.8) ಮಂದಿ ಈ ವರ್ಷದ ಆರು ತಿಂಗಳಿನಲ್ಲಿ ಎಲ್‌ಪಿಜಿ ತುಂಬಿದ ಒಂದು ಸಿಲಿಂಡರ್ ಕೂಡ ಖರೀದಿಸಿಲ್ಲ. 32,462 ಮಂದಿ ಒಂದೇ ಸಿಲಿಂಡರ್ ಖರೀದಿಸಿದ್ದು, ಪ್ರತಿ ಸಿಲಿಂಡರ್ ದರ ₹ 800 ದಾಟಿದ ಬಳಿಕ ಖರೀದಿಯನ್ನೇ ಮಾಡಿಲ್ಲ.

‘ಕೇಂದ್ರ ಸರ್ಕಾರದ ಪ್ರಧಾನ ಮಂತ್ರಿ ಉಜ್ವಲ ಯೋಜನೆಯಲ್ಲೂ ಕಳೆದ ವರ್ಷದಿಂದ ಇದೇ ಪರಿಸ್ಥಿತಿ ಮುಂದುವರಿದಿದೆ. ಅನಿಲ ಭಾಗ್ಯ ಯೋಜನೆಯ ಫಲಾನುಭವಿಗಳಿಗೆ ಅನುಕೂಲವಾಗುವಂತೆ 5 ಕೆ.ಜಿ. ತೂಕದ ಸಿಲಿಂಡರ್‌ಗಳನ್ನು ವಿತರಿಸುವ ಪ್ರಸ್ತಾವ ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆ ಮುಂದಿದೆ’ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಈ ಯೋಜನೆಯ ಫಲಾನುಭವಿಗಳಿಗೆ ಸಿಲಿಂಡರ್ ಖರೀದಿಸಿದರೆ ನೇರ ನಗದು ವರ್ಗಾವಣೆ ಮೂಲಕ ಸಹಾಯಧನ ಪಾವತಿಸಲಾಗುತ್ತಿದೆ. ಆದರೆ, ಸರ್ಕಾರ ಉಚಿತವಾಗಿ ನೀಡುವ ಸಿಲಿಂಡರ್ ಖಾಲಿಯಾದ ಬಳಿಕ ಖರೀದಿಗೆ ಆಸಕ್ತಿಯನ್ನೇ ತೋರುತ್ತಿಲ್ಲ. ಗ್ರಾಮೀಣ ಪ್ರದೇಶದ ಜನರಿಗೆ ದುಬಾರಿ ದರ ಪಾವತಿಸಿ ಸಿಲಿಂಡರ್ ಖರೀದಿಸಲು ಅಸಾಧ್ಯವಾಗಿರುವುದೇ ಇದಕ್ಕೆ ಕಾರಣ ಎನ್ನುತ್ತಾರೆ ಇಲಾಖೆ ಅಧಿಕಾರಿಗಳು.

2018ರಲ್ಲಿ ಅನಿಲ ಭಾಗ್ಯ ಯೋಜನೆ ಆರಂಭಿಸಿದ್ದ ರಾಜ್ಯ ಸರ್ಕಾರ, 30 ಲಕ್ಷ ಬಿಪಿಎಲ್ ಕುಟುಂಬಗಳಿಗೆ ಎಲ್‌ಪಿಜಿ ಸಂಪರ್ಕ ಕಲ್ಪಿಸಲು ಮುಂದಾಗಿತ್ತು. ನಂತರದ ದಿನಗಳಲ್ಲಿ ಫಲಾನುಭವಿಗಳ ಸಂಖ್ಯೆಯನ್ನು ಒಂದು ಲಕ್ಷಕ್ಕೆ ಸೀಮಿತಗೊಳಿಸಲಾಗಿತ್ತು. ಪ್ರಸಕ್ತ ವರ್ಷದ ಆರಂಭದಲ್ಲಿ 97,526 ಫಲಾನುಭವಿಗಳಿದ್ದರು.

‘ಗ್ರಾಮೀಣ ಪ್ರದೇಶದಲ್ಲಿ ಎಲ್‌ಪಿಜಿ ಸಿಲಿಂಡರ್ ಬೇಗ ಖಾಲಿಯಾಗುವುದಿಲ್ಲ. ಉಚಿತವಾಗಿ ವಿತರಿಸಿದ ಮೊದಲ ಸಿಲಿಂಡರ್ ಕೆಲವರ ಮನೆಗಳಲ್ಲಿ ಆರರಿಂದ ಏಳು ತಿಂಗಳವರೆಗೂ ಬಾಳಿಕೆ ಬರುತ್ತದೆ. ಅದು ಖಾಲಿಯಾದ ಬಳಿಕ ಸಿಲಿಂಡರ್ ಖರೀದಿಗೆ ಮುಂದಾಗುವವರು ಕಡಿಮೆ’ ಎಂದು ಆಹಾರ ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

ಸಮಸ್ಯೆಗೆ ಪರಿಹಾರ ಕಲ್ಪಿಸುವ ಯತ್ನ

‘ಬಿಪಿಎಲ್ ಕುಟುಂಬದವರ ಈ ಸಮಸ್ಯೆಗೆ ಪರಿಹಾರ ಒದಗಿಸುವ ಪ್ರಯತ್ನ ನಡೆದಿದೆ’ ಆಹಾರ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಬಿ.ಎಚ್. ಅನಿಲ್ ಕುಮಾರ್ ಹೇಳಿದರು.

ದರ ಏರಿಕೆ ಬಳಿಕ ಅನಿಲ ಭಾಗ್ಯ ಫಲಾನುಭವಿಗಳು ಸಿಲಿಂಡರ್ ಖರೀದಿಗೆ ಹಿಂದೇಟು ಹಾಕುತ್ತಿರುವುದನ್ನು ಒಪ್ಪಿಕೊಂಡ ಅವರು, ‘ಬಿಪಿಎಲ್ ಕುಟುಂಬಗಳಿಗೆ ಅನುಕೂಲವಾಗುವಂತೆ 5 ಕೆ.ಜಿ. ತೂಕದ ಎಲ್‌ಪಿಜಿ ಸಿಲಿಂಡರ್‌ಗಳನ್ನು ಪೂರೈಸುವ ಕುರಿತು ಅನಿಲ ಕಂಪನಿಗಳ ಜತೆ ಮಾತುಕತೆ ನಡೆಸಲಾಗುತ್ತಿದೆ’ ಎಂದರು.

ತನಿಖೆ ಏಕಿಲ್ಲ: ರಾಹುಲ್ ಪ್ರಶ್ನೆ

ಮತ್ತೆ ಪ್ರತಿಧ್ವನಿಸಿದ ರಫೇಲ್ ಖರೀದಿ ಅವ್ಯವಹಾರ ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಫೇಲ್ ಯುದ್ಧವಿಮಾನ ಖರೀದಿ ಒಪ್ಪಂದದ ತನಿಖೆಗೆ ಸಂಬಂಧಿಸಿದಂತೆ ಪ್ರಧಾನಿ ನರೇಂದ್ರ ಮೋದಿ ಅವರ ಮೌನವನ್ನು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಲೇವಡಿ ಮಾಡಿದ್ದಾರೆ. ಈ ಸಂಬಂಧ ರಾಹುಲ್ ಅವರು ಭಾನುವಾರ ಟ್ವೀಟ್ ಮಾಡಿದ್ದಾರೆ.

ರಾಹುಲ್ ಗಾಂಧಿ

‘ನರೇಂದ್ರ ಮೋದಿ ನೇತೃತ್ವದ ಸರ್ಕಾರವು, ರಫೇಲ್ ಯುದ್ಧವಿಮಾನ ಖರೀದಿ ಒಪ್ಪಂದವನ್ನು ಜಂಟಿ ಸಂಸದೀಯ ಸಮಿತಿ (ಜೆಪಿಸಿ) ತನಿಖೆಗೆ ಏಕೆ ಒಪ್ಪಿಸುತ್ತಿಲ್ಲ’ ಎಂದು ಅವರು ಟ್ವೀಟ್‌ನಲ್ಲಿ ಪ್ರಶ್ನಿಸಿದ್ದಾರೆ. ಈ ಪ್ರಶ್ನೆಗೆ ರಾಹುಲ್ ಅವರೇ ನಾಲ್ಕು ಉತ್ತರಗಳ ಆಯ್ಕೆಯನ್ನು ನೀಡಿದ್ದಾರೆ.

‘ಅಪರಾಧಿ ಪ್ರಜ್ಞೆ’ ಎಂಬುದು ಮೊದಲ ಆಯ್ಕೆ. ‘ಸ್ನೇಹಿತರನ್ನು ರಕ್ಷಿಸಬೇಕು’ ಎಂಬುದು ಎರಡನೇ ಆಯ್ಕೆ. ‘ಜೆಪಿಸಿಗೆ ರಾಜ್ಯಸಭಾ ಸೀಟಿನ ಅವಶ್ಯಕತೆ ಇಲ್ಲ’ ಎನ್ನುವುದು ಮೂರನೇ ಆಯ್ಕೆ. ‘ಮೇಲಿನ ಎಲ್ಲಾ ಉತ್ತರಗಳೂ ಸರಿ’ ಎಂಬುದು ನಾಲ್ಕನೇ ಆಯ್ಕೆ.

ಈ ಪ್ರಶ್ನೆಯನ್ನು ರಾಹುಲ್ ಗಾಂಧಿ ಅವರು ಟ್ವಿಟರ್‌ನಲ್ಲಿ ಮತಕ್ಕೆ ಹಾಕಿದ್ದರು. 74,733 ಮಂದಿ ಹಾಕಿರುವ ಮತಗಳ ಫಲಿತಾಂಶವೂ ಟ್ವೀಟ್‌ನಲ್ಲಿ ಪ್ರಕಟವಾಗಿದೆ.

ಅಪರಾಧಿ ಪ್ರಜ್ಞೆಯೇ ಕಾರಣ ಎಂದು ಶೇ 7ರಷ್ಟು ಜನರು ಮತ ಹಾಕಿದ್ದಾರೆ. ಸ್ನೇಹಿತರನ್ನು ರಕ್ಷಿಸಬೇಕು ಎಂಬ ಆಯ್ಕೆಗೆ ಶೇ 24.3ರಷ್ಟು ಜನರು ಮತ ಹಾಕಿದ್ದಾರೆ. ಜೆಪಿಸಿಗೆ ರಾಜ್ಯಸಭಾ ಸೀಟಿನ ಅವಶ್ಯಕತೆ ಇಲ್ಲ ಎಂಬ ಆಯ್ಕೆಯನ್ನು ಶೇ 5.6ರಷ್ಟು ಜನರು ಮಾತ್ರ ಮತ ಹಾಕಿದ್ದಾರೆ. ಶೇ 63.2ರಷ್ಟು ಜನರು ಮೇಲಿನ ಎಲ್ಲಾ ಉತ್ತರಗಳೂ ಸರಿ ಎಂಬ ಆಯ್ಕೆಗೆ ಮತ ಹಾಕಿದ್ದಾರೆ.

ಮುಖ್ಯಾಂಶಗಳು

- ಟ್ವಿಟರ್‌ನಲ್ಲಿ ಪ್ರಶ್ನೆಯನ್ನು ಮತಕ್ಕೆ ಹಾಕಿದ ರಾಹುಲ್ ಗಾಂಧಿ
- ನಾಲ್ಕು ಉತ್ತರಗಳನ್ನು ಆಯ್ಕೆಯಾಗಿ ನೀಡಿದ್ದ ಕಾಂಗ್ರೆಸ್ ನಾಯಕ
- ಎಲ್ಲ ಉತ್ತರಗಳು ಸರಿ ಎಂದ ಶೇ 63ರಷ್ಟು ಮಂದಿ

ಇನ್ನಷ್ಟು ಸುದ್ದಿಗಳು 3B, 9

‘ಅಪ್ಪ ಅಂಬಾರಿ ಹೊತ್ತ ಎಂದು ಮರಿಯಾನೆಗೆ ಹೊರಿಸಲಾಗದು’

ಪ್ರಜಾವಾಣಿ ವಾರ್ತೆ

ಮೈಸೂರು: ‘ಮುಖ್ಯಮಂತ್ರಿ ಹುದ್ದೆ ಎಂಬುದು ದಸರಾ ಅಂಬಾರಿ ಹೊರುವ ಆನೆ ಇದ್ದಂತೆ. ಆನೆ ತೂಕ ಮುಖ್ಯವಲ್ಲ, ಅಂಬಾರಿಯನ್ನು ಕೊನೆ ತನಕ ತಲುಪಿಸುವ ಸಾಮರ್ಥ್ಯ ಬೇಕು. ಮುಖ್ಯಮಂತ್ರಿ ಆಗುವವರು ಸಂವೇದನಾಶೀಲರಾಗಿರಬೇಕು’ ಎಂದು ಸಚಿವ ಸಿ.ಪಿ.ಯೋಗೇಶ್ವರ್, ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಹಾಗೂ ಅವರ ಪುತ್ರ ಬಿ.ವೈ. ವಿಜಯೇಂದ್ರ ಅವರಿಗೆ ಪರೋಕ್ಷವಾಗಿ ಚಾಟಿ ಬೀಸಿದರು.

ಯೋಗೇಶ್ವರ್

ಭಾನುವಾರ ಸುದ್ದಿಗಾರರ ಜತೆ ಮಾತನಾಡಿ, ‘ಅಂಬಾರಿ ಹೊರಲು ಯಾವ ಆನೆ ಸೂಕ್ತವೆಂಬುದು ಮುಖ್ಯ. ಅಪ್ಪ ಅಂಬಾರಿ ಹೊತ್ತ ಎಂದು ಮರಿಯಾನೆಗೆ ಹೊರಿಸಲು ಸಾಧ್ಯವಿಲ್ಲ. ಬದಲಾವಣೆ ಎಂಬುದು ಜಗದ ನಿಯಮ’ ಎಂದು ಸೂಚ್ಯವಾಗಿ ತಿಳಿಸಿದರು.

‘ಮುಖ್ಯಮಂತ್ರಿ ಹುದ್ದೆ ವೈಭವಕ್ಕೆ ಮಾತ್ರ ಇರುವುದಲ್ಲ. ಜನರ ಆಶೋತ್ತರಗಳನ್ನು ಈಡೇರಿಸುವ, ಜನಪರ ಕಾಳಜಿ ಇರುವ ಹುದ್ದೆ. ಆ ಹುದ್ದೆಯಲ್ಲಿರುವವರ ಆಲೋಚನೆಗಳು ಸಮರ್ಥವಾಗಿರಬೇಕು’ ಎಂದು ಹೇಳಿದರು.

ಯಡಿಯೂರಪ್ಪ ಅವರನ್ನು ಬದಲಾಯಿಸುವ ಪ್ರಯತ್ನ ಮುಂದುವರಿದಿದೆಯೇ ಎಂಬ ಪ್ರಶ್ನೆಗೆ, ‘ನಮ್ಮದು ರಾಷ್ಟ್ರೀಯ ಪಕ್ಷ. ಪಕ್ಷದ ಚೌಕಟ್ಟಿನಲ್ಲಿದ್ದುಕೊಂಡು ಆ ರೀತಿ ದೊಡ್ಡ ದೊಡ್ಡ ಮಾತನ್ನಾಡಬಾರದು. ನಾನು ಇನ್ನೂ ಚಿಕ್ಕವನು. ನನ್ನನ್ನು ಯಡಿಯೂರಪ್ಪನವರ ವಿರೋಧಿ ಎಂದು ಬಿಂಬಿಸಬೇಡಿ’ ಎಂದು ಉತ್ತರಿಸಿದರು.

8ನೇ ಪುಟ ನೋಡಿ

> **ಅಧಿವೇಶನಕ್ಕೂ ಮುನ್ನ ಕೇಂದ್ರ ಸಂಪುಟ ವಿಸ್ತರಣೆಯಾದರೆ ಒಳಿತು. ಸಂಸದರಾದ ಉಮೇಶ್ ಜಾಧವ್, ಶಿವಕುಮಾರ್ ಉದಾಸಿ, ಶೋಭಾ ಕರಂದ್ಲಾಜೆ ಅವರಿಗೆ ಸಚಿವ ಸ್ಥಾನ ನೀಡಲಿ**
> **ವಿ.ಶ್ರೀನಿವಾಸಪ್ರಸಾದ್**
> ಸಂಸದ

‘8ರಿಂದ ಮುಂಗಾರು ಚುರುಕು’

ನವದೆಹಲಿ (ಪಿಟಿಐ): ಕೆಲ ದಿನಗಳಿಂದ ಕ್ಷೀಣಿಸಿದ್ದ ನೈರುತ್ಯ ಮುಂಗಾರು ಇದೇ 8ರಿಂದ ಚುರುಕಾಗಲಿದೆ ಎಂದು ಭೂವಿಜ್ಞಾನ ಸಚಿವಾಲಯದ ಕಾರ್ಯದರ್ಶಿ ಎಂ.ರಾಜೀವನ್ ತಿಳಿಸಿದ್ದಾರೆ.

ಬಂಗಾಳ ಕೊಲ್ಲಿಯಲ್ಲಿ ಸೃಷ್ಟಿಯಾಗುತ್ತಿರುವ ವಾತಾವರಣವನ್ನು ಗಮನಿಸಿದರೆ ಕೆಲ ದಿನಗಳಲ್ಲಿ ಮುಂಗಾರು ಚುರುಕಾಗುವ ಲಕ್ಷಣಗಳು ಗೋಚರಿಸಿವೆ. ದೇಶದ ದಕ್ಷಿಣ, ಪಶ್ಚಿಮ ಕರಾವಳಿ, ಪೂರ್ವ ಮಧ್ಯ ಭಾಗದಲ್ಲಿ ಇದೇ 8ರಿಂದ ಮಳೆಯಾಗಲಿದೆ ಎಂದು ಅವರು ಹೇಳಿದ್ದಾರೆ.

ಜೂನ್ ತಿಂಗಳ ಮೊದಲ ಎರಡೂವರೆ ವಾರಗಳವರೆಗೆ ಉತ್ತಮ ಮಳೆ ಸುರಿಸಿದ್ದ ಮುಂಗಾರು ಬಳಿಕ ಕ್ಷೀಣಿಸಿತ್ತು. ದೆಹಲಿ, ಹರಿಯಾಣ, ಉತ್ತರ ಪ್ರದೇಶದ ಪಶ್ಚಿಮದ ಭಾಗಗಳು, ಪಂಜಾಬ್, ರಾಜಸ್ಥಾನದ ಪಶ್ಚಿಮ ಭಾಗಗಳಿಗೆ ಇನ್ನೂ ಮುಂಗಾರು ಪ್ರವೇಶವೇ ಆಗಿಲ್ಲ. ದೆಹಲಿ ಸೇರಿದಂತೆ ಇತರ ಭಾಗಗಳಿಗೆ ಇದೇ 11ರ ವೇಳೆಗೆ ಮುಂಗಾರು ಪ್ರವೇಶಿಸಬಹುದು ಎಂದು ಅವರು ತಿಳಿಸಿದ್ದಾರೆ.

ದೇಶದ ಬಹುತೇಕ ಭಾಗಗಳಲ್ಲಿ ಜುಲೈ ತಿಂಗಳಲ್ಲಿ ಉತ್ತಮ ಮಳೆಯಾಗುವ ಸಾಧ್ಯತೆಯಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಘನ ತ್ಯಾಜ್ಯ ನಿರ್ವಹಣೆ: ಭೂ ಭರ್ತಿ ಕೇಂದ್ರಗಳಲ್ಲಿ ಆರೋಗ್ಯ ಸುರಕ್ಷತೆಯ ನಿರ್ಲಕ್ಷ್ಯ • ಗೊಬ್ಬರವಾಗಬೇಕಿದೆ ಕಸ

‘ಅವರ’ ನೆಮ್ಮದಿಯನ್ನೇ ಕಸಿಯಿತು ‘ನಮ್ಮನೆ’ ಕಸ

• ಗುರು ಪಿ.ಎಸ್.

ಬೆಂಗಳೂರು: ಯಾವುದೇ ಮಹಾನಗರದ ಆಡಳಿತ ವರ್ಗಕ್ಕೆ ಎದುರಾಗುವ ದೊಡ್ಡ ಸವಾಲು ಕಸ ನಿರ್ವಹಣೆ. ಈ ಜವಾಬ್ದಾರಿಯನ್ನು ಸ್ಥಳೀಯ ಆಡಳಿತ ಸಂಸ್ಥೆ ಸಮರ್ಥವಾಗಿ ನಿಭಾಯಿಸಿದ್ದೇ ಆದಲ್ಲಿ ಅರ್ಧ ಸಮಸ್ಯೆಗಳು ಬಗೆಹರಿಯುತ್ತವೆ. ಆದರೆ ಈ ಹೊಣೆ ನಿರ್ವಹಣೆಯಲ್ಲಿ ಆಗುವ ವೈಫಲ್ಯವು ಸಮಸ್ಯೆಗಳ ಸರಮಾಲೆಯನ್ನೇ ಸೃಷ್ಟಿಸುತ್ತದೆ.

‘ನಗರದಲ್ಲಿ ವೈಜ್ಞಾನಿಕವಾಗಿ ಕಸ ವಿಲೇವಾರಿ ನಡೆಯುತ್ತಿದೆ’ ಎಂದು ಬಿಬಿಎಂಪಿ ಹೇಳುತ್ತಿದೆ. ಇದಕ್ಕೆ ಪೂರಕವಾಗಿ, ಬೆಂಗಳೂರಿನ ಕಸ ನಿರ್ವಹಣೆ ಮೆಚ್ಚಿ, ಕೇಂದ್ರ ಸರ್ಕಾರವು ಸ್ಮಾರ್ಟ್ ಸಿಟಿ ಯೋಜನೆಯಡಿ ನಾಲ್ಕು ಸ್ಟಾರ್‌ಗಳೊಂದಿಗೆ 600ಕ್ಕೆ 395 ಅಂಕಗಳನ್ನೂ ನೀಡಿದೆ. ಆದರೆ, ಬಿಬಿಎಂಪಿಯ ಕಸ ನಿರ್ವಹಣಾ ಪ್ರಕ್ರಿಯೆ ಹೇಗಿದೆ ಎಂದು ಖುದ್ದಾಗಿ ಹೋಗಿ ನೋಡಿದರೆ ವಸ್ತುಸ್ಥಿತಿ ಬೇರೆಯೇ ಇದೆ.

ಕಸ ಸೃಷ್ಟಿಸಿದ ಸಮಸ್ಯೆಗಳಿಂದ ಬಸವಳಿದ ಸಾರ್ವಜನಿಕರ ಬವಣೆಯ ಕಥೆಗಳು ಕಸವು ಸೃಷ್ಟಿಸುವ ವಿವಿಧ ರೂಪಗಳನ್ನು ನಮ್ಮ ಮುಂದಿಡುತ್ತವೆ. ಕಸದ ವೈಜ್ಞಾನಿಕ ವಿಲೇವಾರಿಯಲ್ಲಿ ಸಾರ್ವಜನಿಕರು ಹಾಗೂ ಬಿಬಿಎಂಪಿ ತೋರುವ ಅನಾದರವು ಇನ್ನೊಬ್ಬರ ಬದುಕಿನಲ್ಲಿ ಹೇಗೆಲ್ಲ ನರಕ ಸೃಷ್ಟಿಸುತ್ತಿದೆ ಎಂಬುದನ್ನು ಎಳೆಎಳೆಯಾಗಿ ತೆರೆದಿಡುತ್ತವೆ.

ಮಾವಳ್ಳಿಪುರವೆಂಬ ‘ಶಾಪಗ್ರಸ್ತ’ ಊರು:

ಅವೈಜ್ಞಾನಿಕ ತ್ಯಾಜ್ಯ ನಿರ್ವಹಣೆಯ ಪರಿಣಾಮ ಹೇಗಿರುತ್ತದೆ ಎಂಬುದನ್ನು ನೋಡಬೇಕೆಂದರೆ, ಹೆಸರಘಟ್ಟ ಹೋಬಳಿಯಲ್ಲಿನ ಮಾವಳ್ಳಿಪುರ ಗ್ರಾಮಕ್ಕೆ ಭೇಟಿ ನೀಡಬೇಕು. ಇಲ್ಲಿ ಕಸ ಸುರಿಯುವುದು ನಿಂತು ಏಳೆಂಟು ವರ್ಷಗಳೇ ಕಳೆದರೂ ಅದರ ದುಷ್ಪರಿಣಾಮಗಳನ್ನು ಜನ ಇನ್ನೂ ಎದುರಿಸುತ್ತಿದ್ದಾರೆ.

ವೃದ್ಧರು, ಮಹಿಳೆಯರು, ಮಕ್ಕಳಾದಿಯಾಗಿ ಎಲ್ಲರೂ ವಿವಿಧ ಬಗೆಯ ಆರೋಗ್ಯ ಸಮಸ್ಯೆಗಳಿಂದ ನರಳುತ್ತಿದ್ದಾರೆ. ಈ ಬಗ್ಗೆ ಸ್ಥಳೀಯರು ಹೈಕೋರ್ಟ್ ಮೊರೆ ಹೋಗಿದ್ದರು. ಇಲ್ಲಿ ಶುದ್ಧ ಕುಡಿಯುವ ನೀರು ವ್ಯವಸ್ಥೆ ಮಾಡಬೇಕು, ಜನ–ಜಾನುವಾರಗಳ ಆರೋಗ್ಯ ಸಮೀಕ್ಷೆ ಜೊತೆಗೆ ಕೃಷಿ–ಪರಿಸರ ಸಮೀಕ್ಷೆಯನ್ನೂ ನಡೆಸಬೇಕು ಎಂದು ನ್ಯಾಯಾಲಯ ನಿರ್ದೇಶನ ನೀಡಿತ್ತು. ಹೆಸರಿಗೆ ನಾಲ್ಕು ಶುದ್ಧ ಕುಡಿಯುವ ನೀರಿನ ಘಟಕಗಳನ್ನು (ಆರ್‌ಒ) ನಿರ್ಮಿಸಲಾಗಿತ್ತು. ಈಗ ಅವೆಲ್ಲವೂ ಹದಗೆಟ್ಟಿವೆ. ಆರೋಗ್ಯ ಸಮೀಕ್ಷೆ ಇನ್ನೂ ನಡೆದಿಲ್ಲ.

‘ಪರಿಸರ ರಕ್ಷಣೆಗೆ ಸಂಬಂಧಿಸಿದ ಕಾಮಗಾರಿಗಳನ್ನು ಕೈಗೊಳ್ಳಲು ವಿವಿಧ ಮೂಲಗಳಿಂದ ಮಾವಳ್ಳಿಪುರಕ್ಕೆ ₹80 ಕೋಟಿ ಅನುದಾನ ನೀಡಲಾಗಿತ್ತು. ಅದನ್ನು ಅನ್ಯ ಉದ್ದೇಶಗಳಿಗೆ ಬಳಸಲಾಗಿದೆ. ಈ ಘಟಕವಿದ್ದ ವ್ಯಾಪ್ತಿಯಲ್ಲಿ 1 ಲಕ್ಷ ಸಸಿಗಳನ್ನು ನೆಟ್ಟು ಪೋಷಿಸುವ ಯೋಜನೆ ರೂಪಿಸಬೇಕು ಎಂದು ಮನವಿ ಮಾಡಿದ್ದೆವು. ಆ ಕಾರ್ಯವೂ ಆಗಿಲ್ಲ’ ಎಂದು ಮಾವಳ್ಳಿಪುರ ನಿವಾಸಿ ಬಿ. ಶ್ರೀನಿವಾಸ್ ಅಸಮಾಧಾನ ವ್ಯಕ್ತಪಡಿಸಿದರು.

ಸಾವಿರಾರು ಕೋಟಿ ರೂಪಾಯಿಗಳನ್ನು ಬೇಡುವ ಕಸ ನಿರ್ವಹಣಾ ಕಾರ್ಯದಲ್ಲಿ ‘ಪರಿಶ್ರಮಿ’ ಮಾನವ ಸಂಪನ್ಮೂಲದ ಕಾಳಜಿಯೂ ಮುಖ್ಯ. ಕಸ ನಿರ್ವಹಣೆಯಲ್ಲಿ ವ್ಯತ್ಯಾಸವಾದರೆ, ಅದು ಸಾರ್ವಜನಿಕರ, ಸಿಬ್ಬಂದಿಯ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತದೆ. ಈ ಬಗ್ಗೆಯೂ ಬಿಬಿಎಂಪಿ ಜಾಣ ಮರೆವು ಪ್ರದರ್ಶಿಸುತ್ತಾ ಬಂದಿದೆ.

ಸಂಸ್ಕರಣೆಗೆ ಒಳಗಾಗದ ಕಸವನ್ನು ನಗರದ ಹೊರವಲಯದಲ್ಲಿರುವ ಮಿಟ್ಟಗಾನಹಳ್ಳಿ ಮತ್ತು ಬಾಗಲೂರಿನಲ್ಲಿ ಸುರಿಯಲಾಗುತ್ತಿದೆ. ಮಿಟ್ಟಗಾನಹಳ್ಳಿಯ ಒಂದೇ ಕಡೆಗೆ ದಿನಕ್ಕೆ 2,500 ಟನ್‌ಗಳಷ್ಟು ಮಿಶ್ರ ಕಸ ಬರುತ್ತಿದೆ. ದುರ್ವಾಸನೆ ಬರಬಾರದು ಎಂಬ ಉದ್ದೇಶದಿಂದ ಗುಂಡಿಗಳಲ್ಲಿ ಕಸ ಸುರಿದು ಮೇಲೆ ಮಣ್ಣು ಮುಚ್ಚಲಾಗುತ್ತಿದೆ.

ಆರೋಗ್ಯ ರಕ್ಷಣೆ ಇಲ್ಲ: ವಾರ್ಡ್ ಮಟ್ಟದಲ್ಲಿ ಮತ್ತು ಪ್ರಮುಖ ಸ್ಥಳಗಳಲ್ಲಿ ಸಂಸ್ಕರಣಾ ಘಟಕಗಳನ್ನು ಸ್ಥಾಪಿಸುವುದರೊಂದಿಗೆ ಕಸ ನಿರ್ವಹಣೆ ಕಾರ್ಯದ ವಿಕೇಂದ್ರೀಕರಣ ಮಾಡುವ ಮೂಲಕ ಬೆಂಗಳೂರು ಇತರೆ ನಗರಗಳಿಗೆ ಮಾದರಿಯಾಗಿದೆ. ಆದರೆ, ಇಂತಹ ಘಟಕ ಅಥವಾ ಸ್ಥಳಗಳಲ್ಲಿ ಕಾರ್ಯನಿರ್ವಹಿಸುವವರ ಆರೋಗ್ಯ ರಕ್ಷಣೆಯ ಬಗ್ಗೆ ಬಿಬಿಎಂಪಿ ನಿರ್ಲಕ್ಷ್ಯ ವಹಿಸಿದೆ.

ಮಿಟ್ಟಗಾನಹಳ್ಳಿಯಲ್ಲಿ ದಿನಕ್ಕೆ ಮೂರು ಪಾಳಿಯಲ್ಲಿ 24 ಮಾರ್ಷಲ್‌ಗಳು ಕಾರ್ಯನಿರ್ವಹಿಸುತ್ತಿದ್ದಾರೆ. ಆದರೆ, ಅವರಿಗೆ ಕನಿಷ್ಠ ಸೌಲಭ್ಯಗಳನ್ನೂ ಕಲ್ಪಿಸಿಲ್ಲ.

‘ನಾವು ಅನಾರೋಗ್ಯಕ್ಕೆ ಈಡಾದರೆ ಚಿಕಿತ್ಸೆಯ ವ್ಯವಸ್ಥೆಯೇ ಇಲ್ಲ. ನಮ್ಮ ಜೊತೆ ಕೆಲಸ ಮಾಡುವವರಿಗೆ ಕೋವಿಡ್ ಬಂದಾಗ ಬಿಬಿಎಂಪಿ ಅವರ ಚಿಕಿತ್ಸೆಗೆ ಯಾವುದೇ ವ್ಯವಸ್ಥೆ ಮಾಡಲಿಲ್ಲ. ಚಿಕಿತ್ಸಾ ವೆಚ್ಚವನ್ನು ಅವರೇ ಭರಿಸಿದರು. ದಿನಕ್ಕೆ 8 ತಾಸು ಈ ದುರ್ವಾಸನೆಯಲ್ಲಿಯೇ ಕೆಲಸ ಮಾಡಬೇಕು. ಯಾವುದೇ ವಿಶೇಷ ಸೌಲಭ್ಯ ನೀಡುವುದು ಬೇಡ. ಕನಿಷ್ಠ ಆರೋಗ್ಯ ವಿಮೆಯಂತಹ ಸೌಲಭ್ಯವನ್ನಾದರೂ ನೀಡಬೇಕು’ ಎಂದು ಹೆಸರು ಬಹಿರಂಗಪಡಿಸಲು ಬಯಸದ ಮಾರ್ಷಲ್ ಒಬ್ಬರು ಅಳಲು ತೋಡಿಕೊಂಡರು.

ಮಿಟ್ಟಗಾನಹಳ್ಳಿ ಕಸ ಸಂಗ್ರಹ ಘಟಕದೊಳಗೇ ಖಾಸಗಿಯವರಿಗೆ ಸೇರಿದ ಜಾಗವಿದೆ. ಅಲ್ಲಿಯೇ ಕೆಲವರು ಕಸ ವಿಂಗಡಿಸುವ ಕೆಲಸ ಮಾಡುತ್ತಿದ್ದಾರೆ. ಸಣ್ಣ ಮಕ್ಕಳು ಕೂಡ ಜೊತೆಯಲ್ಲಿದ್ದಾರೆ. ಆರೋಗ್ಯದ ಮೇಲೆ ದುಷ್ಪರಿಣಾಮವಾಗುತ್ತದೆ ಎಂಬ ಯಾವ ಆತಂಕವೂ ಇಲ್ಲದೆ ಇವರು ತಮ್ಮ ಕೆಲಸದಲ್ಲಿ ನಿರತರಾಗಿರುತ್ತಾರೆ.

ಬೇಕಿದೆ ಅರಿವು:

ನಗರದಲ್ಲಿ ಶೇ 40ರಷ್ಟು ಕಸವನ್ನು ಮಾತ್ರ ಹಸಿ ಮತ್ತು ಒಣ ತ್ಯಾಜ್ಯವಾಗಿ ವಿಂಗಡಿಸಲಾಗುತ್ತಿದೆ. ತ್ಯಾಜ್ಯ ಸಮಸ್ಯೆಗೆ ಪರಿಹಾರ ಸಿಗಬೇಕೆಂದರೆ ಭೂಭರ್ತಿ ಘಟಕಗಳಿಗೆ (ಲ್ಯಾಂಡ್ ಫಿಲ್) ಹೋಗುವ ಕಸದ ಪ್ರಮಾಣ ಕಡಿಮೆಯಾಗಬೇಕು. ಕಸವನ್ನು ಗೊಬ್ಬರವಾಗಿಸುವ ಕಾರ್ಯ ಇನ್ನೂ ಹೆಚ್ಚಾಗಬೇಕು. ಈ ಬಗ್ಗೆ ಜನರಲ್ಲಿ ಜಾಗೃತಿ ಮೂಡುವ ಜೊತೆಗೆ, ಬಿಬಿಎಂಪಿಯೂ ವೈಜ್ಞಾನಿಕ ಕಸ ವಿಲೇವಾರಿಗೆ ಆದ್ಯತೆ ನೀಡಿದರೆ ಬೆಂಗಳೂರಿನ ಬ್ರ್ಯಾಂಡ್ ಮೌಲ್ಯ ಹೆಚ್ಚಾಗಲಿದೆ.

ನಗರದ ಹೊರವಲಯದಲ್ಲಿನ ಮಿಟ್ಟಗಾನಹಳ್ಳಿಯಲ್ಲಿನ ಭೂ ಭರ್ತಿ ಕೇಂದ್ರದಲ್ಲಿ ಕಸ ನಿರ್ವಹಣೆಯ ಒಂದು ನೋಟ ಪ್ರಜಾವಾಣಿ ಚಿತ್ರಗಳು/ ರಂಜು ಪಿ

ಅಂಕಿ-ಅಂಶ

4,200 ಟನ್
ನಿತ್ಯ ಬೆಂಗಳೂರಿನಲ್ಲಿ ಉತ್ಪಾದನೆಯಾಗುವ ಕಸ

1,200 ಟನ್
ಗೊಬ್ಬರವಾಗಿ ಮಾರ್ಪಡುವ ಕಸದ ಪ್ರಮಾಣ

500 ಟನ್
ಲಾಕ್‌ಡೌನ್ ಸಂದರ್ಭದಲ್ಲಿ ಕಡಿಮೆಯಾಗಿದ್ದ ಕಸದ ಪ್ರಮಾಣ

₹65 ಕೋಟಿ
ಕಸ ಸಂಗ್ರಹ–ವಿಲೇವಾರಿಗೆ ವರ್ಷಕ್ಕೆ ಖರ್ಚಾಗುವ ಅಂದಾಜು ಮೊತ್ತ

ವಿಡಿಯೊ ನೋಡಲು ಕೆಳಗಿನ ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ವೈಜ್ಞಾನಿಕ ವಿಲೇವಾರಿಗೆ ಆದ್ಯತೆ

‘ರಾಜಧಾನಿಯಲ್ಲಿ ಕಸ ಸಂಗ್ರಹ, ವಿಂಗಡಣೆ ಮತ್ತು ವಿಲೇವಾರಿ ಬಹುದೊಡ್ಡ ಸವಾಲು. ವೈಜ್ಞಾನಿಕವಾಗಿ ಕಸ ವಿಲೇವಾರಿಗೆ, ಕಸದಿಂದ ವಿದ್ಯುತ್ ಉತ್ಪಾದಿಸುವ (ವೇಸ್ಟ್ ಟು ಎನರ್ಜಿ) ಪ್ರಕ್ರಿಯೆಯನ್ನು ಆದ್ಯತೆಯಾಗಿ ತೆಗೆದುಕೊಂಡಿದ್ದೇವೆ’ ಎಂದು ಬಿಬಿಎಂಪಿ ಕಸ ನಿರ್ವಹಣಾ ವಿಭಾಗದ ವಿಶೇಷ ಆಯುಕ್ತ ಕೆ. ಹರೀಶ್‌ಕುಮಾರ್ ‘ಪ್ರಜಾವಾಣಿ’ಗೆ ತಿಳಿಸಿದರು.

‘ಮಿಟ್ಟಗಾನಹಳ್ಳಿ, ಬಾಗಲೂರು ಭೂ ಭರ್ತಿ (ಲ್ಯಾಂಡ್‌ಫಿಲ್) ಘಟಕಗಳಲ್ಲಿ ವೈಜ್ಞಾನಿಕವಾಗಿ ವಿಲೇವಾರಿ ಪ್ರಕ್ರಿಯೆ ನಡೆಯುತ್ತಿದೆ. ಮಾರ್ಷಲ್‌ಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಅವರಿಗೆ ಆರೋಗ್ಯ ಸುರಕ್ಷತೆ ಸೇರಿದಂತೆ ಹಲವು ಸೌಲಭ್ಯಗಳು ಸಿಗುತ್ತಿಲ್ಲ ಎಂಬುದರ ಬಗ್ಗೆ ಮಾಹಿತಿ ಇಲ್ಲ. ಮಿಟ್ಟಗಾನಹಳ್ಳಿ ಘಟಕಕ್ಕೆ ಭೇಟಿ ನೀಡಿ ಅವರ ಸಮಸ್ಯೆ ಆಲಿಸುತ್ತೇನೆ’ ಎಂದೂ ಹೇಳಿದರು.

‘ಭೂಭರ್ತಿ ಘಟಕಗಳಿಗೆ ಹೋಗುವ ಕಸದ ಪ್ರಮಾಣ ಶೇ 20ಕ್ಕಿಂತ ಕಡಿಮೆಯಾಗಬೇಕು. ಅಂದರೆ, ಅಲ್ಲಲ್ಲಿ ಸಂಗ್ರಹವಾಗುವ ಕಸ ಆಯಾ ವಾರ್ಡ್‌ನಲ್ಲಿ ಗೊಬ್ಬರವಾಗುವ, ಇಂಧನವಾಗಿ ಪರಿವರ್ತಿಸುವ ಕೆಲಸ ಹೆಚ್ಚಾಗಬೇಕು. ಈ ನಿಟ್ಟಿನಲ್ಲಿ ಬಿಬಿಎಂಪಿಯಿಂದ ಎಲ್ಲ ಕ್ರಮಗಳನ್ನೂ ಕೈಗೊಳ್ಳಲಾಗುತ್ತಿದೆ’ ಎಂದರು.

ನ್ಯಾಯಾಲಯದ ನಿರ್ದೇಶನ ಪಾಲನೆ:

‘ಮಾವಳ್ಳಿಪುರದಲ್ಲಿ ಆರೋಗ್ಯ ಸಮೀಕ್ಷೆ ನಡೆಸುವುದರ ಕುರಿತು ಅಧಿಕಾರಿಗಳ ಸಭೆ ಕರೆದು ಚರ್ಚೆ ನಡೆಸಲಾಗುವುದು. ಇದಕ್ಕೆ ಸಂಬಂಧಿಸಿದಂತೆ ಕ್ರಿಯಾಯೋಜನೆ ರೂಪಿಸಿ, ನ್ಯಾಯಾಲಯದ ನಿರ್ದೇಶನ ಪಾಲನೆಗೆ ಎಲ್ಲ ಕ್ರಮಗಳನ್ನು ಕೈಗೊಳ್ಳಲಾಗುವುದು’ ಎಂದು ಹರೀಶ್‌ಕುಮಾರ್ ತಿಳಿಸಿದರು.

‘ನ್ಯಾಯಾಲಯದ ಆದೇಶದ ವಿರುದ್ಧ ಕಂಪನಿ’

ಲಿಯೊ ಸಲ್ಡಾನಾ

ಜಲಮಂಡಳಿ, ಬೆಸ್ಕಾಂ ರೀತಿಯಲ್ಲಿ, ನಗರದಲ್ಲಿ ಘನತ್ಯಾಜ್ಯ ನಿರ್ವಹಣೆಗಾಗಿಯೇ ರಾಜ್ಯ ಸರ್ಕಾರವು ಬೆಂಗಳೂರಿನ ಕಸದ ಸಮಸ್ಯೆ ನಿವಾರಣೆಗೆ ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ನಿಯಮಿತ (ಬಿಎಸ್‌ಡಬ್ಲ್ಯುಎಂಎಲ್) ಎಂಬ ಕಂಪನಿಯನ್ನು ರಚಿಸಿ ಆದೇಶ ಹೊರಡಿಸಿದೆ. ಬಿಬಿಎಂಪಿ ಆಯುಕ್ತರೇ ಮುಖ್ಯಕಾರ್ಯನಿರ್ವಹಣಾಧಿಕಾರಿಯಾಗಿರುವ ಈ ಕಂಪನಿ ಜುಲೈ 1ರಿಂದಲೇ ಕಾರ್ಯನಿರ್ವಹಿಸಬೇಕಾಗಿತ್ತು. ಆದರೆ, ಸರ್ಕಾರದ ಈ ಆದೇಶವನ್ನು ಪ್ರಶ್ನಿಸಿ, ಪರಿಸರ ಕಾರ್ಯಕರ್ತರು ನ್ಯಾಯಾಲಯದಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದಾರೆ. ಇದೇ 6ರಂದು ಅರ್ಜಿಯ ವಿಚಾರಣೆಯನ್ನು ನ್ಯಾಯಾಲಯ ಕೈಗೆತ್ತಿಕೊಳ್ಳಲಿದೆ.

‘ಕಸ ಸಂಗ್ರಹ ಮತ್ತು ನಿರ್ವಹಣೆ ಎಂಬುದು ಆಯಾ ಸ್ಥಳೀಯ ಸಂಸ್ಥೆಗಳು ಅಗತ್ಯವಾಗಿ ನೀಡಲೇಬೇಕಾದ ಸೇವೆ. ಸಂವಿಧಾನ ಮತ್ತು ಎಲ್ಲ ಕಾಯ್ದೆಗಳು ಇದನ್ನೇ ಹೇಳುತ್ತವೆ. ಇದನ್ನು ಉಲ್ಲಂಘಿಸಿ ಸರ್ಕಾರ ಕಂಪನಿಯನ್ನು ರಚಿಸುವ ಮೂಲಕ ಈ ಸೇವೆಯ ನಿರ್ವಹಣೆಯನ್ನೂ ಖಾಸಗಿಯವರಿಗೆ ನೀಡಲು ಮುಂದಾಗಿರುವುದು ಸರಿಯಲ್ಲ. ಇದನ್ನು ಪ್ರಶ್ನಿಸಿ ನ್ಯಾಯಾಲಯದ ಮೊರೆ ಹೋಗಿದ್ದೇವೆ’ ಎಂದು ಪರಿಸರ ತಜ್ಞ ಲಿಯೊ ಸಲ್ಡಾನ ತಿಳಿಸಿದರು.

‘ಬೆಸ್ಕಾಂ ಮತ್ತು ಜಲಮಂಡಳಿಯಂತಹ ಸಂಸ್ಥೆಗಳು ಕಾಯ್ದೆಗಳ ಮೂಲಕ ರಚನೆಯಾಗಿವೆ. ಆದರೆ, ಬಿಎಸ್‌ಡಬ್ಲ್ಯುಎಂಎಲ್ ಸರ್ಕಾರದ ಆದೇಶದ ಮೂಲಕ ರಚನೆ ಮಾಡಲಾಗುತ್ತಿದೆ. ಇದು ನ್ಯಾಯಾಲಯಗಳ ಆದೇಶಕ್ಕೆ ವಿರುದ್ಧ. ಅಲ್ಲದೆ, ಬಿಬಿಎಂಪಿ ರೂಪಿಸಿರುವ ಘನತ್ಯಾಜ್ಯ ನಿರ್ವಹಣಾ ನೀತಿಯೂ ನ್ಯಾಯಾಲಯದ ಆದೇಶಕ್ಕೆ ವಿರುದ್ಧವಾಗಿದೆ’ ಎಂದರು.

ತ್ಯಾಜ್ಯ ಸಂಸ್ಕರಣೆಗೆ 9 ಘಟಕಗಳು

ಬಿಬಿಎಂಪಿಯ ಆಯಾ ವಾರ್ಡ್‌ಗಳ ಮಟ್ಟದಲ್ಲಿಯೇ ಒಣ ತ್ಯಾಜ್ಯ ಸಂಸ್ಕರಣೆಗೆ ಕ್ರಮ ಕೈಗೊಳ್ಳಲಾಗಿದೆ. ಹಸಿ ತ್ಯಾಜ್ಯ ಸಂಸ್ಕರಣೆಗೆ ಲಿಂಗಧೀರನಹಳ್ಳಿ, ಸುಬ್ಬರಾಯನಪಾಳ್ಯ, ಕೆ.ಆರ್. ಮಾರುಕಟ್ಟೆ, ಸೀಗೇಹಳ್ಳಿ, ಕನ್ನಹಳ್ಳಿ, ದೊಡ್ಡಬಿದರಕಲ್ಲು, ಚಿಕ್ಕನಾಗಮಂಗಲ, ಕೆಸಿಡಿಸಿಯಲ್ಲಿ ಘಟಕಗಳನ್ನು ಸ್ಥಾಪಿಸಲಾಗಿದೆ. ಎಂಎಸ್‌ಜಿಪಿ ಎಂಬ ಖಾಸಗಿ ಸಂಸ್ಥೆಯು ಒಂದು ಘಟಕವನ್ನು ನಿರ್ವಹಿಸುತ್ತಿದೆ.

ಮಾವಳ್ಳಿಪುರ ‘ಸಂತ್ರಸ್ತರು’ ಹೇಳುವುದೇನು ?

‘ನ್ಯಾಯಾಲಯದ ಆದೇಶ ಪಾಲಿಸಿಲ್ಲ’

2000ನೇ ವರ್ಷದಿಂದ 2012ರವರೆಗೆ ಮಾವಳ್ಳಿಪುರದಲ್ಲಿ ಬೆಂಗಳೂರಿನ ಕಸ ಸುರಿಯಲಾಗಿದ್ದು, ಪರಿಸರ ಮತ್ತು ಜನರ ಆರೋಗ್ಯದ ಮೇಲೆ ದುಷ್ಪರಿಣಾಮವಾಗಿದೆ. ಜನ–ಜಾನುವಾರುಗಳ ಆರೋಗ್ಯ, ಪರಿಸರ ಮತ್ತು ಕೃಷಿ ಸಮೀಕ್ಷೆ ನಡೆಸಬೇಕು ಎಂದು ನ್ಯಾಯಾಲಯ ಹೇಳಿತ್ತು. ಆ ಆದೇಶವನ್ನು ಪಾಲಿಸಿಲ್ಲ

ಬಿ. ಶ್ರೀನಿವಾಸ್, ನಿವಾಸಿ–ಪರಿಸರ ಕಾರ್ಯಕರ್ತ

‘ಚಿಕಿತ್ಸೆಯೂ ದೊರೆತಿಲ್ಲ’

ಮಾವಳ್ಳಿಪುರದಲ್ಲಿನ ಕಸ ಸಂಗ್ರಹಣಾ ಘಟಕದಲ್ಲಿಯೇ ಎರಡು ವರ್ಷ ಕೆಲಸ ಮಾಡಿದ್ದೇನೆ. ಆಗ ಎದೆಯ ಮೇಲೆ ಗಡ್ಡೆ ರೀತಿ ಬೆಳೆದಿತ್ತು. ವೈದ್ಯರ ಸಲಹೆಯಂತೆ ಇಂಜೆಕ್ಷನ್ ಪಡೆದಿದ್ದೆ. ವಾಸಿಯಾಗಿರಲಿಲ್ಲ. ಈಗ ಅದು ಕ್ಯಾನ್ಸರ್ ಗಡ್ಡೆ ಎನ್ನುತ್ತಿದ್ದಾರೆ. ಚಿಕಿತ್ಸೆಗೆ ಬಿಬಿಎಂಪಿಯಿಂದ ಯಾವುದೇ ರೀತಿಯ ವ್ಯವಸ್ಥೆ ಮಾಡಿಲ್ಲ

ಬಾಲಕೃಷ್ಣ, ನಿವಾಸಿ

‘ನೀರೂ ವಿಷವಾಗಿದೆ’

ಮಾವಳ್ಳಿಪುರದಲ್ಲಿ ನೀರೆಲ್ಲ ವಿಷವಾಗಿದೆ. ಮನುಷ್ಯರಲ್ಲ, ಪ್ರಾಣಿಗಳು ಕುಡಿಯಲೂ ಯೋಗ್ಯವಾಗಿಲ್ಲ. ನಾಲ್ಕು ಕಡೆ ಶುದ್ಧಕುಡಿಯುವ ನೀರಿನ ಘಟಕ ಹಾಕಲಾಗಿದ್ದು, ಎಲ್ಲವೂ ಹಾಳಾಗಿವೆ. ಮಾವಳ್ಳಿಪುರದವರಿಗೆ ಹೆಣ್ಣು ಕೊಡಲೂ ಯಾರೂ ಮುಂದೆ ಬರುವುದಿಲ್ಲ.

ಭೈರೇಗೌಡ, ನಿವಾಸಿ

‘ಮಕ್ಕಳಲ್ಲಿ ಬೆಳವಣಿಗೆ ಮೇಲೂ ದುಷ್ಪರಿಣಾಮ’

ಇಲ್ಲಿ ಕಸ ಸುರಿಯುತ್ತಿದ್ದ ಸಂದರ್ಭದಲ್ಲಿ ಉಸಿರಾಡುವುದಕ್ಕೂ ಕಷ್ಟವಾಗಿತ್ತು. ಈಗಲೂ ಮಕ್ಕಳಲ್ಲಿ ಬೆಳವಣಿಗೆ ಇಲ್ಲ. ದೊಡ್ಡವರಲ್ಲಿ ಡೆಂಗಿ, ಮೂತ್ರಪಿಂಡ ಸಮಸ್ಯೆ, ಮಹಿಳೆಯರಲ್ಲಿ ಗರ್ಭಕೋಶ ಸಮಸ್ಯೆ ಕಾಣಿಸುತ್ತಿದೆ. ಇಲ್ಲಿನ ಕೃಷಿ ಭೂಮಿಯಲ್ಲಿ ಬೆಳೆದ ಬೆಳೆಯನ್ನೂ ತಿನ್ನಲು ಆಗುತ್ತಿಲ್ಲ

ಲಕ್ಷ್ಮಮ್ಮ, ನಿವಾಸಿ

‘ಮಗನನ್ನು ಕಳೆದುಕೊಂಡೆ’

ಕಸ ಸಂಗ್ರಹ ಘಟಕದಿಂದ ಬರುತ್ತಿದ್ದ ಕೊಳಚೆ ನೀರು ನಮ್ಮ ಮನೆಯ ಎದುರಿನಿಂದಲೇ ಹರಿದು ಹೋಗಿ ಕೆರೆಗೆ ಸೇರುತ್ತಿತ್ತು. ಮಳೆ ಬಂದಾಗ ಈಗಲೂ ಕೊಳಚೆ ನೀರು ಹರಿಯುತ್ತದೆ. ಕಳೆದ ವರ್ಷ ನನ್ನ 12 ವರ್ಷದ ಮಗ ಮದನ್ ಇದ್ದಕ್ಕಿದ್ದಂತೆ ತಲೆನೋವು ಎಂದ. ಆಸ್ಪತ್ರೆಗೆ ಕರೆದೊಯ್ದರೂ ಸರಿಯಾಗಿ ಚಿಕಿತ್ಸೆ ಸಿಗಲಿಲ್ಲ. ಐದು ತಾಸಿನಲ್ಲಿಯೇ ಸಾವಿಗೀಡಾದ. ಸಾವಿಗೆ ಕಾರಣ ಏನೆಂದೂ ವೈದ್ಯರು ಹೇಳಲಿಲ್ಲ

ನಾಗಮ್ಮ, ನಿವಾಸಿ

‘ನೀರು ಮುಕ್ಕಳಿಸಿದರೂ ಗಂಟಲು ನೋವು’

ಅಂತರ್ಜಲವೂ ಕಲುಷಿತವಾಗಿರುವುದರಿಂದ ಕೊಳವೆಬಾವಿ ನೀರು ಕುಡಿಯಲೂ ಆಗುತ್ತಿಲ್ಲ. ನೀರು ಮುಕ್ಕಳಿಸಿ ಆಚೆ ಉಗಿದರೂ ಗಂಟಲು ನೋವು ಬರುತ್ತದೆ. ನಂತರ ಮೈ–ಕೈ ನೋವು ಶುರುವಾಗುತ್ತದೆ.

ಬದರಿನಾಥ, ನಿವಾಸಿ

ಬೆಂಗಳೂರಿನ ಮಾವಳ್ಳಿಪುರದಲ್ಲಿ ಈ ಮೊದಲು ಇದ್ದ ಕಸಸಂಗ್ರಹ ಘಟಕದ ನೋಟ

ಮೀನಿನ ಬಾಕ್ಸ್‌ನಲ್ಲಿ ಗಾಂಜಾ ಸಾಗಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೀನಿನ ಬಾಕ್ಸ್‌ಗಳಲ್ಲಿ ಗಾಂಜಾ ಸಾಗಾಟ ಹಾಗೂ ಮಾರುತ್ತಿದ್ದ ಆರೋಪದಡಿ ಮೂವರು ಆರೋಪಿಗಳನ್ನು ಮಾದನಾಯಕನಹಳ್ಳಿ ಪೊಲೀಸರು ಬಂಧಿಸಿದ್ದಾರೆ.

ಒಡಿಶಾದ ದಿವಾಕರ್, ಬೆಂಗಳೂರಿನ ಸುದರ್ಶನ್ ಹಾಗೂ ವಿಶ್ವನಾಥ್ ಬಂಧಿತ ಆರೋಪಿಗಳು.

‘ಒಡಿಶಾದ ಕೆಲ ಭಾಗಗಳಲ್ಲಿ ಬೆಳೆಯುವ ಗಾಂಜಾವನ್ನು ದಿವಾಕರ್ ಬೆಂಗಳೂರಿಗೆ ಪೂರೈಕೆ ಮಾಡುತ್ತಿದ್ದ. ಅವುಗಳನ್ನು ಲಾರಿ, ಬಸ್ಸು ಹಾಗೂ ರೈಲಿನಲ್ಲಿ ಬೆಂಗಳೂರಿಗೆ ತರಲಾಗುತ್ತಿತ್ತು. ಬಳಿಕ ಸುದರ್ಶನ್ ಮುಖಾಂತರವಾಗಿ ವಿಶ್ವನಾಥ್ ಗಾಂಜಾ ಮಾರಾಟ ಮಾಡಿ, ಹಣ ಸಂಪಾದಿಸುತ್ತಿದ್ದ’ ಎಂದು ಪೊಲೀಸರು ತಿಳಿಸಿದರು.

‘ಇವರು ನಗರದ ಪ್ರತಿಷ್ಠಿತ ಕಾಲೇಜುಗಳು, ಕಾರ್ಖಾನೆಗಳು ಹಾಗೂ ಡಾಬಾಗಳ ಬಳಿ ತೆರಳಿ, ಗಿರಾಕಿಗಳಿಗೆ ಗಾಂಜಾ ಮಾರಾಟ ಮಾಡುತ್ತಿದ್ದರು. ಈ ಮಾಹಿತಿ ಮೇರೆಗೆ ನಡೆಸಿದ ದಾಳಿಯ ವೇಳೆ ಆರೋಪಿಗಳು ಸಿಕ್ಕಿಬಿದ್ದಿದ್ದಾರೆ. ಬಂಧಿತರಿಂದ 11 ಕೆ.ಜಿ ಗಾಂಜಾ ಜಪ್ತಿ ಮಾಡಿ, ಪ್ರಕರಣ ದಾಖಲಿಸಿಕೊಳ್ಳಲಾಗಿದೆ’ ಎಂದೂ ಹೇಳಿದರು.

‘ಗ್ರಾಮೀಣ ವಿದ್ಯಾರ್ಥಿಗಳ ವ್ಯಾಸಂಗಕ್ಕೆ ತೊಡಕು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನೂತನ ಶಿಕ್ಷಣ ನೀತಿ ಅನ್ವಯ ಪದವಿ ಕಲಿಕೆಯನ್ನು ನಾಲ್ಕು ವರ್ಷಕ್ಕೆ ಹೆಚ್ಚಿಸಲಾಗಿದೆ. ಇದು ಗ್ರಾಮೀಣ ಭಾಗದ ಮಕ್ಕಳ ಶಿಕ್ಷಣದ ಕನಸಿಗೆ ಕೊಡಲಿ ಏಟು ನೀಡುವ ಪ್ರಯತ್ನ. ಹಳ್ಳಿಗಾಡು, ಬುಡಕಟ್ಟು ಜನಾಂಗ ಹಾಗೂ ಆದಿವಾಸಿಗಳ ಮಕ್ಕಳು ಒಮ್ಮೆ ಶಿಕ್ಷಣ ತೊರೆದರೆ ಮತ್ತೆ ವಿದ್ಯಾಭ್ಯಾಸ ಮುಂದುವರಿಸುವುದು ಕಷ್ಟ. ನಾಲ್ಕು ವರ್ಷಗಳ ಪದವಿ ಕಲಿಕೆ ಪದ್ಧತಿಯಿಂದ ಶಿಕ್ಷಣದಿಂದ ವಿಮುಖವಾಗುವವರ ಪ್ರಮಾಣ ಹೆಚ್ಚಲಿದೆ’ ಎಂದು ಶಿಕ್ಷಣ ತಜ್ಞ ಮಹಾಬಲೇಶ್ವರ ರಾವ್ ತಿಳಿಸಿದರು.

ಅಖಿಲ ಭಾರತ ಶಿಕ್ಷಣ ಉಳಿಸಿ ಸಮಿತಿ ‘ನಾಲ್ಕು ವರ್ಷಗಳ ಪದವಿ ಕೋರ್ಸ್ ಯಾರ ಹಿತಾಸಕ್ತಿಗಾಗಿ?’ ವಿಷಯದ ಕುರಿತು ಭಾನುವಾರ ಹಮ್ಮಿಕೊಂಡಿದ್ದ ಆನ್‌ಲೈನ್ ಸಮಾವೇಶದಲ್ಲಿ ಅವರು ಮಾತನಾಡಿದರು.

‘ಹೊಸ ನೀತಿಯ ಬಗ್ಗೆ ಸಂಸತ್ತಿನಲ್ಲಿ ಚರ್ಚೆಯೇ ಆಗಿಲ್ಲ. ಪೋಷಕರು ಹಾಗೂ ಮಕ್ಕಳ ಅಭಿಪ್ರಾಯವನ್ನೂ ಆಲಿಸಿಲ್ಲ. ಈ ನೀತಿಯನ್ನು ಏಕಪಕ್ಷೀಯವಾಗಿ ಹಾಗೂ ತರಾತುರಿಯಲ್ಲಿ ಜಾರಿಗೊಳಿಸಲಾಗಿದೆ. ಇದು ಸಂವಿಧಾನ ವಿರೋಧಿ ನಡೆ. ಶಿಕ್ಷಣ ನೀತಿ ರೂಪಿಸುವವರು ಶಿಕ್ಷಣ ತಜ್ಞರೇ ಹೊರತು ರಾಜಕೀಯ ಪಕ್ಷಗಳ ಹಿಂಬಾಲಕರಲ್ಲ’ ಎಂದು ಕಿಡಿಕಾರಿದರು.

‘ಈಗಿನ ಶಿಕ್ಷಣ ನೀತಿಯೂ ಬಹುಶಿಸ್ತೀಯ ಪದ್ಧತಿ ಒಳಗೊಂಡಿದೆ. ವಿದ್ಯಾರ್ಥಿಗಳು ಏಳು ವಿಷಯಗಳನ್ನು ಕಲಿಯುತ್ತಿದ್ದಾರೆ. ಅಂತರ್ ಶಿಸ್ತೀಯ ಕಲಿಕೆ ಈಗಿನ ಅಗತ್ಯ. ಮಾಹಿತಿ ಹೊತ್ತ ಕತ್ತೆಗಳ ಅಗತ್ಯ ನಮಗಿಲ್ಲ. 64 ವಿದ್ಯೆಗಳಲ್ಲಿ ಕಳ್ಳತನವೂ ಸೇರಿದೆ. ಅದನ್ನು ನೀವು ಕಲಿಸುತ್ತೀರಾ’ ಎಂದು ಪ್ರಶ್ನಿಸಿದರು.

ಯುಜಿಸಿ ಮಾಜಿ ಅಧ್ಯಕ್ಷ ಸುಖದೇವ್ ಥೋರಟ್, ‘ಅಮೆರಿಕದಲ್ಲಿ ಜಾರಿಯಲ್ಲಿರುವ ಶಿಕ್ಷಣ ವ್ಯವಸ್ಥೆಯ ನಕಲನ್ನು ಯಥಾರೀತಿಯಲ್ಲಿ ಈ ದೇಶದಲ್ಲಿ ಬೇರೂರಿಸುವ ಪ್ರಯತ್ನ ಈಗ ನಡೆಯುತ್ತಿದೆ. ಹೊಸ ನೀತಿಯಿಂದ ಪದವಿಯ ಅವಧಿ ಹಾಗೂ ಪಠ್ಯಕ್ರಮ ಬದಲಾಗಲಿದೆ. ಸಾಧಕ–ಬಾಧಕಗಳನ್ನು ಅವಲೋಕಿಸದೆಯೇ ಹೊಸದೊಂದು ನೀತಿ ಜಾರಿಗೊಳಿಸುವುದು ಸರಿಯಲ್ಲ’ ಎಂದರು.

ಹಂಪಿ ಕನ್ನಡ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಎ.ಮುರಿಗೆಪ್ಪ, ‘ಹೊಸ ನೀತಿ ಜಾರಿಗೆ ಸುದೀರ್ಘ ಸಮಯ ತಗಲುತ್ತದೆ. ಸರ್ಕಾರ ಮಾಡಲು ಹೊರಟಿರುವುದು ದೊಡ್ಡ ಮಟ್ಟದ ಬದಲಾವಣೆ. ಇದರ ಕುರಿತು ಎಲ್ಲ ವಲಯಗಳಲ್ಲೂ ಚರ್ಚೆಯಾಗಬೇಕು. ಸಾಧಕ ಬಾಧಕಗಳ ಬಗ್ಗೆ ಅವಲೋಕಿಸಬೇಕು’ ಎಂದು ಹೇಳಿದರು.

ಎಐಎಸ್‌ಇಸಿ ಕರ್ನಾಟಕ ರಾಜ್ಯ ಅಧ್ಯಕ್ಷ ಅಲ್ಲಮಪ್ರಭು ಬೆಟ್ಟದೂರು, ‘ಹೊಸ ಶಿಕ್ಷಣ ನೀತಿಯಲ್ಲಿ ಮಾತೃಭಾಷೆ ಕಲಿಕೆ ಕಡೆಗಣಿಸಲಾಗಿದೆ. ಭಾಷೆಯು ಅಭಿವ್ಯಕ್ತಿಯ ಸಾಧನ. ಹೀಗಾಗಿ ಪ್ರಾದೇಶಿಕ ಭಾಷೆ ಕಲಿಕೆಗೆ ಒತ್ತು ನೀಡಬೇಕು. ಮೂರು ವರ್ಷಗಳ ಪದವಿಯನ್ನು ನಾಲ್ಕು ವರ್ಷಕ್ಕೆ ಹೆಚ್ಚಿಸಲು ಕಾರಣವೇನು. ಮೂರು ವರ್ಷ ಪದವಿ ಶಿಕ್ಷಣ ಪಡೆದವರು ಜಾಣರಾಗಿಲ್ಲವೇ. ಪದವಿ ಅವಧಿಯ ವಿಸ್ತರಣೆಯಿಂದ ಯಾವುದೇ ಪ್ರಯೋಜನವಿಲ್ಲ. ಇರುವ ಪದವಿ ಅವಧಿಯಲ್ಲೇ ಪರಿಣಾಮಕಾರಿ ಕಲಿಕೆ ಒದಗಿಸುವ ನಿಟ್ಟಿನಲ್ಲಿ ಚಿಂತಿಸಬೇಕು’ ಎಂದು ತಿಳಿಸಿದರು.

ಎಐಎಸ್‌ಇಸಿ ಪ್ರಧಾನ ಕಾರ್ಯದರ್ಶಿ ಅನೀಸ್ ರಾಯ್, ವಿ.ಎನ್.ರಾಜಶೇಖರ್, ಸೋಮಶೇಖರ ಗೌಡ ಇದ್ದರು.

ಮಲ್ಲೇಶ್ವರದ ಸಿದ್ಧಾಶ್ರಮದಿಂದ 100 ಬಡ ಕುಟುಂಬಗಳಿಗೆ ಭಾನುವಾರ ಆಹಾರ ಸಾಮಗ್ರಿಯ ಕಿಟ್ ವಿತರಿಸಲಾಯಿತು. ಆಶ್ರಮದ ಕಾರ್ಯದರ್ಶಿ ದಿಲೀಪ್ ದೇಸಾಯಿ, ಅಧ್ಯಕ್ಷ ಎಂ.ಆರ್.ಸೀತಾರಾಮ್, ಅವರ ಪತ್ನಿ ಶ್ರುತಿ, ಉಪಾಧ್ಯಕ್ಷ ಶ್ರೀನಿವಾಸ್, ಜೆಎಸ್‌ಎಸ್‌ನ ಪ್ರಕಾಶ್ ಕಿಣಿ ಇದ್ದರು. ಪೊಲೀಸ್ ಸಿಬ್ಬಂದಿ ಹಾಗೂ ಪೌರಕಾರ್ಮಿಕರಿಗೆ ಮುಖಗವಸುಗಳನ್ನೂ ವಿತರಿಸಲಾಯಿತು. ಆಶ್ರಮದಿಂದ ಪ್ರತಿದಿನ 300 ಜನರಿಗೆ ಆಹಾರ ಪೂರೈಸಲಾಗುತ್ತಿದೆ.

ಮೂತ್ರಪಿಂಡ ಮಾರುವುದಾಗಿ ಜಾಹೀರಾತು: ವಂಚನೆ

ಬೆಂಗಳೂರು: ಮೂತ್ರಪಿಂಡ ಮಾರಾಟ ಹಾಗೂ ಖರೀದಿಸುವುದಾಗಿ ಸಾಮಾಜಿಕ ಜಾಲತಾಣಗಳಲ್ಲಿ ಜಾಹೀರಾತು ನೀಡಿ, ಜನರಿಂದ ಹಣ ಪಡೆದು ವಂಚಿಸುತ್ತಿದ್ದ ಗ್ಯಾಂಗ್‌ನಲ್ಲಿದ್ದ ವಿದೇಶಿ ಪ್ರಜೆಯನ್ನು ಬೇಗೂರು ಪೊಲೀಸರು ಬಂಧಿಸಿದ್ದಾರೆ.

ನೈಜೀರಿಯಾದ ಡ್ನೂಡಿಮ್ ಒಬಿನ್ನಾ ಕಿಂಗ್ ಲೈ ಬಂಧಿತ ಆರೋಪಿ. ಈತ ಈ ದಂಧೆ ಕಿಂಗ್‌ಪಿನ್‌ನ ಸಹಚರ ಎನ್ನಲಾಗಿದೆ.

‘ಈ ದಂಧೆಯಲ್ಲಿ ಹಲವರು ಭಾಗಿಯಾಗಿದ್ದು, ಕರ್ನಾಟಕ, ಗುಜರಾತ್ ಸೇರಿದಂತೆ ಹಲವು ರಾಜ್ಯಗಳಲ್ಲಿ ಸುಳ್ಳು ಜಾಹೀರಾತು ಮೂಲಕ ಜನರಿಗೆ ವಂಚಿಸಿದ್ದಾರೆ. ಇವರ ಜಾಹೀರಾತುಗಳನ್ನು ನೋಡುತ್ತಿದ್ದ ಹಲವರು ಮೂತ್ರಪಿಂಡ ಖರೀದಿಸಲು ಹಾಗೂ ಮಾರಾಟ ಮಾಡಲು ಇವರನ್ನು ಸಂಪರ್ಕಿಸುತ್ತಿದ್ದರು. ವೈದ್ಯಕೀಯ ಪರೀಕ್ಷೆಯ ನೆಪದಲ್ಲಿ ಜನರಿಂದ ಮುಂಗಡವಾಗಿ ಹಣ ಪಡೆದು ವಂಚಿಸುತ್ತಿದ್ದರು’ ಎಂದು ಪೊಲೀಸರು ತಿಳಿಸಿದರು.

ಬಾಲಕಿಯೊಂದಿಗೆ ಮದುವೆ ಮಾಡಿಸಿದ ಸ್ನೇಹಿತರು

ಬೆಂಗಳೂರು: ಸಾಮಾಜಿಕ ಜಾಲತಾಣದಲ್ಲಿ ಪರಿಚಯವಾಗಿದ್ದ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿನಿಯನ್ನು ಪ್ರೇಮಿಸಿದ್ದ ಹುಡುಗನೊಂದಿಗೆ ಸ್ನೇಹಿತರಿಬ್ಬರು ಸೇರಿ ಮದುವೆ ಮಾಡಿಸಿದ ಘಟನೆ ನಡೆದಿದ್ದು, ಈ ಸಂಬಂಧ ಇಬ್ಬರನ್ನು ಹನುಮಂತನಗರ ಪೊಲೀಸರು ಬಂಧಿಸಿದ್ದಾರೆ.

‘ವಿದ್ಯಾರ್ಥಿನಿಯ ಪೋಷಕರು ನೀಡಿದ ದೂರಿನ ಮೇರೆಗೆ ವಿದ್ಯಾರ್ಥಿಯನ್ನು ಮದುವೆಯಾಗಿದ್ದ ಲಗ್ಗೆರೆಯ ದರ್ಶನ್ ಹಾಗೂ ಮದುವೆ ಮಾಡಿಸಿದ್ದ ವಿಜಯನಗರದ ಚಂದ್ರು ಎಂಬ ಯುವಕರನ್ನು ಬಂಧಿಸಲಾಗಿದೆ. ಇದರಲ್ಲಿ ಭಾಗಿಯಾಗಿದ್ದ ಗಿರೀಶ್ ತಲೆಮರೆಸಿಕೊಂಡಿದ್ದಾನೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ವಿದ್ಯಾರ್ಥಿನಿಗೆ ಆನ್‌ಲೈನ್ ತರಗತಿಗಾಗಿ ಪೋಷಕರು ಮೊಬೈಲ್ ಕೊಡಿಸಿದ್ದರು. ಆಕೆ ಇನ್‌ಸ್ಟಾಗ್ರಾಂ, ಫೇಸ್‌ಬುಕ್‌ನಲ್ಲಿ ಖಾತೆ ತೆರೆದಿದ್ದಳು. ಇನ್‌ಸ್ಟಾಗ್ರಾಂ ಮೂಲಕ ದರ್ಶನ್‌ನ ಪರಿಚಯವಾಗಿ ಪ್ರೀತಿಸುತ್ತಿದ್ದರು’.

‘ಈ ವಿಚಾರವನ್ನು ದರ್ಶನ್ ತನ್ನ ಸ್ನೇಹಿತ ಚಂದ್ರು ಬಳಿ ಹೇಳಿಕೊಂಡಿದ್ದ. ಇಬ್ಬರಿಗೂ ಮದುವೆ ಮಾಡಿಸುವುದಾಗಿ ತಿಳಿಸಿದ್ದ ಚಂದ್ರು, ಗಿರೀಶ್‌ನನ್ನು ಬೆಂಗಳೂರಿಗೆ ಕರೆಸಿಕೊಂಡಿದ್ದ. ಜೂನ್‌ನಲ್ಲಿ ವಿದ್ಯಾರ್ಥಿನಿಗೆ ಮನೆ ಬಿಟ್ಟು ಬರುವಂತೆ ಹೇಳಿ, ದೇವಸ್ಥಾನವೊಂದರಲ್ಲಿ ಮದುವೆ ಮಾಡಿಸಿದ್ದರು. ವಿದ್ಯಾರ್ಥಿನಿಯ ಇನ್‌ಸ್ಟಾಗ್ರಾಂ ಖಾತೆಯ ನೆರವಿನಿಂದ ಅವರನ್ನು ಪತ್ತೆ ಹಚ್ಚಲಾಯಿತು. ಬಾಲಕಿಯನ್ನು ಪೋಷಕರಿಗೆ ಒಪ್ಪಿಸಲಾಗಿದೆ’ ಎಂದೂ ಮೂಲಗಳು ಹೇಳಿವೆ.

ಪತ್ನಿಯ ಕೊಲೆಗೈದು ಪಾರ್ಶ್ವವಾಯು ಎಂದಿದ್ದ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಪತ್ನಿಯನ್ನು ಕೊಲೆ ಮಾಡಿದ ಬಳಿಕ ಆಕೆ ಪಾರ್ಶ್ವವಾಯು ಸಮಸ್ಯೆಯಿಂದ ಮೃತಪಟ್ಟಿದ್ದಾಗಿ ಹೇಳಿಕೊಂಡಿದ್ದ ಆರೋಪದಡಿ ಪತಿಯನ್ನು ಮೈಕೊ ಬಡಾವಣೆ ಪೊಲೀಸರು ಬಂಧಿಸಿದ್ದಾರೆ.

ಬಿಟಿಎಂ ಬಡಾವಣೆ ಎರಡನೇ ಹಂತದ ನಿವಾಸಿ ಅಜಿತ್ ಬಂಧಿತ ಆರೋಪಿ. ಸಾನಿಯಾ ಕೊಲೆಯಾಗಿದ್ದ ಮಹಿಳೆ.

‘ಎರಡು ವರ್ಷಗಳ ಹಿಂದೆಯಷ್ಟೇ ಇಬ್ಬರೂ ಪ್ರೀತಿಸಿ ಮದುವೆಯಾಗಿದ್ದರು. ಕೆಲವೇ ತಿಂಗಳ ನಂತರ ಪತಿ ಅಜಿತ್ ಕ್ಷುಲ್ಲಕ ಕಾರಣಕ್ಕೆ ಪತ್ನಿಯೊಂದಿಗೆ ಜಗಳವಾಡುತ್ತಿದ್ದ. ಮೇ ತಿಂಗಳಲ್ಲಿ ಜಗಳ ವಿಕೋಪಕ್ಕೆ ತಿರುಗಿ, ಪತ್ನಿಯ ತಲೆಗೆ ದೊಣ್ಣೆಯಿಂದ ಬಲವಾಗಿ ಹೊಡೆದಿದ್ದ. ಇದರಿಂದ ಕುಸಿದು ಬಿದ್ದಿದ್ದ ಪತ್ನಿಯನ್ನು ಕೂಡಲೇ ಸ್ಥಳೀಯ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಅಷ್ಟರಲ್ಲಿ ಸಾನಿಯಾ ಮೃತಪಟ್ಟಿದ್ದರು’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಆದರೆ, ಪತ್ನಿಯ ಮನೆಯವರಿಗೆ ಆಕೆ ಪಾರ್ಶ್ವವಾಯು ಸಮಸ್ಯೆಯಿಂದ ಮೃತಪಟ್ಟಿದ್ದಾಗಿ ಸುಳ್ಳು ಹೇಳಿದ್ದ. ಆದರೂ ಅನುಮಾನಗೊಂಡಿದ್ದ ಕುಟುಂಬದವರು ಅಜಿತ್ ವಿರುದ್ಧ ಪೊಲೀಸರಿಗೆ ದೂರು ನೀಡಿದ್ದರು. ಪ್ರಕರಣದ ದಾಖಲಿಸಿಕೊಂಡ ಪೊಲೀಸರು ಮೃತದೇಹದ ಮರಣೋತ್ತರ ಪರೀಕ್ಷೆ ನಡೆಸಿದ್ದರು. ಬಲವಾದ ಹೊಡೆತದಿಂದ ಸಾನಿಯಾ ಮೃತಪಟ್ಟಿದ್ದಾಗಿ ವರದಿಯಲ್ಲಿ ದೃಢಪಟ್ಟಿತ್ತು. ಬಂದಿತ್ತು. ಪತಿ ಅಜಿತ್‌ನನ್ನು ಬಂಧಿಸಲಾಗಿದೆ’ ಎಂದೂ ಮಾಹಿತಿ ನೀಡಿವೆ.

ಸರಗಳ್ಳರ ಬಂಧನ: ಚಿನ್ನಾಭರಣ ಜಪ್ತಿ

ಕಳವು ಮಾಡಿದ್ದ ದ್ವಿಚಕ್ರ ವಾಹನಗಳಲ್ಲಿ ಮಹಿಳೆಯರನ್ನು ಹಿಂಬಾಲಿಸಿ, ಚಿನ್ನಾಭರಣ ಕದ್ದು ಪರಾರಿಯಾಗುತ್ತಿದ್ದ ಮೂವರು ಆರೋಪಿಗಳನ್ನು ಕೋರಮಂಗಲ ಪೊಲೀಸರು ಬಂಧಿಸಿದ್ದಾರೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆಯ ಮುನಿಯಪ್ಪ (27), ಚಂದು (21) ಹಾಗೂ ಜೈಕುಮಾರ್ (28) ಬಂಧಿತರು.

‘ಆರೋಪಿಗಳಿಂದ ₹12.7 ಲಕ್ಷ ಬೆಲೆ ಬಾಳುವ ಆರು ಚಿನ್ನದ ಸರಗಳು, ಚಿನ್ನದ ಬಳೆ ಹಾಗೂ ಕಳವು ಮಾಡಿ ಕೃತ್ಯಕ್ಕೆ ಬಳಸಿಕೊಂಡಿದ್ದ ಮೂರು ಬೈಕ್‌ಗಳನ್ನು ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ತಿಳಿಸಿದರು.

‘ಆರೋಪಿಗಳು ಒಂಟಿ ಮಹಿಳೆಯರನ್ನು ಹಿಂಬಾಲಿಸಿ, ಅವರು ಧರಿಸುತ್ತಿದ್ದ ಚಿನ್ನಾಭರಣ ಕದಿಯುತ್ತಿದ್ದರು. ಬಂಧಿತರ ಪೈಕಿ ಮುನಿಯಪ್ಪ 12 ಪ್ರಕರಣಗಳಲ್ಲಿ ಭಾಗಿಯಾಗಿ, 6 ವರ್ಷಗಳ ಜೈಲು ಶಿಕ್ಷೆ ಅನುಭವಿಸಿದ್ದ. ಚಂದು ಪೋಕ್ಸೊ ಕಾಯ್ದೆಯಡಿ ದಾಖಲಾಗಿದ್ದ ಪ್ರಕರಣದಲ್ಲಿ ಎರಡು ವರ್ಷ ಜೈಲಿನಲ್ಲಿದ್ದ’. ‘ಆರೋಪಿಗಳ ಬಂಧನದಿಂದ ಕೋರಮಂಗಲ, ಎಚ್‌ಎಎಲ್, ಅನ್ನಪೂರ್ಣೇಶ್ವರಿ ನಗರ, ವೈಟ್‌ಫೀಲ್ಡ್, ಚನ್ನಮ್ಮನ ಅಚ್ಚುಕಟ್ಟು ಹಾಗೂ ಮಾಲೂರು ಠಾಣೆಗಳಲ್ಲಿ ಸರಗಳ್ಳತನ ಹಾಗೂ ಬೈಕ್ ಕಳವು ಪ್ರಕರಣಗಳು ಪತ್ತೆಯಾಗಿವೆ’ ಎಂದೂ ಅವರು ಹೇಳಿದರು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

BUSINESS

Business to Business

Finance

NRI'S INVESTMENT And Finance AvailableOn LowInterest AgainstProperties, Land & Building,Sites,Flats, Converted& AgricultureLandsCall: 7411265189

REAL ESTATE SELLING

House

Sahakarnagar

NTI LAYOUT 2nd Phase Behind Raintree Apartment Built on 40x61 Site Four Flats each Carpet Area 1850 Sft For Sale 9986160115.

Sites

General

BUDA APPROVED Rera Registered Plots For Sale In SriVaralakshmi Layout On Bengaluru Road Ballari Contact 9845446005, 9949533633.

EDUCATIONAL

General

BANGALORE UNIVERSITY invites applications for SRF/JRF/Project fellow (M. Sc in chemistry with two years research experience and UGC/CSIR-NET are preferred) to work under SERB-CRG project, Govt. of India. The project duration is two years five months. Interested are requested to send their application before 17.07.2021 to Dr. Sureshbabu, Chemistry Dept., Bengaluru- 560056. Email: hariccb@gmail.com

For Online Classified Booking
Name Change / Education / Property / Job / Services and many more contact 9880856233 | 9886213331
dhclassifieds.com

EDUCATION SPECIAL
We are coming out with special offer for Admission Notice, Education Success Congratulation Ads
For details contact: Jerry: 9731810277
Vishal: 9845114560 Tanveer: 9886213331
E-mail: dhclassifieds@deccanherald.co.in

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

ಎಲ್ಲ ದಿನ ಮೆಟ್ರೊ ರೈಲು ಸೇವೆ ● ಬಸ್‌ಗಳಲ್ಲಿಯೂ ಎಲ್ಲ ಆಸನ ಭರ್ತಿಗೆ ಅವಕಾಶ

ಪೂರ್ಣ ಪ್ರಮಾಣದ ಸಾರಿಗೆ ಸೇವೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರ ಮೂರನೇ ಹಂತದ ಅನ್‌ಲಾಕ್ ಘೋಷಿಸುತ್ತಿದ್ದಂತೆಯೇ, ನಗರದಲ್ಲಿ ಸೋಮವಾರದಿಂದ (ಜುಲೈ 5) ಪೂರ್ಣ ಪ್ರಮಾಣದಲ್ಲಿ ಸಾರ್ವಜನಿಕ ಸಾರಿಗೆ ಸೇವೆ ಆರಂಭವಾಗಲಿದೆ. ಎಲ್ಲ ದಿನಗಳಲ್ಲಿ ಮೆಟ್ರೊ ರೈಲು ಸಂಚರಿಸಿದರೆ, ಶೇ 100ರಷ್ಟು ಆಸನ ಸಾಮರ್ಥ್ಯದ ಅವಕಾಶದೊಂದಿಗೆ ಬಿಎಂಟಿಸಿ ಬಸ್‌ಗಳು ರಸ್ತೆಗಿಳಿಯಲಿವೆ.

ಈ ಮೊದಲು ವಾರಾಂತ್ಯದಲ್ಲಿ ಮೆಟ್ರೊ ರೈಲು ಸೇವೆ ಇರಲಿಲ್ಲ. ಬಿಎಂಟಿಸಿ ಬಸ್‌ಗಳು ಕೂಡ ಶೇ 50ರಷ್ಟು ಆಸನ ಸಾಮರ್ಥದೊಂದಿಗೆ ಸಂಚರಿಸುತ್ತಿದ್ದವು. ಅನ್‌ಲಾಕ್ ನಂತರವೂ, ಬಸ್ ಹಾಗೂ ಮೆಟ್ರೊ ರೈಲಿನಲ್ಲಿ ನಿಲುಗಡೆ ಪ್ರಯಾಣವನ್ನು ನಿರ್ಬಂಧಿಸಲಾಗಿದೆ. ಕೋವಿಡ್ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸುವ ಉದ್ದೇಶದಿಂದ ಎರಡೂ ನಿಗಮಗಳು ಹೆಚ್ಚು ಸಿಬ್ಬಂದಿಯನ್ನು ನಿಯೋಜಿಸಿ, ಕಾರ್ಯಾಚರಣೆಗೆ ಸಿದ್ಧತೆ ಮಾಡಿಕೊಂಡಿವೆ.

ಮೆಟ್ರೊ ರೈಲು ಸಂಚಾರ ವಿವರ

- ವಾರದ ಎಲ್ಲ ದಿನ ಬೆಳಿಗ್ಗೆ 7ರಿಂದ ರಾತ್ರಿ 8ರವರೆಗೆ ಸಂಚಾರ
- ದಟ್ಟಣೆ ಅವಧಿಯಲ್ಲಿ 5 ನಿಮಿಷಗಳಿಗೊಂದು ರೈಲು ಸಂಚಾರ
- ಉಳಿದ ಅವಧಿಯಲ್ಲಿ 15 ನಿಮಿಷಕ್ಕೊಂದು ರೈಲು ಬರಲಿದೆ
- ನಿಂತು ಪ್ರಯಾಣಿಸಲು ಅವಕಾಶವಿಲ್ಲ
- ಮಾಸ್ಕ್ ಧರಿಸುವುದು ಕಡ್ಡಾಯ

ಬಿಎಂಟಿಸಿ ಬಸ್ ಸಂಚಾರ ವಿವರ

- ಬೆಳಿಗ್ಗೆ 5ರಿಂದ ರಾತ್ರಿ 9ರವರೆಗೆ ಸಂಚಾರ
- ಮೊದಲ ದಿನ 4,500 ಬಸ್‌ಗಳು ರಸ್ತೆಗಿಳಿಯಲಿವೆ
- ಬಸ್ ಒಳಗೆ ನಿಂತು ಪ್ರಯಾಣಿಸಲು ಅವಕಾಶವಿಲ್ಲ
- ಚಾಲಕ–ನಿರ್ವಾಹಕರು ಲಸಿಕೆ ಪಡೆದಿರುವುದು ಕಡ್ಡಾಯ

ಮೊದಲ ದಿನ ನಾಲ್ಕೂವರೆ ಸಾವಿರ ಬಸ್‌ಗಳು ರಸ್ತೆಗಿಳಿಯಲಿವೆ. ಪ್ರಯಾಣಿಕರ ದಟ್ಟಣೆ ಹೆಚ್ಚಿದರೆ, ಸೇವೆಗಳನ್ನೂ ವಿಸ್ತರಿಸಲಾಗುವುದು. ಸಂಪರ್ಕರಹಿತ ಪಾವತಿಗೆ ಹೆಚ್ಚು ಒತ್ತು ನೀಡಿದ್ದು, ಇದಕ್ಕಾಗಿ ಡಿಜಿಟಲ್ ಟಿಕೆಟಿಂಗ್ (ಕ್ಯೂಆರ್ ಕೋಡ್ ಆಧಾರಿತ) ವ್ಯವಸ್ಥೆ ಕಲ್ಪಿಸಲಾಗಿದೆ. ಬೆಳಿಗ್ಗೆ 5ರಿಂದ ರಾತ್ರಿ 9ರವರೆಗೆ ಬಸ್ ಸೇವೆ ಇರಲಿದೆ ಎಂದು ಬಿಎಂಟಿಸಿ ಹೇಳಿದೆ.

ಪ್ರಯಾಣಿಕರ ಹಿತದೃಷ್ಟಿಯಿಂದ ಸಿಬ್ಬಂದಿ ಲಸಿಕೆ ಪಡೆಯುವುದು ಹಾಗೂ ಮಾಸ್ಕ್ ಧರಿಸುವುದನ್ನು ಕಡ್ಡಾಯಗೊಳಿಸಲಾಗಿದೆ. ಅಂತರ ಕಾಯ್ದುಕೊಳ್ಳಲು ಸರದಿಯಲ್ಲಿ ಬಸ್ ಹತ್ತುವುದು ಮತ್ತು ಇಳಿಯುವುದು, ಜ್ವರ ಮತ್ತಿತರ ಕಾಯಿಲೆಗಳಿಂದ ಬಳಲುತ್ತಿರುವ ಪ್ರಯಾಣಿಕರು ಸಂಸ್ಥೆಯ ವಾಹನಗಳಲ್ಲಿ ಪ್ರಯಾಣಿಸಬಾರದು ಎನ್ನುವುದು ಸೇರಿದಂತೆ ನಿಯಮಗಳನ್ನು ಪಾಲಿಸಬೇಕು ಎಂದು ಸಂಸ್ಥೆ ಪ್ರಕಟಣೆಯಲ್ಲಿ ತಿಳಿಸಿದೆ.

13 ತಾಸು ಸೇವೆ: ನಮ್ಮ ಮೆಟ್ರೊ ರೈಲುಗಳು ದಿನದಲ್ಲಿ 13 ತಾಸು ಸಂಚಾರ ನಡೆಸಲಿವೆ. ದಟ್ಟಣೆ ಅವಧಿಯಲ್ಲಿ ಪ್ರತಿ 5 ನಿಮಿಷಕ್ಕೊಂದು ಹಾಗೂ ಉಳಿದ ಅವಧಿಯಲ್ಲಿ 15 ನಿಮಿಷಗಳ ಅಂತರದಲ್ಲಿ ರೈಲುಗಳು ಕಾರ್ಯಾಚರಿಸಲಿವೆ. ಶನಿವಾರ, ಭಾನುವಾರ ಮತ್ತು ರಜೆ ದಿನಗಳಲ್ಲಿ ಪ್ರಯಾಣಿಕರ ಸಂಖ್ಯೆಗೆ ಅನುಗುಣವಾಗಿ ರೈಲುಗಳ ಸಂಚಾರದ ನಡುವಣ ಅವಧಿಯನ್ನು ಹೆಚ್ಚು–ಕಡಿಮೆ ಮಾಡಲಾಗುವುದು ಎಂದು ಬೆಂಗಳೂರು ಮೆಟ್ರೊ ರೈಲು ನಿಗಮ (ಬಿಎಂಆರ್‌ಸಿಎಲ್) ತಿಳಿಸಿದೆ.

ದೆಹಲಿ: ಕ್ರೀಡಾಂಗಣ ತೆರೆಯಲು ಅನುಮತಿ

ನವದೆಹಲಿ (ಪಿಟಿಐ): ದೆಹಲಿ ಸರ್ಕಾರವು ಸೋಮವಾರದಿಂದ ಕ್ರೀಡಾಂಗಣ ಮತ್ತು ಕ್ರೀಡಾ ಸಂಕೀರ್ಣಗಳನ್ನು ಪುನಃ ತೆರೆಯಲು ಅನುಮತಿ ನೀಡಿದೆ. ಆದರೆ, ಪ್ರೇಕ್ಷಕರಿಗೆ ಅವಕಾಶ ಇರುವುದಿಲ್ಲ.

‘ಕ್ರೀಡಾಂಗಣಗಳು ಮತ್ತು ಕ್ರೀಡಾ ಸಂಕೀರ್ಣಗಳು ಕೋವಿಡ್ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸಬೇಕು. ದೆಹಲಿ ಮೆಟ್ರೊ ಮತ್ತು ಬಸ್‌ಗಳು ಶೇ 50ರಷ್ಟು ಸಾಮರ್ಥ್ಯದೊಂದಿಗೆ ಕಾರ್ಯನಿರ್ವಹಿಸಲಿವೆ’ ಎಂದು ದೆಹಲಿ ವಿಪತ್ತು ನಿರ್ವಹಣಾ ಪ್ರಾಧಿಕಾರವು (ಡಿಡಿಎಂಎ) ಆದೇಶದಲ್ಲಿ ತಿಳಿಸಿದೆ.

‘ಚಿತ್ರ ಮಂದಿರಗಳು, ಮಲ್ಟಿಪ್ಲೆಕ್ಸ್, ಈಜುಕೊಳ, ಸ್ಪಾಗಳು, ಶಾಲಾ–ಕಾಲೇಜುಗಳು ಮುಚ್ಚಿರಲಿವೆ. ಅಲ್ಲದೆ ರಾಜಕೀಯ, ಸಾಂಸ್ಕೃತಿಕ ಮತ್ತು ಧಾರ್ಮಿಕ ಸಭೆ–ಸಮಾರಂಭಗಳ ಮೇಲಿನ ನಿರ್ಬಂಧವೂ ಮುಂದುವರಿಯಲಿದೆ’ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಸಿದ್ಧತೆ ದೇವಾಲಯಗಳ ಪ್ರವೇಶಕ್ಕೆ ಸೋಮವಾರದಿಂದ ಅನುಮತಿ ನೀಡಿರುವ ಕಾರಣ ನಗರದ ಬನಶಂಕರಿ ದೇವಸ್ಥಾನದಲ್ಲಿ ಭಕ್ತರು ಅಂತರ ಕಾಯ್ದುಕೊಂಡು ನಿಲ್ಲಲು ಅನುಕೂಲ ಆಗುವಂತೆ ಭದ್ರತಾ ಸಿಬ್ಬಂದಿ ಭಾನುವಾರ ಗುರುತು ಹಾಕಿದರು ಪ್ರಜಾವಾಣಿ ಚಿತ್ರ

ಇಂದಿನಿಂದ ವಂಡರ್‌ಲಾ ರೆಸಾರ್ಟ್ ಪುನರಾರಂಭ

ಬೆಂಗಳೂರು: ‘ನಗರದ ವಂಡರ್‌ಲಾ ಅಮ್ಯೂಸ್‌ಮೆಂಟ್ ಪಾರ್ಕ್ ಸಮೀಪವಿರುವ ವಂಡರ್‌ಲಾ ಹೋಟೆಲ್ ಹಾಗೂ ರೆಸಾರ್ಟ್ ಸೋಮವಾರದಿಂದ (ಜು.5) ಪುನರಾರಂಭವಾಗಲಿವೆ’ ಎಂದು ವಂಡರ್‌ಲಾ ಹಾಲಿಡೇಸ್ ಭಾನುವಾರ ತಿಳಿಸಿದೆ.

‘ಬೆಂಗಳೂರು–ಮೈಸೂರು ರಸ್ತೆಯಲ್ಲಿರುವ ವಂಡರ್‌ಲಾ ರೆಸಾರ್ಟ್ ಶೇ 50ರಷ್ಟು ಸಾಮರ್ಥ್ಯದೊಂದಿಗೆ ಕಾರ್ಯಾರಂಭವಾಗಲಿದೆ. ಗ್ರಾಹಕರನ್ನು ಆಕರ್ಷಿಸುವ ಸಲುವಾಗಿ ವಿಶೇಷ ರಿಯಾಯಿತಿಗಳನ್ನೂ ಪ್ರಕಟಿಸಲಾಗಿದೆ. ಲಾಕ್‌ಡೌನ್ ನಿಯಮಾವಳಿ ಹಿನ್ನೆಲೆಯಲ್ಲಿ ಅಮ್ಯೂಸ್‌ಮೆಂಟ್ ಪಾರ್ಕ್‌ಗಳನ್ನು ತೆರೆಯದಿರಲು ನಿರ್ಧರಿಸಲಾಗಿದೆ’ ಎಂದು ಪ್ರಕಟಣೆ ತಿಳಿಸಿದೆ.

ಕನಕಪುರ: ತಂಗಿಯ ಮಗನಿಂದಲೇ ಕಳ್ಳತನ

ಕನಕಪುರ: ಯುವಕನೊಬ್ಬ ತನ್ನ ಸಂಬಂಧಿಕರ ಮನೆಯ ಬಾಗಿಲು ಒಡೆದು ಚಿನ್ನಾಭರಣ ಮತ್ತು ನಗದನ್ನು ದೋಚಿದ್ದಾನೆ.

ನಗರದ ಮುತ್ತನರಸಪ್ಪ ಬೀದಿಯ ನಿವಾಸಿ ಸರೋಜಮ್ಮ ಮತ್ತು ವೆಂಕಟಸ್ವಾಮಿ ಮನೆಯಲ್ಲಿ, ಸರೋಜಮ್ಮನ ತಂಗಿ ಮಾದೇವಮ್ಮನ ಮಗ ವಿಜಯ್ (25) ಕಳ್ಳತನ ಮಾಡಿದ್ದಾನೆ.

ಮಾದೇವಮ್ಮ ಮತ್ತು ವಿಜಯ್ ಬೆಂಗಳೂರಿನವರಾಗಿದ್ದು, ತಾಲ್ಲೂಕಿನ ಮರಳವಾಡಿ ಹೋಬಳಿ ಮಲ್ಲಿಗೆಮೆಟ್ಟಿಲು ಗ್ರಾಮಕ್ಕೆ ಬಂದಿದ್ದರು. ಅವರನ್ನು ನೋಡಲು ಸರೋಜಮ್ಮ ಮತ್ತು ವೆಂಕಟಸ್ವಾಮಿ ಭಾನುವಾರ ಮನೆಗೆ ಬೀಗ ಹಾಕಿಕೊಂಡು ಹೋಗಿದ್ದಾರೆ.

ಗಂಡ ಹೆಂಡತಿ ಮನೆಗೆ ಬೀಗ ಹಾಕಿ ಮಲ್ಲಿಗೆಮೆಟ್ಟಿಲು ಗ್ರಾಮಕ್ಕೆ ಬಂದಿರುವುದನ್ನು ಗಮನಿಸಿದ ವಿಜಯ್ 3 ಗಂಟೆ ಸಮಯದಲ್ಲಿ ಕನಕಪುರಕ್ಕೆ ಬಂದು ತಮ್ಮ ದೊಡ್ಡಮನ ಮನೆಯ ಬೀಗ ಒಡೆದು ಒಳನುಗ್ಗಿದ್ದಾನೆ. ವಾಲೆ, ಜುಮಕಿ, ಕತ್ತಿನ ಚೈನ್, ಉಂಗುರ, ಬಳೆಗಳು ಸೇರಿದಂತೆ 40 ಗ್ರಾಮ ಒಡವೆ ಮತ್ತು ₹8 ಸಾವಿರ ನಗದನ್ನು ದೋಚಿರುವುದಾಗಿ ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ.

ಮನೆಯ ಬಾಗಿಲು ಒಡೆಯುವುದನ್ನು ಗಮನಿಸಿದ ಅಕ್ಕಪಕ್ಕದ ಜನ ಆತನನ್ನು ಹಿಡಿಯಲು ಪ್ರಯತ್ನಿಸಿದ್ದಾರೆ. ಆದರೆ ಆತ ಜನರಿಂದ ತಪ್ಪಿಸಿಕೊಂಡು ಪರಾರಿಯಾಗಿದ್ದಾನೆ.

ವಿಷಯ ತಿಳಿದ ದಂಪತಿ 4 ಗಂಟೆ ಸಮಯಕ್ಕೆ ಮನೆಗೆ ಬಂದು ಬಳಿಕ ನಗರ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದಾರೆ.

‘ಎಚ್ಚರ ತಪ್ಪಿದರೆ ಮತ್ತೆ ಲಾಕ್‌ಡೌನ್’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದಲ್ಲಿ ಕೋವಿಡ್ ಪ್ರಕರಣಗಳು ಕಡಿಮೆಯಾಗುತ್ತಿವೆ. ಹಾಗೆಂದು ಯಾರೂ ಮೈಮರೆಯಬಾರದು. ಮುಖಗವಸು ಧರಿಸುವುದನ್ನು ಕಡ್ಡಾಯವಾಗಿ ಪಾಲಿಸಬೇಕು. ಮನೆಯಿಂದ ಹೊರ ಹೋದಾಗ ದೈಹಿಕ ಅಂತರ ಕಾಪಾಡಿಕೊಳ್ಳಬೇಕು. ಕೋವಿಡ್ ಲಸಿಕೆಯನ್ನೂ ತಪ್ಪದೆ ಪಡೆಯಬೇಕು. ಇಲ್ಲದಿದ್ದರೆ ರಾಜ್ಯದಲ್ಲಿ ಮತ್ತೆ ಲಾಕ್‌ಡೌನ್ ಜಾರಿಗೊಳಿಸುವುದು ಅನಿವಾರ್ಯ’ ಎಂದು ಕಂದಾಯ ಸಚಿವ ಆರ್. ಅಶೋಕ ತಿಳಿಸಿದರು.

ಪಾಲಿಕೆಯ ಮಾಜಿ ಸದಸ್ಯ ಎಲ್. ಶ್ರೀನಿವಾಸ್ ಅವರು ಪದ್ಮನಾಭನಗರ ವಿಧಾನಸಭಾ ಕ್ಷೇತ್ರದಲ್ಲಿ ಹಮ್ಮಿಕೊಂಡಿದ್ದ 1,000 ಆಟೊ ಚಾಲಕರು ಹಾಗೂ ಕೂಲಿ ಕಾರ್ಮಿಕರಿಗೆ ದಿನಸಿ ಕಿಟ್ ಉಚಿತವಾಗಿ ನೀಡುವ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು.

ಸಚಿವ ಆರ್‌.ಅಶೋಕ ಅವರು ಆಟೊ ಚಾಲಕರಿಗೆ ಕಿಟ್ ವಿತರಿಸಿದರು. ಸಂಸದ ತೇಜಸ್ವಿ ಸೂರ್ಯ ಮತ್ತು ಎಲ್‌.ಶ್ರೀನಿವಾಸ್ ಇದ್ದಾರೆ.

ಎಲ್‌.ಶ್ರೀನಿವಾಸ್, ‘ನನ್ನ ವಾರ್ಡ್‌ನಲ್ಲಿ ಈವರೆಗೆ 5 ಸಾವಿರಕ್ಕೂ ಹೆಚ್ಚು ಜನರಿಗೆ ದಿನಸಿ ಕಿಟ್ ವಿತರಿಸಲಾಗಿದೆ. ಪ್ರತಿದಿನ 8 ಸಾವಿರ ಮನೆಗಳಿಗೆ ಆಹಾರದ ಪೊಟ್ಟಣಗಳನ್ನೂ ತಲುಪಿಸಿದ್ದೇವೆ. ಈ ಕಾರ್ಯ ಹೀಗೆ ಮುಂದುವರಿಯಲಿದೆ’ ಎಂದು ತಿಳಿಸಿದರು.

₹ 2.81 ಕೋಟಿ ಮೌಲ್ಯದ ಅಕ್ಕಿ, ವಾಹನ ವಶ

ಕಾಳಸಂತೆಗೆ ಪಡಿತರ ಅಕ್ಕಿ: 17 ಮಂದಿ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಡಿತರ ಅಕ್ಕಿಯನ್ನು ಅಕ್ರಮವಾಗಿ ಖರೀದಿಸಿ, ಪಾಲಿಶ್ ಮಾಡಿ ವಿವಿಧ ಬ್ರ್ಯಾಂಡುಗಳಲ್ಲಿ ಕಾಳಸಂತೆಯಲ್ಲಿ ಮಾರಾಟ ಮಾಡುತ್ತಿದ್ದ ಆರೋಪದಲ್ಲಿ ಬಂಗಾರಪೇಟೆ–ಕೆ.ಜಿ.ಎಫ್ ರಸ್ತೆಯ ದಾಸರಹೊಸಹಳ್ಳಿ ಬಳಿ ಇರುವ ಪಿಆರ್‌ಎಸ್ ಆಗ್ರೋಟೆಕ್ ಅಕ್ಕಿ ಗಿರಣಿ ಮಾಲೀಕ ಸೇರಿ 17 ಮಂದಿಯ ವಿರುದ್ಧ ಬಂಗಾರಪೇಟೆ ಪೊಲೀಸ್ ಠಾಣೆಯಲ್ಲಿ ಆಹಾರ ಇಲಾಖೆಯ ರಾಜ್ಯ ಮಟ್ಟದ ತನಿಖಾ ದಳದ ಮುಖ್ಯಸ್ಥರೂ ಆಗಿರುವ ಜಂಟಿ ನಿರ್ದೇಶಕ (ಐಟಿ ವಿಭಾಗ) ಕೆ. ರಾಮೇಶ್ವರಪ್ಪ ಅವರು ಭಾನುವಾರ ದೂರು ನೀಡಿದ್ದಾರೆ.

ಅಕ್ಕಿ ಅಕ್ರಮ ಸಾಗಣೆಯ ಬಗ್ಗೆ ಮೇ 16ರಂದು ಇಲಾಖೆಯ ಅಧಿಕಾರಿಗಳಿಗೆ ಮಾಹಿತಿ ಬಂದಿತ್ತು. ಅಂದೇ ಜಂಟಿ ಕಾರ್ಯಾಚರಣೆ ನಡೆಸಿ, ಅಕ್ಕಿ ಗಿರಣಿಯಲ್ಲಿ ದಾಸ್ತಾನು ಇಡಲಾಗಿದ್ದ ₹ 2.35 ಕೋಟಿ ಮೌಲ್ಯದ 8,497 ಕ್ವಿಂಟಲ್ ಅಕ್ಕಿ ಮತ್ತು 1,213.70 ಕ್ವಿಂಟಲ್ ಅಕ್ಕಿ ನುಚ್ಚು, ಸಾಗಣೆ ಬಳಸಿದ ₹ 49.50 ಲಕ್ಷ ಮೌಲ್ಯದ ಏಳು ವಾಹನಗಳನ್ನು ಸೇರಿ ಒಟ್ಟು 2.81 ಕೋಟಿಯ ವಸ್ತು ಮತ್ತು ವಾಹನವನ್ನು ವಶಪಡಿಸಿಕೊಳ್ಳಲಾಗಿತ್ತು.

ಅಕ್ಕಿ ಗಿರಣಿಯ ಮಾಲೀಕ ಆರ್. ರಘುನಾಥ ಶೆಟ್ಟಿ, ನೌಕರರರಾದ ಸಿ. ಮಂಜುನಾಥ್, ಬಿ.ಎಂ. ರಾಮು, ಚಿನ್ನಪ್ಪ, ವಾಹನಗಳ ಮಾಲೀಕರು ಮತ್ತು ಚಾಲಕರು ಕಾಳಸಂತೆಕೋರರ ಜೊತೆ ಶಾಮೀಲಾಗಿ ಕರ್ನಾಟಕ, ಆಂಧ್ರಪ್ರದೇಶ, ತಮಿಳುನಾಡು ಸರ್ಕಾರಗಳು ಸಾರ್ವಜನಿಕ ವಿತರಣಾ ವ್ಯವಸ್ಥೆಯಡಿ ಬಿಡುಗಡೆ ಮಾಡಿರುವ ಅಕ್ಕಿಯನ್ನು ಅಕ್ರಮವಾಗಿ ಖರೀದಿಸಿ, ಪಾಲಿಶ್ ಮಾಡಿ ಕಾಳಸಂತೆಯಲ್ಲಿ ಮಾರಾಟ ಮಾಡುತ್ತಿದ್ದರು ಎಂದು ದೂರಿನಲ್ಲಿ ಆರೋಪಿಸಲಾಗಿದೆ.

‘ಅಕ್ಕಿ ಗಿರಣಿ ಮಾಲೀಕರು ಮತ್ತು ಅದರ ಜೊತೆ ಇತರ ವ್ಯಾಪಾರಿಗಳು ಮತ್ತು ಮಧ್ಯವರ್ತಿಗಳು ಸೇರಿ ಅಗತ್ಯ ವಸ್ತುಗಳ ಅಕ್ರಮ ಸಾಗಣೆ, ಕಾಳಸಂತೆಯಲ್ಲಿ ಮಾರಾಟ ಮಾಡಿ ಸರ್ಕಾರ ಮತ್ತು ಸಾರ್ವಜನಿಕರಿಗೆ ಮೋಸ ಮಾಡಿದ್ದಾರೆ ಎಂದು ಆರೋಪಿಸಿ ದೂರು ನೀಡಲಾಗಿದ್ದು, ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ’ ಎಂದು ರಾಮೇಶ್ವರಪ್ಪ ತಿಳಿಸಿದರು.

ಆರೋಗ್ಯ ಶಿಬಿರ

ದೇವನಹಳ್ಳಿ: ಪಟ್ಟಣದ ಆಕಾಶ್ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಕೇಂದ್ರದಲ್ಲಿ ರಾಷ್ಟ್ರೀಯ ವೈದ್ಯರ ದಿನಾಚರಣೆ ಅಂಗವಾಗಿ ಜು. 10ರವರೆಗೆ ಉಚಿತ ಆರೋಗ್ಯ ತಪಾಸಣೆ ಶಿಬಿರ ಆಯೋಜಿಸಲಾಗಿದೆ ಎಂದು ಆಸ್ಪತ್ರೆ ಅಧ್ಯಕ್ಷ ಮುನಿರಾಜು ತಿಳಿಸಿದರು.

ಶಿಬಿರದಲ್ಲಿ ಹೃದಯ ತಜ್ಞರು, ಪ್ಲಾಸ್ಟಿಕ್ ಸರ್ಜರಿ, ಶ್ವಾಸಕೋಶ ತಜ್ಞರು, ಮೂತ್ರಪಿಂಡ ತಜ್ಞರ ವಿಶೇಷ ತಜ್ಞ ವೈದ್ಯರು ಪಾಲ್ಗೊಳ್ಳುವರು.

‘ಎರಡೂ ರಾಜ್ಯಗಳಿಗೆ ಮೇಕೆದಾಟು ಯೋಜನೆ ಫಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮೇಕೆದಾಟು ಬಳಿ ಸಮಾನಾಂತರ ಜಲಾಶಯ ನಿರ್ಮಿಸುವ ಯೋಜನೆಯಿಂದ ಕರ್ನಾಟಕ ಮತ್ತು ತಮಿಳುನಾಡು ಎರಡೂ ರಾಜ್ಯಗಳಿಗೂ ಅನುಕೂಲವಾಗಲಿದೆ. ಈ ವಿಚಾರವಾಗಿ ಮುಖ್ಯಮಂತ್ರಿ ಯಡಿಯೂರಪ್ಪ ಬರೆದ ಪತ್ರಕ್ಕೆ ತಮಿಳುನಾಡು ಮುಖ್ಯಮಂತ್ರಿ ಸ್ಪಂದಿಸಬೇಕು’ ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಬಸವರಾಜ ಬೊಮ್ಮಾಯಿ ಹೇಳಿದರು.



ಬಸವರಾಜ ಬೊಮ್ಮಾಯಿ

ಸುದ್ದಿಗಾರರ ಜತೆ ಭಾನುವಾರ ಮಾತನಾಡಿದ ಅವರು, ‘ಮೇಕೆದಾಟು ಯೋಜನೆಯಿಂದ ನಮಗೆ ಕುಡಿಯುವ ನೀರು ಸಿಗಲಿದೆ. ಮಳೆ ಕಡಿಮೆಯಾದಾಗ ಅವರ (ತಮಿಳುನಾಡು) ಪಾಲಿನ ನೀರು ಕೊಡಲು ಸಾಧ್ಯವಾಗುತ್ತದೆ. ಇದು ಗೊತ್ತಿದ್ದೂ ಅವರು ಸುಪ್ರೀಂ ಕೋರ್ಟ್‌ನಲ್ಲಿ ಆಕ್ಷೇಪಣೆ ಸಲ್ಲಿಸಿದ್ದಾರೆ. ಆದರೆ, ನಮಗೆ ನ್ಯಾಯ ಸಿಗುವ ವಿಶ್ವಾಸ ಇದೆ’ ಎಂದರು.

‘ರಾಜ್ಯಕ್ಕೆ ಹಂಚಿಕೆಯಾಗಿರುವ ನೀರನ್ನು ಬಳಸಿಕೊಂಡೇ ಮೇಕೆದಾಟು ಯೋಜನೆ ಅನುಷ್ಠಾನ ಮಾಡುತ್ತಿದ್ದೇವೆ. ತಮಿಳುನಾಡಿನ ಪಾಲಿನ ನೀರಿಗೆ ಯಾವುದೇ ತೊಂದರೆ ಆಗುವುದಿಲ್ಲ. ಆದರೂ ಅವರು ಯೋಜನೆಯನ್ನು ಪ್ರಶ್ನಿಸಿ ಕೋರ್ಟ್ ಮೆಟ್ಟಿಲೇರಿದ್ದಾರೆ. ಮಾರ್ಕಂಡೇಯ ಜಲಾಶಯ ವಿಷಯವಾಗಿ ಮೊದಲಿನಿಂದಲೂ ತಗಾದೆ ತೆಗೆಯುತ್ತಿದ್ದಾರೆ. ರಾಜಕೀಯ ಕಾರಣಕ್ಕಾಗಿ ಇದನ್ನೆಲ್ಲ ಮಾಡುತ್ತಿದ್ದಾರೆ. ಹೊಸ ಸರ್ಕಾರ ಬಂದಿದೆ. ಸಣ್ಣ ವಿಚಾರವನ್ನು ದೊಡ್ಡದು ಮಾಡುತ್ತಿದ್ದಾರೆ’ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಕೇಂದ್ರದ ಮೇಲೆ ಒತ್ತಡ: ‘15ನೇ ಹಣಕಾಸು ಆಯೋಗದಿಂದ ರಾಜ್ಯಕ್ಕೆ ಬರಬೇಕಿರುವ ಅನುದಾನ ಪಡೆಯುವ ಕುರಿತು ಕೇಂದ್ರದ ಮೇಲೆ ಒತ್ತಡ ಹಾಕಲಾಗಿದೆ. ಅದನ್ನು ನಾವು ಪಡೆದುಕೊಳ್ಳುತ್ತೇವೆ’ ಎಂದರು.

ಪೆಟ್ರೋಲ್ ಮೇಲಿನ ಸೆಸ್ ಕಡಿಮೆ ಮಾಡುವ ಕುರಿತು ಪ್ರತಿಕ್ರಿಯಿಸಿದ ಅವರು, ‘ಈ ಜವಾಬ್ದಾರಿ ಎರಡೂ ಕಡೆ ಇದೆ. ಇದು ಇಡೀ ದೇಶದ ವಿಚಾರ. ಸಾಮಾನ್ಯ ಜನರ ಮೇಲಿನ ಹೊರೆ ಕಡಿಮೆ ಮಾಡಲು ಎಲ್ಲರೂ ಒಗ್ಗಟ್ಟಾಗಿ ಹೋಗಬೇಕು’ ಎಂದರು.

ಪಕ್ಷದ ತ್ಯಜಿಸಿದ ಶಾಸಕರಿಗೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಆಹ್ವಾನ ನೀಡಿದ ಕುರಿತು ಕೇಳಿದ ಪ್ರಶ್ನೆಗೆ, ‘ಅದು ಕಾಂಗ್ರೆಸ್ ಪಕ್ಷದ ಆಂತರಿಕ ವಿಚಾರ. ಆದರೂ, ಅದರಿಂದ ಅವರಿಗೆ ಈಗಿರುವ ಶಕ್ತಿ ಸಾಲದು ಎನ್ನುವುದು ಗೊತ್ತಾಗುತ್ತದೆ. ಹೀಗಾಗಿ, ಹೊರಗಿನಿಂದ ನಾಯಕರನ್ನು ಕರೆತರಬೇಕು ಎನ್ನುವುದು ಶಿವಕುಮಾರ್ ಉದ್ದೇಶ ಇರಬಹುದು’ ಎಂದು ಹೇಳಿದರು.

ಅಡಿಗಾಸ್ ಯಾತ್ರಾದಿಂದ ಪ್ರವಾಸ ಇನ್ನಷ್ಟು ಸುಲಭ

ಲಸಿಕೆ ಹಾಕಿಸಿಕೊಂಡವರಿಗೆ ಸಂಸ್ಥೆಯಿಂದ ಎಲ್ಲಾ ಪ್ರವಾಸಗಳ ಮೇಲೆ ಸ್ಪೇಷಲ್ ಕ್ಯಾಶ್ ಡಿಸ್ಕೌಂಟ್

ಕಳೆದ 26 ವರ್ಷಗಳಿಂದ ಪ್ರವಾಸೋದ್ಯಮದಲ್ಲಿ ಸೇವೆ ಸಲ್ಲಿಸಿದ ಹೆಸರಾಂತ ಅಡಿಗಾಸ್ ಯಾತ್ರಾ ಸಂಸ್ಥೆಯು ಭಾರತ ಸರ್ಕಾರ ಪ್ರವಾಸೋದ್ಯಮ ಸಚಿವಾಲಯದಿಂದ ಮಾನ್ಯತೆ ಪಡೆದಿದೆ.

ಸುಲಭ ಪ್ರವಾಸ ಯೋಜನೆ: ಅಡಿಗಾಸ್ ಯಾತ್ರಾ ಸಂಸ್ಥೆಯು ಈ ಹಿಂದೆ ಜನಪ್ರಿಯವಾದ ಸುಲಭ ಪ್ರವಾಸ ಯೋಜನೆಯನ್ನು ಪ್ರವಾಸಿಗರ ಒತ್ತಾಯದ ಮೇರೆಗೆ ಪುನರಾರಂಭಿಸಲಾಗಿದೆ. ಈ ಯೋಜನೆಯು 12 ತಿಂಗಳ ಸುಲಭ ಕಂತಿನಲ್ಲಿ ಪಾವತಿಸಲು ಅವಕಾಶ ವಿದೆ. ಈ ಯೋಜನೆಡೆಯಲ್ಲಿ ತಮಗೆ ಇಚ್ಚಿಸಿದ ಗ್ರೂಪ್ ಟೂರ್, ಕಸ್ಟಮೈಜ್ಡ್ ಟೂರ್, ಹನಿಮೂನ ಟೂರ್‌ಗಳನ್ನು ದೇಶಿಯ ಹಾಗೂ ಅಂತರಾಷ್ಟ್ರೀಯ ಪ್ರವಾಸಗಳನ್ನು ಮಾಡಬಹುದಾಗಿದೆ. ಹೆಚ್ಚಿನ ವಿವರಗಳಿಗೆ 7022259003ಗೆ ಸಂಪರ್ಕಿಸಿ.

ಗ್ರೂಪ್ ಟೂರ್: ಸಂಸ್ಥೆಯು ಸಸ್ಯಾಹಾರಿ, ಉಟೋಪಹಾರ, ನುರಿತ ಮಾರ್ಗದರ್ಶನದೊಂದಿಗೆ ಏರ್ಪಡಿಸುವ ಹೆಸರಾಂತ ಪ್ರವಾಸಗಳಾದ, ಕಾಶಿ ಗಯಾ ಯಾತ್ರಾ, ಚಾರಧಾಮ್ ಯಾತ್ರಾ, ಈಶಾನ್ಯ ಭಾರತ ಪ್ರವಾಸಗಳು ಅಸ್ಸಾಂ, ಅರುಣಾಚಲ, ಮೇಘಾಲಯ, ನಾಗಾಲ್ಯಾಂಡ್, ಮಣಿಪುರ, ಮಿಜೋರಾಂ, ತ್ರಿಪುರ, ಸಿಕ್ಕಿಂ, ಡಾರ್ಜಲಿಂಗ್, ಗುಜರಾತ್, ರಾಜಸ್ಥಾನ, ಶಿಮ್ಲಾ, ಮನಾಲಿ, ವೈಷ್ಣೋದೇವಿ, ಪೂರ್ವ ಭಾರತದ ಮುಂತಾದ ಪ್ರವಾಸಗಳು, ಅಗಷ್ಟನಿಂದ ಡಿಸೆಂಬರ ತಿಂಗಳವರೆಗೆ ಬುಕ್ಕಿಂಗ್ ಪ್ರಾರಂಭವಾಗಿದೆ. ಹೆಚ್ಚಿನ ವಿವರಗಳಿಗೆ 7022259002 ಗೆ ಸಂಪರ್ಕಿಸಿ ಈದೀಗ ಕಾಯ್ದಿರಿಸಿದವರಿಗೆ ವಿಶೇಷ ರಿಯಾಯಿತಿ ಲಭ್ಯವಿದೆ.

ಕಸ್ಟಮೈಜ್ಡ್ ಪ್ರವಾಸಗಳು: ಗ್ರಾಹಕರು ತಮಗೆ ಇಚ್ಚಿಸಿದ ದಿನದಂದು ತಮ್ಮ ಕುಟುಂಬ ಹಾಗೂ ಮಿತ್ರರೊಂದಿಗೆ ಪ್ರವಾಸ ಮಾಡಬಹುದಾಗಿದೆ.

ಸಂಸ್ಥೆಯು 500 ಕ್ಕೂ ಅಧಿಕ ಸಿದ್ದಪಡಿಸಿದ ಪ್ರವಾಸಗಳನ್ನು ಯೋಜನೆಯಡಿಯಲ್ಲಿ ಆಯ್ಕೆ ಮಾಡಬಹುದಾಗಿದೆ. ಇದರಲ್ಲಿ ಸ್ಟ್ಯಾಂಡರ್ಡ್, ಡಿಲೆಕ್ಸ್, ಲಕ್ಷುರಿ, ಪ್ರಿಮಿಯಮ್ ವಿಭಾಗಗಳಾಗಿದ್ದು ಪ್ರವಾಸಿಗರ ಅನುಕೂಲಕ್ಕೆ ತಕ್ಕಂತೆ ನೆಚ್ಚಿನ ತಾಣಗಳನ್ನು ಭಾರತಾದ್ಯಾಂತ ಪ್ರವಾಸ ಮಾಡಬಹುದಾಗಿದೆ. ವಿವರಗಳಿಗೆ 9611600810 ಗೆ ಸಂಪರ್ಕಿಸಿ.

ಅಡಿಗಾಸ್ ಯಾತ್ರಾ

ಹನಿಮೂನ್ ಪ್ಯಾಕೇಜ್: ಸಂಸ್ಥೆಯು ಹೆಸರಾಂತ ತಾಣಗಳಿಗೆ ನವ ಜೋಡಿಗಳಿಗೆ, ಹನಿಮೂನ್ ಪ್ರವಾಸಗಳನ್ನು ಏರ್ಪಡಿಸಲಾಗಿದೆ. ಇದರಲ್ಲಿ ಪ್ಲವರ್ ಡೆಕೋರೇಶನ್, ಕ್ಯಾಂಡಲ್‌ಲೈಟ್ ಡಿನ್ನರ್, ಸರ್ಪ್ರೈಸ್ ಗಿಫ್ಟ್ ಹಾಗೂ ವಿಶೇಷ ವ್ಯವಸ್ಥೆಯನ್ನೊಳಗೊಂಡಿದೆ. ಆಯ್ಕೆಗೆ ಬಹಳಷ್ಟು ಪ್ರವಾಸ ತಾಣಗಳು ಲಭ್ಯವಿದೆ. ಸಂಪರ್ಕಿಸಿ 7022259005

ಏಜೆನ್ಸಿ/ಫ್ರಾಂಚೈಸಿ & ಉದ್ಯೋಗ ಅವಕಾಶ: ಅಡಿಗಾಸ್ ಯಾತ್ರಾದ ಪ್ರತಿನಿಧಿಯಾಗಿ ಕಾರ್ಯ ನಿರ್ವಹಿಸಲು ಹಾಗೂ ಆಫೀಸಿನಲ್ಲಿ ಸೇಲ್ ಮ್ಯಾನೇಜರ್ ಎಕ್ಸಿಕ್ಯೂಟಿವ್ ಉದ್ಯೋಗ ಅವಕಾಶ, ಕರ್ನಾಟಕ ರಾಜ್ಯಾದಾದ್ಯಂತ ಎಲ್ಲ ನಗರ, ಪಟ್ಟಣ, ಜಿಲ್ಲಾ ಕೇಂದ್ರಗಳಲ್ಲಿ ನಿರ್ವಹಿಸಲು ಅರ್ಜಿಗಳನ್ನು ಕರೆಯಲಾಗಿದೆ. ಆಸಕ್ತರು ಇ–ಮೇಲ್ travel@adigasyatra.comಗೆ ಕಳುಹಿಸಲು ಕೋರಲಾಗಿದೆ.

ಕಾಶಿ–ಗಯಾ ಯಾತ್ರೆ: ಸಂಸ್ಥೆಯ ಜನಪ್ರಿಯ ಯಾತ್ರೆಗಳಲ್ಲೊಂದಾದ ಕಾಶಿ– ಗಯಾ ಯಾತ್ರೆಯು 9 ದಿನಗಳದ್ದಾಗಿದ್ದು, ಬೆಂಗಳೂರಿನಿಂದ ರೈಲು ಪ್ರಯಾಣ, ಎ.ಸಿ ರೂಮಿನ ವಸತಿ, ಎ.ಸಿ ಬಸ್ಸಿನಲ್ಲಿ ಪ್ರಯಾಣ ಸಸ್ಯಹಾರಿ ಊಟೋಪಹಾರ ಹಾಗೂ ನುರಿತ ಮಾರ್ಗದರ್ಶನ ವನ್ನು ಒಳಗೊಂಡ ಈ ಯಾತ್ರೆಯ ದರ ಕೇವಲ ರೂ. 23,900/- . ಯಾತ್ರೆಯಲ್ಲಿ ಕಾಶಿ ವಿಶ್ವನಾಥ, ವಿಶಾಲಾಕ್ಷಿ, ಅನ್ನಪೂರ್ಣ ಮಂದಿರ, ಕವಡೆಬಾಯಿ, ಕಾಲ ಭೈರವ, ತುಳಸಿ ಮಾನಸ ಮಂದಿರ, ಬನಾರಸ್ ಹಿಂದೂ ವಿಶ್ವವಿಧ್ಯಾಲಯ, ಗಂಗಾಸ್ನಾನ, ವಾರಣಾಸಿಯ ಘಾಟ್ ಗಳ ದರ್ಶನ, ದಶಾಶ್ವಮೇಧಘಾಟಿನಲ್ಲಿ ನಡೆಯುವ ಗಂಗಾರತಿ, ಪ್ರಯಾಗ್ ರಾಜ್ ನಲ್ಲಿ ತ್ರಿವೇಣಿ ಸಂಗಮದಲ್ಲಿ ಸ್ನಾನ, ಗಯಾದ ವಿಷ್ಣುಪಾದ ಮಂದಿರ, ಬೋಧಗಯಾದ ಮಹಾಬೋಧಿ ಮಂದಿರ, ಸಾರನಾಥದ ಬೌದ್ಧ ಸ್ತೂಪ ಇತ್ಯಾದಿಗಳನ್ನು ಸಂದರ್ಶಿಸಬಹುದು. ಪಿತೃಕಾರ್ಯ ಮಾಡುವವರಿಗೆ ವಿಶೇಷ ವ್ಯವಸ್ಥೆ ಕಲ್ಪಿಸಲಾಗುತ್ತದೆ. ವಿವರಗಳಿಗೆ ವಿಶೇಷ ರಿಯಾಯಿತಿಗೆ 7022259003ಗೆ ಸಂಪರ್ಕಿಸಿರಿ

26 ವರ್ಷಗಳ ವಿಶ್ವಾಸ ಅತ್ಯುತ್ತಮವಾದುದರಲ್ಲಿ ನಂಬಿಕೆ

ಭಾರತ ಸರ್ಕಾರದ ಪ್ರವಾಸೋದ್ಯಮ ಸಚಿವಾಲಯದಿಂದ ಮಾನ್ಯತೆ ಪಡೆದ ಸಂಸ್ಥೆ

ಅಡಿಗಾಸ್ ಯಾತ್ರಾ®

ಸ್ಥಳ, ಸಮಯ, ಹಣಕ್ಕೆ ಅಧಿಕ ಮೌಲ್ಯ

ವಿಶೇಷ ರಿಯಾಯಿತಿ

144, ದುರ್ಗಾ ಮ್ಯಾನ್‌ಷನ್, ಡಿ.ವಿ.ಜಿ. ರಸ್ತೆ, ಬಸವನಗುಡಿ, ಬೆಂಗಳೂರು-04

☎ 080-26616678	ಮಲ್ಲೇಶ್ವರಂ: ☎ 080-23346678	ಹುಬ್ಬಳ್ಳಿ : ☎ 0836-2256678
☎ 7022259008, 7022259009	7022259003, 9845631379	8095800401, 8095800301

E-mail: care@adigasyatra.com website: www.adigasworld.com

ವಿಮಾನ ಪ್ರಯಾಣ, 3* /4* ಸ್ಟಾರ್ ಹೋಟೆಲ್ ಗಳಲ್ಲಿ ವಸತಿ, ಊಟೋಪಹಾರ ಹಾಗೂ ಪೂರ್ವ ನಿಯೋಜಿತ ವೇಳಾಪಟ್ಟಿಯಂತೆ ಸ್ಥಳ ವೀಕ್ಷಣೆ.

Air Tickets | Breakfast & Dinner | Stay @ 3*/4* Hotel/Resort, | Reserved Vehicle for Sightseeing & Transfers

ಗುಜರಾತ್ — 6/8 ದಿನಗಳು
ಅಹಮದಾಬಾದ್, ಕೆವಾಡಿಯ ಸರ್ದಾರ್ ವಲ್ಲಭ ಬಾಯ್ ಪ್ರತಿಮೆ, ಭಾವನಗರ, ನಿಷ್ಕಳಂಕ ಮಹಾದೇವ್, ಸೋಮನಾಥ, ಸಾಸಂಗಿರ್, ವೀರಾವಳ್, ಪೋರ್‌ಬಂದರ್, ಬೇಟ್‌ದ್ವಾರಕಾ, ನಾಗೇಶ್ವರ ಜ್ಯೋತಿರ್ಲಿಂಗ, ದ್ವಾರಕಾ, ಮಾತೃಗಯಾ (ಸಿದ್ಧಪುರ) , ಮೊಧೆರಾ.
Dep dates; Aug. 29, Sep. 12, 26, Oct. 3, 17, 31 Nov. 14, 21, Dec. 5, 12

ಕಾಶ್ಮೀರ–ವೈಷ್ಣೋದೇವಿ — 6/8 ದಿನಗಳು
ಕಟ್ರಾ, ವೈಷ್ಣೋದೇವಿ, ಶ್ರೀನಗರ, ಮೊಘಲ್‌ಗಾರ್ಡನ್ಸ್, ದಾಲ್‌ಲೇಕ್, ಗುಲ್ಮಾರ್ಗ, ಸೋನಮಾರ್ಗ, ಪೆಹಲಗಾಮ್
Dep dates; Aug.11,25, Sep. 8,15, Oct.6,13,20, Nov. 3,17,24, Dec. 1,15

ಅಸ್ಸಾಂ–ಮೇಘಾಲಯ — 7 ದಿನಗಳು
ಗುವಾಹತಿ, ಕಾಮಾಕ್ಯ ಶಕ್ತಿಪೀಠ, ಶಿಲ್ಲಾಂಗ್, ಚಿರಾಪುಂಜಿ, ದಾವ್ಕಿ, ಮಾವ್ಲಿನಾಂಗ್, ಲಿವಿಂಗ್ ರೂಟ್ ಬ್ರಿಡ್ಜ್, ಕಾಜಿರಂಗ ನ್ಯಾಷನಲ್ ಪಾರ್ಕ್, ಎಲಿಫೆಂಟ್ & ಜಂಗಲ್ ಸಫಾರಿ,
Dep dates; April 10,24, Sept. 7,21, Oct.5,12, Nov.9, Dec.7,14

ರಾಜಸ್ಥಾನ — 8 ದಿನಗಳು
ಜೈಪುರ, ಉದಯಪುರ, ಜೈಸಲ್ಮೇರ್, ಜೋಧಪುರ್, ಸ್ಯಾಮ್ ಸ್ಯಾಂಡ್ ಡೂನ್ಸ್, ಡೆಸರ್ಟ್ ಸಫಾರಿ
Dep dates; Sept.8,15,Oct.13,22, Nov.3,10,24, Dec. 1,8,15

ಕಾಶಿ–ಗಯಾ–ಅಯೋಧ್ಯಾ — 5/7/ ದಿನಗಳು
ವಾರಣಾಸಿ, ಪ್ರಯಾಗರಾಜ್ (ತ್ರಿವೇಣಿ ಸಂಗಮ) ಸಾರಾನಾಥ, ಗಯಾ, ಬೋಧಗಯಾ, ಅಯೋಧ್ಯಾ
Dep dates; Aug.5,19, Sept.2,16, Oct.14,28, Nov.4,11,25, Dec.2,9,16

ಶಿಮ್ಲಾ–ಮನಾಲಿ — 7 ದಿನಗಳು
ಶಿಮ್ಲಾ, ಕುಫ್ರಿ, ಕುಲು, ಮನಾಲಿ, ರೋಹ್ಟಂಗ್ ಪಾಸ್, ಚಂಡೀಗಢ್
Dep dates; Aug.5,19, Spt.2,16, Oct. 14,28, Nov.4,11,25, Dec.2,9,16

ಪುರಿ–ಕೊನಾರ್ಕ್–ಭುವನೇಶ್ವರ — 4 ದಿನಗಳು
ಪುರಿ ಜಗನ್ನಾಥ ಮಂದಿರ, ಕೊನಾರ್ಕ್ ಸೂರ್ಯ ಮಂದಿರ, ಭುವನೇಶ್ವರ, ಲಿಂಗರಾಜ ಮಂದಿರ, ಧವಳಗಿರಿ
Dep dates;Aug.4,25, Sept.15,29 Oct.6,27, Nov.10,12, Dec. 1,15

ಅಮೃತಸರ್–ಧರ್ಮಶಾಲಾ–ಡಾಲ್‌ಹೌಸಿ — 7 ದಿನಗಳು
ಅಮೃತಸರ್, ಗೋಲ್ಡನ್‌ಟೆಂಪಲ್, ಜಲಿಯನ್ ವಾಲಾಬಾಗ್, ಧರ್ಮಶಾಲಾ, ಮೆಕ್ಲಾಯ್ಡ್‌ಗಂಜ್, ಜ್ವಾಲಾಮುಖಿ, ಕಾಂಗ್ರಾ, ಚಾಮುಂಡಾ, ಡಾಲ್‌ಹೌಸಿ, ಕಜಿಯಾರ್, ಚಾಂಬಾ.
Dep dates; Aug.3,17,31, Sep.14,28, Oct.7,14,28 Nov.3,10,24, Dec. 1, 8, 15

ನೈನಿತಾಲ್–ಕೌಸಾನಿ–ಕಾರ್ಬೆಟ್ — 6 ದಿನಗಳು
ಕುಮಾವೂ ಹಿಲ್ಸ್, ಸತ್ತಾಲ್, ನೈನಿತಾಲ್, ನೌಕುಚಿಯತಾಲ್, ಕಾರ್ಬೆಟ್ ಜಂಗಲ್ ಸಫಾರಿ.
Dep dates; Oct.14, 28, Nov. 4,11,25, Dec. 2,9,

ಅರುಣಾಚಲ ಪ್ರದೇಶ — 7 ದಿನಗಳು
ಭಾಲಕ್‌ಪಂಗ್, ಬಾಂಡಿಲ್ಲಾ, ಸೆಲಾಪಾಸ್, ಪಿಟಿಶೋಲೇಕ್ ತವಾಂಗ್, ಗುವಾಹತಿ, ಕಾಮಾಕ್ಯಾ ಟೆಂಪಲ್
Dep dates: Aug. 5,19, Sep. 2,16,20, Oct. 7,21,28, Dec. 4,11

ಅಂಡಮಾನ್ — 5 ದಿನಗಳು
ಪೋರ್ಟ್‌ಬ್ಲೇರ್, ಸೆಲ್ಯುಲರ್ ಜೈಲು, ಹ್ಯಾವ್‌ಲಾಕ್ ಐಲ್ಯಾಂಡ್, ರಾಸ್ ಐಲ್ಯಾಂಡ್, ನಾರ್ಥ್ ಬೇ ಐಲ್ಯಾಂಡ್.
Dep dates;Aug. 5,12,19, Sept.2,16,23, Oct. 7,1428, Nov.4,11,25, Dec.29

ಸಿಕ್ಕಿಂ–ಡಾರ್ಜಿಲಿಂಗ್ — 6/8/11 ದಿನಗಳು
ಮಿರಿಕ್, ಡಾರ್ಜಲಿಂಗ್, ಟೈಗರ್‌ಹಿಲ್, ಗ್ಯಾಂಗ್‌ಟಾಕ್, ತ್ಸಾಂಗೋಲೇಕ್, ಲಾಚುಂಗ್, ಯುಮ್ತಾಂಗ್, ನಮಚಿಚಾರಧಾಮ, ಪೆಲ್ಲಿಂಗ್, ಕಿಚಿಪುರಿಲೇಕ್ ಕಾಂಚನಜುಂಗಾ, ಕಾಲಿಮ್ ಪಾಂಗ್.
Dep dates; Aug. 4, 18, Sep. 1, 15, 22, Oct. 6,13,27 Nov. 3,10

ಚಾರ್‌ಧಾಮ ಯಾತ್ರಾ — 8/12 ದಿನಗಳು
ಹರಿದ್ವಾರ, ಯಮುನೋತ್ರಿ, ಗಂಗೋತ್ರಿ, ಉತ್ತರಕಾಶಿ, ಗುಪ್ತಕಾಶಿ, ಕೇದಾರನಾಥ, ಬದರಿನಾಥ, ಜೋಷಿಮಠ, ರುದ್ರಪ್ರಯಾಗ, ಋಷಿಕೇಶ
Dep dates; Daily Aug. to October 20th

ಲಡಾಖ್ — 6 ದಿನಗಳು
ಲೇಹಸಿಟಿ, ಮೆಗ್ನಟಿಕ್ ಪಾಯಿಂಟ್, ಸಿಂಧು ನದಿ ಸಂಗಮ, ಖರ್ದುಂಗ್ಲ, ನುಬ್ರಾವ್ಯಾಲಿ, ಹಂಡರಸ್ಯಾಂಡ್ ಡ್ಯೂನ್ಸ್, ಪೆಂಗಾಂಗ್ ಲೇಕ್
Dep dates; Aug.6,20, Sep. 3, 17

ಮಧ್ಯ ಪ್ರದೇಶ — 4/9 ದಿನಗಳು
ಭೋಪಾಲ್, ಸಾಂಚಿ, ಖಜರಾಹೊ, ಖನ್ನಾ, ಜಬಲ್ ಪುರ್, ಪಾಚಮಾರಿ, ಮಹಾಕಾಲೇಶ್ವರ ಜ್ಯೋತಿರ್ಲಿಂಗ, ಮಾಮಲೇಶ್ವರ, ಓಂಕಾರೇಶ್ವರ, ಉಜ್ಜಯಿನಿ, ಇಂದೋರ್
Dep dates; Sep.5,19, Oct.3,17,31, Nov.14, 21, Dec.5,12

ರಾಮೇಶ್ವರ–ಕನ್ಯಾಕುಮಾರಿ–ತಿರುವನಂತಪುರ — 4 ದಿನಗಳು
ಮಧುರೈ, ಕನ್ಯಾಕುಮಾರಿ, ರಾಮೇಶ್ವರ , ಸುಚೀಂದ್ರಂ, ತಿರುವನಂತಪುರಂ
Dep dates; Aug.5,19, Spt.2,16, Oct. 14,28, Nov.4,11,25, Dec.2,9,16

ಇನ್ನಿತರ ಪ್ರವಾಸಗಳಿಗೆ ವಿಚಾರಿಸಿರಿ

ಜಲ್ಲಿ–ಬಿಸಿ ಡಾಂಬರು ಮಿಶ್ರಣ ಘಟಕವೂ ಕಾರ್ಯ ನಿರ್ವಹಿಸುತ್ತಿಲ್ಲ: ಗುತ್ತಿಗೆದಾರರ ವಿರುದ್ಧವೂ ಕ್ರಮವಿಲ್ಲ

ಬಗೆಹರಿಯದ ನಗರದ ರಸ್ತೆ ಗುಂಡಿ ಸಮಸ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿಯು ಕಣ್ಣೂರಿನಲ್ಲಿ ಸ್ಥಾಪಿಸಿರುವ ಜಲ್ಲಿ– ಬಿಸಿ ಡಾಂಬರು ಮಿಶ್ರಣ (ಹಾಟ್ ಮಿಕ್ಸ್) ಘಟಕವು ನಗರದ ರಸ್ತೆಗುಂಡಿ ಸಮಸ್ಯೆ ನಿವಾರಿಸಲಿದೆ ಎಂಬ ಬಿಬಿಎಂಪಿಯ ಭರವಸೆ ಇನ್ನೂ ಈಡೇರಿಲ್ಲ. ಈ ಘಟಕ ಸ್ಥಾಪಿಸಲು ಕಾರ್ಯಾದೇಶ ನೀಡಿ ಹೆಚ್ಚೂ ಕಡಿಮೆ ಎರಡೂವರೆ ವರ್ಷಗಳೇ ಕಳೆದರೂ ರಸ್ತೆ ಗುಂಡಿ ಸಮಸ್ಯೆ ನೀಗಿಸುವ ನಿಟ್ಟಿನಲ್ಲಿ ಗಮನಾರ್ಹ ಪ್ರಗತಿ ಸಾಧ್ಯವಾಗಿಲ್ಲ.

₹ 7.5 ಕೋಟಿ ವೆಚ್ಚದಲ್ಲಿ ಸ್ಥಾಪಿಸಿರುವ ಜಲ್ಲಿ– ಬಿಸಿ ಡಾಂಬರು ಮಿಶ್ರಣ (ಹಾಟ್ ಮಿಕ್ಸ್) ಘಟಕ ಗುತ್ತಿಗೆದಾರರ ಲೋಪದಿಂದಾಗಿ ಬಳಕೆಯಾಗುತ್ತಿಲ್ಲ. ನಗರದ ರಸ್ತೆಗಳ ಗುಂಡಿಗಳು ಹಾಗೆಯೇ ಇವೆ. ಈ ವೈಫಲ್ಯಕ್ಕೆ ಗುತ್ತಿಗೆದಾರರೇ ನೇರವಾಗಿ ಹೊಣೆಯಾಗಿದ್ದರೂ ಅವರ ವಿರುದ್ಧ ಕಠಿಣ ಕ್ರಮಕ್ಕೆ ಬಿಬಿಎಂಪಿ ಮೀನಮೇಷ ಎಣಿಸುತ್ತಿದೆ.

> **‘ಬಿಬಿಎಂಪಿಯೇ ನಿರ್ವಹಿಸಲಿ’**
> ‘ಮೂರು ದಶಕಗಳ ಹಿಂದೆ ಕೋರಮಂಗಲದಲ್ಲಿ ಡಾಂಬರು ಮಿಶ್ರಣ ಘಟಕವನ್ನು ಪಾಲಿಕೆಯೇ ನಿರ್ವಹಿಸುತ್ತಿತ್ತು. ಅಂತೆಯೇ ಕಣ್ಣೂರಿನ ಜಲ್ಲಿ–ಬಿಸಿ ಡಾಂಬರು ಘಟಕವನ್ನು ಸ್ವತಃ ನಿರ್ವಹಿಸುವ ಸಾಮರ್ಥ್ಯ ಬಿಬಿಎಂಪಿಗೆ ಇದೆ. ಅದಕ್ಕೆ ಅಗತ್ಯವಿರುಷ್ಟು ಮಾನವ ಸಂಪನ್ಮೂಲವೂ ಪಾಲಿಕೆ ಬಳಿ ಇದೆ. ಈ ಘಟಕ ನಿರ್ವಹಣೆಯನ್ನು ಖಾಸಗಿಯವರಿಗೆ ಬಿಟ್ಟುಕೊಟ್ಟು ಬಿಸಿ ಜಲ್ಲಿ–ಡಾಂಬರು ಮಿಶ್ರಣಕ್ಕಾಗಿ ಅವರಿಗೆ ಕೈಚಾಚುವುದು ಇದರಿಂದ ತಪ್ಪಲಿದೆ. ಟೆಂಡರ್ ಅಕ್ರಮಗಳಿಗೂ ಆಸ್ಪದ ಇರುವುದಿಲ್ಲ’ ಎಂದು ಹೆಸರು ಬಹಿರಂಗಪಡಿಸಲು ಬಯಸದ ಬಿಬಿಎಂಪಿ ಅಧಿಕಾರಿಯೊಬ್ಬರು ಸಲಹೆ ನೀಡಿದರು.

ಕಣ್ಣೂರಿನ ಜಲ್ಲಿ– ಬಿಸಿ ಡಾಂಬರು ಮಿಶ್ರಣ ಘಟಕದ ನಿರ್ವಹಣೆಗೆ ಗುತ್ತಿಗೆದಾರಎಂ.ಎಸ್.ವೆಂಕಟೇಶ್(ಎಂಎಸ್‌ವಿ ಕನ್‌ಸ್ಟ್ರಕ್ಷನ್)ಅವರಿಗೆ2019ರಮಾ.08 ರಂದೇ ಬಿಬಿಎಂಪಿ ಕಾರ್ಯಾದೇಶ ನೀಡಲಾಗಿತ್ತು. ಆದರೆ, ಈ ಘಟಕ ಕಾರ್ಯಾರಂಭ ಮಾಡುವಾಗಲೇ 11 ತಿಂಗಳು (2020ರ ಫೆ.06ರಂದು) ತಡವಾಗಿತ್ತು. ಘಟಕದಲ್ಲಿ ಎರಡು ದಿನ ಜಲ್ಲಿ–ಡಾಂಬರು ಮಿಶ್ರಣ ತಯಾರಿಸಿ ಮತ್ತೆ ಕಾರ್ಯಚರಣೆ ಸ್ಥಗಿತಗೊಳಿಸಲಾಗಿತ್ತು. ಘಟಕ ಮತ್ತೆ ಕಾರ್ಯಾರಂಭ ಮಾಡಿದ್ದು 2020ರ ಜೂನ್ 3ರಂದು.

ಕಣ್ಣೂರಿನ ಘಟಕವು ಗಂಟೆಗೆ 120 ಟನ್‌ನಂತೆ 10 ಗಂಟೆಗಳಲ್ಲಿ 50 ಟ್ರಕ್‌ಗಳಷ್ಟು 160 ಡಿಗ್ರಿ ಉಷ್ಣಾಂಶದ ಹಾಟ್ ಮಿಕ್ಸ್ ಸಿದ್ಧಪಡಿಸುವ ಸಾಮರ್ಥ್ಯ ಹೊಂದಿದೆ. ಜಲ್ಲಿ ಡಾಂಬರು ಮಿಶ್ರಣಕ್ಕೆ ಗುತ್ತಿಗೆದಾರನಿಗೆ ಬಿಬಿಎಂಪಿ ಪ್ರತಿ ಕ್ಯೂಬಿಕ್ ಮೀಟರ್‌ಗೆ ₹ 5 ಸಾವಿರದಂತೆ ಪಾವತಿಸುತ್ತಿತ್ತು. ಆದರೂ ಅವರು ಷರತ್ತಿನ ಪ್ರಕಾರ ಬಿಬಿಎಂಪಿಯ ಬೇಡಿಕೆಯಷ್ಟು ಜಲ್ಲಿ– ಡಾಂಬರು ಮಿಶ್ರಣ ಪೂರೈಸುವಲ್ಲಿ ವಿಫಲವಾಗಿದ್ದರು. ಈ ಘಟಕವನ್ನು ಸಮರ್ಪಕವಾಗಿ ನಡೆಸದ ಕಾರಣ ಎಂ.ಎಸ್.ವೆಂಕಟೇಶ್ ಅವರಿಗೆ ನೀಡಿದ್ದ ಗುತ್ತಿಗೆಯನ್ನು ಬಿಬಿಎಂಪಿ ರದ್ದುಪಡಿಸಿದೆ. ಈ ಘಟಕದ ನಿರ್ವಹಣೆಗೆ ಹೊಸತಾಗಿ ಟೆಂಡರ್ ಆಹ್ವಾನಿಸಿದೆ.

ಹೊಸ ಟೆಂಡರ್ ಪ್ರಕ್ರಿಯೆಯಲ್ಲೂ ಅಕ್ರಮ ನಡೆದಿತ್ತು. ಈ ಬಗ್ಗೆ ’ಪ್ರಜಾವಾಣಿ‘ ವಿಶೇಷ ವರದಿ ಪ್ರಕಟಿಸಿತ್ತು. ಹಾಗಾಗಿ ಟೆಂಡರ್ ಪ್ರಕ್ರಿಯೆಯ ತನಿಖೆಯನ್ನು ಬಿಬಿಎಂಪಿ ಆಯುಕ್ತರ ತಾಂತ್ರಿಕ ಮತ್ತು ಜಾಗೃತ ಕೋಶಕ್ಕೆ (ಟಿವಿಸಿಸಿ) ವಹಿಸಲಾಗಿತ್ತು. ಟೆಂಡರ್ ಪ್ರಕ್ರಿಯೆಯಲ್ಲಿ ಅಕ್ರಮ ನಡೆದಿದ್ದು ತನಿಖೆಯಲ್ಲಿ ಸಾಬೀತಾದ ಕಾರಣ ಹೊಸ ಟೆಂಡರ್ ಪ್ರಕ್ರಿಯೆ ರದ್ದುಪಡಿಸಿ ಮರು ಟೆಂಡರ್ ಕರೆಯಲಾಗಿದೆ.

ಈ ಅವಧಿಯಲ್ಲಿ ಘಟಕವು ಬಹುತೇಕ ನಿಷ್ಕ್ರಿಯವಾಗಿದೆ. ಬಿಬಿಎಂಪಿಯು 2021 ಮಾರ್ಚ್ ವೇಳೆಗೆ ನಗರದಲ್ಲಿ 7,272 ರಸ್ತೆ ಗುಂಡಿಗಳನ್ನು ಗುರುತಿಸಿದ್ದರೂ 4,034 ಗುಂಡಿಗಳನ್ನಷ್ಟೇ ಮುಚ್ಚಲು ಸಾಧ್ಯವಾಗಿದೆ. ಬೆಂಗಳೂರಿನ ಮೂಲಸೌಕರ್ಯ ಅಭಿವೃದ್ಧಿ ಕುರಿತು ಸಮನ್ವಯ ಸಾಧಿಸುವ ಬಗ್ಗೆ ಮುಖ್ಯ ಕಾರ್ಯದರ್ಶಿ ಪಿ.ರವಿಕುಮಾರ್ ನೇತೃತ್ವದಲ್ಲಿ 2021ರ ಮಾ. 20ರಂದು ನಡೆದಿದ್ದ ಸಭೆಯಲ್ಲಿ ರಸ್ತೆ ಗುಂಡಿಗಳನ್ನು ಮುಚ್ಚುವ ವಿಚಾರ ವಿಸ್ತಾರವಾಗಿ ಚರ್ಚೆಯಾಗಿತ್ತು.

‘ವಹಿಸಿಕೊಂಡ ಕೆಲಸವನ್ನು ಸರಿಯಾಗಿ ನಿರ್ವಹಿಸುವುದು ಗುತ್ತಿಗೆದಾರನ ಕರ್ತವ್ಯ. ಗುತ್ತಿಗೆ ಅವಧಿಯಲ್ಲಿ ರಸ್ತೆ ಗುಂಡಿ ಮುಚ್ಚದಿರುವುದು ಅವರ ವೈಫಲ್ಯ. ಹಾಗಾಗಿ ಗುತ್ತಿಗೆ ಷರತ್ತು ಪಾಲಿಸದ ವೆಂಕಟೇಶ್ ವಿರುದ್ಧ ಕೆಟಿಪಿಪಿ ಕಾಯ್ದೆಯಡಿ ಕ್ರಮ ಕೈಗೊಳ್ಳಿ’ ಎಂದು ಮುಖ್ಯ ಕಾರ್ಯದರ್ಶಿಯವರು ಕಟ್ಟುನಿಟ್ಟಿನ ಸೂಚನೆ ನೀಡಿದ್ದರು. ಆದರೂ ಅವರ ವಿರುದ್ಧ ಇನ್ನೂ ಕ್ರಮವಾಗಿಲ್ಲ.

‘ಬಿಬಿಎಂಪಿಯು ವೆಂಕಟೇಶ್ ಅವರಿಗೆ ನೀಡಿದ ಟೆಂಡರ್ ರದ್ದುಪಡಿಸಿದ್ದು ಬಿಟ್ಟರೆ ಬೇರೆ ಕ್ರಮ ಕೈಗೊಂಡಿಲ್ಲ. ಅವರನ್ನು ಕಪ್ಪುಪಟ್ಟಿಗೆ ಸೇರಿಸದ ಕಾರಣ ಅವರು ಮತ್ತೆ ಈ ಘಟಕದ ಟೆಂಡರ್‌ನಲ್ಲಿ ಭಾಗವಹಿಸಿದ್ದರು. ಆದರೆ, ತಾಂತ್ರಿಕ ಕಾರಣಕ್ಕೆ ಅವರ ಬಿಡ್ ಅನರ್ಹಗೊಂಡಿತು. ಇದು ನಮ್ಮ ವ್ಯವಸ್ಥೆಗೆ ಹಿಡಿದ ಕನ್ನಡಿ. ಗುತ್ತಿಗೆ ಷರತ್ತು ಪಾಲಿಸದವರ ವಿರುದ್ಧ ಕಠಿಣ ಕ್ರಮಕೈಗೊಂಡರೆ ಮಾತ್ರ ಭವಿಷ್ಯದಲ್ಲಿ ಗುತ್ತಿಗೆ ವಹಿಸಿಕೊಳ್ಳುವವರು ಕಾಳಜಿ ವಹಿಸಿ ಕೆಲಸ ಮಾಡುತ್ತಾರೆ. ಇಲ್ಲದಿದ್ದರೆ ಟೆಂಡರ್ ಷರತ್ತು ಪಾಲಿಸದಿದ್ದರೆ ಏನೂ ಆಗದು ಎಂಬ ಅಸಡ್ಡೆ ಬೆಳೆಯುತ್ತದೆ’ ಎಂದು ಹೆಸರು ಬಹಿರಂಗಪಡಿಸಲು ಬಯಸದ ಅಧಿಕಾರಿಯೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

ಸುದ್ದಿ 2 ನಿಮಿಷ

ತುಳು ಭಾಷೆ: ಎಂಟನೇ ಪರಿಚ್ಛೇದಕ್ಕೆ ಸೇರಲಿ– ಸಿ.ಟಿ. ರವಿ

ಬೆಂಗಳೂರು: ತುಳು ಭಾಷೆಯನ್ನು ಸಂವಿಧಾನದ ಎಂಟನೇ ಪರಿಚ್ಛೇದಕ್ಕೆ ಸೇರಿಸಬೇಕು ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಟ್ವಿಟರ್‌ನಲ್ಲಿ ಆಗ್ರಹಿಸಿದ್ದಾರೆ.

ಈ ಕುರಿತು ಭಾನುವಾರ ಟ್ವೀಟ್ ಮಾಡಿರುವ ಅವರು, ‘ತುಳು ಭಾಷೆ 15ನೇ ಶತಮಾನದವರೆಗೂ ಸ್ವಂತ ಲಿಪಿ ಹೊಂದಿತ್ತು. ದಕ್ಷಿಣ ಕನ್ನಡ, ಉಡುಪಿ ಮತ್ತು ಕಾಸರಗೋಡು ಜಿಲ್ಲೆಗಳಲ್ಲಿ ಅಧಿಕ ಸಂಖ್ಯೆಯಲ್ಲಿ ತುಳು ಭಾಷಿಕರಿದ್ದಾರೆ. ಮಡಿಕೇರಿ, ಚಿಕ್ಕಮಗಳೂರು ಮತ್ತು ಶಿವಮೊಗ್ಗ ಜಿಲ್ಲೆಗಳ ಕೆಲವು ಭಾಗಗಳಲ್ಲಿ ತುಳು ವ್ಯಾವಹಾರಿಕ ಭಾಷೆಯಾಗಿ ಬಳಕೆಯಾಗುತ್ತಿದೆ. ಒಟ್ಟು 19 ಲಕ್ಷಕ್ಕೂ ಹೆಚ್ಚು ಮಂದಿಯ ಮಾತೃಭಾಷೆ ತುಳು’ ಎಂದಿದ್ದಾರೆ.

ತುಳು ಭಾಷಿಕರ ಸಂಸ್ಕೃತಿ ಮತ್ತು ಸಾಂಸ್ಕೃತಿಕ ಅಸ್ಮಿತೆಯನ್ನು ರಕ್ಷಿಸಲು ಅದನ್ನು ಸಂವಿಧಾನದ ಎಂಟನೆ ಪರಿಚ್ಛೇದಕ್ಕೆ ಸೇರಿಸಬೇಕು. ತುಳು ಲಿಪಿಯ ಪುನರುಜ್ಜೀವನಕ್ಕೂ ಇದು ಸಹಕಾರಿಯಾಗಲಿದೆ ಎಂದು ಹೇಳಿದ್ದಾರೆ.

‘ಅತಿಥಿ ಉಪನ್ಯಾಸಕರಿಗೆ ಅನ್ಯಾಯ’

ಬೆಂಗಳೂರು: ‘ರಾಜ್ಯದ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಖಾಲಿ ಇರುವ ಹುದ್ದೆಗಳಿಗೆ 1,242 ಸಹಾಯಕ ಪ್ರಾಧ್ಯಾಪಕರು ಹಾಗೂ 310 ಪ್ರಾಂಶುಪಾಲರನ್ನು ನೇಮಿಸಲು ಸರ್ಕಾರ ನಿರ್ಧರಿಸಿದೆ. ಆ ಮೂಲಕ ಹಲವು ವರ್ಷಗಳಿಂದ ಅತಿಥಿ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿರುವವರಿಗೆ ಅನ್ಯಾಯವೆಸಗಿದೆ’ ಎಂದು ರಾಜ್ಯ ಸರ್ಕಾರಿ ಪದವಿ ಕಾಲೇಜುಗಳ ಅತಿಥಿ ಉಪನ್ಯಾಸಕರ ಹಿತರಕ್ಷಣಾ ಸಮಿತಿಯ ರಾಜ್ಯ ಅಧ್ಯಕ್ಷ ಎಚ್.ಕೊಟ್ರೇಶ್ ಆರೋಪಿಸಿದ್ದಾರೆ.

‘ಅನೇಕರು 15ಕ್ಕೂ ಅಧಿಕ ವರ್ಷಗಳಿಂದ ಕಡಿಮೆ ಗೌರವಧನ ಪಡೆದು ಕೆಲಸ ಮಾಡಿದ್ದಾರೆ. ಸೇವಾ ಭದ್ರತೆ ಇಲ್ಲದೆಯೇ ದುಡಿದು ಈಗ ನಿವೃತ್ತಿಯ ಅಂಚಿನಲ್ಲಿದ್ದಾರೆ. ಇವರಿಗೆ ಸಾಕಷ್ಟು ಬೋಧನಾ ಅನುಭವ ಇದೆ. ಸರ್ಕಾರದ ನಿರ್ಧಾರದಿಂದಾಗಿ ಇವರೆಲ್ಲಾ ಅರ್ಜಿ ಸಲ್ಲಿಸುವುದರಿಂದ ವಂಚಿತರಾಗಿದ್ದಾರೆ’ ಎಂದಿದ್ದಾರೆ.

‘ರಾಜ್ಯದ 430 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ 14,447 ಅತಿಥಿ ಉಪನ್ಯಾಸಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರ ತಮ್ಮನ್ನು ಕಾಯಂಗೊಳಿಸಲಿದೆ ಎಂದು ಅನೇಕರು ಕನಸು ಕಂಡಿದ್ದರು. ಅವರಿಗೆಲ್ಲಾ ನಿರಾಸೆಯಾಗಿದೆ. ಕೋವಿಡ್ ಸಮಯದಲ್ಲಿ ಅತಿಥಿ ಉಪನ್ಯಾಸಕರಿಗೆ ಕೆಲಸವೇ ಇಲ್ಲ. ಹೀಗಾಗಿ ಜೀವನ ನಿರ್ವಹಣೆಗಾಗಿ ಹಲವರು ತರಕಾರಿ ಮಾರುತ್ತಿದ್ದಾರೆ. ಗಾರೆ ಕೆಲಸಕ್ಕೆ ಸೇರಿದ್ದಾರೆ. ಇನ್ನು ಕೆಲವರು ಹೋಟೆಲ್ ಹಾಗೂ ಬಾರ್‌ಗಳಲ್ಲಿ ಸಪ್ಲೈಯರ್‌ಗಳಾಗಿಯೂ ಕೆಲಸ ಮಾಡುತ್ತಿದ್ದಾರೆ’ ಎಂದು ತಿಳಿಸಿದರು.

‘ಕೋವಿಡ್, ಹೃದಯಾಘಾತ ಹಾಗೂ ಮೂತ್ರಪಿಂಡದ ವೈಫಲ್ಯದಿಂದ 50ಕ್ಕೂ ಹೆಚ್ಚು ಅತಿಥಿ ಉಪನ್ಯಾಸಕರು ಸಾವಿಗೀಡಾಗಿದ್ದಾರೆ. ಅಕಾಲಿಕ ಮರಣ ಹೊಂದಿದವರ ಕುಟುಂಬಕ್ಕೆ ಸರ್ಕಾರ ಯಾವುದೇ ಪರಿಹಾರ ನೀಡಿಲ್ಲ. ಸಾಂತ್ವನ ಹೇಳುವ ಗೋಜಿಗೂ ಹೋಗಿಲ್ಲ. ಉಪನ್ಯಾಸಕರನ್ನು ಕಾಯಂಗೊಳಿಸುವಂತೆ ಅನೇಕ ಬಾರಿ ಮನವಿ ಮಾಡಿದರೂ ಪ್ರಯೋಜನವಾಗಿಲ್ಲ. ಈಗಲಾದರೂ ಸರ್ಕಾರ ಎಚ್ಚೆತ್ತುಕೊಂಡು ನಮ್ಮ ಬೇಡಿಕೆ ಈಡೇರಿಸಬೇಕು’ ಎಂದು ಒತ್ತಾಯಿಸಿದರು.

ಕಂದಾಯ ನಿವೇಶನ ಸಕ್ರಮಕ್ಕೆ ಚಿಂತನೆ: ವಿಶ್ವನಾಥ್

ಯಲಹಂಕ: ‘ಬೆಂಗಳೂರು ಸುತ್ತಮುತ್ತಲಿನ ಕಂದಾಯ ನಿವೇಶನಗಳನ್ನು ಅಕ್ರಮ-ಸಕ್ರಮ ಯೋಜನೆಯಡಿಯಲ್ಲಿ ಸಕ್ರಮಗೊಳಿಸುವ ಕುರಿತಂತೆ ಸರ್ಕಾರದ ಮಟ್ಟದಲ್ಲಿ ಚರ್ಚೆ ನಡೆಯುತ್ತಿದೆ’ ಎಂದು ಶಾಸಕ ಎಸ್.ಆರ್.ವಿಶ್ವನಾಥ್ ಹೇಳಿದರು.

ಕಡತನಮಲೆ ಗ್ರಾಮದಲ್ಲಿ ಆಯೋಜಿಸಿದ್ದ ಅರಕೆರೆ ಗ್ರಾಮಪಂಚಾಯ್ತಿಯ ಗ್ರಾಮಸಭೆಯಲ್ಲಿ ಮಾತನಾಡಿದ ಅವರು, ‘ಕಂದಾಯ ನಿವೇಶನಗಳನ್ನು ಖರೀದಿಸಿ ಮನೆಗಳನ್ನು ನಿರ್ಮಿಸಿಕೊಂಡು ಪಂಚಾಯ್ತಿಯಿಂದ ಮೂಲಸೌಕರ್ಯಗಳನ್ನು ಪಡೆದುಕೊಂಡಿರುವವರಿಗೆ ಪಂಚಾಯ್ತಿಯಿಂದ ಖಾತಾ ದೊರೆಯುತ್ತಿಲ್ಲ. ಇದರಿಂದ ಮಾರಾಟ ಮತ್ತು ಖರೀದಿಮಾಡಲು ಆಗುತ್ತಿಲ್ಲ’ ಎಂದರು.

‘ಮನೆಗಳ ಮಾಲೀಕರಿಗೆ ಶುಲ್ಕವಿಧಿಸಿ, ಸಕ್ರಮ ಮಾಡಬೇಕೆಂಬ ಬಗ್ಗೆ ಚರ್ಚೆ ನಡೆಯುತ್ತಿದ್ದು, ಈ ಕುರಿತು ಅಂತಿಮ ತೀರ್ಮಾನವಾದರೆ ಗ್ರಾಮಠಾಣಾ ಸುತ್ತಮುತ್ತ ಮನೆಗಳನ್ನು ನಿರ್ಮಿಸಿಕೊಂಡಿರುವವರಿಗೆ ಅನುಕೂಲವಾಗಲಿದೆ. ಅಲ್ಲದೆ ಸರ್ಕಾರ ಮತ್ತು ಪಂಚಾಯ್ತಿಗೆ ಆದಾಯವೂ ಬರಲಿದೆ’ ಎಂದರು.

‘ಅರಕೆರೆ ಪಂಚಾಯ್ತಿಯು 3 ತಿಂಗಳ ಅವಧಿಯಲ್ಲಿ ₹1.90 ಕೋಟಿ ತೆರಿಗೆ ಸಂಗ್ರಹಿಸಿರುವುದು ಶ್ಲಾಘನೀಯ. ಗ್ರಾಮಸ್ಥರೇ ಸೇರಿಕೊಂಡು ಕಡತನಮಲೆ ಕೆರೆಯ ಹೂಳು ತೆಗೆದು ಅಭಿವೃದ್ಧಿ ಕಾರ್ಯ ಕೈಗೊಂಡು, ಬಹುತೇಕ ಪೂರ್ಣಗೊಳಿಸಿದ್ದಾರೆ. ಇದೇ ಮಾದರಿಯಲ್ಲಿ ಎಲ್ಲ ಪಂಚಾಯ್ತಿಗಳು ಕೆರೆಗಳನ್ನು ಅಭಿವೃದ್ಧಿಗೊಳಿಸಲು ಮುಂದಾಗಬೇಕು’ ಎಂದರು.

ತಾಲ್ಲೂಕು ಪಂಚಾಯ್ತಿ ಕಾರ್ಯನಿರ್ವಾಹಕ ಅಧಿಕಾರಿ ಎಂ.ವೆಂಕಟೇಶ್, ಗ್ರಾಮಪಂಚಾಯ್ತಿ ಅಧ್ಯಕ್ಷ ಕೆ.ಆರ್. ತಿಮ್ಮೇಗೌಡ, ಉಪಾಧ್ಯಕ್ಷೆ ಮಂಜುಳಮ್ಮ, ಪಂಚಾಯ್ತಿ ಅಭಿವೃದ್ಧಿ ಅಧಿಕಾರಿ ನಾಗರಾಜ್, ಮುಖಂಡರಾದ ಸತೀಶ್ ಕಡತನಮಲೆ, ಮುನಿದಾಸಪ್ಪ ಇದ್ದರು.

‘ಬಾಕಿ ಕಾಮಗಾರಿ ಶೀಘ್ರ ಪೂರ್ಣಗೊಳಿಸಿ’

ಬಿಬಿಎಂಪಿ ಮುಖ್ಯ ಆಯುಕ್ತರಿಂದ ವೈಟ್‌ಟಾಪಿಂಗ್ ಕಾಮಗಾರಿ ಪರಿಶೀಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಜಯನಗರದ 80 ಅಡಿ ರಸ್ತೆಯ ವೈಟ್ ಟಾಪಿಂಗ್ ಕಾಮಗಾರಿಯನ್ನು ಶೀಘ್ರ ಪೂರ್ಣಗೊಳಿಸಿ ವಾಹನ ಸಂಚಾರಕ್ಕೆ ಅನುವು ಮಾಡಿಕೊಡಬೇಕು ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಸಂಜಯನಗರದ 80 ಅಡಿ ರಸ್ತೆಯು ಸುಮಾರು 1 ಕಿ.ಮೀ ಇದ್ದು, ಇದರಲ್ಲಿ ಅಶ್ವತ್ಥನಗರದ ದ್ವಾರದಿಂದ ಎಂ.ಎಸ್. ರಾಮಯ್ಯ ಆಸ್ಪತ್ರೆ ರಸ್ತೆಯ ಸಿಗ್ನಲ್‌ವರೆಗೆ ವೈಟ್ ಟಾಪಿಂಗ್ ಕಾಮಗಾರಿಯನ್ನು ಪಾಲಿಕೆಯ ಯೋಜನಾ ವಿಭಾಗವು ಮೇ ಅಂತ್ಯದಲ್ಲಿ ಕೈಗೆತ್ತಿಕೊಂಡಿದೆ. ₹ 9.82 ಕೋಟಿ ವೆಚ್ಚದಲ್ಲಿ ಕಾಮಗಾರಿ ಇದಾಗಿದೆ. 30 ದಿನಗಳಲ್ಲಿ ಎರಡೂ ಬದಿಯ ರಸ್ತೆಯ ವೈಟ್ ಟಾಪಿಂಗ್ ಕಾಮಗಾರಿಯನ್ನು

ವೈಟ್‌ಟಾಪಿಂಗ್ ಕಾಮಗಾರಿಯನ್ನು ಗೌರವ್ ಗುಪ್ತ ಪರಿಶೀಲಿಸಿದರು

ಪೂರ್ಣಗೊಳಿಸಲಾಗಿರುತ್ತದೆ.

ವೈಟ್‌ಟಾಪಿಂಗ್ ಆಗಿರುವ ಒಂದು ಪಾರ್ಶ್ವದ ರಸ್ತೆಯ ಕಾಂಕ್ರೀಟ್ ಕ್ಯೂರಿಂಗ್ ಕೂಡಾ ಪೂರ್ಣಗೊಂಡಿದ್ದು, ಇಲ್ಲಿ ವಾಹನ ಸಂಚಾರಕ್ಕೆ ಅನುವು ಮಾಡಿಕೊಡಲಾಗಿದೆ. ಮತ್ತೊಂದು ಬದಿಯ ರಸ್ತೆಯ ಕ್ಯೂರಿಂಗ್ ಬಾಕಿಯಿದೆ. ಅದಲ್ಲದೆ ರಸ್ತೆಯ ಇಕ್ಕೆಲಗಳಲ್ಲೂ ಒಳಚರಂಡಿ ಕಾಮಗಾರಿಯೂ ಪೂರ್ಣಗೊಂಡಿದೆ.

‘ಕುಡಿಯುವ ನೀರಿನ ಕೊಳವೆಮಾರ್ಗಗಳು, ಬೆಸ್ಕಾಂನ ವಿದ್ಯುತ್ ಮಾರ್ಗ, ಒಎಫ್‌ಸಿ ಕೇಬಲ್‌ಗಳಿಗೆ ಡಕ್ಟ್ಸ್ ಅಳವಡಿಕೆ, ಮಳೆ ನೀರು ಚರಂಡಿ ಕಾಮಗಾರಿ, ಪಾದಚಾರಿ ಮಾರ್ಗಗಳ ಕೆಲಸಗಳು ಬಾಕಿ ಇವೆ. ಈ ಕಾಮಗಾರಿಗಳನ್ನು 40 ದಿನಗಳಲ್ಲಿ ಪೂರ್ಣಗೊಳಿಸಲಾಗುವುದು’ ಎಂದು ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

‘ಕಾಂಕ್ರೀಟ್‌ನ ಕ್ಯೂರಿಂಗ್ ಪೂರ್ಣಗೊಂಡ ಕೂಡಲೆ ರಸ್ತೆಯ ಎರಡೂ ದಿಕ್ಕುಗಳಲ್ಲೂ ವಾಹನ ಸಂಚಾರಕ್ಕೆ ಅನುವು ಮಾಡಿಕೊಡಬೇಕು. ಬಾಕಿ ಇರುವ ಇತರ ಕಾಮಗಾರಿಗಳನ್ನು ವಾಹನ ಸಂಚಾರಕ್ಕೆ ತೊಂದರೆ ಆಗದಂತೆ ತ್ವರಿತವಾಗಿ ಪೂರ್ಣಗೊಳಿಸ ಬೇಕು’ ಎಂದು ಗೌರವ್ ಗುಪ್ತ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ರಸ್ತೆಗಳಲ್ಲಿ ಹರಿದ ನೀರು

ನಗರದಲ್ಲಿ ಭಾನುವಾರ ಸಂಜೆ ಸುರಿದ ಮಳೆಗೆ ಮೈಸೂರು ರಸ್ತೆಯಲ್ಲಿ ವಾಹನ ಸವಾರರು ಪರದಾಡಿದರು

ಪ್ರಜಾವಾಣಿ ಚಿತ್ರ

ಗ್ರಾಹಕರ ವೇದಿಕೆ ಅಧ್ಯಕ್ಷ, ಸದಸ್ಯರ ಮುಂದುವರಿಕೆಗೆ ಆಕ್ಷೇಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ 19 ಜಿಲ್ಲೆಗಳಲ್ಲಿ ಅವಧಿ ಪೂರ್ಣಗೊಂಡಿರುವವರನ್ನೇ ಗ್ರಾಹಕ ವ್ಯಾಜ್ಯಗಳ ಪರಿಹಾರ ವೇದಿಕೆ ಅಧ್ಯಕ್ಷ ಮತ್ತು ಸದಸ್ಯರ ಹುದ್ದೆಗಳಲ್ಲಿ 15 ತಿಂಗಳಿನಿಂದಲೂ ಮುಂದುವರಿಸಿರುವುದನ್ನು ಆಕ್ಷೇಪಿಸಿ ಶಿವಮೊಗ್ಗದ ವಕೀಲ ಎಸ್. ಶೇಷಾದ್ರಿ, ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ದೂರು ಸಲ್ಲಿಸಿದ್ದಾರೆ.

‘ಗ್ರಾಹಕ ರಕ್ಷಣಾ ಕಾಯ್ದೆ– 2020 ಅಥವಾ ಹಳೆಯ ಕಾಯ್ದೆಯಲ್ಲಿ ಗ್ರಾಹಕ ವ್ಯಾಜ್ಯಗಳ ಪರಿಹಾರ ವೇದಿಕೆಯ ಅಧ್ಯಕ್ಷರು, ಸದಸ್ಯರ ಹುದ್ದೆಗಳನ್ನ ತಾತ್ಕಾಲಿಕ ಆಧಾರದಲ್ಲಿ ಭರ್ತಿ ಮಾಡಲು ಅವಕಾಶವಿಲ್ಲ. ಅನಿವಾರ್ಯ ಕಾರಣಗಳ ಹೊರತಾಗಿ ಅವಧಿ ಪೂರ್ಣಗೊಂಡವರನ್ನು ಹುದ್ದೆಯಲ್ಲಿ ಮುಂದುವರಿಸಲು ಸಾಧ್ಯವಿಲ್ಲ. ಆದರೂ, ನಿವೃತ್ತರಾದವರನ್ನೇ ತಿಂಗಳುಗಳಿಂದ ಈ ಹುದ್ದೆಗಳಲ್ಲಿ ಮುಂದುವರಿಸಲಾಗಿದೆ’ ಎಂದು ದೂರಿನಲ್ಲಿ ಆರೋಪಿಸಿದ್ದಾರೆ.

ಜಿಲ್ಲಾ ಗ್ರಾಹಕ ವ್ಯಾಜ್ಯಗಳ ಪರಿಹಾರ ವೇದಿಕೆ ಅಧ್ಯಕ್ಷರಿಗೆ ತಿಂಗಳಿಗೆ ತಲಾ ₹ 1.80 ಲಕ್ಷ ಮತ್ತು ಸದಸ್ಯರಿಗೆ ತಿಂಗಳಿಗೆ ತಲಾ ₹ 1.70 ಲಕ್ಷ ವೇತನ, ಭತ್ಯೆಗಳನ್ನು ಪಾವತಿಸಲಾಗುತ್ತಿದೆ. ನಿವೃತ್ತರಾದವರನ್ನು ಹುದ್ದೆಯಲ್ಲಿ ಮುಂದವರಿಸಿ ಪ್ರತಿ ಮೂರು ತಿಂಗಳಿಗೊಮ್ಮೆ ಆದೇಶ ಹೊರಡಿಸಲಾಗುತ್ತಿದೆ. 2021ರ ಜೂನ್ 30ರಂದು ಮತ್ತೆ ಆದೇಶ ಹೊರಡಿಸಲಾಗಿದೆ. ಆರ್ಥಿಕ ಇಲಾಖೆಯ ಒಪ್ಪಿಗೆ ಇಲ್ಲದೆ ಈ ಎಲ್ಲರಿಗೂ ವೇತನ, ಭತ್ಯೆಗಳನ್ನು ಪಾವತಿಸಲಾಗುತ್ತಿದೆ ಎಂದು ದೂರಿದ್ದಾರೆ.

ನೇಮಕಾತಿ ವಿಳಂಬ: ‘ಜಿಲ್ಲಾ ಗ್ರಾಹಕ ವ್ಯಾಜ್ಯಗಳ ಪರಿಹಾರ ವೇದಿಕೆ ಅಧ್ಯಕ್ಷರು, ಸದಸ್ಯರ ನೇಮಕಾತಿಗೆ 15 ತಿಂಗಳಿಂದ ಹಲವು ಬಾರಿ ಅಧಿಸೂಚನೆ ಹೊರಡಿಸಲಾಗಿದೆ. ಆದರೆ, ತಮಗೆ ಬೇಕಾದ ವ್ಯಕ್ತಿಗಳು ಅರ್ಜಿ ಸಲ್ಲಿಸಿಲ್ಲ ಎಂಬ ಕಾರಣಕ್ಕೆ ಕೆಲವೆಡೆ ನೇಮಕಾತಿ ಮುಂದೂಡಲಾಗಿದೆ. ಇನ್ನು ಕೆಲವೆಡೆ ತಮಗೆ ಬೇಕಾದವರನ್ನೇ ಹುದ್ದೆಯಲ್ಲಿ ಮುಂದುವರಿದಿದ್ದಾರೆ ಎಂಬ ಕಾರಣಕ್ಕಾಗಿ ನೇಮಕಾತಿ ವಿಳಂಬ ಮಾಡಲಾಗುತ್ತಿದೆ’ ಎಂದು ಶೇಷಾದ್ರಿ ಆರೋಪಿಸಿದ್ದಾರೆ.

ಹಲವು ಮಂದಿ ಅರ್ಹ ವಕೀಲರು ಈ ಹುದ್ದೆಗೆ ಅರ್ಜಿ ಸಲ್ಲಿಸಿದ್ದರೂ, ಅವಕಾಶ ಸಲ್ಲಿಸಿಲ್ಲ. ಸರ್ಕಾರದ ಧೋರಣೆಯಿಂದಾಗಿ ಅನರ್ಹರು, ಅಪಾತ್ರರು ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ವೇದಿಕೆಯ ಉನ್ನತ ಹುದ್ದೆಯಲ್ಲಿ ಮುಂದುವರಿಯುವಂತಾಗಿದೆ. ಇದರಿಂದ ನ್ಯಾಯಾಂಗದ ಪಾವಿತ್ರ್ಯಕ್ಕೆ ಧಕ್ಕೆಯಾಗಿದೆ ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಚಿಕ್ಕಬಾಣಾವರ: ಬೀದಿ ಬದಿ ವರ್ತಕರಿಗೆ ಗುರುತಿನ ಚೀಟಿ

ಪ್ರಜಾವಾಣಿ ವಾರ್ತೆ

ಹೆಸರಘಟ್ಟ: ‘ಚಿಕ್ಕಬಾಣಾವರ ಪುರಸಭೆ ವ್ಯಾಪ್ತಿಯಲ್ಲಿ ಬೀದಿ ಬದಿ ವ್ಯಾಪಾರ ಮಾಡುವ ಎಲ್ಲರಿಗೂ ಗುರುತಿನ ಚೀಟಿಯನ್ನು ವಿತರಿಸಲಾಗುವುದು’ ಎಂದು ದಾಸರಹಳ್ಳಿ ಕ್ಷೇತ್ರದ ಶಾಸಕ ಆರ್.ಮಂಜುನಾಥ್ ಹೇಳಿದರು.

ಚಿಕ್ಕಬಾಣಾವರ ಪರಿಸರದ ದಿನಗೂಲಿ ಪೌರ ಕಾರ್ಮಿಕರ ಜೊತೆ ಅವರು ಸಂವಾದ ನಡೆಸಿದರು. ನೀರು ಮತ್ತು ಮನೆ ಕಂದಾಯ ವಸೂಲಿಗೆ ವಿಶೇಷ ಮತುವರ್ಜಿ ವಹಿಸಲು ಸಿಬ್ಬಂದಿಗೆ ಸೂಚಿಸಿದ ಅವರು, ‘ಗ್ರಾಮಸ್ಥರಿಗೆ ಸಕಾಲಕ್ಕೆ ಕುಡಿಯುವ ನೀರನ್ನು ಒದಗಿಸಿ. ಯಾವ ಪ್ರಭಾವಿ ಏನೇ ಹೇಳಲಿ; ಕುಡಿಯುವ ನೀರನ್ನು

ಚಿಕ್ಕಬಾಣಾವರ ಪುರಸಭೆಯ ಪೌರ ಕಾರ್ಮಿಕರ ಜೊತೆ ಶಾಸಕ ಆರ್.ಮಂಜುನಾಥ್ ಚರ್ಚಿಸಿದರು

ಮನೆಗಳನ್ನು ಕಟ್ಟಲು ಕೊಡಬೇಡಿ. ಗ್ರಾಮಸ್ಥರು ದೂರು ಕೊಡದ ರೀತಿಯಲ್ಲಿ ಕೆಲಸ ನಿರ್ವಹಿಸಿ' ಎಂದರು.

‘ಸಾರ್ವಜನಿಕರಿಗೆ ಉತ್ತಮ ಚರಂಡಿ ವ್ಯವಸ್ಥೆ ಕಲ್ಪಿಸುವ ಬಗ್ಗೆ ಮತ್ತು ಪ್ಲಾಸ್ಟಿಕ್ ಬಳಕೆ ನಿಷೇಧಿಸುವ ಬಗ್ಗೆ ಗಂಭೀರ ಚಿಂತನೆ ಮಾಡುತ್ತಿದ್ದೇವೆ. ಅಧಿಕಾರಿಗಳ ಜೊತೆ ಚರ್ಚೆ ಮಾಡಿ ಈ ಕುರಿತು ಕ್ರಮ ಕೈಗೊಳ್ಳಲಾಗುವುದು’ ಎಂದು ಅವರು ತಿಳಿಸಿದರು.

‘ಕಸ ವಿಲೇವಾರಿ ಬಗ್ಗೆ ಸಮರ್ಪಕವಾದ ಯೋಜನೆಯನ್ನು ರೂಪಿಸಲಾಗುವುದು. ಗ್ರಾಮಸ್ಥರಿಗೆ ಪರಿಸರದ ಬಗ್ಗೆ ಕಾಳಜಿಯನ್ನು ಮೂಡಿಸಿ ಮರಗಳ ಬೆಳೆಸಲು ಕ್ರಮ ಕೈಗೊಳ್ಳುವುದು. ಇಡೀ ಪುರಸಭೆಯನ್ನು ಹಸಿರು ತಾಣವನ್ನಾಗಿ ಅಭಿವೃದ್ಧಿಪಡಿಸಲಾಗುವುದು’ ಎಂದು ಭರವಸೆ ನೀಡಿದರು.

ಚಿಕ್ಕಬಾಣಾವರ ಪುರಸಭೆಯ ಪ್ರಾಥಮಿಕ ಆರೋಗ್ಯಕೇಂದ್ರದ ವೈಧ್ಯಾದಿಕಾರಿ ಡಾ.ಜಯರಾಮ್, ಸಹಾಯಕ ಎಂಜಿನಿಯರ್ ಕಿರಣ್ ಕುಮಾರ್, ನಗರಾಭಿವೃದ್ಧಿ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

ಜನಾಗ್ರಹ ಆಂದೋಲನ– ಸಮಾಲೋಚನೆ

‘ಆಂತರಿಕ ಅವಲೋಕನದ ಮೂಲಕ ಮುಂದಿನ ಹೆಜ್ಜೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಮಾಜವು ಸಂಕಷ್ಟದಲ್ಲಿದ್ದಾಗ ಎಲ್ಲರೂ ಒಗ್ಗೂಡಿ ಜನರ ಕೂಗನ್ನು ಸರ್ಕಾರಕ್ಕೆ ಹೇಗೆ ತಲುಪಿಸಬಹುದು ಎಂಬುದನ್ನು ಜನಾಗ್ರಹ ಆಂದೋಲನದ ಮೂಲಕ ಮಾಡಿ ತೋರಿಸಿದ್ದೇವೆ. ನಮ್ಮ ಕೆಲಸ ಇಷ್ಟಕ್ಕೆ ಮುಗಿದಿಲ್ಲ. ಆಂತರಿಕ ಅವಲೋಕನದ ಮೂಲಕ ಮುಂದಿನ ಹೆಜ್ಜೆಗಳನ್ನು ಇಡಬೇಕು’ ಎಂದು ಹೋರಾಟಗಾರ ನೂರ್ ಶ್ರೀಧರ್ ತಿಳಿಸಿದರು.

’ಜನಾಗ್ರಹ‘ ಆಂದೋಲನ ಆನ್‌ಲೈನ್ ಮೂಲಕ ಭಾನುವಾರ ಹಮ್ಮಿಕೊಂಡಿದ್ದ ಸಭೆಯಲ್ಲಿ ಮಾತನಾಡಿದ ಅವರು, ‘ಎಲ್ಲರನ್ನೂ ಒಳಗೊಳ್ಳುವ ಕೆಲಸ ಆಗಿಲ್ಲ. ಈ ನಿಟ್ಟಿನಲ್ಲಿ ನಾವು ಯೋಚಿಸಬೇಕಿದೆ. ಕೋವಿಡ್ ಎರಡನೇ ಅಲೆಯ ಪರಿಣಾಮವನ್ನು ಮೊದಲೇ ಅಂದಾಜಿಸಿ ಅದಕ್ಕೆ ಅಗತ್ಯವಿರುವ ಸಿದ್ಧತೆ ಮಾಡಿಕೊಳ್ಳಲು ಆಗಲಿಲ್ಲ. ಮೂರನೇ ಅಲೆ ಎದುರಿಸುವ ನಿಟ್ಟಿನಲ್ಲಿ ಈಗಿನಿಂದಲೇ ಕಾರ್ಯಪ್ರವೃತ್ತರಾಗಬೇಕು. ಈ ದಿಶೆಯಲ್ಲಿ ಕೋವಿಡ್ ವಾಚ್ ಕಮಿಟಿ ರಚಿಸಬೇಕು. ಮುಂದಿನ ದಿನಗಳಲ್ಲಿ ಇನ್ನಷ್ಟು ಪೂರ್ವ ತಯಾರಿಗಳೊಂದಿಗೆ ಕೆಲಸ ಮಾಡಬೇಕು. ಕೋವಿಡ್ ಸಮಯದಲ್ಲಿ ಜೀವದ ಹಂಗು ತೊರೆದು ಕೆಲಸ ಮಾಡಿರುವವರಿಗೆ ಅಭಿನಂದನೆ ಸಲ್ಲಿಸುವ ಸಲುವಾಗಿ ಬೆಂಗಳೂರು ಹಾಗೂ ಕರಾವಳಿ ಭಾಗದಲ್ಲಿ ಕಾರ್ಯಕ್ರಮ ಆಯೋಜಿಸಲು ನಿರ್ಧರಿಸಲಾಗಿದೆ’ ಎಂದು ವಿವರಿಸಿದರು.

ಸಾಣೇಹಳ್ಳಿ ಮಠದ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ‘ಇವತ್ತಿನ ದಿನಗಳಲ್ಲಿ ಹೋರಾಟಗಳೇ ಕಡಿಮೆಯಾಗುತ್ತಿವೆ. ಅವು ಸ್ವಾರ್ಥ ಕೇಂದ್ರಿತಗೊಳ್ಳುತ್ತಿವೆ. ಇಂತಹ ಸಮಯದಲ್ಲೂ ಜನಾಗ್ರಹ ಆಂದೋಲನ ಆರಂಭದಿಂದ ಕೊನೆಯವರೆಗೂ ತನ್ನ ಹೋರಾಟ ನಿಲ್ಲಿಸಲಿಲ್ಲ. ತ್ಯಾಗ ಮನೋಭಾವ ಹಾಗೂ ಪ್ರೀತಿ ಇದ್ದಾಗ ಯಶಸ್ಸು ಸಾಧಿಸಲು ಸಾಧ್ಯ. ಆ ಕೆಲಸವನ್ನು ಜನಾಗ್ರಹ ಆಂದೋಲನ ಮಾಡಿದೆ. ಇಂತಹ ಹೋರಾಟಗಳು ಜೀವಂತವಾಗಿರುವಂತೆ ನೋಡಿಕೊಳ್ಳಬೇಕು’ ಎಂದರು.

ಹಿರಿಯ ಸಾಹಿತಿಗಳಾದ ಬರಗೂರು ರಾಮಚಂದ್ರಪ್ಪ, ಬಿ.ಟಿ.ಲಲಿತಾ ನಾಯ್ಕ್, ಹೋರಾಟಗಾರರಾದ ಕೆ.ಎಲ್. ಅಶೋಕ್, ಎಚ್.ಎಂ.ಯಾಸೀನ್, ಚಾಮರಸ ಮಾಲಿಪಾಟೀಲ, ಹರೂನ್ ರಶೀದ್, ಎಚ್.ಆರ್.ಬಸವರಾಜಪ್ಪ ಇದ್ದರು.

ಆನೇಕಲ್ ತಾಲ್ಲೂಕಿನ ಹೆನ್ನಾಗರ ಗ್ರಾಮದಲ್ಲಿ ಗೋಮಾಳ ಅತಿಕ್ರಮಣ

ವರದಿ ನೀಡಲು ಹೈಕೋರ್ಟ್ ಸೂಚನೆ

• ಲಿಂಗರಾಜು

ಬೊಮ್ಮನಹಳ್ಳಿ: ಆನೇಕಲ್ ತಾಲ್ಲೂಕಿನ ಹೆನ್ನಾಗರ ಗ್ರಾಮದಲ್ಲಿ 78 ಎಕರೆ 5 ಗುಂಟೆ ಗೋಮಾಳ ಜಮೀನು ಭೂಗಳ್ಳರ ಪಾಲಾಗುತ್ತಿದ್ದು, ಈ ಬಗ್ಗೆ 15 ದಿನಗಳ ಒಳಗಾಗಿ ವರದಿ ನೀಡುವಂತೆ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ಆದೇಶಿಸಿದೆ.

ಎಂ.ಬಾಬು ಎಂಬುವರು ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಿಚಾರಣೆ ಕೈಗೆತ್ತಿಕೊಂಡ ನ್ಯಾಯಮೂರ್ತಿ ನಾಗರತ್ನ ಹಾಗೂ ಹಂಚತೆ ಸಂಜೀವ್ ಕುಮಾರ್ ಅವರಿದ್ದ ದ್ವಿಸದಸ್ಯ ಪೀಠ ಈ ಆದೇಶ ಹೊರಡಿಸಿತು.

‘ಈ ಜಮೀನಿನಲ್ಲಿ ನಿವೇಶನ ನಿರ್ಮಿಸಿ ಮಾರಾಟ ಮಾಡುತ್ತಿದ್ದು, ಅಮಾಯಕರು ನಿವೇಶನ ಖರೀದಿಸಿ, ಮೋಸ ಹೋಗುತ್ತಿದ್ದಾರೆ. ಜಮೀನು ಅತಿಕ್ರಮಣ ಆಗದಂತೆ ಬಂದೋಬಸ್ತ್ ಮಾಡುವಂತೆ ಹಾಗೂ ಇದನ್ನು ಸಸ್ಯ ಕ್ಷೇತ್ರವನ್ನಾಗಿ ಅಭಿವೃದ್ಧಿಪಡಿಸಲು ಆದೇಶಿಸಿ ಅರಣ್ಯ ಇಲಾಖೆಗೆ ಹಸ್ತಾಂತರಿಸಲಾಗಿತ್ತು’.

ಗೋಮಾಳ ಜಮೀನಿನಲ್ಲಿ ಅಕ್ರಮವಾಗಿ ನಿರ್ಮಿಸಲಾಗುತ್ತಿರುವ ಕಟ್ಟಡಗಳು

‘ಅರಣ್ಯ ಇಲಾಖೆ ಕ್ರಮ ಕೈಗೊಳ್ಳದ ಕಾರಣ, ಸುಮಾರು ₹600 ಕೋಟಿ ಬೆಲೆ ಬಾಳುವ ಆಸ್ತಿಯನ್ನು ಭೂಗಳ್ಳರು ಕಬಳಿಸುತ್ತಿದ್ದಾರೆ, ಇದನ್ನು ಸರ್ಕಾರದ ವಶಕ್ಕೆ ಪಡೆಯಬೇಕು’ ಎಂದು ಎಂ.ಬಾಬು ಅವರು ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದರು.

‘ಕಂದಾಯ ದಾಖಲೆಗಳಾದ ಪ್ರಕಾರ ಈ ಜಾಗ ಗೋಮಾಳ ಎಂದು ಸ್ಪಷ್ಟಪಡಿಸಲಾಗಿದೆ. ಎಲ್ಲಮ್ಮ ದೇವಿ ದೇವಸ್ಥಾನ ಟ್ರಸ್ಟ್ ಸಂಚಾಲಕರು ಎನ್ನಲಾಗಿರುವ ಎಂ.ವಿ.ರಾಜಯ್ಯ ಅವರು ಈ ಗೋಮಾಳ ಜಾಗದಲ್ಲಿ ನಿವೇಶನಗಳನ್ನು ನಿರ್ಮಿಸಿ, ಮಾರಾಟ ಮಾಡುತ್ತಿದ್ದಾರೆ. ಇದನ್ನು ತಡೆ ಹಿಡಿಯಬೇಕೆಂದು 1995ರಲ್ಲೇ ಹೆನ್ನಾಗರ ಗ್ರಾಮ ಪಂಚಾಯಿತಿ ಅಧ್ಯಕ್ಷರು ಆನೇಕಲ್ ತಾಲ್ಲೂಕಿನ ಅಂದಿನ ತಹಶೀಲ್ದಾರ್ ಅವರಿಗೆ ದೂರು ಸಲ್ಲಿಸಿದ್ದರು’.

‘ಬಳಿಕ ಸ್ಥಳ ಪರಿಶೀಲನೆ ನಡೆದು, ಜಿಲ್ಲಾಧಿಕಾರಿಗಳಿಗೆ ವರದಿ ನೀಡಿದ್ದರು. ಒತ್ತುವರಿ ಆಗಿರುವುದು, ಅಕ್ರಮವಾಗಿ ನಿವೇಶನ ಮಾಡಿರುವ ಕುರಿತು ವರದಿಯಲ್ಲಿ ಸ್ಪಷ್ಟವಾಗಿ ಉಲ್ಲೇಖವಾಗಿತ್ತು. ಬಳಿಕ ಸದರಿ ಜಮೀನನ್ನು ಅರಣ್ಯ ಇಲಾಖೆಗೆ ಹಸ್ತಾಂತರ ಮಾಡಲಾಗಿತ್ತು. ಆದರೆ, ಸ್ಥಳಕ್ಕೆ ಯಾವುದೇ ರಕ್ಷಣೆ ಇಲ್ಲದಿದ್ದರಿಂದ ಜಾಗ ಅತಿಕ್ರಮಣ ಆಗುತ್ತಲೇ ಇದೆ’ ಎಂದು ಎಂ.ಬಾಬು ದೂರಿದರು.

ಉದುರಿದ ಎಲೆಗಳಿಂದ ಗೊಬ್ಬರ ತಯಾರಿ

• ಮನೋಹರ್ ಎಂ.

ಬೆಂಗಳೂರು: ಲಾಲ್‌ಬಾಗ್ ಉದ್ಯಾನದಲ್ಲಿರುವ ಮರಗಳಿಂದ ಉದುರುವ ಎಲೆಗಳನ್ನು ಬಳಸಿ, ಗೊಬ್ಬರ ತಯಾರಿಸುವ ಕಾರ್ಯಕ್ಕೆ ತೋಟಗಾರಿಕೆ ಇಲಾಖೆ ಮುಂದಾಗಿದೆ.

ಉದುರಿದ ಎಲೆಗಳನ್ನು ವಿಲೇವಾರಿ ಮಾಡುವ ಬದಲು ಅದರಿಂದಲೇ ಗೊಬ್ಬರ ತಯಾರಿಸಿ, ಉದ್ಯಾನದಲ್ಲಿರುವ ಮರ–ಗಿಡಗಳಿಗೆ ಮರುಬಳಸಿಕೊಳ್ಳಲು ಈ ಯೋಜನೆ ರೂಪಿಸಿದೆ.

‘ಲಾಲ್‌ಬಾಗ್‌ನಲ್ಲಿ ಸಾವಿರಾರು ಮರಗಳಿವೆ.ಇವುಗಳಿಂದಪ್ರತಿದಿನಉದುರುವ ಒಣಎಲೆಗಳು ಹೆಚ್ಚು ಪ್ರಮಾಣದಲ್ಲಿ ಸಂಗ್ರಹವಾಗುತ್ತಿತ್ತು. ಇದರ ವಿಲೇವಾರಿಗೂ ತುಸು ಸಮಸ್ಯೆಯಾಗಿತ್ತು. ಹಾಗಾಗಿ, ಎಲೆಗಳಿಂದ ಉದ್ಯಾನದಲ್ಲೇ ‘ಎರೆಹುಳು ಗೊಬ್ಬರ’ ತಯಾರಿಸಲಾಗುತ್ತಿದೆ’ ಎಂದು ತೋಟಗಾರಿಕೆ ಇಲಾಖೆಯ ಉಪನಿರ್ದೇಶಕಿ (ಲಾಲ್‌ಬಾಗ್) ಜಿ.ಕುಸುಮಾ ‘ಪ್ರಜಾವಾಣಿ’ಗೆ ತಿಳಿಸಿದರು.

‘ಎಲೆ ಹಾಗೂ ಸಗಣಿಗೆ ಕೃಷಿ ತ್ಯಾಜ್ಯವನ್ನೂ ಸೇರಿಸಬೇಕು. ಇವುಗಳ ಸಂಯೋಜನೆಯಿಂದ ಗೊಬ್ಬರ ತಯಾರಾಗಲು ಎರೆಹುಳುಗಳನ್ನು ಪ್ರಧಾನವಾಗಿ ಬಳಸಬೇಕು. ನಾಲ್ಕು ಅಥವಾ ಐದು ತಿಂಗಳ ಅವಧಿಯಲ್ಲಿ ಉತ್ತಮವಾದ ಎರೆಹುಳು ಗೊಬ್ಬರ ಸಿದ್ಧವಾಗುತ್ತದೆ’ ಎಂದು ವಿವರಿಸಿದರು.

ಲಾಲ್‌ಬಾಗ್ ಉದ್ಯಾನದಲ್ಲಿ ಎಲೆಗಳನ್ನು ಬಳಸಿ ಗೊಬ್ಬರ ತಯಾರಿಸುತ್ತಿರುವುದು

‘ಚಳಿಗಾಲದಲ್ಲಿ ಎಲೆಗಳು ಹೆಚ್ಚಿನ ಪ್ರಮಾಣದಲ್ಲಿ ಉದುರುತ್ತವೆ. ಉದ್ಯಾನದಲ್ಲಿ ಎಲೆಗಳು ಮಾತ್ರವಲ್ಲದೆ, ಸಸಿಗಳನ್ನು ವಿನ್ಯಾಸಗೊಳಿಸುವ ವೇಳೆಯೂ ಹಸಿ ತ್ಯಾಜ್ಯ ಸಂಗ್ರಹವಾಗುತ್ತದೆ. ಅವುಗಳನ್ನು ಪ್ರತಿದಿನ ಸಂಗ್ರಹಿಸಿ, ಒಂದು ಗುಂಡಿಯಲ್ಲಿ ಹಾಕಲಾಗುತ್ತದೆ. ಬಳಿಕ ಕೃಷಿ ತ್ಯಾಜ್ಯ, ಸಗಣಿ ಹಾಗೂ ಎರೆಹುಳುಗಳನ್ನು ಸೇರಿಸಲಾಗುವುದು. ಕೆಲ ದಿನಗಳ ನಂತರ ಅವು ಕೊಳೆಯಲಾರಂಭಿಸುತ್ತವೆ. ಇವು ಕ್ರಮೇಣ ಗೊಬ್ಬರವಾಗಿ ಪರಿವರ್ತನೆಗೊಳ್ಳುತ್ತವೆ. ಇದಕ್ಕಾಗಿ ಉದ್ಯಾನದಲ್ಲಿ ಪ್ರತ್ಯೇಕ ಜಾಗ ನಿಗದಿಪಡಿಸಲಾಗಿದೆ’ ಎಂದು ಮಾಹಿತಿ ನೀಡಿದರು.

‘ಸದ್ಯ ಉದ್ಯಾನದಲ್ಲಿ ನೈಸರ್ಗಿಕ ವಿಧಾನದಲ್ಲಿ ಎರೆಹುಳು ಗೊಬ್ಬರ ತಯಾರಿಸಲಾಗುತ್ತಿದೆ. ಎರೆಹುಳುಗಳಿಗೆ ಒಂದು ಬಾರಿ ಬಂಡವಾಳ ಹಾಕಿದರೆ, ಅವುಗಳ ಸಂಖ್ಯೆ ಹೆಚ್ಚಾಗುತ್ತಾ ಹೋಗುತ್ತವೆ. ಮತ್ತೆ ಗೊಬ್ಬರ ತಯಾರಿಸುವಾಗ ಇದೇ ಎರೆಹುಳುಗಳನ್ನು ಬಳಸಿಕೊಳ್ಳಬಹುದು’ ಎಂದರು.

ಕಬ್ಬನ್ ಉದ್ಯಾನದಲ್ಲೂ ಬಳಕೆ: ‘ಈ ಹಿಂದೆ ಕಬ್ಬನ್ ಉದ್ಯಾನದಲ್ಲಿ ಇದೇ ಮಾದರಿಯಲ್ಲಿ ಗೊಬ್ಬರ ತಯಾರಿಸುವುದನ್ನು ಆರಂಭಿಸಲಾಗಿತ್ತು. ಗೊಬ್ಬರವನ್ನು ಉದ್ಯಾನಕ್ಕೆ ಬಳಸಿಕೊಳ್ಳಲಾಗುತ್ತಿದೆ’ ಎಂದೂ ಮಾಹಿತಿ ನೀಡಿದರು.

ಅಂಕಿ-ಅಂಶ

7,500 ಲಾಲ್‌ಬಾಗ್ ಉದ್ಯಾನದಲ್ಲಿರುವ ಮರಗಳು

4 ಟನ್ ಒಂದು ಟನ್ ಗೊಬ್ಬರಕ್ಕೆ ಬೇಕಾಗುವ ತ್ಯಾಜ್ಯ

ಮಕ್ಕಳಲ್ಲಿನ ಮನೋವ್ಯಾಧಿ ಶೇ 20 ರಷ್ಟು ಹೆಚ್ಚಳ • ನಿಮ್ಹಾನ್ಸ್ ವೈದ್ಯರ ಕಳವಳ

ಗೃಹ ಬಂಧನ: ಮಕ್ಕಳಲ್ಲಿ ಹೆಚ್ಚಿದ ಸಿಟ್ಟು, ಹಟ

• ವರುಣ್ ಹೆಗಡೆ

ಬೆಂಗಳೂರು: ಒಂದೂವರೆ ವರ್ಷದಿಂದ ಶಾಲೆಗಳು ಹಾಗೂ ದೈಹಿಕ ಚಟುವಟಿಕೆಗಳಿಂದ ದೂರ ಉಳಿದ ನಗರದ ಮಕ್ಕಳಲ್ಲಿ ಮನೋವ್ಯಾಧಿ ಉಲ್ಬಣಿಸುತ್ತಿದೆ. ಅತಿಯಾದ ಸಿಟ್ಟು, ಹಟಮಾರಿತನದ ಮೂಲಕ ಮಕ್ಕಳು ಮನಸ್ಸಿನ ಒತ್ತಡವನ್ನು ಹೊರಹಾಕುತ್ತಿದ್ದಾರೆ ಎಂದು ರಾಷ್ಟ್ರೀಯ ಮಾನಸಿಕ ಆರೋಗ್ಯ ಹಾಗೂ ನರವಿಜ್ಞಾನ ಸಂಸ್ಥೆಯ (ನಿಮ್ಹಾನ್ಸ್) ಮನೋವೈದ್ಯರು ಕಳವಳ ವ್ಯಕ್ತಪಡಿಸಿದ್ದಾರೆ.

ಕಳೆದ ವರ್ಷ ಕೋವಿಡ್ ಕಾಣಿಸಿಕೊಂಡ ಬಳಿಕ ಶಾಲಾ–ಕಾಲೇಜುಗಳು ಪೂರ್ಣ ಪ್ರಮಾಣದಲ್ಲಿ ಮುಚ್ಚಿದ್ದವು. ಕೋವಿಡ್ ಮೊದಲನೇ ಅಲೆ ನಿಯಂತ್ರಣಕ್ಕೆ ಬಂದು, ಪರಿಸ್ಥಿತಿ ತಿಳಿಗೊಳ್ಳುವ ಹೊತ್ತಿಗೆ ಎರಡನೇ ಅಲೆ ಕಾಣಿಸಿಕೊಂಡಿತ್ತು. ಈ ಬಾರಿ ಮಾರ್ಚ್ ಮೂರನೇ ವಾರದ ಬಳಿಕ ಸೋಂಕು ಪತ್ತೆ ದರ ಏರುಗತಿಯಲ್ಲೇ ಸಾಗಿತ್ತು. ಈ ಸಂದರ್ಭದಲ್ಲಿ ಮುಚ್ಚಿದ್ದ ಶಾಲಾ–ಕಾಲೇಜುಗಳ ಬಾಗಿಲು ಇನ್ನೂ ತೆರೆದಿಲ್ಲ.

ದಿನದ ಬಹುತೇಕ ಸಮಯವನ್ನು ಮಕ್ಕಳು ಮನೆಯೊಳಗಡೆಯೇ ಕಳೆಯುತ್ತಿರುವ ಪರಿಣಾಮ ಅವರಲ್ಲಿ ಮನೋರೋಗಗಳು ಕೋವಿಡ್ ಪೂರ್ವದ ಸ್ಥಿತಿಗೆ ಹೋಲಿಸಿದರೆ ಶೇ 20ರಷ್ಟು ಹೆಚ್ಚಳವಾಗಿದೆ ಎಂದು ನಿಮ್ಹಾನ್ಸ್ ವೈದ್ಯರು ಹೊರರೋಗಿ ವಿಭಾಗದ ದಾಖಲಾತಿ ಆಧಾರದಲ್ಲಿ ವಿಶ್ಲೇಷಿಸಿದ್ದಾರೆ. ಸದ್ಯ ನಿತ್ಯ ಸರಾಸರಿ 60ರಿಂದ 70 ಮಕ್ಕಳು ಹೊರರೋಗಿಗಳಾಗಿ ಭೇಟಿ ನೀಡುತ್ತಿದ್ದಾರೆ.

ಮಕ್ಕಳಲ್ಲಿ ಮನೋರೋಗಗಳು ನೇರವಾಗಿ ಕಾಣಿಸಿಕೊಳ್ಳುತ್ತಿಲ್ಲ. ಬದಲಾಗುತ್ತಿರುವ ಅವರ ನಡವಳಿಕೆಯಿಂದ ಸಮಸ್ಯೆಯನ್ನು ಗುರುತಿಸಬಹುದಾಗಿದೆ

ಡಾ. ಶಶಿಧರ್ ಎಚ್.ಎನ್., ನಿಮ್ಹಾನ್ಸ್ ಆರ್‌ಎಂಒ

'ಆನ್‌ಲೈನ್ ತರಗತಿಯ ಬಳಿಕವೂ ದಿನವಿಡೀ ಸ್ಮಾರ್ಟ್‌ಫೋನ್‌ಗಳು, ಟ್ಯಾಬ್ಲೆಟ್‌ಗಳನ್ನು ಬಳಕೆ ಮಾಡುವುದರಿಂದ ಅವರಲ್ಲಿ ಮಾನಸಿಕ ಸಮಸ್ಯೆಗಳು ಕಾಣಿಸಿಕೊಳ್ಳುತ್ತಿವೆ. ನಿರಂತರ ಒಂದು ಗಂಟೆಗಿಂತ ಹೆಚ್ಚು ಅವಧಿ ಈ ಸಾಧನಗಳನ್ನು ಬಳಸುವ ಮಕ್ಕಳು ಮಾನಸಿಕ ಉದ್ವೇಗ, ಖಿನ್ನತೆಗೆ ತುತ್ತಾಗುತ್ತಿದ್ದಾರೆ. ಕೋವಿಡ್ ಎರಡನೇ ಅಲೆ ಕಾಣಿಸಿಕೊಂಡ ಬಳಿಕ ಈ ಸಮಸ್ಯೆ ಎದುರಿಸುತ್ತಿರುವವರ ಸಂಖ್ಯೆ ಹೆಚ್ಚಳವಾಗಿದೆ. ಇದನ್ನು 'ತಂತ್ರಜ್ಞಾನದ ವ್ಯಸನ' ಎಂದು ಕರೆಯಲಾಗುತ್ತದೆ' ಎಂದು ಮನೋವೈದ್ಯರು ಅಭಿಮತ ವ್ಯಕ್ತಪಡಿಸಿದ್ದಾರೆ.

ನಡವಳಿಕೆ ಬದಲು: 'ಚಟುವಟಿಕೆಗಳು ಇರದ ಕಾರಣ ಮಕ್ಕಳಲ್ಲಿ ಖಿನ್ನತೆ ಕಾಣಿಸಿಕೊಳ್ಳುತ್ತಿದೆ. ಲಾಕ್‌ಡೌನ್ ಅವಧಿಯಲ್ಲಿ ಸಂಸ್ಥೆಗೆ ಪ್ರತಿನಿತ್ಯ ಸರಾಸರಿ 600 ಮಂದಿ ಹೊರ ರೋಗಿಗಳು ಬರುತ್ತಿದ್ದರು. ಆ ಸಂಖ್ಯೆ ಈಗ 1,400ಕ್ಕೆ ಏರಿಕೆಯಾಗಿದೆ. ಇವರಲ್ಲಿ ಮಕ್ಕಳು ಹಾಗೂ ಯುವಜನರ ಸಂಖ್ಯೆಯೇ ಹೆಚ್ಚು ಇದೆ' ಎಂದು ನಿಮ್ಹಾನ್ಸ್‌ನ ಸ್ಥಾನಿಕ ವೈದ್ಯಾಧಿಕಾರಿ (ಆರ್‌ಎಂಒ) ಡಾ. ಶಶಿಧರ್ ಎಚ್.ಎನ್. ತಿಳಿಸಿದರು.

'ಮಕ್ಕಳ ನಡವಳಿಕೆಯನ್ನು ಪಾಲಕರು ಗಮನಿಸಿ, ಸಮಸ್ಯೆಗೆ ಪರಿಹಾರ ಕಲ್ಪಿಸಬೇಕು. ಇಲ್ಲವಾದಲ್ಲಿ ಸಮಸ್ಯೆ ಭವಿಷ್ಯದಲ್ಲಿ ಗಂಭೀರ ಸ್ವರೂಪ ಪಡೆದುಕೊಳ್ಳಲಿದೆ. ಗರಿಷ್ಠ ಪ್ರಮಾಣದಲ್ಲಿ ಕೊಬ್ಬು, ಸಕ್ಕರೆ ಮತ್ತು ಉಪ್ಪು ಒಳಗೊಂಡ ಅಪೌಷ್ಟಿಕ (ಜಂಕ್ ಫುಡ್) ಆಹಾರ ಸೇವನೆಗೆ ಕಡಿವಾಣ ಹಾಕಬೇಕು. ದೈಹಿಕ ಚಟುವಟಿಕೆಗಳಿಗೆ ಆದ್ಯತೆ ನೀಡಬೇಕು' ಎಂದು ಅವರು ಸಲಹೆ ನೀಡಿದರು.

ನಗರದ ಕೋವಿಡ್ ಅಂಕಿ–ಅಂಶ

12,15,661	ಒಟ್ಟು ಪ್ರಕರಣಗಳು (12,15,309 ನಿನ್ನೆಯ ವಿವರ)
18,018	ಸಕ್ರಿಯ ಪ್ರಕರಣಗಳು
11,81,974	ಗುಣಮುಖರಾದವರು
15,668	ಒಟ್ಟು ಸಾವು

ಭಾನುವಾರದ ಏರಿಕೆ

ಹೊಸ ಪ್ರಕರಣ	352
ಗುಣಮುಖ	1,742
ಸಾವು	03

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಕಲಿಕೆಗೆ ತೊಡಕು: ವೈದ್ಯರ ಅಭಿಮತ

'ಕೋವಿಡ್ ಕಾಣಿಸಿಕೊಂಡ ಬಳಿಕ ಹೆಚ್ಚಿನ ಸಮಯವನ್ನು ಮನೆಯಲ್ಲಿಯೇ ಕಳೆಯಬೇಕಾದ ಪರಿಸ್ಥಿತಿ ನಿರ್ಮಾಣವಾದ ಕಾರಣ ಎಲ್ಲ ವಯೋಮಾನದವರಲ್ಲಿಯೂ ಮಾನಸಿಕ ಸಮಸ್ಯೆಗಳು ಕಾಣಿಸಿಕೊಳ್ಳುತ್ತಿವೆ. ಮಕ್ಕಳು ಬಹಿರಂಗವಾಗಿ ಹೇಳಿಕೊಳ್ಳದ ಕಾರಣ ನಡವಳಿಕೆಯ ಆಧಾರದಲ್ಲಿ ಸಮಸ್ಯೆಗಳನ್ನು ಗುರುತಿಸಬೇಕಾಗುತ್ತದೆ. ನಗರ ಪ್ರದೇಶದ ಮಕ್ಕಳು ಮೊದಲಿನಿಂದಲೂ ಮೊಬೈಲ್ ಬಳಸುತ್ತಿದ್ದುದು ಹೆಚ್ಚು. ಅದು ಈಗ ಮತ್ತಷ್ಟು ಜಾಸ್ತಿಯಾಗಿದೆ. ಇದು ಕಲಿಕೆಯ ಮೇಲೆ ಪರಿಣಾಮ ಬೀರಲಿದೆ. ಮಕ್ಕಳು ಓದಿನಲ್ಲಿ ಹಿಂದೆ ಬೀಳುವ ಸಾಧ್ಯತೆಗಳು ಇರುತ್ತವೆ' ಎಂದು ಮಕ್ಕಳು ಹಾಗೂ ಹದಿಹರೆಯದವರ ಮನೋರೋಗ ತಜ್ಞ ಡಾ.ಕೆ.ಎಂ. ರಾಜೇಂದ್ರ ತಿಳಿಸಿದರು.

'ಮೊಬೈಲ್ ಗೇಮ್‌ಗಳನ್ನು ಅತಿಯಾಗಿ ಆಡುವುದರಿಂದ ಕೂಡ ಮನೋರೋಗಗಳು ಬರುತ್ತವೆ. ದೈಹಿಕ ಚಟುವಟಿಕೆ ಇರದ ಕಾರಣ ಕೆಲ ಮಕ್ಕಳಲ್ಲಿ ಬೊಜ್ಜಿನ ಸಮಸ್ಯೆಯೂ ಸ್ವಲ್ಪ ಪ್ರಮಾಣದಲ್ಲಿ ಕಾಣಿಸಿಕೊಳ್ಳುತ್ತಿದೆ. ಶಾಲೆಗಳು ಪ್ರಾರಂಭವಾದ ಬಳಿಕ ಹಳೆಯ ವ್ಯವಸ್ಥೆಗೆ ಹೊಂದಿಕೊಳ್ಳಲು ಅವರಿಗೆ ಸಮಯಬೇಕಾಗುತ್ತದೆ. ಮನೆಯಲ್ಲಿ ಮಕ್ಕಳು ಯೋಗ ಹಾಗೂ ಸಮಯ ನಿರ್ವಹಣೆಗೆ ಆದ್ಯತೆ ನೀಡಬೇಕು' ಎಂದರು.

ಕೋವಿಡ್ ಅಂಕಿ–ಅಂಶ

ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ

	ವಿಶ್ವ	ಭಾರತ
ಒಟ್ಟು ಪ್ರಕರಣ	18.44 ಕೋಟಿ	3.05 ಕೋಟಿ
ಸಕ್ರಿಯ ಪ್ರಕರಣ	1.16 ಕೋಟಿ	4.79 ಲಕ್ಷ
ಗುಣಮುಖ	16.87 ಕೋಟಿ	2.96 ಕೋಟಿ
ಸಾವು	39.90 ಲಕ್ಷ	4.02 ಲಕ್ಷ

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	3.81 ಲಕ್ಷ	36,817
ಗುಣಮುಖ	3.30 ಲಕ್ಷ	36,782
ಸಾವು	7,214	675

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)

ಬ್ರೆಜಿಲ್	ಕೊಲಂಬಿಯಾ	ಬ್ರಿಟನ್
54,566	26,928	24,741

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ)

ಅಮೆರಿಕ	ಬ್ರೆಜಿಲ್	ಬ್ರಿಟನ್
48.79	11.84	4.18

(*ರಾತ್ರಿ 12 ಗಂಟೆಯ ವರೆಗಿನ ಮಾಹಿತಿ)

ಎಲ್ಲಿ ಹೆಚ್ಚು ಸಾವು

ಮಹಾರಾಷ್ಟ್ರ	1.23 ಲಕ್ಷ
ತಮಿಳುನಾಡು	33,005
ದೆಹಲಿ	24,995

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)

ಮಹಾರಾಷ್ಟ್ರ	60.98
ಕೇರಳ	29.73
ತಮಿಳುನಾಡು	24.96

ಪ್ರಜಾವಾಣಿ ಗ್ರಾಫಿಕ್ಸ್

ಕಪ್ಪು ಶಿಲೀಂಧ್ರ: ಮೃತರ ಸಂಖ್ಯೆ 87ಕ್ಕೆ ಏರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಕಪ್ಪು ಶಿಲೀಂಧ್ರ ಸೋಂಕಿನ ತೀವ್ರತೆಗೆ ಒಂದು ವಾರದಲ್ಲಿ ಆರು ಮಂದಿ ಮೃತಪಟ್ಟಿದ್ದು, ಈವರೆಗೆ ಸಾವಿಗೀಡಾದವರ ಒಟ್ಟು ಸಂಖ್ಯೆ 87ಕ್ಕೆ ಏರಿಕೆ ಕಂಡಿದೆ.

ಹೊಸದಾಗಿ ಬೌರಿಂಗ್ ಆಸ್ಪತ್ರೆಯಲ್ಲಿ ಇಬ್ಬರಿಗೆ ಶಿಲೀಂಧ್ರ ಸೋಂಕು ತಗುಲಿರುವುದು ದೃಢಪಟ್ಟಿದೆ. ಏಳು ದಿನಗಳಲ್ಲಿ 26 ಮಂದಿಗೆ ಸೋಂಕು ತಗುಲಿರುವುದು ಖಚಿತಪಟ್ಟಿದೆ. ಈವರೆಗೆ ಈ ಸೋಂಕಿಗೆ ಒಳಗಾದವರ ಒಟ್ಟು ಸಂಖ್ಯೆ 1,068ಕ್ಕೆ ಏರಿಕೆಯಾಗಿದೆ.

ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಈವರೆಗೆ 201 ಮಂದಿ ದಾಖಲಾಗಿದ್ದಾರೆ. ಅದೇ ರೀತಿ, ಬೌರಿಂಗ್ ಆಸ್ಪತ್ರೆಯಲ್ಲಿ ಒಟ್ಟು 310 ಹಾಗೂ ಕೆ.ಸಿ. ಜನರಲ್ ಆಸ್ಪತ್ರೆಯಲ್ಲಿ 3 ಪ್ರಕರಣಗಳನ್ನು ದಾಖಲಿಸಿಕೊಳ್ಳಲಾಗಿದೆ. ಕಪ್ಪು ಶಿಲೀಂಧ್ರ ಸೋಂಕಿತರಲ್ಲಿ ಈವರೆಗೆ 514 ಮಂದಿ ಸರ್ಕಾರಿ ವ್ಯವಸ್ಥೆಯಡಿ ದಾಖಲಾಗಿದ್ದಾರೆ. ಇನ್ನುಳಿದವರು ವಿವಿಧ ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದುಕೊಂಡಿದ್ದಾರೆ.

'ಮೂರು ವಾರಗಳಿಂದ ಶಿಲೀಂಧ್ರ ಸೋಂಕು ಪ್ರಕರಣಗಳ ಸಂಖ್ಯೆ ಇಳಿಕೆ ಕಂಡಿದೆ. ಕೆ.ಸಿ. ಜನರಲ್ ಆಸ್ಪತ್ರೆಯಲ್ಲಿ ಕೂಡ ಸೋಂಕಿತರಿಗೆ ಚಿಕಿತ್ಸೆ ಒದಗಿಸಲಾಗುತ್ತಿದೆ. ಕೋವಿಡ್ ಪ್ರಕರಣಗಳ ಸಂಖ್ಯೆ ಇಳಿಕೆಯಾಗಿರುವ ಕಾರಣ ಆಸ್ಪತ್ರೆಗಳಲ್ಲಿ ಹಾಸಿಗೆಗಳ ಸಮಸ್ಯೆಯಿಲ್ಲ. ಕೆಲ ಖಾಸಗಿ ಆಸ್ಪತ್ರೆಗಳು ಪ್ರಕರಣಗಳನ್ನು ತಡವಾಗಿ ವರದಿ ಮಾಡುತ್ತಿವೆ' ಎಂದು ಬೆಂಗಳೂರು ನಗರ ಜಿಲ್ಲಾ ಶಸ್ತ್ರಚಿಕಿತ್ಸಕ ಅನ್ಸರ್ ಅಹಮದ್ ಹೇಳಿದರು.

ಗಾಂಧಿ ಕುಟುಂಬಕ್ಕೆ ಕಮಿಷನ್ ಸಿಗದಿದ್ದಕ್ಕೆ ಯುದ್ಧವಿಮಾನ ಖರೀದಿಸಲಿಲ್ಲವೇ?: ಬಿಜೆಪಿ

ನವದೆಹಲಿ (ಪಿಟಿಐ): 'ವಾಯುಪಡೆಯ ಸಾಮರ್ಥ್ಯ ಕುಗ್ಗಿದ್ದ ಸಮಯದಲ್ಲಿ ಕಾಂಗ್ರೆಸ್ ನೇತೃತ್ವದ ಸರ್ಕಾರವೇ ಇತ್ತು. ಹತ್ತು ವರ್ಷಗಳ ಕಾಲ ಆಡಳಿತ ನಡೆಸಿದ ಕಾಂಗ್ರೆಸ್ ಯುದ್ಧವಿಮಾನಗಳನ್ನು ಏಕೆ ಖರೀದಿ ಮಾಡಲಿಲ್ಲ' ಎಂದು ಬಿಜೆಪಿ ವಕ್ತಾರ ಸಂಬಿತ್ ಪಾತ್ರಾ ಭಾನುವಾರ ಪ್ರಶ್ನಿಸಿದ್ದಾರೆ.

ರಫೇಲ್ ಯುದ್ಧವಿಮಾನಗಳ ಖರೀದಿಯಲ್ಲಿ ಅವ್ಯವಹಾರ ನಡೆದಿದೆ ಎಂಬ ಕಾಂಗ್ರೆಸ್‌ನ ಆರೋಪಕ್ಕೆ ತಿರುಗೇಟು ನೀಡಿರುವ ಅವರು, 'ಗಾಂಧಿ ಕುಟುಂಬಕ್ಕೆ ನಿರೀಕ್ಷಿಸಿದಷ್ಟು ಕಮಿಷನ್ ಸಿಗಲಿಲ್ಲ ಎಂಬ ಕಾರಣಕ್ಕೆ, ಕಾಂಗ್ರೆಸ್ ನೇತೃತ್ವದ ಆಗಿನ ಸರ್ಕಾರ ಯುದ್ಧ ವಿಮಾನಗಳನ್ನು ಖರೀದಿ ಮಾಡಲಿಲ್ಲವೇ' ಎಂದು ಪ್ರಶ್ನಿಸಿದ್ದಾರೆ.

ಸಂಬಿತ್ ಪಾತ್ರಾ

'ದೇಶದ ಭದ್ರತೆಯನ್ನು ಅಪಾಯಕ್ಕೆ ಸಿಲುಕಿಸಲಾಗುತ್ತಿದೆ ಎಂದು ಕಾಂಗ್ರೆಸ್ ಈಗ ಆರೋಪಿಸುತ್ತಿರುವುದರಲ್ಲಿ ಅರ್ಥ ಇಲ್ಲ' ಎಂದೂ ಅವರು ವಾಗ್ದಾಳಿ ನಡೆಸಿದ್ದಾರೆ.

ಸಾವಿರಾರು ಕುಟುಂಬ ಬೀದಿಗೆ

ಕೋವಿಡ್ ನಿರ್ವಹಣೆಯಲ್ಲಿ ಬಿಜೆಪಿ ವಿಫಲ: ಸಂಸದ ಡಿ.ಕೆ.ಸುರೇಶ್ ಟೀಕೆ

ಪ್ರಜಾವಾಣಿ ವಾರ್ತೆ

ಆನೇಕಲ್: 'ಕೇಂದ್ರ ಮತ್ತು ರಾಜ್ಯ ಸರ್ಕಾರದಲ್ಲಿ ಆಡಳಿತ ನಡೆಸುತ್ತಿರುವ ಬಿಜೆಪಿಯ ಬೇಜವಬ್ದಾರಿಯಿಂದಾಗಿ ಸಾವಿರಾರು ಕುಟುಂಬಗಳು ಬೀದಿಗೆ ಬೀಳುವಂತಾಗಿವೆ. ಕೊರೊನಾ ಅಸಮರ್ಪಕ ನಿರ್ವಹಣೆಯೇ ಇದಕ್ಕೆ ಕಾರಣ' ಎಂದು ಸಂಸದ ಡಿ.ಕೆ.ಸುರೇಶ್ ಟೀಕಿಸಿದರು.

ತಾಲ್ಲೂಕಿನ ಜಿಗಣಿಯಲ್ಲಿ ಸೋಮವಾರ ಕಾಂಗ್ರೆಸ್ ಕಚೇರಿ ಉದ್ಘಾಟಿಸಿ ಮಾತನಾಡಿದರು.

'ಕೊರೊನಾ ಮೊದಲ ಅಲೆ ಪ್ರಾರಂಭವಾದಾಗಲೇ ಸರ್ಕಾರ ಎಚ್ಚೆತ್ತುಕೊಂಡು ಸೂಕ್ತ ಸಿದ್ಧತೆಗಳನ್ನು ಮಾಡಿಕೊಳ್ಳಬೇಕಾಗಿತ್ತು. ಆದರೆ ಎರಡನೇ ಅಲೆ ಪ್ರಾರಂಭವಾದರೂ ಸರ್ಕಾರ ಅವಶ್ಯಕ ಸಿದ್ಧತೆಗಳನ್ನು ಮಾಡಿಕೊಳ್ಳಲಿಲ್ಲ. ಕುಟುಂಬದ ಆಧಾರ ಸ್ತಂಭವಾಗಿದ್ದವರು ಮೃತಪಟ್ಟಿದ್ದರಿಂದ ಸಾವಿರಾರು ಕುಟುಂಬಗಳು ಬೀದಿಪಾಲಾದವು' ಎಂದರು.

'ರಾಜ್ಯ ಸರ್ಕಾರ ಪ್ಯಾಕೇಜ್‌ಗಳ ಘೋಷಣೆ ಮಾಡಿರುವುದು ಕಣ್ಣೊರೆಸುವ ತಂತ್ರವಾಗಿದೆ. ಅರ್ಹ ಫಲಾನುಭವಿಗಳಿಗೆ ಇದುವರೆಗೂ ಹಣ ಸಂದಾಯವಾಗಿಲ್ಲ. ರಾಜ್ಯದಲ್ಲಿ 26 ಲಕ್ಷಕ್ಕೂ ಹೆಚ್ಚು ಮಂದಿ ಉದ್ಯೋಗ ಕಳೆದು ಕೊಂಡಿದ್ದಾರೆ. ಉದ್ಯೋಗ ಸೃಷ್ಟಿ ಮಾಡುವ ಭರವಸೆಯೊಂದಿಗೆ ಅಧಿಕಾರಕ್ಕೇರಿದ ಬಿಜೆಪಿ ಉದ್ಯೋಗನಾಶದಲ್ಲಿ ನಿರತವಾಗಿದೆ' ಎಂದು ಟೀಕಿಸಿದರು.

ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾರೆಡ್ಡಿ ಮಾತನಾಡಿದರು. ಲಾಕ್ ಕಾಂಗ್ರೆಸ್ ಅಧ್ಯಕ್ಷ ಶ್ರೀಧರ್, ಯುವ ಕಾಂಗ್ರೆಸ್ ರಾಜ್ಯ ಪ್ರಧಾನ ಕಾರ್ಯದರ್ಶಿ ದೀಪಿಕಾರೆಡ್ಡಿ, ಮುಖಂಡ ಎನ್. ಬಿ.ಐ.ನಾಗರಾಜು, ಕೆ.ಎಸ್.ನಟರಾಜ್, ಕೇಶವರೆಡ್ಡಿ, ಜಿಗಣಿ ಮುನಿಯಪ್ಪ, ಪ್ರಹ್ಲಾದ್‌ರೆಡ್ಡಿ, ಹಾ.ವೇ.ವೆಂಕಟೇಶ್, ಆನಂದ್ ಗೌಡ, ಮಧುಗೌಡ, ರಮೇಶ್, ಸಂಪಂಗಿರಾಜಪ್ಪ, ವಿ.ಎಸ್.ಅಬ್ಬಾಸ್ ಇದ್ದರು.

ಜೀವಂತ ಹಾವು ಕೊರಳಿಗೆ ಸುತ್ತಿಕೊಂಡು ಸುತ್ತಾಟ!

ಬೆಳಗಾವಿ:ತಾಲ್ಲೂಕಿನ ಹಂಗರಗಾ ಗ್ರಾಮದ ವ್ಯಕ್ತಿ ಒಬ್ಬರು ಜೀವಂತ ಹಾವನ್ನು ಕೊರಳಿಗೆ ಸುತ್ತಿಕೊಂಡು ಸೈಕಲ್ ಮೇಲೆ ಸಂಚರಿಸುತ್ತಿದ್ದ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಭಾನುವಾರ ಹರಿದಾಡಿದೆ.

ಆ ವ್ಯಕ್ತಿಯ ಹೆಸರು ತಿಳಿದುಬಂದಿಲ್ಲ. ಅಲ್ಲಿನ ಕೆಲ ಯುವಕರು ವಿಡಿಯೊ ಮಾಡಿ ಸಾಮಾಜಿಕ ಜಾಲತಾಣದಲ್ಲಿ ಹರಿಬಿಟ್ಟಿದ್ದಾರೆ. ಮನೆಯ ಬಳಿ ಸಿಕ್ಕ ಹಾವನ್ನು ಆ ವ್ಯಕ್ತಿ ಊರಿನ ಹೊರಕ್ಕೆ ತೆಗೆದುಕೊಂಡು ಹೋಗಿ ಬಿಟ್ಟಿರುವುದು ವಿಡಿಯೊದಲ್ಲಿ ಸೆರೆಯಾಗಿದೆ.

ಹನಿಟ್ರ್ಯಾಪ್: ₹30 ಲಕ್ಷ ಕಳೆದುಕೊಂಡ ಯುವಕ

7 ಮಂದಿ ವಿರುದ್ಧ ಪ್ರಕರಣ, ಬಂಧನ

ಪ್ರಜಾವಾಣಿ ವಾರ್ತೆ

ಪುತ್ತೂರು: ಹನಿಟ್ರ್ಯಾಪ್‌ಗೆ ಒಳಗಾಗಿ ಸುಮಾರು ₹30 ಲಕ್ಷ ಕಳೆದುಕೊಂಡಿರುವುದಾಗಿ ನೆಟ್ಟಣಿಗೆ ಮುಡ್ನೂರಿನ ವ್ಯಕ್ತಿಯೊಬ್ಬರು ಪೊಲೀಸರಿಗೆ ದೂರು ನೀಡಿದ್ದಾರೆ. ಈ ಸಂಬಂಧ 7 ಮಂದಿಯ ವಿರುದ್ಧ ಸಂಪ್ಯ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಯುವತಿಯನ್ನು ಬಂಧಿಸಲಾಗಿದೆ.

ವೃತ್ತಿಯಲ್ಲಿ ಸೇಲ್ಸ್‌ಮ್ಯಾನ್ ಆಗಿರುವ, ಮುಡ್ನೂರು ಗ್ರಾಮದ ಚೀಚಗದ್ದೆ ನಿವಾಸಿ ಅಬ್ದುಲ್ ನಾಸಿರ್ (25) ಹನಿಟ್ರ್ಯಾಪ್‌ಗೆ ಒಳಗಾದ ಯುವಕ.

ಮುಡ್ನೂರು ಚೀಚಗದ್ದೆಯ ಹನೀಫ್ ಯಾನೆ ಕೆಎಂವೈ ಹನೀಫ್, ಕೊಟ್ಯಾಡಿಯವರಾದ ಮುಹಮ್ಮದ್ ಕುಂಞ, ಶಾಫಿ, ಸವಣೂರಿನ ಅಝುರ್, ಸಯೀದ್ ಮೋನು, ನಾಸಿರ್ ಮತ್ತು ಕಾರ್ಕಳದವಳೆಂದು ಪರಿಚಯಿಸಿಕೊಂಡಿದ್ದ ತನೀಶಾ ಎಂಬುವರ ವಿರುದ್ಧ ಪ್ರಕರಣ ದಾಖಲಾಗಿದೆ. ಹನಿಟ್ರ್ಯಾಪ್ ಜಾಲದ ತಂಡ ಏಪ್ರಿಲ್ ತಿಂಗಳಿನಲ್ಲಿ ಅಬ್ದುಲ್ ನಾಸೀರ್ ಅವರನ್ನು ಮೋಸದ ಬಲೆಗೆ ಸಿಲುಕಿಸಿ, ಹಣ ವಸೂಲಿ ಮಾಡಿತ್ತು.

'ಆರೋಪಿಗಳು ಯುವತಿಯನ್ನು ಬಳಸಿಕೊಂಡು ತನ್ನ ನಗ್ನ ವಿಡಿಯೊವನ್ನು ಚಿತ್ರೀಕರಿಸಿದ್ದಾರೆ. ಸಾಮಾಜಿಕ ಜಾಲತಾಣಗಳಲ್ಲಿ ಅದನ್ನು ವೈರಲ್ ಮಾಡುವ ಹಾಗೂ ಜೀವ ಬೆದರಿಕೆಯೊಡ್ಡುವ ಮೂಲಕ ಬಲಾತ್ಕಾರವಾಗಿ ಹಣ ವಸೂಲಿ ಮಾಡಿದ್ದಾರೆ. ಈಗಾಗಲೇ ₹30 ಲಕ್ಷ ಸುಲಿಗೆ ಮಾಡಿದ್ದಾರೆ' ಎಂದು ದೂರಿನಲ್ಲಿ ಅಬ್ದುಲ್ ನಾಸಿರ್ ತಿಳಿಸಿದ್ದಾರೆ.

ಪ್ರಕರಣದ ತನಿಖೆ ಕೈಗೆತ್ತಿಗೊಂಡಿರುವ ಡಿವೈಎಸ್ಪಿ ಡಾ.ಗಾನ ಪಿ.ಕುಮಾರ್ ನೇತೃತ್ವದ ಪೊಲೀಸರು ಆರೋಪಿಗಳಪೈಕಿಮಂಗಳೂರಿನತನೀಶಾಎಂಬಾಕೆಯನ್ನು ಬಂಧಿಸಿದ್ದಾರೆ. ಪೊಲೀಸರು ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು, ಆಕೆಗೆ ಮಧ್ಯಂತರ ಜಾಮೀನು ನೀಡಿದೆ.

ಕಾಶ್ಮೀರ: ಭದ್ರತಾ ಪಡೆಗಳಿಗೆ ಸವಾಲಾಗಿರುವ 'ಹೈಬ್ರಿಡ್ ಉಗ್ರರು'

ಶ್ರೀನಗರ (ಪಿಟಿಐ): ಉಗ್ರರ ಪಟ್ಟಿಯಲ್ಲಿ ಇಲ್ಲದ 'ಹೈಬ್ರಿಡ್' ಅಥವಾ 'ಅರೆಕಾಲಿಕ' ಭಯೋತ್ಪಾದಕರು ನಡೆಸುತ್ತಿರುವ ದಾಳಿಗಳಿಂದಾಗಿ ಕಾಶ್ಮೀರದಲ್ಲಿ ಭದ್ರತಾ ಪಡೆಗಳು ಹೊಸ ಸವಾಲುಗಳನ್ನು ಎದುರಿಸುವಂತಾಗಿದೆ. ದಾಳಿಯ ಬಳಿಕ ಈ ಉಗ್ರರು ತಮ್ಮ ದೈನಂದಿನ ಚಟುವಟಿಕೆಗಳಲ್ಲಿ ತೊಡಗುತ್ತಿರುವುದರಿಂದ ಅವರನ್ನು ಪತ್ತೆ ಹಚ್ಚುವುದು ಕಷ್ಟಕರವಾಗಿ ಪರಿಣಮಿಸಿದೆ.

ಶ್ರೀನಗರ ಸೇರಿದಂತೆ ಕಣಿವೆ ಪ್ರದೇಶದಲ್ಲಿ ಕಳೆದ ಕೆಲ ವಾರಗಳಲ್ಲಿ ಯುವಕರು ಪಿಸ್ತೂಲ್‌ಗಳಿಂದ ದಾಳಿ ನಡೆಸಿದ್ದಾರೆ. ಇವರ ಹೆಸರುಗಳು ಭದ್ರತಾ ಪಡೆ ಸಿದ್ಧಪಡಿಸಿರುವ ಉಗ್ರಗಾಮಿಗಳ ಪಟ್ಟಿಯಲ್ಲಿ ಇಲ್ಲದಿರುವುದು ತಲೆನೋವಿಗೆ ಕಾರಣವಾಗಿದೆ ಎಂದು ಹಿರಿಯ ಅಧಿಕಾರಿಗಳು ಹೇಳಿದ್ದಾರೆ.

ಈ ಕೃತ್ಯಗಳಿಗೆ ಬಳಕೆಯಾಗುತ್ತಿರುವ ವ್ಯಕ್ತಿಗಳು ಕೃತ್ಯದ ನಂತರ ತಮ್ಮ ಸಾಮಾನ್ಯ ಜೀವನ ಶೈಲಿಯಲ್ಲಿ ತೊಡಗುತ್ತಾರೆ. ಅಲ್ಲದೆ ಇನ್ನೊಂದು ಅಸೈನ್‌ಮೆಂಟ್‌ಗಾಗಿ ಕಾಯುತ್ತಿರುತ್ತಾರೆ ಎಂದು ಭದ್ರತಾ ಪಡೆಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಸಾಂದರ್ಭಿಕ ಚಿತ್ರ

ಈ ರೀತಿಯ ಹೊಸ ಪ್ರವೃತ್ತಿಗಳು ಪಾಕಿಸ್ತಾನ ಮತ್ತು ಅದರ ಗೂಢಚಾರ ಸಂಸ್ಥೆ ಐಎಸ್‌ಐ ನಿರ್ದೇಶನದ ಮೇರೆಗೆ ಕಣಿವೆಯಲ್ಲಿ ಹೆಚ್ಚಾಗುತ್ತಿದೆ ಎಂದು ಅವರು ಮಾಹಿತಿ ನೀಡಿದ್ದಾರೆ.

ಜನಸಾಮಾನ್ಯರು, ವ್ಯಾಪಾರಸ್ಥರಲ್ಲಿ ಭಯ ಉಂಟು ಮಾಡುವುದು ಇವರ ಗುರಿ. ಈ ಮೂಲಕ ಆರ್ಥಿಕ ವ್ಯವಸ್ಥೆಗೆ ಹೊಡೆತ ನೀಡುವ ಉದ್ದೇಶವನ್ನು ಭಯೋತ್ಪಾದಕರು ಹೊಂದಿದ್ದಾರೆ ಎನ್ನುತ್ತಾರೆ ಅವರು.

ಸಾಮಾಜಿಕ ಕಾರ್ಯಕರ್ತರು, ಭದ್ರತೆ ಇಲ್ಲದ ರಾಜಕಾರಣಿಗಳು, ವ್ಯಾಪಾರಿಗಳು, ಕರ್ತವ್ಯದ ಮೇಲಿರದ ಪೊಲೀಸ್ ಸಿಬ್ಬಂದಿ, ಅವರ ಕುಟುಂಬದವರನ್ನು ಪಿಸ್ತೂಲಿನಿಂದ ಹತ್ಯೆ ಮಾಡುವ ಮೂಲಕ ಸಮಾಜದಲ್ಲಿ ಭಯ ಹುಟ್ಟುಹಾಕುವ ನಿಟ್ಟಿನಲ್ಲಿ ಈ ಅರೆಕಾಲಿಕ ಉಗ್ರರು ಕಾರ್ಯ ನಿರ್ವಹಿಸುತ್ತಿದ್ದಾರೆ ಎಂದು ಅವರು ಹೇಳಿದ್ದಾರೆ.

'ಸ್ಲೀಪರ್ ಸೆಲ್‌ಗಳು' ಎಂದೇ ಕರೆಯಲಾಗುವ 'ಹೈಬ್ರಿಡ್' ಉಗ್ರರು, 'ಅರೆಕಾಲಿಕ' ಉಗ್ರರು ನಗರದಲ್ಲಿ ಇದ್ದಾರೆ. ಅವರ ಪ್ರಯತ್ನಗಳನ್ನು ವಿಫಲಗೊಳಿಸುವುದರ ಮೂಲಕ ಅವರನ್ನು ಬಂಧಿಸುವ ನಿಟ್ಟಿನಲ್ಲಿ ಪೊಲೀಸರು ಸಕ್ರಿಯರಾಗಿದ್ದಾರೆ' ಎಂದು ಕಾಶ್ಮೀರದ ಐಜಿಪಿ ವಿಜಯ್ ಕುಮಾರ್ ತಿಳಿಸಿದ್ದಾರೆ.

ಕೂಡ್ಲಿ–ಶೃಂಗೇರಿ ಮಠಕ್ಕೆ ಪೀಠಾಧಿಪತಿ ನೇಮಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಲ್ಲಿನ ಚಾಮರಾಜಪೇಟೆಯಲ್ಲಿರುವ ಕೂಡ್ಲಿ-ಶೃಂಗೇರಿ ಮಠಕ್ಕೆ ಪಂಡಿತ ಜನಾರ್ದನ ಶಾಸ್ತ್ರಿ ಜೋಶಿ ಅವರನ್ನು ನೂತನ ಪೀಠಾಧಿಪತಿಯನ್ನಾಗಿ ನೇಮಕ ಮಾಡಲಾಗಿದೆ.

ಮಠದ ಪ್ರಾಂಗಣದಲ್ಲಿ ಭಾನುವಾರ ನಡೆದ ಸಭೆಯಲ್ಲಿ ಭಕ್ತಾದಿಗಳು ಹಾಗೂ ಆಡಳಿತ ಮಂಡಳಿಯ ಸದಸ್ಯರ ಸಮ್ಮುಖದಲ್ಲಿ ಈ ತೀರ್ಮಾನ ಕೈಗೊಳ್ಳಲಾಗಿದೆ. ಮಠದ ಎಲ್ಲ ವ್ಯವಹಾರ ನಿರ್ವಹಣೆ ಹಾಗೂ ಧಾರ್ಮಿಕ ಕೈಂಕರ್ಯಗಳನ್ನು ಕೈಗೊಳ್ಳುವಂತೆ ಸಭೆಯಲ್ಲಿ ನಿರ್ಧರಿಸಲಾಯಿತು. ಮಠದ ಹಿಂದಿನ ಪೀಠಾಧಿಪತಿ ವಿದ್ಯಾಭಿನವ ಶಂಕರಭಾರತಿ ಸ್ವಾಮೀಜಿ ಅವರು ಈ ವರ್ಷದ ಮೇ ತಿಂಗಳಲ್ಲಿ ಬ್ರಹ್ಮೈಕ್ಯರಾಗಿದ್ದರು.

ಪೀಠಾಧಿಪತಿ ನೇಮಕಕ್ಕೆ ಸಂಬಂಧಿಸಿದಂತೆ ಮಠದ ಆಡಳಿತ ಮಂಡಳಿಯ ಅಧ್ಯಕ್ಷ ರವಿ ದೇಶಪಾಂಡೆ ಪ್ರಸ್ತಾವನೆ ಮಂಡಿಸಿದರು. ಈ ಸಂದರ್ಭದಲ್ಲಿ ಹಿಂದಿನ ಶ್ರೀಗಳು ಒಂದು ವರ್ಷದ ಹಿಂದೆಯೇ ಮುಂದಿನ ಪೀಠಾಧಿಪತಿ ನೇಮಕಕ್ಕೆ ಕುರಿತು ಸಿದ್ಧಪಡಿಸಿದ್ದ ಅಧಿಕೃತ ಪತ್ರ ಹಾಗೂ ನಿಯೋಜಿತ ಪೀಠಾಧಿಪತಿ ಅವರ ತಂದೆ–ತಾಯಿಗೆ ಖುದ್ದಾಗಿ ಬರೆದ ಪತ್ರವನ್ನು ಸಭೆಯ ಮುಂದಿಟ್ಟರು. ಜನಾರ್ದನ ಶಾಸ್ತ್ರಿ ಜೋಶಿ ಅವರನ್ನು ಸರ್ವಾನುಮತದಿಂದ ನೂತನ ಪೀಠಾಧಿಪತಿಯನ್ನಾಗಿ ನೇಮಕ ಮಾಡಲಾಯಿತು. ಜೋಶಿ ಅವರು ವೇದ, ಉಪನಿಷತ್ತು ಹಾಗೂ ಸಂಸ್ಕೃತ ಭಾಷಾ ಬೆಳವಣಿಗೆಗೆ ಅಪಾರ ಸೇವೆ ಸಲ್ಲಿಸಿರುವ ಪಂಡಿತ ಪ್ರಕಾಂಡ ಬಾಲಚಂದ್ರ ಶಾಸ್ತ್ರಿ ಅವರ ಪುತ್ರ ಎಂದು ಪ್ರಕಟಣೆ ತಿಳಿಸಿದೆ.



ಜನಾರ್ದನ ಶಾಸ್ತ್ರಿ ಜೋಶಿ

ಜಿ.ಮಾದೇಗೌಡಗೆ ಅನಾರೋಗ್ಯ: ಐಸಿಯುನಲ್ಲಿ ಚಿಕಿತ್ಸೆ

ಮಂಡ್ಯ: ರೈತ ಹಿತರಕ್ಷಣಾ ಸಮಿತಿ ಅಧ್ಯಕ್ಷ, ಮಾಜಿ ಸಂಸದ ಜಿ.ಮಾದೇಗೌಡ ಅವರು ಅನಾರೋಗ್ಯದಿಂದ ಬಳಲುತ್ತಿದ್ದು, ಬೆಂಗಳೂರಿನ ವಿಕ್ರಂ ಆಸ್ಪತ್ರೆಯ ಐಸಿಯುನಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

94 ವರ್ಷದ ಮಾದೇಗೌಡರು ಶ್ವಾಸಕೋಶ ಸಮಸ್ಯೆಯಿಂದ ಬಳಲುತ್ತಿದ್ದಾರೆ. ಭಾನುವಾರ ಬಿಜೆಪಿ ಮುಖಂಡ ಎಸ್.ಎಂ.ಕೃಷ್ಣ ಆಸ್ಪತ್ರೆಗೆ ಭೇಟಿ ನೀಡಿ ಆರೋಗ್ಯ ವಿಚಾರಿಸಿದರು.

'ತಂದೆ ವಯೋಸಹಜ ಆರೋಗ್ಯ ಸಮಸ್ಯೆಯಿಂದ ಬಳಲುತ್ತಿದ್ದು, ಗುಣಮುಖರಾಗಿ ಬರುತ್ತಾರೆ ಎಂಬ ವಿಶ್ವಾಸವಿದೆ' ಎಂದು ಮಾದೇಗೌಡರ ಪುತ್ರ, ಕಾಂಗ್ರೆಸ್ ಮುಖಂಡ ಮಧು ಮಾದೇಗೌಡ ತಿಳಿಸಿದರು.

ಸಂಕ್ಷಿಪ್ತ ಸುದ್ದಿ

ಬಿಆರ್‌ಟಿಯಲ್ಲಿ ಕರಡಿಗಳ ಕಿತ್ತಾಟ: ವಿಡಿಯೊ ವೈರಲ್

ಚಾಮರಾಜನಗರ: ಯಳಂದೂರಿನಿಂದ ಬಿಳಿಗಿರಿರಂಗನಬೆಟ್ಟಕ್ಕೆ ಹೋಗುವ ರಸ್ತೆಯಲ್ಲಿ ಎರಡು ಕರಡಿಗಳು ಪರಸ್ಪರ ಅಟ್ಟಿಸಿಕೊಂಡು ಹೋಗಿ ಕಿತ್ತಾಡುವ ದೃಶ್ಯ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

ವಾರದ ಹಿಂದೆ ಈ ದೃಶ್ಯವನ್ನು ಚಿತ್ರೀಕರಿಸಲಾಗಿದೆ ಎಂದು ಹೇಳಲಾಗಿದ್ದು, ಬಿಳಿಗಿರಿರಂಗನಬೆಟ್ಟದ ರಸ್ತೆಯಲ್ಲಿರುವ ಮರಪ್ಪನಪಾಳ್ಯ ಎಂಬಲ್ಲಿ ಇದು ನಡೆದಿರುವುದನ್ನು ಅರಣ್ಯ ಇಲಾಖೆ ಅಧಿಕಾರಿಗಳು ಹಾಗೂ ಸ್ಥಳೀಯರು ದೃಢಪಡಿಸಿದ್ದಾರೆ.

ವಿಡಿಯೊದಲ್ಲಿ ಮೂರು ಕರಡಿಗಳು ಕಾಣಿಸುತ್ತವೆ. ಎರಡು ಕರಡಿಗಳು ಜೋರಾಗಿ ಕಿರುಚಾಡುತ್ತಾ ಕಿತ್ತಾಡಿದರೆ, ಇನ್ನೊಂದು ದೂರದಲ್ಲಿ ಕಾಣಿಸುತ್ತದೆ.

ಕಾಫಿ ತೋಟದಲ್ಲಿ ಆನೆ ಸಾವು

ಗೋಣಿಕೊಪ್ಪಲು: ಕುಟ್ಟ ಬಳಿ ಕಾಕೇರ ಕಾಳಪ್ಪ ಅವರ ಕಾಫಿ ತೋಟದಲ್ಲಿ 15 ವರ್ಷದ ಗಂಡಾನೆ ಮೃತಪಟ್ಟಿರುವುದು ಭಾನುವಾರ ಬೆಳಿಗ್ಗೆ ಗೊತ್ತಾಗಿದೆ.

ಆನೆಯ ಮೈಮೇಲೆ ಯಾವುದೇ ಗಾಯದ ಗುರುತುಗಳು ಇಲ್ಲ. ಶನಿವಾರ ರಾತ್ರಿ ಮೃತಪಟ್ಟಿರಬಹುದು. ಮರಣೋತ್ತರ ಪರೀಕ್ಷೆ ವರದಿ ಬಂದ ಬಳಿಕ ಸಾವಿಗೆ ಕಾರಣ ತಿಳಿಯಲಿದೆ ಎಂದು ಶ್ರೀಮಂಗಲ ವಲಯ ಅರಣ್ಯಾಧಿಕಾರಿ ವೀರೇಂದ್ರ ತಿಳಿಸಿದರು.

ಕಾಂಗ್ರೆಸ್ ನಾಯಕರಿಗೆ ಲಕ್ಷದ್ವೀಪ ಭೇಟಿಗೆ ಅನುಮತಿ ನಿರಾಕರಣೆ

ಕೊಚ್ಚಿ: ಲಕ್ಷದ್ವೀಪ ಆಡಳಿತವು ಕೇರಳದ ಕಾಂಗ್ರೆಸ್ ನಾಯಕರಿಗೆ ಲಕ್ಷದ್ವೀಪಕ್ಕೆ ಭೇಟಿ ನೀಡಲು ಶನಿವಾರ ಅನುಮತಿ ನಿರಾಕರಿಸಿದೆ.

'ಲಕ್ಷದ್ವೀಪ ಅಭಿವೃದ್ಧಿ ನಿಯಂತ್ರಣ ಪ್ರಾಧಿಕಾರವನ್ನು ವಿರೋಧಿಸಿ ಲಕ್ಷದ್ವೀಪದಲ್ಲಿ ಪ್ರತಿಭಟನೆಗಳು ನಡೆಯುತ್ತಿವೆ. ಇಂತಹ ಸಂದರ್ಭದಲ್ಲಿ ರಾಜಕೀಯ ಚಟುವಟಿಕೆಗಳು ದ್ವೀಪದ ಶಾಂತಿಯುತ ವಾತಾವರಣವನ್ನು ಹಾಳುಗೆಡವುವ ಸಾಧ್ಯತೆಗಳಿವೆ. ಹಾಗಾಗಿ ಕಾಂಗ್ರೆಸ್ ನಾಯಕರ ಭೇಟಿಗೆ ಅನುಮತಿ ನೀಡಲು ಸಾಧ್ಯವಿಲ್ಲ' ಎಂದು ಹೇಳಿದೆ.

'ಇಸ್ಲಾಂ ಅಪಾಯದಲ್ಲಿದೆ ಎಂಬ ಭಯದ ಸುಳಿ ಬೇಡ'

ಗಾಜಿಯಾಬಾದ್ (ಪಿಟಿಐ): 'ದೇಶದಲ್ಲಿ ಇಸ್ಲಾಂ ಧರ್ಮ ಅಪಾಯದಲ್ಲಿದೆ ಎಂಬಂತಹ ಭಯದ ಸುಳಿಯಲ್ಲಿ ಮುಸ್ಲಿಮರು ಸಿಲುಕಬಾರದು' ಎಂದು ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರ್‌ಎಸ್‌ಎಸ್) ಮುಖ್ಯಸ್ಥ ಮೋಹನ್ ಭಾಗವತ್ ಭಾನುವಾರ ಹೇಳಿದ್ದಾರೆ.



ಇಲ್ಲಿ ನಡೆದ ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಮಾತನಾಡಿದ ಅವರು, 'ಮುಸ್ಲಿಮರು ದೇಶ ತೊರೆಯಬೇಕು ಎಂದು ಹೇಳುವವರು ತಮ್ಮನ್ನು ತಾವು ಹಿಂದೂಗಳು ಎಂದು ಕರೆದುಕೊಳ್ಳಬಾರದು' ಎಂದೂ ಪ್ರತಿಪಾದಿಸಿದರು.

'ಗೋವುಗಳ ರಕ್ಷಣೆ ಹೆಸರಿನಲ್ಲಿ ಮುಸ್ಲಿಮರ ಹತ್ಯೆ ಮಾಡುವವರು ಹಿಂದುತ್ವದ ವಿರೋಧಿಗಳು. ಇದನ್ನು, ಹತ್ಯೆ ಮಾಡುವವರು ಅರ್ಥ ಮಾಡಿಕೊಳ್ಳಬೇಕು. ಆದರೂ, ಕೆಲ ಘಟನೆಗಳಲ್ಲಿ ಹಲವರ ವಿರುದ್ಧ ಸುಳ್ಳು ಪ್ರಕರಣಗಳನ್ನು ದಾಖಲಿಸಲಾಗಿದೆ' ಎಂದರು.

'ಕೆಲವು ರಾಜ್ಯಗಳ ವಿಧಾನಸಭೆಗೆ ಮುಂದಿನ ವರ್ಷ ಚುನಾವಣೆಗಳು ನಡೆಯಲಿವೆ. ಈ ಚುನಾವಣೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಮುಸ್ಲಿಮರನ್ನು ಓಲೈಸಲು ಆರ್‌ಎಸ್‌ಎಸ್ ಮತಬ್ಯಾಂಕ್ ರಾಜಕಾರಣ ಮಾಡುತ್ತಿಲ್ಲ. ಭಾರತದಲ್ಲಿ ಭಾರತೀಯರ ಮೇಲುಗೈ ಇರಬೇಕೇ ಹೊರತು, ಹಿಂದೂಗಳ ಅಥವಾ ಮುಸ್ಲಿಮರದ್ದಲ್ಲ' ಎಂದೂ ಅವರು ಹೇಳಿದರು.

ಪ್ರಶಸ್ತಿಗೆ ಅರ್ಜಿ ಆಹ್ವಾನ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಭಾರತೀಯ ಮನೋವೈದ್ಯಕೀಯ ಸಂಘದ 31ನೇ ವೈಜ್ಞಾನಿಕಮನೋವೈದ್ಯರ ಸಮ್ಮೇಳನದ ಅಂಗವಾಗಿ, ವಿವಿಧ ಪ್ರಶಸ್ತಿಗಳಿಗೆ ವ್ಯಕ್ತಿಗಳು ಹಾಗೂ ಸಂಘ–ಸಂಸ್ಥೆಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಡಾ.ಕೆ.ಎಂ. ಧ್ರುವಕುಮಾರ ಪ್ರಶಸ್ತಿ, ಡಾ.ಎಸ್.ಎಸ್. ಜಯರಾಮ್ ಪ್ರಶಸ್ತಿ , ಸ್ಪಂದನ ಪ್ರಶಸ್ತಿ, ಕರ್ನಾಟಕ ಅಧ್ಯಾಯದ ವಿಶೇಷ ಸೇವಾ ಪ್ರಶಸ್ತಿಗಳಿಗಾಗಿ ಅರ್ಹರು ಅರ್ಜಿ ಸಲ್ಲಿಸಬಹುದು. ಪ್ರಶಸ್ತಿಗೆ ಸಂಬಂಧಿಸಿದ ವಿವರವನ್ನು ಜುಲೈ 31ರೊಳಗೆ ಕಳಿಸಬೇಕು. ಇ–ಮೇಲ್: ipskcoffice@gmail.com

ಮೊಬೈಲ್ 94483 33173.

ಚಿತ್ರಾವಳಿ

ಮಹಾತ್ಮಗಾಂಧಿ ಸೇವಾ ಟ್ರಸ್ಟ್ ವತಿಯಿಂದ ವೈಟ್‌ಫೀಲ್ಡ್‌ನ ಫಿನಿಕ್ಸ್ ಮಾರ್ಕೆಟ್ ಸಿಟಿ ಎದುರು ಹಮ್ಮಿಕೊಂಡಿದ್ದ ನೆರವು ಕಾರ್ಯಕ್ರಮದಲ್ಲಿ ಟ್ರಸ್ಟ್‌ನ ಸಂಸ್ಥಾಪಕ ವಿನಯ್ ಗುರೂಜಿ, ಸಚಿವ ಎಂ.ಟಿ.ಬಿ.ನಾಗರಾಜ್ ಹಾಗೂ ಕರ್ನಾಟಕ ಕರಕುಶಲ ಅಭಿವೃದ್ಧಿ ನಿಗಮದ ಅಧ್ಯಕ್ಷ ಬೇಳೂರು ರಾಘವೇಂದ್ರ ಶೆಟ್ಟಿ ಅವರು ಪೌರಕಾರ್ಮಿಕರಿಗೆ ದಿನಸಿ ಕಿಟ್ ವಿತರಿಸಿದರು. ಇದೇ ವೇಳೆ ಕಾರ್ಮಿಕರ ಆರೋಗ್ಯ ತಪಾಸಣೆ ಕೂಡ ನಡೆಯಿತು.

ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯ ನೂತನ ಅಲ್ಟ್ರಾಸೌಂಡ್ ಘಟಕವನ್ನು ಜಯದೇವ ಹೃದ್ರೋಗ ಸಂಸ್ಥೆಯ ನಿರ್ದೇಶಕ ಡಾ.ಸಿ.ಎನ್. ಮಂಜುನಾಥ್ ಹಾಗೂ ಹೃದ್ರೋಗ ತಜ್ಞ ಡಾ.ಕೆ.ಎಸ್. ರವೀಂದ್ರನಾಥ್ ಭಾನುವಾರ ಉದ್ಘಾಟಿಸಿದರು. ಸಂಸ್ಥೆಯ ನಿರ್ದೇಶಕ ಡಾ.ಸಿ. ರಾಮಚಂದ್ರ ಇದ್ದರು. ಈ ಘಟಕವನ್ನು ಎಸ್. ಹನುಮಾನ್ ಮತ್ತು ಶಾರದಾ ದಂಪತಿಯು ಪುತ್ರ ಡಾ. ಸಂದೀಪ್ ಅವರ ಸ್ಮರಣಾರ್ಥ ನಿರ್ಮಿಸಿದ್ದಾರೆ.

ನಿಧನ ವಾರ್ತೆ

ಮುರಾರಯ್ಯ

ನೆಲಮಂಗಲ: ಪುರಸಭೆ ಮಾಜಿ ಅಧ್ಯಕ್ಷ ಎನ್.ಎಚ್. ಮುರಾರಯ್ಯ(79) ಅವರು ವಯೋಸಹಜ ಕಾಯಿಲೆಯಿಂದ ಭಾನುವಾರ ನಿಧನರಾದರು.

ಗಾಣಿಗ ಸಂಘದಲ್ಲಿ ಸಕ್ರಿಯರಾಗಿದ್ದ ಅವರು, ಗಾಣಿಗರ ಸಮುದಾಯ ಭವನ ನಿರ್ಮಿಸಿದ್ದರು. ಪಟ್ಟಣದ ಅಭಿವೃದ್ಧಿಗೆ ಹಲವು ಯೋಜನೆಗಳನ್ನು ರೂಪಿಸಿ ಕಾರ್ಯಗತಗೊಳಿಸಿದ್ದರು.

ಸ್ವಗ್ರಾಮ ಹುಲ್ಲೇಗೌಡನಹಳ್ಳಿಯಲ್ಲಿ ಸೋಮವಾರ ಬೆಳಿಗ್ಗೆ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ನೀರಿನ ಕೊರತೆ – ಇಳುವರಿ ಕುಸಿಯುವ ಆತಂಕದಲ್ಲಿ ಅನ್ನದಾತ

ಮುಂಗಾರಿನ ಭರವಸೆ: ಹುಸಿಯಾದ ರೈತರ ಆಸೆ!

ಪ್ರಜಾವಾಣಿ ವಾರ್ತೆ

ದಾಬಸ್‌ಪೇಟೆ: ಬೆಂಗಳೂರು ಗ್ರಾಮಾಂತರ ಜಿಲ್ಲೆಯುದ್ದಕ್ಕೂ ಮುಂಗಾರು ಮಳೆ ಆರಂಭದಲ್ಲಿ ಅಬ್ಬರಿಸಿ ರೈತರಲ್ಲಿ ಆಶಾ ಭಾವ ಮೂಡಿಸಿತ್ತು. ದಿಢೀರನೇ ಜಿಲ್ಲೆಯಿಂದ ನಾಪತ್ತೆಯಾಗಿದೆ. ವಾಡಿಕೆಯಷ್ಟು ಮಳೆಯಾಗದ ಕಾರಣ ರೈತರ ಬಂಪರ್ ಕೃಷಿ ಕನಸಿಗೆ ಕಲ್ಲು ಬಿದ್ದಿದೆ.

ವರ್ಷಧಾರೆಯಿಂದ ಹರ್ಷಗೊಂಡ ಜಿಲ್ಲೆಯ ಬಹುತೇಕ ರೈತರು ಮುಸುಕಿನ ಜೋಳ, ತೊಗರಿ, ನೆಲಗಡಲೆ, ಅವರೆ, ಅಲಸಂದೆ ಬೆಳೆಗಳ ಜೊತೆಗೆ ಜಾನುವಾರುಗಳಿಗೆ ಮೇವಿನ ಜೋಳ ಬಿತ್ತನೆ ಮಾಡಿದ್ದರು. ಈಗ ಅವು ನೀರಿನ ಕೊರತೆಯಿಂದ ಬಾಡಿ ಹೋಗುತ್ತಿವೆ.

ಕಳೆದ ವರ್ಷ ಮೇ ತಿಂಗಳಲ್ಲೇ ಮಳೆ ಆರಂಭವಾದ ಕಾರಣ ಬಿತ್ತನೆ ಕಾರ್ಯ ಬೇಗನೆ ಶುರುವಾಗಿತ್ತು. ಬಳಿಕ ವಾಡಿಕೆಗಿಂತಲೂ ಹೆಚ್ಚು ಮಳೆ ಸುರಿದ ಪರಿಣಾಮ ಬೆಳೆಗೆ ನೀರಿನ ಸಮಸ್ಯೆ ಕಾಡಿರಲಿಲ್ಲ. ಆದರೆ, ಈ ಬಾರಿ ಪರಿಸ್ಥಿತಿ ಹಾಗಿಲ್ಲ. ಜೂನ್ ಮೊದಲ ವಾರ ಮುಂಗಾರು ರಾಜ್ಯವನ್ನು ಪ್ರವೇಶಿಸಿತಾದರೂ ಮಳೆ ನಿರೀಕ್ಷೆ ಹುಟ್ಟಿಸಿ ಮಾಯವಾಗಿದೆ.

ಚಂಡಮಾರುತಗಳ ಪರಿಣಾಮ ಮೇ ತಿಂಗಳಲ್ಲಿ ವಾಡಿಕೆಗಿಂತ ಹೆಚ್ಚು ಮಳೆ ಬಿದ್ದಿತ್ತು. ಜೂನ್ ಕಳೆಯುತ್ತಾ ಬಂದರೂ ಜಿಲ್ಲೆಯಲ್ಲಿ ನಿರೀಕ್ಷಿತ ಮಳೆ ಬಾರದನ್ನು ಕಂಡಾಗ ಚಂಡಮಾರುತ ತನ್ನೊಂದಿಗೆ ಮುಂಗಾರು ಮಳೆಯನ್ನೂ ಸೆಳೆದೊಯ್ದಂತೆ ಕಾಣಿಸುತ್ತಿದೆ.

ಜಿಲ್ಲೆಯಾದ್ಯಂತ ಮೋಡ ಕವಿದ ವಾತಾವರಣ ಇದೆಯೇ ಹೊರತು ಈ ಮೋಡಗಳು ಹನಿಯಾಗಿ ಧರೆಗೆ ಸುರಿಯುವ ಸಾಮರ್ಥ್ಯ ಹೊಂದಿಲ್ಲ. ಇದರಿಂದ ಮಳೆಯನ್ನೇ ನಂಬಿ ಬಿತ್ತನೆ ಮಾಡಿದ್ದ ರೈತರು ತಲೆ ಮೇಲೆ ಕೈಹೊತ್ತು ಕೂರುವಂತೆ ಆಗಿದೆ.

ಜಿಲ್ಲೆಯ ನಾಲ್ಕು ತಾಲ್ಲೂಕುಗಳಾದ ನೆಲಮಂಗಲ, ದೇವನಹಳ್ಳಿ, ಹೊಸಕೋಟೆ, ದೊಡ್ಡಬಳ್ಳಾಪುರದಲ್ಲಿ ಅಲಸಂದೆ, ತೊಗರಿ, ನೆಲಗಡಲೆ, ಮುಸುಕಿನ ಜೋಳ, ಅವರೆ ಬಿತ್ತನೆಯಾಗಿದೆ. ಈ ಬೆಳೆಗಳಿಗೆ ಈಗ ನೀರಿನ ಕೊರತೆಯಾಗಿದೆ. ಮುಂದೆ ಮಳೆಯಾದರೂ ಇಳುವರಿ ಮೇಲೆ ಪರಿಣಾಮ ಬೀರುವುದು ಖಚಿತ ಎನ್ನುತ್ತಾರೆ ರೈತರು.

ಮೇವಿನ ಜೋಳ ಮಳೆಯಿಲ್ಲದೆ ಒಣಗುತ್ತಿರುವುದು

ಮೇ– ಜೂನ್ ಆರಂಭದಲ್ಲಿ ಜಿಲ್ಲೆಯಲ್ಲಿ ಮಳೆಯಾಗಿದೆ. ಬಿದ್ದ ಮಳೆಯೂ ಎಲ್ಲೆಡೆ ಹಂಚಿ ಬಿದ್ದಿಲ್ಲ. ಕೆಲವು ಪ್ರದೇಶಗಳಲ್ಲಿ ಚೆನ್ನಾಗಿ ಸುರಿದ ಮಳೆ ಉಳಿದ ಭಾಗಗಳಲ್ಲಿ ಸರಿಯಾಗಿ ಬರದೇ ಹೋಗಿದೆ ಎಂದರು ದೊಡ್ಡಬಳ್ಳಾಪುರದ ರೈತ ಗಂಗರಾಜು.

ನೀರಾವರಿ ಇರುವವರು ಹೆಚ್ಚು ದ್ವಿದಳ ಧಾನ್ಯ ಬೆಳೆಗಳನ್ನು ಬೆಳೆಯದೆ ತರಕಾರಿ, ಹೂ ಬೆಳೆಯುತ್ತಾರೆ. ಜಿಲ್ಲೆಯಲ್ಲಿ ಸಿಂಹಪಾಲು ಮಳೆಯಾಶ್ರಿತರೇ ಹೆಚ್ಚಿದ್ದಾರೆ. ಇವರಿಗಷ್ಟೇ ಸದ್ಯಕ್ಕೆ ಸಮಸ್ಯೆಯಾಗಿದೆ. ಮಳೆಯ ನಿರೀಕ್ಷೆಯಲ್ಲಿ ನಾವಿದ್ದೇವೆ ಅನ್ನುವುದು ನೆಲಮಂಗಲ ತಾಲ್ಲೂಕಿನ ರೈತ ಸೋಮಣ್ಣ ಮಾತು.

ಸಾಮಾನ್ಯವಾಗಿ ಜಿಲ್ಲೆಯಲ್ಲಿ ಮುಸುಕಿನ ಜೋಳ, ತೊಗರಿ ಹಾಗೂ ಅವರೆ ಹೆಚ್ಚು ಬಿತ್ತುತ್ತಾರೆ. ಮಾರುಕಟ್ಟೆಯಲ್ಲಿ ಮುಂಚಿತವಾಗಿ ಬಂದ ಇವುಗಳಿಗೆ ಬೆಲೆ ಇರುತ್ತದೆ. ಇದನ್ನರಿತ ರೈತರು ಪೈಪೋಟಿಗೆ ಬಿದ್ದವರಂತೆ ಪೂರ್ವ ಮುಂಗಾರಿನಲ್ಲಿಯೇ ಬೇಗನೆ ಬಿತ್ತನೆ ಮಾಡುತ್ತಾರೆ. ಬೇಗ ಬಿತ್ತಿದ ಬೆಳೆಗಳಿಗೆ ನೀರಿನ ಕೊರತೆ ಎದುರಾಗಿರುವುದು ರೈತರ ಚಿಂತೆ ಹೆಚ್ಚಿಸಿದೆ.

ಪ್ರಜಾವಾಣಿ LIVE
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರ ಪ್ರಸಾರ

ಸಂವಾದ

2023ರಲ್ಲಿ ಪರಿಶಿಷ್ಟ ಸಮುದಾಯಕ್ಕೆ ರಾಜ್ಯದ ಸಿಎಂ ಹುದ್ದೆ ಸಿಗಬಹುದೆ?

ಸಂವಾದದಲ್ಲಿ ಭಾಗವಹಿಸುವವರು

ಬಿ.ಎಲ್.ಶಂಕರ್, ಅಧ್ಯಕ್ಷ, ಕೆಪಿಸಿಸಿ ಮಾಧ್ಯಮ ವಿಭಾಗ

ಎನ್.ಮಹೇಶ್, ಶಾಸಕ, ಕೊಳ್ಳೇಗಾಲ

ಡಾ.ವಾಸು ಎಚ್.ವಿ, ಸಂಚಾಲಕ, ಜಾಗೃತ ಕರ್ನಾಟಕ

ಸೋಮವಾರ, 5-7-2021 ಸಮಯ- ಮಧ್ಯಾಹ್ನ 2 ರಿಂದ 3

ವಿದ್ಯಾರ್ಥಿಗಳಿಲ್ಲದೇ ಮುಚ್ಚಿದ್ದ ಶಾಲೆ ಮತ್ತೆ ಆರಂಭ

ಪ್ರಜಾವಾಣಿ ವಾರ್ತೆ

ಕುಮಟಾ(ಉತ್ತರ ಕನ್ನಡ): ಮೂರು ವರ್ಷಗಳ ಹಿಂದೆ ವಿದ್ಯಾರ್ಥಿಗಳಿಲ್ಲದೆ ಮುಚ್ಚಿದ್ದ ತಾಲ್ಲೂಕಿನ ಬೊಗರಿಬೈಲ ಕಿರಿಯ ಪ್ರಾಥಮಿಕ ಶಾಲೆ, ಗ್ರಾಮಸ್ಥರು ನಡೆಸಿದ ಪ್ರಯತ್ನದಿಂದಾಗಿ ಈ ವರ್ಷ ಪುನರಾರಂಭಗೊಂಡಿದೆ.

ಬೊಗರಿಬೈಲ, ಕಲ್ಲಬ್ಬೆ ಗ್ರಾಮ ಪಂಚಾಯ್ತಿಗೆ ಸೇರುವ 45 ಮನೆಗಳಿರುವ ಪುಟ್ಟ ಊರು. ಕಳೆದ 60 ವರ್ಷಗಳ ಹಿಂದಿನಿಂದ ಊರಿನಲ್ಲಿ ಶಾಲೆ ನಡೆಯುತ್ತಿತ್ತು. ಈಗ ಊರಿನ ಮೂವರು ಮಕ್ಕಳು ಶಾಲೆಗೆ ಪ್ರವೇಶ ಪಡೆಯಲು ಮುಂದೆ ಬಂದಿರುವುದರಿಂದ ಶಾಲೆ ಪುನರಾರಂಭಗೊಂಡಿದೆ.

ಶಾಲಾಭಿವೃದ್ಧಿ ಸಮಿತಿ ಮಾಜಿ ಅಧ್ಯಕ್ಷ ಜಗದೀಶ ನಾಯ್ಕ ಮಾಹಿತಿ ನೀಡಿ, 'ವಿದ್ಯಾರ್ಥಿಗಳಿಲ್ಲದೆ ಊರ ಶಾಲೆ ಮುಚ್ಚಿದಾಗ ಎಲ್ಲರಿಗೂ ನೋವಾಗಿತ್ತು. ಊರಿನ ಮಕ್ಕಳನ್ನು ಕನ್ನಡ ಶಾಲೆಗೆ ಸೇರಿಸುವಂತೆ ಪೋಷಕರ ಮನವೊಲಿಸಿದಾಗ ಅವರು ಸಹಕಾರ ನೀಡಿದರು' ಎಂದರು.

> **ಸರ್ಕಾರದ ನೀತಿಯಂತೆ ಶಾಲೆ ಆರಂಭಕ್ಕೆ ಅವಕಾಶ ಲಭಿಸಿದೆ. ಮುಚ್ಚಿದ ಕನ್ನಡ ಶಾಲೆ ಮತ್ತೆ ಆರಂಭಿಸಲು ಗ್ರಾಮಸ್ಥರು ನಡೆಸಿದ ಪ್ರಯತ್ನ ಶ್ಲಾಘನೀಯ**
> **ಆರ್.ಎಲ್. ಭಟ್ಟ,** ಕ್ಷೇತ್ರಶಿಕ್ಷಣಾಧಿಕಾರಿ

ಶಿಕ್ಷಕ ಪಿ.ಟಿ. ನಾಯ್ಕ, 'ಯುವಕರು ಸ್ವಯಂ ಪ್ರೇರಣೆಯಿಂದ ಶಾಲಾ ಆವರಣ ಶುಚಿಗೊಳಿಸಿ ಕಾಂಪೌಂಡ್, ನಾಮಫಲಕ, ಧ್ವಜ ಕಟ್ಟೆಗೆ ಬಣ್ಣ ಬಳಿದು ಸುಂದರಗೊಳಿಸಿದ್ದಾರೆ. ಶಾಲೆಯ ಹೆಸರಿಗೆ ಎಂಟು ಗುಂಟೆ ಜಾಗವಿದ್ದು, ಬಿಸಿಯೂಟ ಕೋಣೆ, ಶೌಚಾಲಯ, ಕುಡಿಯುವ ನೀರಿನ ಬಾವಿ ಸೌಲಭ್ಯವಿದೆ' ಎಂದರು.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್	124.80	91.20	1,432	4,637
ಹಾರಂಗಿ	2,859	2,841.99	400	80
ಕಬಿನಿ	2,284	2,276	1,200	700
ಹೇಮಾವತಿ	2,922	2,896.06	1,198	500
ಲಿಂಗನಮಕ್ಕಿ	1,819	1,784.70	2,166	ಶೂನ್ಯ
ಸೂಪಾ (ಮೀ)	564	538.54	3,973	8,031
ಮಾಣಿ	594.36	573.70	488	ಶೂನ್ಯ
ತುಂಗಭದ್ರಾ(ಅಡಿ)	1,633	1,609.33	3,127	267
ಮಲಪ್ರಭಾ	2,079.50	2,062.90	692	194
ಘಟಪ್ರಭಾ	2,175	2,135.26	2,240	127
ಭದ್ರಾ	186	155.2	925	80
ಆಲಮಟ್ಟಿ (ಮೀ)	519.60	517.45	10,451	10,451
ನಾರಾಯಣಪುರ (ಮೀ)	492.25	490.33	10,000	00

*ನೆಲಮಟ್ಟದಿಂದ

'ಸಂಗೀತ ಹಿತವಾದ ಅಡುಗೆಯ ಹಾಗೆ'

ಪ್ರಜಾವಾಣಿ ವಾರ್ತೆ

ಪ್ರಜಾವಾಣಿ ಆಲದಮರ

ವಿ. ಮನೋಹರ್

ಆಲದಮರ (ಪ್ರಜಾವಾಣಿ ಕ್ಲಬ್ ಹೌಸ್): ಸಂಗೀತ ಅಂದರೆ ಅದೊಂಥರಾ ಅಡುಗೆ ಮಾಡಿದ ಹಾಗೆ. ಅದು ಹಿತ ಆಗಬೇಕು. ಸಂಗೀತ ಪ್ರತಿ ಜೀವರಾಶಿಗೂ ಹಿತ ನೀಡುತ್ತದೆ.

ಹೀಗೆಂದು ಸಂಗೀತದ ಸರಿಗಮದ ಆಯಾಮಗಳನ್ನು ಪ್ರಜಾವಾಣಿ ಕ್ಲಬ್‌ಹೌಸ್‌ನ 'ಆಲದಮರ'ದ ಅಡಿಯಲ್ಲಿ ಭಾನುವಾರ ಹರಡಿದವರು ಸಂಗೀತ ನಿರ್ದೇಶಕ ವಿ. ಮನೋಹರ್.

'ಆಲದಮರ'ದಡಿ ವಿ.ಮನೋಹರ್ ಅವರ ಸಂಗೀತ, ವ್ಯಂಗ್ಯಚಿತ್ರ ರಚನೆ, ಗೀತೆರಚನೆ, ನಿರ್ದೇಶನ ಇತ್ಯಾದಿ ಹಲವು ಮುಖಗಳು ಬಿಳಲುಗಳಂತೆ ಇಳಿಬಿದ್ದವು. ಆಲದಮರದ 'ಕಟ್ಟೆ'ಯ ಕೆಳಗೆ ನೂರಾರು ಕೇಳುಗರು ಮನೋಹರ್ ಅವರ ಮಾತಿಗೆ ಕಿವಿಯಾದರು. ಮನೋಹರ್ ಅವರಂತೂ ಪ್ರಶ್ನೆಗಳಿಗೆ ಜಾಣ್ಮೆ ಮತ್ತು ತೂಕದ ಪ್ರತಿಕ್ರಿಯೆ ನೀಡಿದರು.

'ಅಪ್ಪ ತಂದು ಕೊಡುತ್ತಿದ್ದ ಚಂದಮಾಮ, ಬಾಲಮಿತ್ರ ಓದುವಿಕೆಯ ಹುಚ್ಚು ಹಿಡಿಸಿತು. ಅವರು ತಂದ ಬಣ್ಣದ ಕಡ್ಡಿಗಳಿಂದ ಮನೆ ತುಂಬಾ ಚಿತ್ರ ಬಿಡಿಸುತ್ತಿದ್ದೆ. ಸುಧಾ ಪತ್ರಿಕೆಯಲ್ಲಿ ಜಿ.ಪಿ. ರಾಜರತ್ನಂ ಅವರ ಕವಿತೆಗಳು, ದಿನಕರ ದೇಸಾಯಿ ಅವರ ಚುಟುಕುಗಳನ್ನು ಓದುತ್ತಿದ್ದೆ... ಒಟ್ಟಿನಲ್ಲಿ ಓದು ನಮ್ಮನ್ನು ಪಕ್ವಗೊಳಿಸುತ್ತದೆ' ಎಂದರು.

'ಈ ಹಿಂದೆ ರೆಕಾರ್ಡಿಂಗ್‌ಗೆ ಇದ್ದ ಪರದಾಟವೇ ಬೇರೆ. ಹತ್ತಾರು ಸಂಗೀತ ಉಪಕರಣಗಳು, ಕಡಿಮೆ ಸಂಖ್ಯೆಯ ಮೈಕ್... ಒಂದರ ನಾದವನ್ನು ಇನ್ನೊಂದು ಸದ್ದು ನುಂಗಿಹಾಕದಂತೆ ನೋಡಿಕೊಳ್ಳಬೇಕಾದ ಸವಾಲು ಸಣ್ಣದೇನಲ್ಲ. ಅಂದಿನ ಸಂಗೀತ ನಿರ್ದೇಶಕರು ಚಿತ್ರದ ಹಿನ್ನೆಲೆ ಸಂಗೀತಕ್ಕೆ (ಸಂಭಾಷಣೆಯ ನಡುವೆ ಬರುವ ಸಂಗೀತ) ಹೆಚ್ಚು ಒತ್ತು ಕೊಡುತ್ತಿದ್ದರು...' ಎಂದು ಅಂದಿನ ತಾಂತ್ರಿಕ ವ್ಯವಸ್ಥೆಯನ್ನು ಸಂಕ್ಷಿಪ್ತವಾಗಿ ತೆರೆದಿಟ್ಟರು.

'ಈಗ ಹೊಸಬರು ಹೊಸ ಶೈಲಿಯ ಸಂಗೀತ ಅರಸಿ ಬರುತ್ತಾರೆ. ಉದಾಹರಣೆಗೆ ರ್‍ಯಾಪ್. ಸುಮ್ಮನೆ ಶಬ್ದ ಜೋಡಿಸಿ ಏನೇನೋ ಹೇಳಿದ ಮಾತ್ರಕ್ಕೆ ರ್‍ಯಾಪ್ ಆಗದು. ಅಲ್ಲೂ ಒಂದು ಗಟ್ಟಿತನ ಬೇಕು' ಎಂದರು.

ದೇಶದ ಪ್ರಮುಖ ಸಂಗೀತ ನಿರ್ದೇಶಕರ ಪ್ರಯೋಗಶೀಲತೆಯನ್ನು ನೆನಪಿಸಿದ ಮನೋಹರ್, 'ದೇಶದಲ್ಲಿ ಆರ್.ಡಿ. ಬರ್ಮನ್ ಅವರು ಗಾಜಿನ ಬಾಟಲಿ, ಗ್ಲಾಸ್‌ನಿಂದಲೂ ಸಂಗೀತ ಹೊರಹೊಮ್ಮಿಸಬಹುದು ಎಂಬುದನ್ನು ಪ್ರಯೋಗಿಸಿದ್ದರು. ಈಗ ಎ.ಆರ್.ರೆಹಮಾನ್ ಅವರು ಸಂಗೀತದ ಡಿಜಿಟಲ್ ಯುಗದಲ್ಲಿ ಸೌಂಡ್ ಟ್ರೆಂಡನ್ನೇ ಬದಲಿಸಿದ್ದಾರೆ' ಎಂದರು.

ಎಚ್.ಎಸ್.ರೇಣುಕಾರಾಧ್ಯ ಅವರ ಪ್ರಶ್ನೆಗೆ ಉತ್ತರಿಸಿದ ಮನೋಹರ್, 'ಹೊಸ ತಲೆಮಾರಿನಲ್ಲಿ ಸಾಹಿತ್ಯದ ಭರವಸೆಗಳೇ ಕಾಣುತ್ತಿಲ್ಲ. ಇದಕ್ಕೆ ಆಳವಾದ ಜ್ಞಾನಬೇಕು. ದಾಸರ ಕೀರ್ತನೆ, ವಚನ, ಜನಪದ, ಕವನಗಳು ಇತ್ಯಾದಿ ಎಲ್ಲವನ್ನೂ ಓದಬೇಕು. ಹಂಸಲೇಖ, ನಾಗೇಂದ್ರ ಪ್ರಸಾದ್, ಯೋಗರಾಜ್ ಭಟ್, ಜಯಂತ ಕಾಯ್ಕಿಣಿ ಇಂಥ ಕೆಲವೇ ಕೆಲವರು ಇದ್ದಾರೆ. ಆದರೆ, ಹೊಸಬರಲ್ಲಿ ಓದುವಿಕೆ ಇಲ್ಲವಾಗಿದೆ' ಎನ್ನುವಲ್ಲಿ ಅವರಲ್ಲೊಂದು ವಿಷಾದ ಕಾಣಿಸಿತು.

'ಮಹಿಳೆಯರನ್ನು ಸಿನಿಮಾ ಸಾಹಿತ್ಯದಿಂದ ದೂರ ಇಡುವ ಮಾತೇ ಇಲ್ಲ. ಅವರೂ ಬಂದರೆ ಈ ಕ್ಷೇತ್ರ ಇನ್ನಷ್ಟು ಗಟ್ಟಿಯಾಗುತ್ತದೆ' ಎಂದು ಹೇಳಲು ಮರೆಯಲಿಲ್ಲ.

ಹೀಗೆ ಮಾತು ಮುಂದುವರಿಯುತ್ತಲೇ ಇತ್ತು. ವತ್ಸಲಾ ಮೋಹನ್, ಪಿಚ್ಚಳ್ಳಿ ಶ್ರೀನಿವಾಸ್, ರಮೇಶ್, ಜೋಗಿ, ಜಿ.ಎನ್.ಮೋಹನ್, ಎಚ್.ಎಲ್.ಪುಷ್ಪಾ, ಭಾರತಿ ಹೆಗಡೆ ಸೇರಿದಂತೆ ನೂರಾರು ಕೇಳುಗರು ಭಾಗವಹಿಸಿದ್ದರು. ಪ್ರಜಾವಾಣಿ ಸಹಸಂಪಾದಕ ಬಿ.ಎಂ. ಹನೀಫ್ ಸಂವಾದ ನಡೆಸಿಕೊಟ್ಟರು. ಚಿನ್ಮಯಿ ಅವರ 'ಕೇಳಯ್ಯಾ ಕ್ವಾಟೆ ಲಿಂಗವೇ...' ಹಾಡಿನೊಂದಿಗೆ ಗೋಷ್ಠಿಗೆ ತೆರೆ ಬಿತ್ತು.

'ತೈಲ ಬೆಲೆ ಏರಿಕೆಗೆ ವಿರೋಧ ಇದೇ 7ಕ್ಕೆ ಸೈಕಲ್ ಜಾಥಾ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆ ವಿರೋಧಿಸಿ ರಾಜ್ಯದಾದ್ಯಂತ ಇದೇ 7ರಂದು ಸೈಕಲ್ ಜಾಥಾ ಹಮ್ಮಿಕೊಳ್ಳಲಾಗಿದ್ದು, ಬೆಂಗಳೂರು ಕೇಂದ್ರ ಜಿಲ್ಲಾ ಕಾಂಗ್ರೆಸ್ ವತಿಯಿಂದಲೂ ಜಿಲ್ಲೆಯ ಎಲ್ಲ ವಿಧಾನಸಭಾ ಕ್ಷೇತ್ರಗಳಲ್ಲಿ ಜಾಥಾ ನಡೆಯಲಿದೆ' ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹ್ಮದ್ ತಿಳಿಸಿದರು.

ಕೆಪಿಸಿಸಿ ಕಚೇರಿಯಲ್ಲಿ ಭಾನುವಾರ ನಡೆದ ಕೇಂದ್ರ ಜಿಲ್ಲಾ ಕಾಂಗ್ರೆಸ್ ಕಾರ್ಯಕಾರಿಣಿ ಸಭೆಯ ಬಳಿಕ ಮಾತನಾಡಿದ ಅವರು, 'ಎಐಸಿಸಿಯ ನಿರ್ದೇಶನದಂತೆ ಕೋವಿಡ್ ಸಂಕಷ್ಟದ ಸಮಯದಲ್ಲಿ ಜನರಿಗೆ ನೆರವಾಗಲು ಪಕ್ಷ ಹಮ್ಮಿಕೊಂಡಿರುವ 'ಸಹಾಯ ಹಸ್ತ' ಕಾರ್ಯಕ್ರಮದಲ್ಲಿ ಎಲ್ಲರೂ ಭಾಗಿಯಾಗಬೇಕು' ಎಂದೂ ಮನವಿ ಮಾಡಿದರು.

ಸಲೀಂ ಅಹ್ಮದ್

'ತೈಲ ದರ ಇಳಿಕೆ ಮಾಡುವಂತೆ ಒತ್ತಾಯಿಸಲು ಸೈಕಲ್ ಜಾಥಾ ಹಮ್ಮಿಕೊಳ್ಳಲಾಗಿದೆ. ಪಕ್ಷದ ಎಲ್ಲ ನಾಯಕರು ಸೈಕಲ್ ಏರಿ ಜಾಥಾದಲ್ಲಿ ಭಾಗವಹಿಸಲಿದ್ದಾರೆ. ಆ ಮೂಲಕ, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಭ್ರಷ್ಟಾಚಾರ ಹಾಗೂ ಜನವಿರೋಧಿ ನೀತಿಗಳ ವಿರುದ್ಧ ಜನಜಾಗೃತಿ ಮೂಡಿಸಲಾಗುವುದು' ಎಂದು ಅವರು ವಿವರಿಸಿದರು.

'ಕೇಂದ್ರ ಮತ್ತು ರಾಜ್ಯ ಸರ್ಕಾರ ಜನಸಾಮಾನ್ಯರಿಗೆ ನೆರವಾಗಲು ವಿಫಲವಾಗಿವೆ. ಪೆಟ್ರೋಲ್, ಡೀಸೆಲ್ ಹಾಗೂ ಅಡುಗೆ ಅನಿಲ ದರ ಹಾಗೂ ಇನ್ನಿತರ ಅಗತ್ಯ ವಸ್ತುಗಳ ಬೆಲೆಯೇರಿಕೆಯಿಂದ ಜನರು ರೋಸಿ ಹೋಗಿದ್ದಾರೆ. ಎರಡೂ ಸರ್ಕಾರಗಳಿಂದ ಜನರು ಭ್ರಮನಿರಸನಗೊಂಡಿದ್ದಾರೆ' ಎಂದರು.

ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾ ರೆಡ್ಡಿ, ವಿಧಾನಪರಿಷತ್ ವಿರೋಧ ಪಕ್ಷದ ಮುಖ್ಯ ಸಚೇತಕ ನಾರಾಯಣ ಸ್ವಾಮಿ, ಶಾಸಕರಾದ ರಿಜ್ವಾನ್ ಅರ್ಷದ್, ವೀಕ್ಷಕರಾದ ಚಂದ್ರಶೇಖರ್, ಕೆ.ಸಿ ದಿನೇಶ್, ಡಿಸಿಸಿ ಅಧ್ಯಕ್ಷ ಶೇಖರ್, ಪದ್ಮಾವತಿ, ಸಂಪತ್ ರಾಜ್ ಇದ್ದರು.

'ದುರಹಂಕಾರದ ಮದ್ದನ್ನು ಮೋದಿಗೆ ನೀಡಬೇಕು'


ಆರ್. ಧ್ರುವ ನಾರಾಯಣ

ಮೈಸೂರು: 'ದುರಹಂಕಾರದ ಔಷಧವನ್ನು ಮೊದಲು ಪ್ರಧಾನಿ ನರೇಂದ್ರ ಮೋದಿ ಅವರಿಗೆ ನೀಡಬೇಕು' ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್. ಧ್ರುವನಾರಾಯಣ ಭಾನುವಾರ ಇಲ್ಲಿ ತಿರುಗೇಟು ನೀಡಿದರು.

ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರು, 'ದುರಹಂಕಾರದ ಔಷಧವನ್ನು ದೇಶದಲ್ಲಿ ಇನ್ನೂ ಕಂಡು ಹಿಡಿದಿಲ್ಲ' ಎಂಬುದಾಗಿ ರಾಹುಲ್ ಗಾಂಧಿ ಕುರಿತು ನೀಡಿರುವ ಹೇಳಿಕೆಗೆ ಆಕ್ರೋಶ ವ್ಯಕ್ತಪಡಿಸಿದ ಅವರು, ಕೂಡಲೇ ಈ ಹೇಳಿಕೆಯನ್ನು ವಾಪಸ್ ಪಡೆಯಬೇಕು ಎಂದು ಸುದ್ದಿಗೋಷ್ಠಿಯಲ್ಲಿ ಒತ್ತಾಯಿಸಿದರು.

ಸುದ್ದಿ 2 ನಿಮಿಷ

ಸಾರಿಗೆ ನೌಕರರಿಗೆ ಹಂತಹಂತವಾಗಿ ಪರಿಹಾರ ವಿತರಣೆ: ಸವದಿ

ಅಥಣಿ (ಬೆಳಗಾವಿ): ಕೋವಿಡ್‌ನ ಮೊದಲ ಅಲೆಯ ಸಂದರ್ಭದಲ್ಲಿ ಸಾರಿಗೆ ನೌಕರರು ಕೋವಿಡ್‌ನಿಂದ ಮೃತಪಟ್ಟರೆ ₹30 ಲಕ್ಷ ನೀಡಲಾಗುವುದೆಂದು ಘೋಷಿಸಲಾಗಿತ್ತು. ಅದರಂತೆ ಹಂತ ಹಂತವಾಗಿ ಪರಿಹಾರ ವಿತರಿಸಲಾಗುವುದು ಎಂದು ಸಾರಿಗೆ ಸಚಿವ ಲಕ್ಷ್ಮಣ ಸವದಿ ತಿಳಿಸಿದರು.

ಅವರು ತಾಲ್ಲೂಕಿನ ಯಕ್ಕಂಚ್ಚಿ ಗ್ರಾಮದಲ್ಲಿ ಭಾನುವಾರ ಹುಲಿಕೋಡಿ ಕೆರೆಗೆ ಬಾಗಿನ ಅರ್ಪಿಸಿ ಮಾಧ್ಯಮಗಳ ಜೊತೆ ಮಾತನಾಡಿದರು.

ಕೋವಿಡ್‌ನ ಮೊದಲ ಅಲೆಯಲ್ಲಿ ಬಹಳಷ್ಟು ನೌಕರರು ಪ್ರಾಣ ಕಳೆದುಕೊಂಡಿದ್ದಾರೆ. ಚಾಲಕರು, ನಿರ್ವಾಹಕರು ಸೇವಾನಿರತ ಸಮಯದಲ್ಲಿ ಕೋವಿಡ್ ದೃಢಪಟ್ಟು ಮೃತಪಟ್ಟರೆ ಅವರ ಕುಟುಂಬದವರಿಗೆ ಮಾತ್ರ ಪರಿಹಾರ ವಿತರಣೆ ಮಾಡಲಾಗುವುದು. ಮನೆಯಲ್ಲಿದ್ದು ಮೃತರಾದ ನೌಕರರ ಕುಟುಂಬಗಳಿಗೆ ಪರಿಹಾರ ನೀಡಲು ಪರಿಶೀಲಿಸಲಾಗುವುದು ಎಂದು ಸಚಿವರು ಸ್ಪಷ್ಟಪಡಿಸಿದರು.

ಕೋವಿಡ್‌ನಿಂದ ಮೃತಪಟ್ಟ ರೈತರ ಸಾಲ ಮನ್ನಾಕ್ಕೆ ಚಿಂತನೆ: ಹರೀಶ್ ಗೌಡ

ಮೈಸೂರು: 'ರಾಜ್ಯದಲ್ಲಿ ಕೋವಿಡ್‌ನಿಂದ ಮೃತಪಟ್ಟಿರುವ ರೈತರ ಸಾಲಮನ್ನಾ ಮಾಡಲು ಚಿಂತನೆ ನಡೆದಿದೆ' ಎಂದು ಅಪೆಕ್ಸ್ ಬ್ಯಾಂಕ್ ಉಪಾಧ್ಯಕ್ಷ ಜಿ.ಡಿ.ಹರೀಶ್ ಗೌಡ ಭಾನುವಾರ ತಿಳಿಸಿದರು.

'ರಾಜ್ಯದ 21 ಜಿಲ್ಲಾ ಸಹಕಾರ ಕೇಂದ್ರ (ಡಿಸಿಸಿ) ಬ್ಯಾಂಕ್‌ಗಳಲ್ಲಿ ಬೆಳೆ ಸಾಲ ಪಡೆದಿರುವ ರೈತರು, 2020ರ ಏ.1ರಿಂದ 2021ರ ಜೂನ್ 30ರವರೆಗೆ ಕೋವಿಡ್‌ನಿಂದ ಮೃತಪಟ್ಟಿದ್ದರೆ; ಅವರ ₹1ಲಕ್ಷದವರೆಗಿನ ಸಾಲವನ್ನು ಮನ್ನಾ ಮಾಡಬೇಕು ಎಂದು ಬೆಂಗಳೂರಿನಲ್ಲಿ ಜುಲೈ 2ರಂದು ನಡೆದ ಅಪೆಕ್ಸ್ ಬ್ಯಾಂಕ್ ಸಭೆಯಲ್ಲಿ ಅಧ್ಯಕ್ಷ, ಶಾಸಕ ಬೆಳ್ಳಿ ಪ್ರಕಾಶ್ ಅವರನ್ನು ಒತ್ತಾಯಿಸಿದ್ದೇವೆ' ಎಂದು ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

'ಅಧ್ಯಕ್ಷರು ಸಹಮತ ವ್ಯಕ್ತಪಡಿಸಿದ್ದಾರೆ. ರಾಜ್ಯದ ಮಾಹಿತಿ ಸಂಗ್ರಹಿಸಿದ ಬಳಿಕ ಸಕಾರಾತ್ಮಕ ನಿರ್ಧಾರ ತೆಗೆದುಕೊಳ್ಳಲಾಗುವುದು. ಅಪೆಕ್ಸ್ ಬ್ಯಾಂಕ್, ಸಾಲಮನ್ನಾಗೆ ಮುಂದಾಗದಿದ್ದರೆ ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್, ತನ್ನ ವ್ಯಾಪ್ತಿಯಲ್ಲಿ ಕೋವಿಡ್‌ನಿಂದ ಮೃತಪಟ್ಟ ರೈತರ ಸಾಲವನ್ನು ಮನ್ನಾ ಮಾಡಲಿದೆ' ಎಂದು ಎಂಸಿಡಿಸಿಸಿ ಬ್ಯಾಂಕ್‌ನ ಅಧ್ಯಕ್ಷರೂ ಆಗಿರುವ ಹರೀಶ್ ಗೌಡ ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

'ಮೈಸೂರು, ಚಾಮರಾಜನಗರ ಜಿಲ್ಲೆಯಲ್ಲಿ ಎಂಸಿಡಿಸಿಸಿ ಬ್ಯಾಂಕ್‌ನಿಂದ ಸಾಲ ಪಡೆದಿರುವ 280 ಸದಸ್ಯರು ಕೋವಿಡ್‌ನಿಂದ ಮೃತಪಟ್ಟಿದ್ದಾರೆ. ಇವರು ₹ 2.10 ಕೋಟಿ ಸಾಲ ಪಡೆದಿದ್ದು, ಅಪೆಕ್ಸ್ ಬ್ಯಾಂಕ್‌ನ ನಿರ್ಧಾರದ ಬಳಿಕ, ನಮ್ಮ ನಿಲುವು, ಎಷ್ಟು ಮೊತ್ತದ ಸಾಲಮನ್ನಾ ಮಾಡುತ್ತೇವೆ ಎಂಬುದನ್ನು ಪ್ರಕಟಿಸುತ್ತೇವೆ' ಎಂದು ಪ್ರತಿಕ್ರಿಯಿಸಿದರು.

ವಿವಿಧೆಡೆ ಜೋರು ಮಳೆ

ಮೈಸೂರು: ಮೈಸೂರು ನಗರ ಸೇರಿದಂತೆ ಜಿಲ್ಲೆಯ ಹಲವು ಭಾಗಗಳಲ್ಲಿ ಭಾನುವಾರ ಸಂಜೆ ಜೋರು ಮಳೆಯಾಗಿದೆ.

ನಗರದಲ್ಲಿ ಗುಡುಗು ಸಹಿತ ತಡ ರಾತ್ರಿಯವರೆಗೆ ಮಳೆ ಸುರಿಯುತ್ತಲೇ ಇತ್ತು. ಹೆಬ್ಬಾಳ ಭಾಗದಲ್ಲಿ ಬಿರುಸಿನಿಂದ ಮಳೆಯಾಯಿತು. ನಂಜನಗೂಡು, ಹುಣಸೂರು ತಾಲ್ಲೂಕಿನ ಬಿಳಿಕೆರೆ, ಮೈಸೂರು ತಾಲ್ಲೂಕಿನ ವರುಣಾ ಭಾಗಗಳಲ್ಲಿ ಸಾಧಾರಣ ಮಳೆಯಾಗಿದೆ. ಚಾಮರಾಜನಗರ ಜಿಲ್ಲೆಯ ವಿವಿಧ ಕಡೆಗಳಲ್ಲಿ ಮಳೆ ಸುರಿಯಿತು.

ಕಲಬುರ್ಗಿಯಲ್ಲಿ ಮಳೆ: ಕಲಬುರ್ಗಿ ನಗರ ಮತ್ತು ಹೊರವಲಯದಲ್ಲಿ ಭಾನುವಾರ ಸಂಜೆ ಅರ್ಧ ಗಂಟೆಗೂ ಹೆಚ್ಚು ಹೊತ್ತು ಮಳೆಯಾಯಿತು.

ಪೈಪ್‌ಲೈನ್‌ನಲ್ಲಿ ಸಿಲುಕಿದ್ದ ರೈತನ ರಕ್ಷಣೆ

ಪ್ರಜಾವಾಣಿ ವಾರ್ತೆ

ರಾಮನಗರ: ತಾಲ್ಲೂಕಿನ ಕೊಂಕಾಣಿದೊಡ್ಡಿ ಸಮೀಪ ಪೈಪ್‌ಲೈನ್ ಒಳಗೆ ಸಿಲುಕಿದ್ದ ರೈತನನ್ನು ಅಗ್ನಿಶಾಮಕ ದಳದ ಸಿಬ್ಬಂದಿ ಭಾನುವಾರ ಕ್ಷಿಪ್ರ ಕಾರ್ಯಾಚರಣೆ ನಡೆಸಿ ರಕ್ಷಣೆ ಮಾಡಿದ್ದಾರೆ.

ಸಿಂಗ್ರಾಬೋವಿದೊಡ್ಡಿ ನಿವಾಸಿ ರಾಜಣ್ಣ (50) ರಕ್ಷಣೆಗೆ ಒಳಗಾದವರು. ಇವರ ಹೊಲದ ಮಧ್ಯೆ ಬೆಂಗಳೂರು-ಮೈಸೂರು ಹೆದ್ದಾರಿಯ ಬೈಪಾಸ್ ರಸ್ತೆ ಹಾದುಹೋಗಿದೆ. ಮಳೆ ನೀರು ಹರಿದು ಹೋಗಲು ಈ ಬೈಪಾಸ್ ಅಡಿ ಬೃಹತ್ತಾದ ಪೈಪ್ ಗಳನ್ನು ಅಳವಡಿಸಲಾಗಿದೆ.

ರಾಜಣ್ಣ ಹೊಲದ ಒಂದು ಭಾಗದಲ್ಲಿ ಕೊಳವೆ ಬಾವಿ ಕೊರೆಯಿಸಿದ್ದು, ಆ ಕೊಳವೆಬಾವಿ ನೀರನ್ನು ರಸ್ತೆಯ ಕೆಳಗಿರುವ ಪೈಪ್‌ಲೈನ್ ಮುಖಾಂತರ ಮತ್ತೊಂದು ಬದಿಯಲ್ಲಿ ಇರುವ ಹೊಲಕ್ಕೆ ಸಾಗಿಸಲು ನಿರ್ಧರಿಸಿದ್ದರು. ಈ ಕೆಲಸಕ್ಕಾಗಿ ಅವರು ಪೈಪ್‌ಲೈನ್ ಒಳಗೆ ನುಸುಳಿದ್ದರು. ಸುಮಾರು 4 ಅಡಿ ಅಗಲ, 200 ಅಡಿ ಉದ್ದದ ಪೈಪ್‌ಲೈನ್‌ನ ಅರ್ಧಕ್ಕೆ ಸಾಗುತ್ತಲೇ ಅದರ ಒಳಗೆ ಸಂಗ್ರಹವಾಗಿದ್ದ ಮಣ್ಣಿನಲ್ಲಿ ಸಿಲುಕಿದ್ದರು.

ಅಗ್ನಿಶಾಮಕ ದಳದ ಸಿಬ್ಬಂದಿ ಪೈಪ್‌ಲೈನ್ ಒಡೆದು ಒಳಗೆ ಹೋಗುತ್ತಿರುವುದು

ಅವರ ಸಹಾಯಕ್ಕಾಗಿ ಹೊರಗೆ ನಿಂತಿದ್ದ ಮಗ ಹಾಗೂ ಸ್ನೇಹಿತರು ಗಾಬರಿಗೊಂಡಿದ್ದು, ಗ್ರಾಮಸ್ಥರಿಗೆ ಕರೆ ಮಾಡಿ ಸುದ್ದಿ ಮುಟ್ಟಿಸಿದರು. ಮಾಹಿತಿ ಮೇರೆಗೆ ಸ್ಥಳಕ್ಕೆ ಬಂದ ಅಗ್ನಿಶಾಮಕ ದಳದ ಸಿಬ್ಬಂದಿ ಮೊದಲಿಗೆ ಪೈಪ್ ಒಳಗೆ ಆಮ್ಲಜನಕ ಪೂರೈಕೆ ಮಾಡಿ, ನಂತರ ಜೆಸಿಬಿ ಯಂತ್ರದ ಸಹಾಯದಿಂದ ಪೈಪ್ ಒಡೆದು ರೈತನನ್ನು ರಕ್ಷಣೆ ಮಾಡಿದರು. ಸುಮಾರು ಎರಡು ಗಂಟೆ ಕಾಲ ಈ ಕಾರ್ಯಾಚರಣೆ ನಡೆಯಿತು.

ರೈತನನ್ನು ಜಿಲ್ಲಾ ಆಸ್ಪತ್ರೆಯಲ್ಲಿ ತಪಾಸಣೆಗೆ ಒಳಪಡಿಸಿದ್ದು, ಅವರು ಆರೋಗ್ಯದಿಂದ ಇದ್ದಾರೆ. ಅಗ್ನಿಶಾಮಕ ದಳದ ತ್ವರಿತಗತಿಯ ಕಾರ್ಯಾಚರಣೆಯನ್ನು ಉಪಮುಖ್ಯಮಂತ್ರಿ ಡಾ. ಸಿ.ಎನ್. ಅಶ್ವತ್ಥನಾರಾಯಣ ಶ್ಲಾಘಿಸಿದ್ದಾರೆ.

'ಶೇ 80ರಷ್ಟು ಜನರಿಗೆ ಲಸಿಕೆ ಕೊಡಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೋವಿಡ್ ಮೂರನೇ ಅಲೆಯಿಂದ ಜನರನ್ನು ರಕ್ಷಿಸಲು ಸೆಪ್ಟೆಂಬರ್ ಅಂತ್ಯದೊಳಗೆ ಶೇ 80ರಷ್ಟು ಜನರಿಗೆ ಎರಡು ಡೋಸ್ ಲಸಿಕೆ ಹಾಕಿದರೆ ಕೋವಿಡ್ ಮೂರನೇ ಅಲೆಯಿಂದ ಜನರನ್ನು ರಕ್ಷಿಸಬಹುದು. ಈ ಸವಾಲಿಗೆ ರಾಜ್ಯ ಸರ್ಕಾರ ಸಿದ್ಧಗೊಳ್ಳಬೇಕು' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಆಗ್ರಹಿಸಿದ್ದಾರೆ.

'ಈ ಕುರಿತು ಸರ್ಕಾರಕ್ಕೆ ತಾಕೀತು ಮಾಡುವಂತೆ ಪಕ್ಷದ ವತಿಯಿಂದ ರಾಜ್ಯಪಾಲರಿಗೆ ಮನವಿ ಸಲ್ಲಿಸಲಾಗುವುದು' ಎಂದೂ ಅವರು ತಿಳಿಸಿದ್ದಾರೆ.

ಒಳನೋಟ

ಸೂರು: ದೂರು ನೂರಾರು

ಬೆಂಗಳೂರು: 'ಪ್ರಗತಿ ಕಾಣದ ಪುನರ್ವಸತಿ' ಶೀರ್ಷಿಕೆಯಡಿ 'ಪ್ರಜಾವಾಣಿ'ಯಲ್ಲಿ ಭಾನುವಾರ (ಜುಲೈ 4) ಪ್ರಕಟವಾದ 'ಒಳನೋಟ' ವರದಿಗೆ ರಾಜ್ಯದಾದ್ಯಂತ ಓದುಗರು ಪ್ರತಿಕ್ರಿಯಿಸಿದ್ದಾರೆ. ಆಯ್ದ ಪ್ರತಿಕ್ರಿಯೆಗಳು ಇಲ್ಲಿವೆ.

ಪರಿಹಾರ ಕಾರ್ಯರೂಪಕ್ಕೆ ಬರಲಿ

ರಾಜ್ಯದಲ್ಲಿ ಜನರು ಸಂಕಷ್ಟಕ್ಕೆ ಒಳಗಾದಾಗ ಮಂತ್ರಿ ಮಹೋದಯರು ಪರಿಹಾರ ಘೋಷಿಸುತ್ತಾರೆ. ಆದರೆ, ಅವು ಕಾರ್ಯರೂಪಕ್ಕೆ ಬಂದು ಫಲಾನುಭವಿಗಳನ್ನು ತಲುಪುವುದೇ ಇಲ್ಲ. ಪುನರ್ವಸತಿ ಇದಕ್ಕೆ ಉತ್ತಮ ನಿದರ್ಶನ. ಸಂತ್ರಸ್ತರು ನ್ಯಾಯಕ್ಕಾಗಿ ನ್ಯಾಯಾಲಯದ ಮೊರೆ ಹೋಗಬೇಕು. ಇಂತಹ ಬೇಜವಾಬ್ದಾರಿ ವ್ಯವಸ್ಥೆಯ ವಿರುದ್ಧ ಹೋರಾಡಬೇಕು.

ಬೀರಣ್ಣ, ಯಲ್ಲಾಪುರ

ಇನ್ನೂ ಸಿಕ್ಕಿಲ್ಲ ಸೂರು

ಪ್ರವಾಹಪೀಡಿತ ಸಂತ್ರಸ್ತರಿಗೆ ಸೂರು ಈವರೆಗೆ ಸಿಕ್ಕಿಲ್ಲ. ಆರ್ಥಿಕ ನೆರವೂ ನೀಡದೆ, ಅವರನ್ನು ಕಡೆಗಣಿಸಲಾಗಿದೆ. ಸಂತ್ರಸ್ತರ ಜೀವನ ಇನ್ನೂ ಅಸ್ತವ್ಯಸ್ತ. ಪರಿಹಾರ ಬಿಡುಗಡೆಯಲ್ಲಿ ವಿಳಂಬ ಮಾಡುತ್ತಿದ್ದು, ಬಂದ ಹಣದಲ್ಲೂ ಲೂಟಿ ನಡೆಯುತ್ತಿದೆ. ಅರ್ಹ ಫಲಾನುಭವಿಗಳಿಗೆ ಪರಿಹಾರ ಸಮರ್ಪಕವಾಗಿ ಸಿಗಬೇಕು. ನೊಂದವರಿಗೆ ಶೀಘ್ರವಾಗಿ ಸೂರು ಕಲ್ಪಿಸಬೇಕು.

ರೂಪಾ, ಚಿತ್ರದುರ್ಗ

ಅನಗತ್ಯ ಯೋಜನೆ ನಿಲ್ಲಿಸಿ

ಪ್ರಕೃತಿಯ ರುದ್ರನರ್ತನಕ್ಕೆ ಬಡವರ ಜೀವನ ಬೀದಿಪಾಲಾಗಿದೆ. ಅವರ ಕಂಬನಿ ಹೊಳೆಯಾಗಿ ಹರಿದಿದ್ದು ಮರೆಯುವಂತಿಲ್ಲ. ಮಳೆಗಾಲ ಮತ್ತೆ ಲಗ್ಗೆಯಿಟ್ಟಿದೆ. ಪ್ರವಾಹದ ದಾಳಿ ಮತ್ತೆ ನಡೆದರೆ, ಸಂತ್ರಸ್ತರ ಗಾಯದ ಮೇಲೆ ಬರೆ ಎಳೆದಂತೆ. ಈ ಬಗ್ಗೆ ಸರ್ಕಾರ ಗಂಭೀರವಾಗಿ ಪರಿಗಣಿಸಿ, ನೆರೆ ಸಂತ್ರಸ್ತರ ಬದುಕಿಗೆ ಆಸರೆ ಒದಗಿಸಬೇಕು. ಯಾವುದೋ ಅನಗತ್ಯ ಯೋಜನೆಗಳಿಗೆ ಕೋಟ್ಯಂತರ ಹಣ ವ್ಯಯ ಮಾಡುವುದನ್ನು ನಿಲ್ಲಿಸಿ, ನೆರೆ ಸಂತ್ರಸ್ತರ ಉಪಯೋಗಕ್ಕೆ ಹಣ ಬಳಸಬೇಕು.

ನಾಗರಾಜ್, ದಾವಣಗೆರೆ

ಭರವಸೆ ನೀಡಿ ಮೌನ

ಪ್ರವಾಹ ಬಾಧಿತ ಜಿಲ್ಲೆಗಳಲ್ಲಿ ಆಸ್ತಿ-ಪಾಸ್ತಿ ಕಳೆದುಕೊಂಡು ಬಡವರು ಹಾಗೂ ಮಧ್ಯಮವರ್ಗದ ಜನರು ಬೀದಿಪಾಲಾಗಿದ್ದಾರೆ. ಸರ್ಕಾರದ ಸಹಾಯಕ್ಕಾಗಿ ಅಂಗಲಾಚಿ, ದಿನಗಳನ್ನು ಕಳೆಯುತ್ತಿದ್ದಾರೆ. ಸರ್ಕಾರ ನೆರವಿನ ಹಸ್ತದ ಭರವಸೆ ನೀಡಿ, ಕೈ ತೊಳೆದುಕೊಂಡಿದೆ. ರಾಜ್ಯದ ಕೃಷ್ಣಾ ನದಿ ತೀರದಲ್ಲಿ ಅಪಾರ ಪ್ರಮಾಣದಲ್ಲಿ ಹಾನಿಯಾಗಿದೆ. ಈ ಭಾಗಕ್ಕೆ ಸರ್ಕಾರದ ತುರ್ತು ನೆರವಿನ ಅಗತ್ಯವಿದೆ.

ಬೀರಪ್ಪ, ಬೆಳಗಾವಿ

ಸಾರ್ವಜನಿಕ ಹಿತಾಸಕ್ತಿ ಇಲ್ಲ

ಪ್ರವಾಹದಿಂದ ಮನೆ ಕಳೆದುಕೊಂಡವರಿಗೆ ಇಲ್ಲಿಯವರೆಗೂ ಅನುದಾನ ಒದಗಿಸದಿರುವುದು ವಿಪರ್ಯಾಸ. ಕಾರ್ಪೊರೇಟ್ ಸಂಸ್ಥೆಗಳಿಗೆ ಇರುವ ಜನರ ಬಗೆಗಿನ ಕಾಳಜಿ ಅಧಿಕಾರ ವರ್ಗಕ್ಕೆ ಇಲ್ಲದಿರುವುದು ದುರಂತ. ಅರ್ಹ ಫಲಾನುಭವಿಗಳಿಗೆ ಅನುದಾನ ಒದಗಿಸುವ ಮೂಲಕ ಅವರ ಸಂಕಷ್ಟಗಳನ್ನು ದೂರ ಮಾಡುವ ಕೆಲಸ ತುರ್ತಾಗಿ ನಡೆಯಬೇಕು. ಈ ಬಗ್ಗೆ ಸರ್ಕಾರ ಗಂಭೀರವಾಗಿ ಚಿಂತನೆ ನಡೆಸಲಿ.

ವಡ್ನಾಳ್ ರಮೇಶ, ಚನ್ನಗಿರಿ

ಜಾರಕಿಹೊಳಿಗೆ ಶಿಕ್ಷೆ ಆಗದು: ಮಾಧುಸ್ವಾಮಿ

ಪ್ರಜಾವಾಣಿ ವಾರ್ತೆ

ಉಡುಪಿ: 'ಒಪ್ಪಿತ ಲೈಂಗಿಕ ಕ್ರಿಯೆ ತಪ್ಪಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ವಿಡಿಯೊದಲ್ಲಿರುವ ಹೆಣ್ಣುಮಗಳ ವರ್ತನೆ ನೋಡಿದರೆ, ಆಕೆ ಇಚ್ಛೆ ಪಟ್ಟು ಹೋಗಿರುವ ಭಾವನೆ ವ್ಯಕ್ತವಾಗುತ್ತದೆ. ಆದ್ದರಿಂದ ರಮೇಶ್ ಜಾರಕಿಹೊಳಿ ಅವರಿಗೆ ಶಿಕ್ಷೆ ಆಗಲಾರದು' ಎಂದು ಸಣ್ಣ ನೀರಾವರಿ ಸಚಿವ ಜೆ.ಸಿ. ಮಾಧುಸ್ವಾಮಿ ಅಭಿಪ್ರಾಯ ಪಟ್ಟರು.

ಕಕ್ಕುಂಜೆಯಲ್ಲಿ ಭಾನುವಾರ ನಾಟಿ ಮಾಡುವ ಮೂಲಕ 'ಹಡಿಲುಭೂಮಿ ಕೃಷಿ ಆಂದೋಲನ'ಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, 'ರಮೇಶ್ ಜಾರಕಿಹೊಳಿ ಪ್ರಕರಣ ಕಾನೂನು ಹಾಗೂ ನೈತಿಕತೆಯ ಚೌಕಟ್ಟಿನ ವ್ಯಾಪ್ತಿಗೆ ಬರುತ್ತದೆ. ನೈತಿಕ ಹೊಣೆ ಹೊತ್ತು ಅವರು ಈಗಾಗಲೇ ರಾಜೀನಾಮೆ ನೀಡಿದ್ದಾರೆ. ಕಾನೂನು ಹೋರಾಟವನ್ನೂ ನಡೆಸುತ್ತಿದ್ದಾರೆ' ಎಂದರು.

ಕರ್ನಾಟಕ ಸರ್ಕಾರ
ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ)
ಕಾರ್ಯನಿರ್ವಾಹಕ ಇಂಜಿನೀಯರ್‌ರವರ ಕಛೇರಿ,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಧಾರವಾಡ

ಟೆಂಡರ್ ಮುಂದೂಡಿಕೆ ಪ್ರಕಟಣೆ

ಉಲ್ಲೇಖ:ಈ ಕಛೇರಿ ಟೆಂಡರ್ ಪ್ರಕಟಣೆ ಸಂಖ್ಯೆ: ಐ.ಫ್.ಟಿ. 03/2021–22 ದಿ: 18/06/2021

ಈ ಕಛೇರಿಯಿಂದ ಉಲ್ಲೇಖ(1) ರಲ್ಲಿ ಹೊರಡಿಸಿದ್ದ (ಕೆ/ಡಬ್ಲ್ಯೂ–3) ಟೆಂಡರ್ ಪ್ರಕಟಣೆಯಲ್ಲಿ 2 ಕಾಮಗಾರಿಗಳನ್ನು ತಾಂತ್ರಿಕ ಕಾರಣಗಳಿಂದಾಗಿ ಈ ಕೆಳಗಿನಂತೆ **ಟೆಂಡರ್ ಮುಂದೂಡಿಕೆ** ಪ್ರಕಟಣೆಯನ್ನು ನೀಡಲಾಗಿರುತ್ತದೆ, ಇನ್ನುಳಿದಂತೆ ಟೆಂಡರಿನಲ್ಲಿ ಯಾವುದೇ ಬದಲಾವಣೆಗಳು ಇರುವುದಿಲ್ಲ.

ಕ್ರ. ಸಂ.	ಟೆಂಡರ್ ದಿನಾಂಕಗಳು	ಈ ಹಿಂದೆ ಪ್ರಕಟಿಸಲಾದಂತೆ	ಮುಂದೂಡಿಕೆ ಪ್ರಕಟಣೆಯಂತೆ
1	ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ಟೆಂಡರ್ ದಸ್ತಾವೇಜುಗಳನ್ನು ಡೌನ್–ಲೋಡ್ ಮಾಡಿಕೊಳ್ಳಬಹುದಾದ ಅವಧಿ.	ದಿನಾಂಕ : 24/06/2021 ರಿಂದ 09/07/2021 ರ 17.30 ಘಂಟೆ ವರೆಗೆ	ದಿನಾಂಕ : 05/07/2021 ರಿಂದ 12/07/2021 ರ 17.30 ಘಂಟೆ ವರೆಗೆ
2	ಟೆಂಡರ್ ಸಲ್ಲಿಸುವ ಕಡೆಯ ದಿನಾಂಕ ಮತ್ತು ಸಮಯ	ದಿನಾಂಕ : 09/07/2021 ರ 17.30 ಘಂಟೆ ವರೆಗೆ.	ದಿನಾಂಕ : 12/07/2021 ರ 17.30 ಘಂಟೆ ವರೆಗೆ.

ಸಹಿ/– (ವಿನಾಯಕ.ಆರ್.ಹರನಟ್ಟಿ) ಕಾರ್ಯನಿರ್ವಾಹಕ ಇಂಜಿನೀಯರರು,
ಸಣ್ಣ ನೀರಾವರಿ & ಅಂತರ್ಜಲ ಅಭಿವೃದ್ಧಿ ವಿಭಾಗ, ಧಾರವಾಡ.

ವಾಸಾಸಂಇ/ಹಾವೇರಿ/ಎಂಸಿಎ/132/2021–22

ಕೆ.ಎಂ.ಎಫ್ ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾ ಮಂಡಳಿ ನಿಯಮಿತ
ಕಹಾಮ ಸಂಕೀರ್ಣ, ಡಾ: ಎಂ. ಹೆಚ್. ಮರೀಗೌಡ ರಸ್ತೆ, ಬೆಂಗಳೂರು–560 029
ಫೋನ್: 26096832/26096822/26096910 ಫ್ಯಾಕ್ಸ್: 080–25536105
E-mail: purchase@kmf.coop

ಸಂ. ಕಹಾಮ/ಖರೀದಿ/ಟೆಂಡರ್–312/2020–21 ದಿನಾಂಕ: 05.07.2021

ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪೋರ್ಟಲ್ ಮೂಲಕ)

ಕರ್ನಾಟಕ ಹಾಲು ಮಹಾ ಮಂಡಳಿಯ ನಂದಿನಿ ಹೈಟೆಕ್ ಮಿಲ್ಕ್ ಪೌಡರ್‌ಪ್ಲಾಂಟ್–ರಾಮನಗರ ಘಟಕಕ್ಕೆ ಅಗತ್ಯವಿರುವ ಸಾಮಗ್ರಿಗಳನ್ನು ವಾರ್ಷಿಕ ಅವಧಿಗೆ ಖರೀದಿಸಲು ಅರ್ಹ ಟೆಂಡರ್‌ದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ. ವಿವರಗಳು ಈ ರೀತಿ ಇವೆ.

ಕ್ರಮ ಸಂಖ್ಯೆ	ಸಾಮಗ್ರಿಗಳ ವಿವರ	ಪರಿಮಾಣ	ಇಎಂಡಿ (ರೂ.)
1	ಬಯೋಮಾಸ್ ಫ್ಯೂಯಲ್ ಬ್ರಿಕ್ಕೆಟ್‌ಗಳು	15000 MT	24,00,000/–
2	ಬಯೋಮಾಸ್ ಫ್ಯೂಯಲ್ ಪೆಲ್ಲೆಟ್‌ಗಳು	3000 MT	5,60,000/–
3	ಸಾಮಾನ್ಯ ಉಪ್ಪು	180 MT	16,000/–

ಟೆಂಡರ್ ದಾಖಲಾತಿಯನ್ನು E-Proc ವೆಬ್‌ಸೈಟ್ https://eproc.karnataka.gov.in/. ನಲ್ಲಿ download ಮಾಡಿಕೊಳ್ಳಬಹುದಾಗಿರುತ್ತದೆ. ಆಸಕ್ತಿಯುಳ್ಳ ಟೆಂಡರ್‌ದಾರರು ಹೆಚ್ಚಿನ ಮಾಹಿತಿಯನ್ನು ಮೇಲ್ಕಾಣಿಸಿದ ವಿಳಾಸದಲ್ಲಿ ಪಡೆಯಬಹುದಾಗಿರುತ್ತದೆ, E-Proc Helpline No: 080-22230960 / 22234115

ಟೆಂಡರ್ ಪ್ರಾರಂಭವಾಗುವ ದಿನಾಂಕ	05.07.2021
ಪೂರ್ವಬಾವಿ ಸಭೆ	12.07.2021 ರಂದು 11.00 ಘಂಟೆಗೆ
ಟೆಂಡರ್ ಅಪ್ ಲೋಡಿಂಗ್ ಮಾಡಲು ಕಡೆಯ ದಿನಾಂಕ	20.07.2021 ರಂದು 5.00 ಘಂಟೆಯವರೆಗೆ
ತಾಂತ್ರಿಕ ಬಿಡ್ ತೆರೆಯುವ ದಿನಾಂಕ	23.07.2021 ರಂದು 11.00 ಘಂಟೆಗೆ
ವಾಣಿಜ್ಯಕ ಬಿಡ್ ತೆರೆಯುವ ದಿನಾಂಕ	ತಾಂತ್ರಿಕ ಬಿಡ್‌ಗಳ ವಿಶ್ಲೇಷಣೆಯ ನಂತರ

ಇತರ ವಿವರಗಳನ್ನು ಟೆಂಡರ್ ದಾಖಲಾತಿಯಲ್ಲಿ ವೀಕ್ಷಿಸಬಹುದು.

ಕರ್ನಾಟಕ ಹಾಲು ಮಹಾಮಂಡಳಿ ಪರವಾಗಿ
ಸಹಿ/–
ನಿರ್ದೇಶಕರು (ಖರೀದಿ)

ದ್ವಿಪಥ ರೈಲು ಮಾರ್ಗ ಕಾಮಗಾರಿಗೆ ಅರಣ್ಯ ಇಲಾಖೆಯಿಂದ ಒಪ್ಪಿಗೆ

2,278 ಮರಗಳ ಹನನಕ್ಕೆ ಅನುಮತಿ: ಆಕ್ರೋಶ

ಪ್ರಜಾವಾಣಿ ವಾರ್ತೆ

ಜೊಯಿಡಾ (ಉತ್ತರ ಕನ್ನಡ): ಹೊಸಪೇಟೆ- ವಾಸ್ಕೋ ರೈಲು ಮಾರ್ಗವನ್ನು ದ್ವಿಪಥಗೊಳಿಸಲು ಕಾಳಿ ಹುಲಿ ಸಂರಕ್ಷಿತ (ಕೆ.ಟಿ.ಆರ್) ಪ್ರದೇಶದಲ್ಲಿ ಸಾವಿರಾರು ಮರಗಳನ್ನು ಕಡಿಯಲು ಅರಣ್ಯ ಇಲಾಖೆ ಅಧಿಕಾರಿಗಳು ಅನುಮತಿ ನೀಡಿದ್ದಾರೆ. ಇದು ಪರಿಸರ ಪ್ರೇಮಿಗಳ ಆಕ್ರೋಶಕ್ಕೆ ಕಾರಣವಾಗಿದೆ.

ತಾಲ್ಲೂಕಿನ ಕ್ಯಾಸಲ್‌ರಾಕ್ ವನ್ಯಜೀವಿ ವಲಯದ 9.57 ಹೆಕ್ಟೇರ್ ಪ್ರದೇಶದಲ್ಲಿ 2,097 ಮರಗಳು ಹಾಗೂ ಹಳಿಯಾಳ ವಿಭಾಗದ 0.88 ಹೆಕ್ಟೇರ್ ಪ್ರದೇಶದಲ್ಲಿ 181 ಮರಗಳನ್ನು ಕಡಿಯಲು ಅಧಿಕಾರಿಗಳು ಒಪ್ಪಿಗೆ ಸೂಚಿಸಿದ್ದಾರೆ. ಯೋಜನೆ ಕೈಬಿಡುವಂತೆ ಕೇಂದ್ರ ಪರಿಸರ ಮಂಡಳಿ (ಸಿ.ಇ.ಸಿ) ಸುಪ್ರೀಂಕೋರ್ಟ್‌ಗೆ ವರದಿ ನೀಡಿದೆ. ಅದರ ಬಳಿಕವೂ ಅಧಿಕಾರಿಗಳು ಸುಮಾರು 2,278 ಮರಗಳನ್ನು ಕಡಿಯಲು ಅನುಮತಿ ನೀಡಿದ್ದಾರೆ.

ಜೊಯಿಡಾ ತಾಲ್ಲೂಕಿನ ಕಾಳಿ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಪ್ರಸ್ತುತ ಇರುವ ರೈಲು ಮಾರ್ಗ

ರೈಲು ಮಾರ್ಗದ ಅಭಿವೃದ್ಧಿಗಾಗಿ ಮರಗಳನ್ನು ಕಡಿಯಲು ನೈರುತ್ಯ ರೈಲ್ವೆ ಅಧಿಕಾರಿಗಳು ಅರಣ್ಯ ಇಲಾಖೆಯನ್ನು ಕೇಳಿಕೊಂಡಿದ್ದರು. ಇಷ್ಟೊಂದು ಪ್ರಮಾಣದಲ್ಲಿ ಅರಣ್ಯ ನಾಶ ಮಾಡಿದರೆ ಇಲ್ಲಿನ ಸಸ್ಯಸಂಕುಲ, ವನ್ಯಜೀವಿಗಳ ವಾಸ ಸ್ಥಾನಕ್ಕೆ ಹಾಗೂ ಜೀವ ವೈವಿಧ್ಯಕ್ಕೆ ಧಕ್ಕೆ ಬರಲಿದೆ. ಆದ್ದರಿಂದ ಈ ಯೋಜನೆ ರದ್ದು ಪಡಿಸುವಂತೆ ಅರಣ್ಯ ಇಲಾಖೆಯ ನಿವೃತ್ತ ಅಧಿಕಾರಿ ಯಲ್ಲಪ್ಪ ರೆಡ್ಡಿ, ಗೋವಾ ಫೌಂಡೇಷನ್, ಕೆಲವು ಸಂಸ್ಥೆಗಳು ಗೋವಾ ಹಾಗೂ ಕರ್ನಾಟಕದ ಹೈಕೋರ್ಟ್, ಸುಪ್ರೀಂಕೋರ್ಟ್ ಮೊರೆ ಹೋಗಿದ್ದಾರೆ.

ಈ ಕುರಿತು ಸುಪ್ರೀಂಕೋರ್ಟ್‌ನಲ್ಲಿ ವಿಚಾರಣೆ ನಡೆದು, ಸಿ.ಇ.ಸಿ.ಗೆ ವರದಿ ನೀಡುವಂತೆ ಸೂಚಿಸಲಾಗಿತ್ತು. ಕಳೆದ ಏಪ್ರಿಲ್ ತಿಂಗಳಲ್ಲಿ ಸಿ.ಇ.ಸಿ ತನ್ನ ವರದಿ ಸಲ್ಲಿಸಿ, ಈ ಯೋಜನೆ ರದ್ದು ಪಡಿಸುವಂತೆ ಕೋರಿದೆ. ಜೊತೆಗೆ ರಾಷ್ಟ್ರೀಯ ಹುಲಿ ಸಂರಕ್ಷಿತ ಪ್ರಾಧಿಕಾರ (ಎನ್.ಟಿ.ಸಿ.ಎ) ಹಾಗೂ ರಾಷ್ಟ್ರೀಯ ವನ್ಯಜೀವಿ ಮಂಡಳಿ (ಎನ್.ಡಬ್ಲು.ಸಿ) ಸಹ ಯೋಜನೆಗೆ ಅನುಮತಿ ನೀಡಿಲ್ಲ.

'ಅನುಮತಿ ರದ್ದು ಮಾಡಲಾಗಿದೆ'

'ರೈಲ್ವೆ ಅಧಿಕಾರಿಗಳು ಈ ಯೋಜನೆಗೆ ಸಂಬಂಧಿಸಿದಂತೆ ಎಲ್ಲ ಅನುಮತಿಗಳನ್ನು ಪಡೆದಿದ್ದರು. ಆದ್ದರಿಂದ ಅರಣ್ಯ ಇಲಾಖೆ ಮರಗಳನ್ನು ಕಡಿಯಲು ಏಪ್ರಿಲ್ ತಿಂಗಳ ಕೊನೆಯಲ್ಲಿ ಅನುಮತಿ ನೀಡಿತ್ತು. ಇದಕ್ಕೆ ಸಿ.ಇ.ಸಿ ಆಕ್ಷೇಪಣೆ ಸಲ್ಲಿಸಿರುವ ಕಾರಣ, ಮರಗಳನ್ನು ಕಡಿಯಲು ನೀಡಿದ ಅನುಮತಿಯನ್ನು ರದ್ದು ಮಾಡಲಾಗಿದೆ. ಕಾಳಿ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಸದ್ಯ ಮರ ಕಡಿಯಲು ಅವಕಾಶ ನೀಡುವುದಿಲ್ಲ' ಎಂದು ಕಾಳಿ ಹುಲಿ ಸಂರಕ್ಷಿತ (ಕೆ.ಟಿ.ಆರ್) ಪ್ರದೇಶದ ನಿರ್ದೇಶಕ ಮಾರಿಯಾ ಡಿ.ಕ್ರಿಸ್ತರಾಜು ಸ್ಪಷ್ಟಪಡಿಸಿದರು.

'ಕಾಮಗಾರಿ ಪ್ರಾರಂಭವಾಗಿಲ್ಲ'

ಹಳಿಯಾಳ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಅಜ್ಜಯ್ಯ ಪ್ರತಿಕ್ರಿಯಿಸಿ, 'ರಾಷ್ಟ್ರೀಯ ಯೋಜನೆ ಆಗಿರುವ ಕಾರಣ, ಕಡಿಮೆ ಪ್ರಮಾಣದಲ್ಲಿ ಮರಗಳನ್ನು ಕಡಿಯಲು ಮೊದಲ ಹಂತದಲ್ಲಿ ಅನುಮತಿ ನೀಡಲಾಗಿದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ನಿರ್ದೇಶನದಂತೆ, ಅರಣ್ಯ ಇಲಾಖೆಯ ಎಲ್ಲ ವಿಧಾನಗಳನ್ನು ಪಾಲನೆ ಮಾಡಲಾಗಿದೆ. ಇನ್ನೂ ಕಾಮಗಾರಿ ಪ್ರಾರಂಭವಾಗಿಲ್ಲ. ಸುಪ್ರೀಂಕೋರ್ಟ್ ಯೋಜನೆಯನ್ನು ತಡೆಹಿಡಿದರೆ, ಅನುಮತಿಯನ್ನು ಹಿಂಪಡೆಯಲಾಗುವುದು' ಎಂದರು.

ನಿಧನ ವಾರ್ತೆ

ಚಿತ್ರನಟ ರವಿ

ಮೈಸೂರು: ಇಲ್ಲಿನ ಚಾಮರಾಜ ಜೋಡಿ ರಸ್ತೆಯಲ್ಲಿರುವ ಮಂಟೇಸ್ವಾಮಿ ದೇಗುಲದ ಅರ್ಚಕರಾಗಿದ್ದ, ಹುಲ್ಲಿನ ಬೀದಿಯ ನಿವಾಸಿ ಹಾಗೂ ಚಿತ್ರನಟ ರವಿ (38) ಅವರು ಶನಿವಾರ ರಾತ್ರಿ ಅನಾರೋಗ್ಯದಿಂದ ಕೆ.ಆರ್.ಆಸ್ಪತ್ರೆಯಲ್ಲಿ ನಿಧನರಾದರು.

ಅವರಿಗೆ ಪತ್ನಿ ಮತ್ತು ಪುತ್ರಿ ಇದ್ದಾರೆ. ಅಂತ್ಯಕ್ರಿಯೆಯು ಭಾನುವಾರ ಬೆಳಿಗ್ಗೆ ನಡೆಯಿತು.

ಇವರು ನಟ ರಜನಿಕಾಂತ್ ಅವರು ನಟಿಸಿದ್ದ 'ಲಿಂಗಾ' ಚಿತ್ರದಲ್ಲಿ ಮೈಸೂರು ಮಹಾರಾಜರ ಪಾತ್ರವನ್ನು ನಿರ್ವಹಿಸಿದ್ದರು.

ವೈದ್ಯಕೀಯ ಕಾಲೇಜುಗಳಲ್ಲಿ ಕೌಶಲ ಪ್ರಯೋಗಾಲಯ

ವಿದ್ಯಾರ್ಥಿಗಳಿಗೆ ಎಷ್ಟು ಉಪಯುಕ್ತ?

ಡಾ. ವಿನಯ ಶ್ರೀನಿವಾಸ್

ಕೋವಿಡ್ ಆರಂಭವಾದಾಗಿನಿಂದ ಬಹುತೇಕ ಎಲ್ಲ ತರಗತಿಗಳೂ ಆನ್‌ಲೈನ್‌ನಲ್ಲೇ ನಡೆಯುತ್ತಿವೆ. ವೈದ್ಯಕೀಯ, ದಂತ ವೈದ್ಯಕೀಯ, ನರ್ಸಿಂಗ್ ಹಾಗೂ ಅರೆ ವೈದ್ಯಕೀಯ ಶಿಕ್ಷಣವೂ ಇದಕ್ಕೆ ಹೊರತಾಗಿಲ್ಲ. ಆದರೆ ಆರೋಗ್ಯ ಕ್ಷೇತ್ರಕ್ಕೆ ಸಂಬಂಧಿಸಿದ ಈ ವ್ಯಾಸಂಗದಲ್ಲಿ ಪ್ರಾಯೋಗಿಕ ಕಲಿಕೆಗೆ ಬಹಳ ಮಹತ್ವವಿದೆ. ಮೊದಲನೆಯ ವರ್ಷದ ತರಗತಿಗಳ ನಂತರ ಬಹುತೇಕ ವಿಷಯಗಳನ್ನು ರೋಗಿಗಳನ್ನು ಪರೀಕ್ಷೆ ಮಾಡುತ್ತಲೇ ಕಲಿಯುವುದಿರುತ್ತದೆ. ಆದರೆ ಕೊರೊನಾ ಕಾರಣದಿಂದ ಇದು ಈ ದಿನಗಳಲ್ಲಿ ಕಷ್ಟ ಸಾಧ್ಯವಾಗಿದೆ. ಈ ಸಂದರ್ಭದಲ್ಲಿ ವೈದ್ಯಕೀಯ ಕಾಲೇಜುಗಳಲ್ಲಿರುವ ಕೌಶಲ ಪ್ರಯೋಗಾಲಯವು ನಿಜಕ್ಕೂ ವರದಾನವೆಂದೇ ಹೇಳಬಹುದು.

> ಕೋವಿಡ್‌ನಿಂದಾಗಿ ಪ್ರಾಯೋಗಿಕ ಕಲಿಕೆಗೆ ಅವಕಾಶವಿಲ್ಲ ಎಂದು ವೈದ್ಯಕೀಯ ವಿದ್ಯಾರ್ಥಿಗಳು ಹತಾಶರಾಗಬೇಕಿಲ್ಲ. ಈ ಸಂದರ್ಭದಲ್ಲಿ ಕೌಶಲ ಪ್ರಯೋಗಾಲಯಗಳು ಅವರ ನೆರವಿಗೆ ಬಂದಿವೆ.

ಏನಿದು ಕೌಶಲ ಪ್ರಯೋಗಾಲಯ?

ಸುಮಾರು ಹತ್ತು ಸಾವಿರ ಚದರ ಮೀಟರ್ ಅಳತೆಯಷ್ಟು ವಿಶಾಲವಾಗಿರುವ ಜಾಗದಲ್ಲಿರುವ ಈ ಪ್ರಯೋಗಾಲಯದಲ್ಲಿ ಹತ್ತಕ್ಕೂ ಹೆಚ್ಚು ಪ್ರತ್ಯೇಕ ಕೊಠಡಿಗಳಿರುತ್ತವೆ. ಒಂದೊಂದು ಕೊಠಡಿಯೂ ಒಂದೊಂದು ವಿಶೇಷ ಉಪ ವಿಷಯಕ್ಕಾಗಿ ಮೀಸಲು. ಮಾನವ ದೇಹದೊಂದಿಗೆ ಅಭ್ಯಸಿಸಬೇಕಾದ ಎಲ್ಲ ಕಾರ್ಯ ವಿಧಾನಗಳಿಗೆ ಸಂಬಂಧಿಸಿದ ಪ್ರಮುಖ ಮಾದರಿಗಳು (ಮಾಡ್ಯೂಲ್) ಇಲ್ಲಿವೆ. ಈ ಮಾದರಿಗಳ ವಿಶೇಷತೆಯೆಂದರೆ ಇವು ಮೂರು ಆಯಾಮದ ಮಾದರಿಗಳಾಗಿದ್ದು, ಬಣ್ಣ, ಆಕೃತಿ, ಗಾತ್ರ ಹಾಗೂ ವಿನ್ಯಾಸದಲ್ಲಿ ಬಹುತೇಕ ಮಾನವ ದೇಹದ ಅಂಗಾಂಗಗಳಂತೆಯೇ ಇರುತ್ತವೆ. ಇವುಗಳೊಂದಿಗಿನ ಕಲಿಕೆ ಹಾಗೂ ತರಬೇತಿಯು ಬಹಳಷ್ಟು ನೈಜತೆಯಿಂದ ಕೂಡಿರುತ್ತದೆ. ಆರೋಗ್ಯ ಕ್ಷೇತ್ರಕ್ಕೆ ಸಂಬಂಧಿಸಿದ ಶಿಕ್ಷಣವನ್ನು ಪಡೆಯುತ್ತಿರುವ ವಿದ್ಯಾರ್ಥಿಗಳ ಪ್ರಾಯೋಗಿಕ ಕಲಿಕೆಗೆ ಇಲ್ಲಿನ ತರಬೇತಿ ಬಹಳ ಪರಿಣಾಮಕಾರಿಯಾಗಲಿದೆ.

ಈ ನವೀನ ರೀತಿಯ ವೈದ್ಯಕೀಯ ಕೌಶಲ ಪ್ರಯೋಗಾಲಯಗಳನ್ನು ಕಡ್ಡಾಯವಾಗಿ ಕಾಲೇಜುಗಳಲ್ಲಿ ಸ್ಥಾಪಿಸಬೇಕೆಂದು ಭಾರತೀಯ ವೈದ್ಯಕೀಯ ಮಂಡಳಿಯು ಇತ್ತೀಚೆಗೆ ಸೂಚಿಸಿದೆ.

ಏನೆಲ್ಲ ಕಲಿಯಬಹುದು?

ಇಲ್ಲಿ ಮುಖ್ಯವಾಗಿ ಎರಡು ಬಗೆಯ ಮಾದರಿಗಳು ಲಭ್ಯ. ಒಂದು ಕೌಶಲಗಳ ಕಲಿಕೆಗಾಗಿ ಇರುವ ಸ್ಥಿರ ಮಾದರಿಗಳಾದರೆ, ಮತ್ತೊಂದು ಕಂಪ್ಯೂಟರ್ ಮತ್ತು ಬ್ಯಾಟರಿಗಳ ನೆರವಿನಿಂದ ಮಾನವ ದೇಹದಂತೆಯೇ ಚಲನವಲನಗಳನ್ನು ತೋರುವ ಮಾದರಿಗಳು. ಇಲ್ಲಿ ಅಭ್ಯಾಸ ಮಾಡಬಹುದಾದ ಕೆಲವು ಕೌಶಲಗಳು ಮತ್ತು ವಿಧಾನಗಳೆಂದರೆ,

- ಚರ್ಮದ ಗಾಯಗಳಿಗೆ ಹೊಲಿಗೆ ಹಾಕುವುದು.
- ವಿವಿಧ ವಿಧಾನಗಳಲ್ಲಿ ಚುಚ್ಚುಮದ್ದುಗಳನ್ನು ನೀಡುವುದು. ಸ್ನಾಯುಗಳ ಮೂಲಕ, ಚರ್ಮದ ಪದರಗಳಲ್ಲಿ, ರಕ್ತನಾಳಗಳ ಮೂಲಕ ಚುಚ್ಚುಮದ್ದುಗಳನ್ನು ಕೊಡುವ ವಿಧಾನಗಳನ್ನು ಈ ಮಾದರಿಗಳಲ್ಲಿ ಅಭ್ಯಾಸ ಮಾಡಿ ಕಲಿಯಬಹುದು. ರಕ್ತನಾಳಗಳಲ್ಲಿ ಕೆಂಪು ಬಣ್ಣದ ದ್ರಾವಣವನ್ನು ತುಂಬಿರುವುದರಿಂದ ಅದನ್ನು ಚುಚ್ಚಿದಾಗ ರಕ್ತವೇ ಹರಿದು ಬಂದಂತೆ ಭಾಸವಾಗಿ ವಿದ್ಯಾರ್ಥಿಗಳಿಗೆ ಕಲಿಕೆ ಪರಿಣಾಮಕಾರಿಯಾಗಿರುತ್ತದೆ.
- ರೋಗಿಗಳ ಆರೈಕೆಯಲ್ಲಿ ನೆರವಾಗುವ ವಿಧಾನಗಳು. ಉದಾ: ಮೂತ್ರಕೋಶದೊಳಗೆ ನಾಳವನ್ನು ತೂರಿಸುವುದು ಮೊದಲಾದುವು.
- ತುರ್ತುಪರಿಸ್ಥಿತಿಗಳಲ್ಲಿ ಅತ್ಯಂತ ಅವಶ್ಯವೆನಿಸುವ ಜೀವ ರಕ್ಷಣೆ ತರಬೇತಿಯನ್ನು ಇಲ್ಲಿ ಪಡೆಯಬಹುದು. ಅಪಘಾತಗಳಲ್ಲಿ ರೋಗಿಗೆ ಹೃದಯ ಸ್ತಂಭನವಾದರೆ ಮಾಡಬೇಕಾದ ಆತನ ಹೃದಯ ಮತ್ತು ಶ್ವಾಸಕೋಶಗಳನ್ನು ಪುನರುಜ್ಜೀವನಗೊಳಿಸುವ ವಿಧಾನ.
- ಮಕ್ಕಳ ವಿಭಾಗದಲ್ಲಿ ಅವಶ್ಯವೆನಿಸುವಂತಹ ವಿಧಾನಗಳಿಗೆ ಚಿಕ್ಕ ಗಾತ್ರದ ಮಾದರಿಗಳೂ ಇಲ್ಲಿ ಸಾಕಷ್ಟು ಇವೆ.
- ಸಹಜ ಹೆರಿಗೆಯನ್ನು ಗರ್ಭಿಣಿಯಂತೆಯೇ ಇರುವ ಮಾದರಿಯಲ್ಲಿ ಅಭ್ಯಾಸ ಮಾಡಬಹುದು. ಕುಟುಂಬ ಯೋಜನೆಗೆಂದು ಬಳಸುವ ಕಾಪರ್ ಟಿಯನ್ನು ಗರ್ಭಾಶಯದಲ್ಲಿ ತೂರಿಸುವ ವಿಧಾನ, ಗರ್ಭಾಶಯದ ಪರೀಕ್ಷೆ ಮೊದಲಾದುವು.
- ತೀವ್ರನಿಗಾ ಘಟಕದಲ್ಲಿ ರೋಗಿಗೆ ಉಸಿರಾಟದ ಸಮಸ್ಯೆಯಾದಾಗ ಶ್ವಾಸನಾಳದ ಮೂಲಕ ಕೃತಕ ಉಸಿರಾಟದ ಪರಿಕರವನ್ನು ಅಳವಡಿಸುವುದು.
- ತೀವ್ರ ನಿಗಾ ಘಟಕದಲ್ಲಿ ರೋಗಿಯ ಮುಖ್ಯ ಸೂಚಕಗಳಾದ ಹೃದಯದ ಬಡಿತ, ಉಸಿರಾಟ, ಆಮ್ಲಜನಕದ ಮಟ್ಟ, ರಕ್ತದೊತ್ತಡ ಮೊದಲಾದವುಗಳನ್ನು ಬಿಂಬಿಸುವ ಪರದೆ (ಮಾನಿಟರ್) ಉಪಯೋಗಿಸುವುದು.
- ಇಸಿಜಿ ತೆಗೆಯುವ ವಿಧಾನ. ತಂತ್ರಜ್ಞಾನ ಅಳವಡಿಕೆಯಿಂದಾಗಿ ನಿಜವಾದ ಇಸಿಜಿಯಲ್ಲಿನ ಅಲೆಗಳಂತೆಯೇ ವರದಿಯಲ್ಲಿ ಬರುವುದು ವಿಶೇಷ.
- ಗಾಯಗಳ ಆರೈಕೆಯ ವಿಧಾನ.
- ಶಸ್ತ್ರಚಿಕಿತ್ಸಾ ವಿಭಾಗದಲ್ಲಿ ಮುಖ್ಯವೆನಿಸುವ ಸ್ತನಗಳ ಪರೀಕ್ಷೆ, ಗಡ್ಡೆಗಳನ್ನು ಪತ್ತೆ ಹಚ್ಚುವ ಬಗೆ, ಗುದದ್ವಾರದ ಪರೀಕ್ಷೆ ಮೊದಲಾದವುಗಳನ್ನು ಗಾತ್ರ ಹಾಗೂ ವಿನ್ಯಾಸದಲ್ಲಿ ಮನುಷ್ಯನ ದೇಹದ ಅಂಗಾಂಗಗಳಂತೆಯೇ ಇರುವ ಮಾದರಿಗಳಲ್ಲಿ ಅಭ್ಯಾಸ ಮಾಡಬಹುದು.
- ಮಾದರಿಗಳಲ್ಲಿ ಅಳವಡಿಸಿದ ಸಾಫ್ಟ್‌ವೇರ್ ಸಹಾಯದಿಂದ ಆಯ್ದ ಹೃದಯದ ಸಮಸ್ಯೆಯಲ್ಲಿ ಮೂಡಿಬರುವ ಹೃದಯದ ಅಸಹಜ ಶಬ್ದಗಳನ್ನು ಕೇಳಬಹುದು.
- ಆಯ್ದ ಆರೋಗ್ಯ ಸಮಸ್ಯೆಗಳಲ್ಲಿ ಕಂಡು ಬರುವ ಸ್ಕ್ಯಾನಿಂಗ್ ಚಿತ್ರಣವನ್ನು ನೋಡುತ್ತಾ ಇಲ್ಲಿ ಸ್ಕ್ಯಾನಿಂಗ್ ಅಭ್ಯಾಸ ಮಾಡಬಹುದು.



ಯಾರೆಲ್ಲ ಪ್ರಯೋಜನ ಪಡೆಯಬಹುದು?

ವೈದ್ಯಕೀಯ, ದಂತ ವೈದ್ಯಕೀಯ, ನರ್ಸಿಂಗ್ ಮತ್ತು ಅರೆ ವೈದ್ಯಕೀಯ ಪದವಿ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳು.

ಯಾವ ಕಾಲೇಜುಗಳಲ್ಲಿ ಇವೆ?

ಬಹುತೇಕ ಎಲ್ಲ ವೈದ್ಯಕೀಯ ಕಾಲೇಜುಗಳಲ್ಲಿಯೂ ಇದೆಯಾದರೂ, ಅನೇಕ ವರ್ಷಗಳ ಹಿಂದೆಯೇ ಸ್ಥಾಪಿತವಾದ ಸುಸಜ್ಜಿತವಾದ ಕೌಶಲ ಪ್ರಯೋಗಾಲಯವು ಕೆಎಂಸಿ ಮಣಿಪಾಲ, ಎ.ಜೆ. ಶೆಟ್ಟಿ, ಕೆ.ಎಸ್. ಹೆಗ್ಡೆ, ಎನೆಪೋಯ, ಫಾದರ್ ಮುಲ್ಲರ್, ಎಂ.ಎಸ್. ರಾಮಯ್ಯ, ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮೊದಲಾದ ಕಡೆ ಇವೆ.

ವಿದೇಶದಲ್ಲಿ ಎಂಎಸ್: ಪ್ರವೇಶ, ಸ್ಕಾಲರ್‌ಶಿಪ್ ಹೇಗೆ?

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ವಿ. ಪ್ರದೀಪ್ ಕುಮಾರ್

- **ನಾನು ಅಂತಿಮ ವರ್ಷದ ಸಿವಿಲ್ ಎಂಜಿನಿಯರಿಂಗ್ ಮಾಡುತ್ತಿದ್ದೇನೆ. ಜರ್ಮನಿಯ ವಿಶ್ವವಿದ್ಯಾಲಯದಲ್ಲಿ ಎಂಎಸ್ ಸಿವಿಲ್ ಎಂಜಿನಿಯರಿಂಗ್ ಮಾಡಲು ಯೋಜಿಸಿದ್ದೇನೆ. ಪ್ರವೇಶ ನಿಯಮಾವಳಿಗಳಲ್ಲದೆ, ಹಿಂದುಳಿದ ಜಾತಿಗೆ ಲಭ್ಯವಿರುವ ಸ್ಕಾಲರ್‌ಶಿಪ್ ಬಗ್ಗೆ ತಿಳಿಸಿ.**

ಪುಷ್ಪ ಶ್ರೀ ಕೆ.ಜೆ., ಊರು ತಿಳಿಸಿಲ್ಲ

ಸಾಮಾನ್ಯವಾಗಿ ಜರ್ಮನಿಯ ಸ್ನಾತಕೋತ್ತರ ಸಿವಿಲ್ ಎಂಜಿನಿಯರಿಂಗ್ ಕೋರ್ಸ್‌ಗಳಲ್ಲಿ ನಾಲ್ಕು ಸೆಮಿಸ್ಟರ್‌ಗಳಿರುತ್ತವೆ. ಆನ್‌ಲೈನ್ ಅರ್ಜಿ ಸಲ್ಲಿಸಿದ ನಂತರ ನಿಮ್ಮ ಅರ್ಹತೆಯ ಆಧಾರದ ಮೇಲೆ ಮುಂದಿನ ಪ್ರಕ್ರಿಯೆ ಅಂದರೆ ಸಂದರ್ಶನ, ಆ್ಯಪ್ಟಿಟ್ಯೂಡ್ ಟೆಸ್ಟ್ ಮಾಡಲಾಗುತ್ತದೆ. ಇಂಗ್ಲಿಷ್ ಭಾಷಾ ಪರಿಣತಿಗೆ ಐಇಎಲ್‌ಟಿಎಸ್‌ನಂತಹ ಪರೀಕ್ಷೆಯಲ್ಲಿ ಪಾಸಾಗಿರಬೇಕು.

ಅಂತರರಾಷ್ಟ್ರೀಯ ವಿದ್ಯಾರ್ಥಿಗಳಿಗೆ ಅರ್ಹತೆ ಮತ್ತು ಆದಾಯವನ್ನು ಪರಿಗಣಿಸಿ ಸ್ಕಾಲರ್‌ಶಿಪ್ ಸೌಲಭ್ಯಗಳು ಲಭ್ಯವಿರುತ್ತವೆ. ಜೊತೆಗೆ ಸಹಾಯಧನ, ಅರೆಕಾಲಿಕ ನೌಕರಿಗಳಂತಹ ಸೌಲಭ್ಯಗಳೂ ಇವೆ. ಅನೇಕ ಖಾಸಗಿ ಸಂಸ್ಥೆಗಳೂ ವಿದ್ಯಾರ್ಥಿಗಳಿಗೆ ನೆರವಾಗುವ ಕಾರ್ಯದಲ್ಲಿ ವಿಶ್ವವಿದ್ಯಾಲಯಗಳ ಜೊತೆ ಕೈಗೂಡಿಸಿವೆ. ಹೆಚ್ಚಿನ ವಿವರಗಳಿಗಾಗಿ ನೀವು ಸೇರ ಬಯಸುವ ವಿಶ್ವವಿದ್ಯಾಲಯದ ವೆಬ್‌ಸೈಟ್ ಅನ್ನು ಪರಿಶೀಲಿಸಿ.

ಇದಲ್ಲದೆ, ಕೇಂದ್ರ ಸರ್ಕಾರದ ನ್ಯಾಷನಲ್ ಓವರ್‌ಸೀಸ್ ಸ್ಕಾಲರ್‌ಶಿಪ್ ಸ್ಕೀಮ್ ಅಡಿಯಲ್ಲಿಯೂ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್ ಸೌಲಭ್ಯವಿದೆ. ಹೆಚ್ಚಿನ ವಿವರಗಳಿಗಾಗಿ ಕೇಂದ್ರ ಸರ್ಕಾರದ ಸೋಷಿಯಲ್ ಜಸ್ಟೀಸ್ ಅಂಡ್ ಎಂಪವರ್‌ಮೆಂಟ್ ಇಲಾಖೆಯ ವೆಬ್‌ಸೈಟ್ ಅನ್ನು ಪರಿಶೀಲಿಸಿ.

- **ಬಿಟೆಕ್ (ಎಐ ಮತ್ತು ಮಷಿನ್ ಲರ್ನಿಂಗ್) ಮತ್ತು ಬಿಟೆಕ್ (ಡೇಟಾ ಸೈನ್ಸ್) ಕೋರ್ಸ್‌ಗಳ ಬಗ್ಗೆ ಮಾಹಿತಿಯನ್ನು ತಿಳಿಸಿ.**

ಹೆಸರು, ಊರು ತಿಳಿಸಿಲ್ಲ

ಇತ್ತೀಚಿನ ವರ್ಷಗಳಲ್ಲಿ ಎಐ, ಮಷಿನ್ ಲರ್ನಿಂಗ್, ಡೇಟಾ ಸೈನ್ಸ್ ತಂತ್ರಜ್ಞಾನಗಳ ಬಳಕೆ ಉದ್ಯಮಗಳಲ್ಲಿ ಹೆಚ್ಚಾಗಿವೆ. ಏಕೆಂದರೆ, ಗ್ರಾಹಕರ ಅನುಭವವನ್ನು ಬದಲಾಯಿಸಿ ಅಥವಾ ಹೆಚ್ಚಿಸಿ, ಉದ್ಯಮಗಳು ತಮ್ಮ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಲು ಈ ತಂತ್ರಜ್ಞಾನಗಳು ನೆರವಾಗುತ್ತವೆ. ವಿಶೇಷವಾಗಿ, ಈಗ ಕ್ಷಿಪ್ರವಾಗಿ ಅಭಿವೃದ್ಧಿಯಾಗುತ್ತಿರುವ ಬ್ಯಾಂಕಿಂಗ್, ಫೈನಾನ್ಸ್, ಇನ್ಶೂರೆನ್ಸ್, ಇ-ಕಾಮರ್ಸ್, ಆರೋಗ್ಯ, ಮನರಂಜನೆ, ರಿಟೇಲ್, ಒಟಿಟಿ ಕ್ಷೇತ್ರಗಳಲ್ಲಿ ಇದರ ಬಳಕೆ ಮತ್ತು ವ್ಯಾಪ್ತಿ ಹೆಚ್ಚುತ್ತಿದೆ. ಹಾಗಾಗಿ ಈ ವಿಷಯಗಳಿಗೆ ಸಂಬಂಧಿತ ಕೋರ್ಸ್‌ಗಳ ಪದವೀಧರರಿಗೆ ಸ್ವಾಭಾವಿಕವಾಗಿಯೇ ಬೇಡಿಕೆ ಹೆಚ್ಚಾಗಿದೆ. ಈ ಕ್ಷೇತ್ರದಲ್ಲಿನ ಉದ್ಯೋಗಿಗಳು ತಮ್ಮ ವೃತ್ತಿ ಸಂಬಂಧಿತ ಜ್ಞಾನ ಮತ್ತು ಕೌಶಲಗಳನ್ನು ಆಗಾಗ ಪರಿಷ್ಕರಿಸುತ್ತಿರಬೇಕು.

- **ನಾನು ಬಿಎಸ್‌ಸಿ (ಸಿಬಿಝಡ್) ಆದ ಮೇಲೆ ಎಂಎ ಮಾಡಬಹುದೆ?**

ಹೆಸರು, ಊರು ತಿಳಿಸಿಲ್ಲ

ಸಾಮಾನ್ಯವಾಗಿ ಪದವಿಯಲ್ಲಿ ಓದಿರುವ ವಿಷಯಗಳಲ್ಲಿ ಸ್ನಾತಕೋತ್ತರ ಪದವಿ ಕೋರ್ಸ್‌ಗಳನ್ನು ಮಾಡಬಹುದು. ಹಾಗಾಗಿ ಆಯಾ ವಿಷಯಗಳಿಗೆ ಸಂಬಂಧಿಸಿದಂತೆ ನಿಯಮಾವಳಿಗಳಿವೆ. ಆದರೂ, ಬಿಎಸ್‌ಸಿ (ಸಿಬಿಝಡ್) ಆದ ಮೇಲೆ ಕೆಲವು ನಿಯಮಿತ ವಿಷಯಗಳಲ್ಲಿ ಮಾತ್ರ ಎಂಎ ಮಾಡುವ ಅವಕಾಶಗಳಿವೆ. ಉದಾಹರಣೆಗೆ, ಮೈಸೂರು ವಿಶ್ವವಿದ್ಯಾಲಯದಲ್ಲಿ ಅನೇಕ ವಿಷಯಗಳಲ್ಲಿ ನೀವು ಎಂಎ ಮಾಡುವ ಸಾಧ್ಯತೆಯಿದೆ.

ಈಗ, ನೂತನ ರಾಷ್ಟ್ರೀಯ ಶಿಕ್ಷಣ ನೀತಿ (2020) ಯಂತೆ ಸ್ನಾತಕೋತ್ತರ ಮತ್ತು ಪಿಎಚ್‌ಡಿ ಪದವಿಗಳ ಉದ್ದೇಶ, ನಿಯಮ ಮತ್ತು ಪ್ರವೇಶ ಪ್ರಕ್ರಿಯೆಯಲ್ಲಿ ತೀವ್ರವಾದ ಬದಲಾವಣೆಗಳಿವೆ. ಆದರೆ, ಅನುಷ್ಠಾನದ ಪ್ರಕ್ರಿಯೆ ಈಗಷ್ಟೇ ಶುರುವಾಗುತ್ತಿದೆ. ಹಾಗಾಗಿ, ಯಾವ ವಿಷಯದಲ್ಲಿ ನೀವು ಎಂಎ ಮಾಡಬೇಕೆಂದು ನಿರ್ಧರಿಸಿ, ನಿಖರವಾದ ಮಾಹಿತಿಗಾಗಿ ನೀವು ಇಚ್ಛಿಸಿರುವ ವಿಶ್ವವಿದ್ಯಾಲಯದಲ್ಲಿ ವಿಚಾರಿಸಿ.

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣ ತಜ್ಞ ಮತ್ತು ವೃತ್ತಿ ಸಲಹೆಗಾರ **ವಿ. ಪ್ರದೀಪ್ ಕುಮಾರ್** ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು **shikshana@prajavani.co.in** ಗೆ ಕಳಿಸಬಹುದು.

ವಿದ್ಯಾರ್ಥಿ ವೇತನ ಕೈಪಿಡಿ

ನ್ಯಾಷನಲ್ ಸ್ಕಾಲರ್‌ಶಿಪ್ ಸ್ಕೀಮ್ (ಸಮಾಧಾನ್) - II ಎಚ್‌ಆರ್‌ಡಿಎಂ, 2021

- **ವಿವರ:** 16–40 ವಯೋಮಾನದ ಒಳಗೆ ಓದುತ್ತಿರುವ ಎಲ್ಲರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.
- **ಅರ್ಹತೆ:** ಅರ್ಜಿದಾರರು 10, 12ನೇ ತರಗತಿ, ಪದವಿ, ಸ್ನಾತಕೋತ್ತರ ಪದವಿ, ಡಿಪ್ಲೊಮಾ ಮುಗಿಸಿರಬೇಕು.
- **ಆರ್ಥಿಕ ಸಹಾಯ:** ವೇರಿಯಬಲ್ ಅವಾರ್ಡ್ (ಕಲಂ 5ರ ಅನ್ವಯ ಧನ ಸಹಾಯ)
- **ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:** 15 ಜುಲೈ, 2021
- **ಅರ್ಜಿ ಸಲ್ಲಿಕೆ ವಿಧಾನ:** ಆನ್‌ಲೈನ್ ಮೂಲಕ
- **ಹೆಚ್ಚಿನ ಮಾಹಿತಿಗೆ:** www.b4s.in/praja/SHR7

ಕೃಪೆ: buddy4study.com

ಎಸ್ಸೆಸ್ಸೆಲ್ಸಿ ದಿಕ್ಸೂಚಿ

ಬಹುಆಯ್ಕೆ ಮಾದರಿ ಪ್ರಶ್ನೆಪತ್ರಿಕೆ

ವಿಷಯ: ಗಣಿತ

ಈ ಕೆಳಗಿನ ಅಪೂರ್ಣ ಹೇಳಿಕೆಗಳಿಗೆ ಕೊಟ್ಟಿರುವ ನಾಲ್ಕು ಪರ್ಯಾಯಗಳಲ್ಲಿ ಸರಿಯಾದುದನ್ನು ಆಯ್ಕೆ ಮಾಡಿ ಬರೆಯಿರಿ.

1. ಮೊದಲ ಪದ 'a' ಮತ್ತು ಸಾಮಾನ್ಯ ವ್ಯತ್ಯಾಸ 'd' ಆಗಿರುವ ಸಮಾಂತರ ಶ್ರೇಢಿಯ n ನೇ ಪದ

A) $a_n = a + (n+1)$ B) $a_n = a + (n-1)d$

C) $a_n = a + (n+1)d$ D) $a_n = a - (n+1)d$

2. ಸಮಾಂತರ ಶ್ರೇಢಿಯಲ್ಲಿ nನೇ ಪದ $a_n = 3n + 2$ ಆದಾಗ 4ನೇ ಪದ

A) 18 B) 12 C) 24 D) 14

3. ಮೊದಲನೆ ಪದ 3 ಮತ್ತು ಸಾಮಾನ್ಯ ವ್ಯತ್ಯಾಸ 5 ಆಗಿರುವ ಒಂದು ಸಮಾಂತರ ಶ್ರೇಢಿಯ ಪದಗಳು

A) 3,8,12,…. B) 3,8,13,…

C) 3,7,12,….. D) 3,5,7,…..

4. ಸಮಾಂತರ ಶ್ರೇಢಿ 5,8,11, …….ರ 10ನೇ ಪದ

A) 32 B) 27 C) 31 D) 35

5. ಒಂದು ಸಮಾಂತರ ಶ್ರೇಢಿಯಲ್ಲಿ $s_5 = 38$ ಮತ್ತು $s_4 = 24$ ಆದರೆ ಶ್ರೇಢಿಯ ಐದನೇ ಪದ

A) 16 B) 14 C) 62 D) 12

6. ΔABCಯಲ್ಲಿ XY|| BC, ಆದರೆ $\frac{AX}{XB}$ =

(A) $\frac{AX}{AY}$ (B) $\frac{AX}{AB}$ (C) $\frac{AY}{YC}$ (D) $\frac{AC}{AY}$

7. ΔABC~ΔDEF ಮತ್ತು $\frac{BC}{EF} = \frac{5}{7}$ ಆದಾಗ, $\frac{\Delta ABC \text{ ವಿಸ್ತೀರ್ಣ}}{\Delta \overset{def}{=} \text{ ವಿಸ್ತೀರ್ಣ}} = ¿$

(A) $\frac{5}{7}$ (B) $\frac{25}{49}$ (C) $\frac{49}{25}$ (D) $\frac{10}{14}$

8. ಈ ಕೆಳಗಿನವುಗಳಲ್ಲಿ ಪೈಥಾಗೊರಿಯ ತ್ರಿವಳಿ



(A) 7, 5 , 6

(B) 4, 3 , 6

(C) 12, 13, 5

(D) 8, 10, 12

9. ΔPQR ನಲ್ಲಿ ∠PQR = 90°. PR = 13cm & QR = 5cm, PQ ನ ಉದ್ದ

(A) 17 cm (B) 18 cm

(C) 10 cm (D) 12 cm

10. ಕೆಳಗಿನವುಗಳಲ್ಲಿ ಸರಿಯಾದ ಹೇಳಿಕೆ ಯಾವುದು.

(A) ಎಲ್ಲಾ ಆಯತಗಳು ಸಮರೂಪ

(B) ಎಲ್ಲಾ ವಜ್ರಾಕೃತಿಗಳು ಸಮರೂಪ

(C) ಎಲ್ಲಾ ಲಂಬಕೋನ ತ್ರಿಭುಜಗಳು ಸಮರೂಪ

(D) ಎಲ್ಲಾ ಸಮಬಾಹು ತ್ರಿಭುಜಗಳು ಸಮರೂಪ

ವಿಷಯ: ವಿಜ್ಞಾನ

1. ಒಂದು ದ್ರಾವಣ ನೀಲಿ ಲಿಟ್ಮಸ್ ಅನ್ನು ಕೆಂಪು ಬಣ್ಣಕ್ಕೆ ಬದಲಿಸುತ್ತದೆ. ಈ ಕೆಳಗಿನ ಯಾವುದನ್ನು ಹೆಚ್ಚಿನ ಪ್ರಮಾಣದಲ್ಲಿ ದ್ರಾವಣಕ್ಕೆ ಸೇರಿಸಿದಾಗ ಬಣ್ಣ ಬದಲಾವಣೆ ಅದಲು ಬದಲಾಗುತ್ತದೆ?

ಎ) ಸುಣ್ಣದ ತಿಳಿ ನೀರು ಬಿ) ಹೈಡ್ರೋಕ್ಲೋರಿಕ್ ಆಮ್ಲ

ಸಿ) ಸಲ್ಫೂರಿಕ್ ಆಮ್ಲ ಡಿ) ನೈಟ್ರಿಕ್ ಆಮ್ಲ

2. ಜಠರದಲ್ಲಿ ಅಧಿಕ ಆಮ್ಲದಿಂದ ಅಜೀರ್ಣತೆ ಉಂಟಾಗಿದೆ, ಈ ನೋವಿನಿಂದ ಮುಕ್ತಿ ಪಡೆಯಲು ಬಳಸುವ ಔಷಧ

ಎ) ಅಗ್ನಿ ಶಾಮಕ ಬಿ) ಆಮ್ಲ ಶಾಮಕ

ಸಿ) ಪ್ರತಾಮ್ಲ ಶಾಮಕ ಡಿ) ಆಮ್ಲ ನಿರೋಧಕ

3. ಈ ಕೆಳಗಿನವುಗಳಲ್ಲಿ ಯಾವುದು ಪ್ರತ್ಯಾಮ್ಲವಲ್ಲ?

ಎ) NaOH ಬಿ) CH_20H

ಸಿ) KOH ಡಿ) $Ca(OH)_2$

4. ಈ ಕೆಳಗಿನವುಗಳಲ್ಲಿ ಯಾವುದು ಅಯಾನಿಕ್ ಸಂಯುಕ್ತವಲ್ಲ?

ಎ) NaCl ಬಿ) KCl

ಸಿ) CCl_4 ಡಿ) $CaCl_2$

5. ಕಬ್ಬಿಣವವನ್ನು ತೇವ ಪೂರಿತ ಗಾಳಿಗೆ ದೀರ್ಘಕಾಲದವರೆಗೆ ತೆರೆದಿಟ್ಟಾಗ ಅದರ ಮೇಲೆ ಉಂಟಾಗುವ ಚಕ್ಕೆಯಂತಹ ಪದರದ ಬಣ್ಣ

ಎ) ಕೆಂಪು ಬಿ) ಕಂದು ಸಿ) ಕಪ್ಪು ಡಿ) ಹಸಿರು

6. ಈ ಕೆಳಗಿನ ಯಾವ ಲೋಹಗಳು ಗಾಳಿಯೊಂದಿಗೆ ವರ್ತಿಸಿ ಉಭಯವರ್ತಿ ಆಕ್ಸೈಡ್‌ಗಳನ್ನು ಉಂಟುಮಾಡುತ್ತವೆ?

i) ಅಲ್ಯೂಮಿನಿಯಂ ii) ಸೋಡಿಯಂ

iii) ಸತು iv) ಪೊಟ್ಯಾಸಿಯಂ

ಎ) i ಮತ್ತು ii , ಬಿ) ii ಮತ್ತು iv ,

ಸಿ) ii ಮತ್ತು iii , ಡಿ) i ಮತ್ತು iii

7. ಲೋಹಗಳು ನೈಟ್ರಿಕ್ ಆಮ್ಲದ ಜೊತೆ ಪ್ರತಿವರ್ತಿಸಿದಾಗ ಹೈಡ್ರೋಜನ್ ಅನಿಲ ಬಿಡುಗಡೆ ಮಾಡುವುದಿಲ್ಲ. ಏಕೆಂದರೆ ಅದು

ಎ) ಪ್ರಬಲ ಅಪಕರ್ಷಕ

ಬಿ) ಪ್ರಬಲ ಉತ್ಕರ್ಷಕ

ಸಿ) ದುರ್ಬಲ ಅಪಕರ್ಷಕ

ಡಿ) ದುರ್ಬಲ ಉತ್ಕರ್ಷಕ

8. ಅಲ್ಕೀನ್ ಸರಣಿಯಲ್ಲಿನ ಮೊದಲ ಸದಸ್ಯನ ಅಣುಸೂತ್ರ

ಎ) C_2H_6 ಬಿ) C_2H_4

ಸಿ) C_2H_2 ಡಿ) CH_4

9. CH3-CHO ನ ರಾಸಾಯನಿಕ ಹೆಸರು

ಎ) ಎಥನಾಲ್ ಬಿ) ಎಥನ್ಯಾಲ್

ಸಿ) ಮೆಥನಾಲ್ ಡಿ) ಮೆಥನ್ಯಾಲ್

10. ಸಾಬೂನುಗಳ ಅಣುಗಳು ಉದ್ದಸರಪಳಿ ಕಾರ್ಬಾಕ್ಸಿಲಿಕ್ ಆಮ್ಲಗಳ

i) ಸೋಡಿಯಂ ಲವಣಗಳು ii) ಕ್ಯಾಲ್ಸಿಯಂ ಲವಣಗಳು

iii) ಪೊಟ್ಯಾಸಿಯಂ ಲವಣಗಳು iv) ಮೆಗ್ನೀಸಿಯಂ ಲವಣಗಳು

ಎ) i ಮತ್ತು ii, ಬಿ) ii ಮತ್ತು iii,

ಸಿ) i ಮತ್ತು iv, ಡಿ) i ಮತ್ತು iii

Subject : Second Language English

1. My hands are dirty. Can you please pour some water? The language function of the given sentence is

A. seeking help B. surprise

C. ability D. request

2. The word which collocates with ' freedom' is

A. wrestler B. boxer C. politician D. fighter

3. The word which has three syllables is

A. apparition B. surrender

C. negotiate D. seeker

4. He gave me a one rupee note. The passive form of the given sentence is

A. A one rupee note was being given to me by him.

B. A one rupee note is given to me by him.

C. A one rupee note was given to me by him.

D. A one rupee note had been given to me by him.

5. Sonali's mother ___________ her a necklace last month.

The appropriate tense form of the verb to be used here is

A. buying B. buys C. bought D. buy

6. The appropriate prefix to be added to form the opposite of 'justice' is

A. in B. im C. un D. mis

7. A broken pot never holds water. The part of speech of the underlined word is a/an

A. Verb B. Adverb C. Adjective D. Preposition

8. Baba ___________ his expenses to buy books. The correct phrasal verb to be used here is

A. cut on B. cut in C. cut off D. cut down

9. Daksha was wiser than any other girl in the kingdom. The superlative form of the above sentence is

A. Daksha is the wisest girl in the kingdom.

B. No other girl was wisest than Daksha in the kingdom

C. Daksha was the wisest girl in the kingdom.

D. Daksha is wisest of girls in the kingdom.

10. If I had a pencil now, I ___________sketched a beautiful portrait. The correct words to be used here to complete the 'if' clause sentence are

A. would have B. shouldn't have

C. wouldn't have D. should have

(ಪ್ರಶ್ನೆಪತ್ರಿಕೆ ಸಂಯೋಜನೆ: ಸ್ವಾಮಿ ಎಚ್.ಎಸ್, ಗರ್ಲ್ಸ್ ಹೈಸ್ಕೂಲ್, ದೇವನಹಳ್ಳಿ ಎ. ಶ್ರೀನಿವಾಸ್, ಸರ್ಕಾರಿ ಪ್ರೌಢ ಶಾಲೆ, ಮುತ್ತೂರು, ಶಿಡ್ಲಘಟ್ಟ ಎಂ.ಎಸ್. ವರ್ಧಿನಿ, ಸರ್ಕಾರಿ ಜೂನಿಯರ್ ಕಾಲೇಜ್, ದೇವನಹಳ್ಳಿ)

ಪೊಲೀಸ್ ಕಾನ್‌ಸ್ಟೇಬಲ್ ನೇಮಕಾತಿ ಪರೀಕ್ಷೆಯ ಮಾದರಿ ಪ್ರಶ್ನೆಗಳು

ಭಾಗ -17

225. ಒಂದು ಕೃಷಿ ಪ್ರದೇಶದಲ್ಲಿ ಒಂದೇ ಸಮಯದಲ್ಲಿ ಎರಡು-ಮೂರು ಬೆಳೆಗಳನ್ನು ಬೆಳೆಯುವುದನ್ನು ಏನೆಂದು ಕರೆಯುತ್ತಾರೆ?

ಎ) ಜೀವನಾಧಾರ ಬೆಳೆಗಾರಿಕೆ

ಬಿ) ನೆಲದ ಉಪಯೋಗದ ಬೆಳೆಗಾರಿಕೆ

ಸಿ) ವಾಣಿಜ್ಯ / ಮಿಶ್ರ ಬೆಳೆಗಾರಿಕೆ

ಡಿ) ಪರಿಶ್ರಮಪೂರ್ಣ ಬೆಳೆಗಾರಿಕೆ

226. ಈ ಕೆಳಗಿನವುಗಳಲ್ಲಿ ಯಾವುದನ್ನು ವಾಣಿಜ್ಯ ಬೆಳೆ ಎಂದು ಕರೆಯುತ್ತಾರೆ?

ಎ) ಗೋಧಿ ಬಿ) ರಾಗಿ

ಸಿ) ಜೋಳ ಡಿ) ಕಬ್ಬು

227. ವಾತಾವರಣದಲ್ಲಿ 'ಓಝೋನ್' ಮಹತ್ವವೇನು?

ಎ) ಭೂಮಿಯ ಮೇಲೆ ಅದು ಹಸಿರು ಮನೆ ಪರಿಣಾಮ ಉಂಟುಮಾಡುತ್ತದೆ

ಬಿ) ನ್ಯೂಕ್ಲಿಯಸ್‌ಗಳನ್ನು ಘನೀಕರಿಸುತ್ತದೆ

ಸಿ) ಅಲ್ಟ್ರಾ ವೈಲೆಟ್ ಕಿರಣಗಳಿಂದ ಭೂಮಿಗೆ ರಕ್ಷಣೆ ನೀಡುತ್ತದೆ

ಡಿ) ನೀಲಿ ಬೆಳಕನ್ನು ಚದುರಿಸಲು ಸಹಾಯ ಮಾಡುತ್ತದೆ

228. 'ಸೈಬರ್ ಕ್ರೈಂ' ಎಂದರೆ, ನೀವು ಏನೆಂದು ಅರ್ಥ ಮಾಡಿಕೊಂಡಿದ್ದೀರಾ?

ಎ) ಸೈಬರ್ ಕೆಫೆಯಲ್ಲಿ ನಡೆಯುವ ಕೊಲೆ

ಬಿ) ಕಂಪ್ಯೂಟರ್ ಅಥವಾ ಮೊಬೈಲ್ ಮೂಲಕ ಅಪರಾಧ ಕೃತ್ಯ ಎಸಗುವುದು

ಸಿ) ಕಂಪ್ಯೂಟರ್ ಸೆಂಟರ್‌ನಲ್ಲಿ ನಡೆಯುವ ಹಣದ ಕಳವು

ಡಿ) ಸೈಬರ್ ಕೆಫೆ ಎದುರು ನಡೆಯುವ ವಾಹನ ಕಳವು

229. 'ಹುತ್ತರಿ' ಕರ್ನಾಟಕದ ಯಾವ ಭಾಗದ ಪ್ರಸಿದ್ಧ ಹಬ್ಬ?

ಎ) ಕೊಡಗು ಬಿ) ಮೈಸೂರು

ಸಿ) ಕಲಬುರ್ಗಿ ಡಿ) ಹಾವೇರಿ

230. ನಾಗಾಲ್ಯಾಂಡ್ ರಾಜ್ಯದ ರಾಜಧಾನಿ ಯಾವುದು?

ಎ) ಕೋಹಿಮಾ ಬಿ) ಅಗರ್ತಲ

ಸಿ) ಇಂಫಾಲ ಡಿ) ಡಿಸ್ಪುರ

231. 'ಕರ್ನಾಟಕ ಪೊಲೀಸ್ ಅಕಾಡೆಮಿ' ಯಾವ ಊರಿನಲ್ಲಿ ಇದೆ?

ಎ) ಮೈಸೂರು ಬಿ) ಬೆಂಗಳೂರು

ಸಿ) ಗಂಗಿಬಾವಿ ಡಿ) ಬೆಳಗಾವಿ

232. ಈ ಸರಣಿಯಲ್ಲಿ ತಪ್ಪಾಗಿರುವ ಸಂಖ್ಯೆಯನ್ನು ತಿಳಿಸಿರಿ 2, 5, 10, 50, 500, 5000

ಎ) 5000 ಬಿ) 500

ಸಿ) 10 ಡಿ) 50

233. ಒಂದು ಚಿನ್ನದ ಬ್ರೇಸ್ಲೆಟ್ ಅನ್ನು ₹ 14,500 ಕ್ಕೆ ಮಾರಿದಾಗ ಶೇ 20 ರಷ್ಟು ನಷ್ಟ ಉಂಟಾಗುತ್ತದೆ. ಹಾಗಿದ್ದಲ್ಲಿ ಬ್ರೇಸ್ಲೆಟ್‌ನ ಮೂಲಬೆಲೆ ಏನು?

ಎ) ₹ 18,125 ಬಿ) ₹ 17,400

ಸಿ) ₹ 15,225 ಡಿ) ₹ 16,600

234. ಸೈನಾ ನೆಹ್ವಾಲ್ ಯಾವ ಕ್ರೀಡೆಯಲ್ಲಿ ಪ್ರಸಿದ್ಧಿ ಹೊಂದಿದ್ದಾರೆ?

ಎ) ಟೆನಿಸ್ ಬಿ) ಬ್ಯಾಡ್ಮಿಂಟನ್

ಸಿ) ಟೇಬಲ್ ಟೆನಿಸ್ ಡಿ) ಕುಸ್ತಿ

235. ಜಾಗತಿಕ ಜನಸಂಖ್ಯಾ ದಿವಸವನ್ನು ಯಾವತ್ತು ಆಚರಿಸುತ್ತಾರೆ?

ಎ) ಪ್ರತಿವರ್ಷ 14ನೇ ಜುಲೈ

ಬಿ) ಪ್ರತಿವರ್ಷ 18ನೇ ಜುಲೈ

ಸಿ) ಪ್ರತಿವರ್ಷ 11ನೇ ಜುಲೈ

ಡಿ) ಪ್ರತಿವರ್ಷ 27ನೇ ಜುಲೈ

236. ಲಿಂಗಾನುಪಾತ ಎಂದರೆ

ಎ) ಜಗತ್ತಿನ ಒಟ್ಟು ಜನಸಂಖ್ಯೆ ಮತ್ತು ದೇಶದ ಒಟ್ಟು ಜನಸಂಖ್ಯೆಯ ನಡುವಿನ ಅನುಪಾತ

ಬಿ) ದೇಶದ ಒಟ್ಟು ಜನಸಂಖ್ಯೆ ಮತ್ತು ರಾಜ್ಯದ ಒಟ್ಟು ಜನಸಂಖ್ಯೆಯ ನಡುವಿನ ಅನುಪಾತ

ಸಿ) ವಯಸ್ಸಾದವರ ಮತ್ತು ಯುವಕರ ನಡುವಿನ ಅನುಪಾತ

ಡಿ) ಪುರುಷರ ಮತ್ತು ಮಹಿಳೆಯರ ಜನಸಂಖ್ಯೆಯ ನಡುವಿನ ಅನುಪಾತ

237. 'ಮೆಗಲೋಪೊಲೀಸ್' ಎಂಬುದು ಒಂದು ಗ್ರೀಕ್ ಭಾಷೆಯ ಪದ. ಅದರ ಅರ್ಥವೇನು?

ಎ) ಮಹಾನ್ ಪೊಲೀಸ್ (ಗ್ರೇಟ್ ಪೊಲೀಸ್)

ಬಿ) ಮಹಾನಗರ (ಗ್ರೇಟ್ ಸಿಟಿ)

ಸಿ) ಮಹಾ ರಾಜಕಾರಣಿ (ಗ್ರೇಟ್ ಪೊಲಿಟಿಷಿಯನ್)

ಡಿ) ಮಹಾರಾಜರ ಭದ್ರತಾ ಪಡೆ (ಗಾರ್ಡ್ ಆಫ್ ಗ್ರೇಟ್ ಕಿಂಗ್)

238. HDI ಇದರ ವಿಸ್ತೃತ ರೂಪವೇನು?

ಎ) ಹ್ಯೂಮನ್ ಡೆವಲಪ್‌ಮೆಂಟ್ ಇಂಡೆಕ್ಸ್

ಬಿ) ಹ್ಯೂಮನ್ ಡೆವಲಪ್‌ಮೆಂಟ್ ಇನ್ ಇಂಡಿಯಾ

ಸಿ) ಹೆಲ್ತ್ ಡೆವಲಪ್‌ಮೆಂಟ್ ಇಂಡೆಕ್ಸ್

ಡಿ) ಹೆಲ್ತ್ ಡೆವಲಪ್‌ಮೆಂಟ್ ಇನ್ ಇಂಡಿಯಾ

239. 'ಧರ್ಮಚಕ್ರ' ಇದು ಯಾವ ಧರ್ಮದ ಸಂಕೇತ?

ಎ) ಜೈನ ಧರ್ಮ ಬಿ) ಸಿಖ್ ಧರ್ಮ

ಸಿ) ಬುದ್ಧ ಧರ್ಮ ಡಿ) ಪಾರ್ಸಿ ಧರ್ಮ

240. 'ದೇವನಾಂಪ್ರಿಯ' ಇದು ಯಾರ ಬಿರುದಾಗಿತ್ತು?

ಎ) ಅಶೋಕ ಬಿ) ಚಂದ್ರಗುಪ್ತ ಮೌರ್ಯ

ಸಿ) ಬಿಂದುಸಾರ ಡಿ) ಗೌತಮಿಪುತ್ರ

(ಪ್ರಶ್ನೋತ್ತರ ಸಂಯೋಜನೆ: ಸ್ಲೇಟ್ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರ, ಧಾರವಾಡ)

ಭಾಗ–16 ರ ಉತ್ತರ: 218. ಬಿ, 219. ಎ, 220. ಬಿ, 221. ಎ, 222. ಎ, 223. ಬಿ, 224. ಸಿ

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ

ಬದುಕಿರುವಷ್ಟು ದಿನ ಒಳ್ಳೆಯ ರೀತಿಯಲ್ಲಿ ಇದ್ದು, ನಂತರ ತನ್ನ ಸುತ್ತಣ ಜನತೆಯ ನೆನಪಿನಲ್ಲಿ ಉಳಿದು, 'ಎಂಥ ಹಿರಿಯ ಬದುಕು!' ಅನಿಸುವ ಬಾಳ್ವೆ ಎಷ್ಟು ಜನರ ಪಾಲಿಗಿದ್ದೀತು?

-ಕೋಟ ಶಿವರಾಮ ಕಾರಂತ

ಶೈಕ್ಷಣಿಕ ವಲಯದ ನೇಮಕಾತಿಗಳಲ್ಲಿ 'ರಾಜಕೀಯ' ಕೊನೆಯಾಗಲಿ

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯಕ್ಕೆ ಜೆಡಿಎಸ್– ಕಾಂಗ್ರೆಸ್ ನೇತೃತ್ವದ ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ ನೇಮಕಗೊಂಡಿದ್ದ ಐವರು ಸಿಂಡಿಕೇಟ್ ಸದಸ್ಯರು ಮತ್ತು ಇಬ್ಬರು ಸೆನೆಟ್ ಸದಸ್ಯರನ್ನು ವಜಾಗೊಳಿಸಿ, ಅವರ ಸ್ಥಾನಕ್ಕೆ ಹೊಸ ಸದಸ್ಯರನ್ನು ನೇಮಿಸಿದ್ದ ಬಿಜೆಪಿ ನೇತೃತ್ವದ ಸರ್ಕಾರದ ಕ್ರಮವನ್ನು ಹೈಕೋರ್ಟ್ ಅಸಿಂಧುಗೊಳಿಸಿದೆ. ಹೊಸ ನೇಮಕಾತಿಯನ್ನು ರದ್ದುಗೊಳಿಸುವುದರ ಜತೆಯಲ್ಲೇ ಹಿಂದಿನ ಸದಸ್ಯರಿಗೆ ಅವಧಿ ಪೂರ್ಣಗೊಳಿಸಲು ಅವಕಾಶ ಕಲ್ಪಿಸಬೇಕೆಂದು ನಿರ್ದೇಶನ ನೀಡಿರುವ ನ್ಯಾಯಾಲಯವು ಶೈಕ್ಷಣಿಕ ವಲಯದ ಹುದ್ದೆಗಳ ನೇಮಕ ವಿಚಾರವನ್ನು ರಾಜಕೀಯ ದೃಷ್ಟಿಕೋನದಿಂದ ನೋಡುವುದನ್ನು ಕೊನೆಗೊಳಿಸುವಂತೆ ಕಟುವಾದ ಮಾತುಗಳಲ್ಲಿ ಸೂಚಿಸಿದೆ. ರಾಜ್ಯದಲ್ಲಿ ವಿಶ್ವವಿದ್ಯಾಲಯಗಳ ಕುಲಪತಿ, ಕುಲಸಚಿವ, ಸಿಂಡಿಕೇಟ್ ಮತ್ತು ಸೆನೆಟ್ ಸದಸ್ಯರು, ಉನ್ನತ ಶಿಕ್ಷಣ ಕ್ಷೇತ್ರದ ಪ್ರಮುಖ ಸಂಸ್ಥೆಗಳ ಮುಖ್ಯಸ್ಥರ ನೇಮಕಾತಿ ಸೇರಿದಂತೆ ಶೈಕ್ಷಣಿಕ ಕ್ಷೇತ್ರದ ಮುಂಚೂಣಿ ಹುದ್ದೆಗಳ ಭರ್ತಿಯಲ್ಲಿ ಪಕ್ಷ ರಾಜಕಾರಣ ನುಸುಳಿರುವುದು ಇದು ಮೊದಲೇನೂ ಅಲ್ಲ. ಹಲವು ದಶಕಗಳಿಂದ ಈ ಕೆಟ್ಟ ಚಾಳಿ ಅನೂಚಾನವಾಗಿ ನಡೆದುಕೊಂಡೇ ಬಂದಿದೆ. ಎಷ್ಟೇ ವಿರೋಧಗಳು ಬಂದರೂ ಶೈಕ್ಷಣಿಕ ಸಂಸ್ಥೆಗಳಲ್ಲಿನ ನೇಮಕಾತಿಯ ಅಧಿಕಾರವನ್ನು ತಮ್ಮ ರಾಜಕೀಯ ಅನುಕೂಲಕ್ಕಾಗಿ ಬಳಸುವುದನ್ನು ಅಧಿಕಾರಕ್ಕೇರಿದ ಯಾವ ರಾಜಕೀಯ ಪಕ್ಷವೂ ನಿಲ್ಲಿಸಿಲ್ಲ. ಜೆಡಿಎಸ್–ಕಾಂಗ್ರೆಸ್ ನೇತೃತ್ವದ ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರನ್ನಾಗಿ ಡಾ. ದೀಪ್ತಿ ಭಾವಾ, ಡಾ. ಕಿರಣ್ ಕಾಳಯ್ಯ, ಡಾ. ಉಮೇಶ್, ಡಾ. ವಿ.ಆರ್.ಸುಧೀರ್ ಮತ್ತು ಡಾ. ಎಚ್.ಎನ್.ರವೀಂದ್ರ ಅವರನ್ನು ನೇಮಿಸಿ 2018ರ ಅಕ್ಟೋಬರ್ 16ರಂದು ಆದೇಶ ಹೊರಡಿಸಲಾಗಿತ್ತು. ಡಾ. ಚಿಕ್ಕಲಿಂಗಯ್ಯ ಮತ್ತು ಡಾ. ಆನಂದ ಬಸವರಾಜ ಜಾಬಶೆಟ್ಟಿ ಅವರನ್ನು ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಸೆನೆಟ್ ಸದಸ್ಯರನ್ನಾಗಿ ಅದೇ ಸಂದರ್ಭದಲ್ಲಿ ನೇಮಿಸಲಾಗಿತ್ತು. ಈ ಎಲ್ಲರಿಗೂ ಮೂರು ವರ್ಷಗಳ ಅಧಿಕಾರದ ಅವಧಿ ಇತ್ತು. ಆದರೆ, ಬಿಜೆಪಿ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬರುತ್ತಿದ್ದಂತೆಯೇ ಈ ಏಳು ಜನರ ನೇಮಕಾತಿಯನ್ನು ಅವಧಿಗೂ ಮೊದಲೇ ರದ್ದುಗೊಳಿಸಿ, ಹೊಸ ಸದಸ್ಯರನ್ನು ನೇಮಿಸಿ 2020ರ ಅಕ್ಟೋಬರ್ 23ರಂದು ಆದೇಶ ಹೊರಡಿಸಲಾಗಿತ್ತು. ಈ ಕ್ರಮವನ್ನು ಪ್ರಶ್ನಿಸಿ ಡಾ. ದೀಪ್ತಿ ಮತ್ತು ಇತರರು ಸಲ್ಲಿಸಿದ್ದ ಅರ್ಜಿಯನ್ನು ಮಾನ್ಯ ಮಾಡಿರುವ ನ್ಯಾಯಾಲಯವು 'ರಾಜ್ಯದಲ್ಲಿ ಆಡಳಿತ ಪಕ್ಷ ಬದಲಾಗುತ್ತಿದ್ದಂತೆಯೇ ಸಿಂಡಿಕೇಟ್ ಮತ್ತು ಸೆನೆಟ್ ಸದಸ್ಯರನ್ನೂ ಬದಲಾವಣೆ ಮಾಡಲಾಗಿದೆ. ಇದರ ಹಿಂದೆ ರಾಜಕೀಯ ಪೂರ್ವಗ್ರಹವನ್ನು ಅಲ್ಲಗಳೆಯಲಾಗದು' ಎಂದು ಹೇಳಿದೆ. ಈ ಏಳು ಸದಸ್ಯರನ್ನು ಯಾವುದೇ ಸಕಾರಣ ನೀಡದೇ ಅಕಾಲಿಕವಾಗಿ ಹುದ್ದೆಯಿಂದ ತೆರವು ಮಾಡಲಾಗಿತ್ತು.

ಹುದ್ದೆಯೊಂದರಿಂದ ವ್ಯಕ್ತಿಯನ್ನು ಅವಧಿಪೂರ್ವದಲ್ಲಿ ತೆರವು ಮಾಡುವುದು ಅನಿವಾರ್ಯ ಆದಲ್ಲಿ, ಸಾಕ್ಷ್ಯಾಧಾರಗಳ ಸಹಿತ ಸಕಾರಣ ದಾಖಲಿಸುವುದು ಕಡ್ಡಾಯವಾಗಬೇಕು

ಇದೇ ವಿಶ್ವವಿದ್ಯಾಲಯದ ಹಂಗಾಮಿ ಕುಲಪತಿಯನ್ನಾಗಿ ಖಾಸಗಿ ದಂತ ವೈದ್ಯಕೀಯ ಕಾಲೇಜೊಂದರ ಪ್ರಾಂಶುಪಾಲರೊಬ್ಬರನ್ನು ನೇಮಿಸಿರುವ ರಾಜ್ಯಪಾಲರ ಕ್ರಮವೂ ವಿವಾದಕ್ಕೆ ಎಡೆಮಾಡಿದೆ. ಆಡಳಿತ ಪಕ್ಷದ ಇಚ್ಛೆ, ಒಲವು– ನಿಲುವುಗಳಿಗೆ ಅನುಸಾರವಾಗಿ ಶೈಕ್ಷಣಿಕ ಕ್ಷೇತ್ರದ ಹುದ್ದೆಗಳಿಗೆ ನೇಮಕಾತಿ ನಡೆಸುವ ಕೆಟ್ಟ ಪ್ರವೃತ್ತಿಯು ಶಿಕ್ಷಣ ಕ್ಷೇತ್ರದಲ್ಲಿ ರಾಜಕೀಯ ಪೈಪೋಟಿಗೆ ಕುಮ್ಮಕ್ಕು ನೀಡುತ್ತಿದೆ. ಹುದ್ದೆಗಳನ್ನು ಪಡೆಯುವುದಕ್ಕಾಗಿಯೇ ಪ್ರಾಧ್ಯಾಪಕರು, ಶಿಕ್ಷಕರು ವಿವಿಧ ರಾಜಕೀಯ ಪಕ್ಷಗಳ ಅಡಿಯಾಳುಗಳಂತೆ ವರ್ತಿಸುತ್ತಿರುವುದು ಹೆಚ್ಚುತ್ತಿದೆ. ರಾಜಕೀಯ ಪಕ್ಷಗಳ ಜತೆಗಿನ ನಂಟು ಮತ್ತು ಜಾತಿಯ ಆಧಾರದಲ್ಲಿ ವಿಶ್ವವಿದ್ಯಾಲಯಗಳ ಆಯಕಟ್ಟಿನ ಹುದ್ದೆಗಳನ್ನು ತುಂಬುವ ಕ್ರಮವು ಉನ್ನತ ಶಿಕ್ಷಣ ಕ್ಷೇತ್ರವನ್ನು ಅಧಃಪತನಕ್ಕೆ ತಳ್ಳುವ ಅಪಾಯವಿದೆ. ಶಿಕ್ಷಣ ಕ್ಷೇತ್ರವನ್ನು ರಾಜಕೀಯದ ಕಪಿಮುಷ್ಟಿಯಿಂದ ಹೊರತರುವ ದಿಸೆಯಲ್ಲಿ ಈ ಪ್ರಕರಣದಲ್ಲಿ ಹೈಕೋರ್ಟ್ ನೀಡಿರುವ ಆದೇಶ ಎಲ್ಲರ ಕಣ್ತೆರೆಸುವಂತಿದೆ. ವಿಶ್ವವಿದ್ಯಾಲಯಗಳ ಕುಲಪತಿ, ಸಿಂಡಿಕೇಟ್ ಮತ್ತು ಸೆನೆಟ್ ಸದಸ್ಯರು ಹಾಗೂ ಇತರ ಉನ್ನತ ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರ ನೇಮಕಾತಿಯನ್ನು ಶೈಕ್ಷಣಿಕ ಅರ್ಹತೆ ಮತ್ತು ಕಾನೂನುಗಳ ಮಿತಿಯಲ್ಲೇ ನಡೆಸುವುದಕ್ಕೆ ಆಡಳಿತದ ಚುಕ್ಕಾಣಿ ಹಿಡಿದವರು ಕಟಿಬದ್ಧರಾಗಬೇಕು. 'ಅರ್ಹತೆಯ ಆಧಾರದಲ್ಲಿ ಈ ಹುದ್ದೆಗಳಿಗೆ ನೇಮಕಗೊಂಡವರು ರಾಜಕೀಯ ಕಾರಣಕ್ಕಾಗಿ ತಲೆ ತಗ್ಗಿಸಿಕೊಂಡು ಅವಧಿಪೂರ್ವದಲ್ಲೇ ನಿರ್ಗಮಿಸುವ ವಾತಾವರಣ ಇರಕೂಡದು' ಎಂಬ ಹೈಕೋರ್ಟ್ ಮಾತನ್ನು ಎಲ್ಲ ರಾಜಕೀಯ ಪಕ್ಷಗಳು ಚಾಚೂ ತಪ್ಪದೆ ಪಾಲಿಸಬೇಕಿದೆ. ಶೈಕ್ಷಣಿಕ ಕ್ಷೇತ್ರದ ಉನ್ನತ ವ್ಯಕ್ತಿಗಳಿಗೆ ರಾಜಕೀಯ ಪೂರ್ವಗ್ರಹದಿಂದ ಅಗೌರವ ತೋರುವ, ಅಂಥವರನ್ನು ಹುದ್ದೆಯಿಂದ ತೆರವು ಮಾಡುವಂತಹ ಪ್ರವೃತ್ತಿಗೆ ಪೂರ್ಣವಿರಾಮ ಹಾಕಬೇಕು. ವಿಶ್ವವಿದ್ಯಾಲಯಗಳು ರಾಜಕೀಯ ಪಕ್ಷಗಳು ಮತ್ತು ನಾಯಕರ ಕೈಗೊಂಬೆಗಳಾಗದೆ ಕಲಿಕೆಯ ಶ್ರೇಷ್ಠ ತಾಣಗಳಾಗಿಯೇ ಉಳಿಯಬೇಕು. ಹುದ್ದೆಯೊಂದಕ್ಕೆ ನಿಗದಿತ ಅವಧಿಗೆ ನೇಮಕಗೊಂಡ ವ್ಯಕ್ತಿಯನ್ನು ಅವಧಿಪೂರ್ವದಲ್ಲಿ ತೆರವು ಮಾಡುವುದು ಅನಿವಾರ್ಯ ಆದಲ್ಲಿ, ಸಾಕ್ಷ್ಯಾಧಾರಗಳ ಸಹಿತ ಸಕಾರಣ ದಾಖಲಿಸುವುದು ಕಡ್ಡಾಯವಾಗಬೇಕು. 'ನಿಗದಿತ ಅವಧಿಯನ್ನು ಒಳಗೊಂಡ ಹುದ್ದೆಗೆ ಅರ್ಹತೆಯ ಆಧಾರದ ಮೇಲೆ ನೇಮಕಗೊಂಡವರು ಅವಧಿ ಪೂರ್ಣಗೊಳಿಸಿ ತಲೆ ಎತ್ತಿಕೊಂಡು ಕಚೇರಿಯಿಂದ ನಿರ್ಗಮಿಸುವ ವಾತಾವರಣ ಶಿಕ್ಷಣ ಸಂಸ್ಥೆಗಳಲ್ಲಿ ಇರಬೇಕು' ಎಂಬ ಹೈಕೋರ್ಟ್ ಅಭಿಪ್ರಾಯವು ರಾಜಕಾರಣಿಗಳು ಮತ್ತು ರಾಜಕೀಯ ಪಕ್ಷಗಳಿಗೆ ಪಾಠವಾಗಬೇಕು.

ದಿನದ ಟ್ವೀಟ್

ಆದರ್ಶಪ್ರಾಯ ಚಿಂತನೆ

ನನ್ನ ಬಾಲ್ಯಕಾಲದ ನಾಯಕ, ಲಕ್ಷಾಂತರ ಯುವಜನರಿಗೆ ಆದರ್ಶಪ್ರಾಯರಾಗಿರುವ ಸ್ವಾಮಿ ವಿವೇಕಾನಂದ ಅವರಿಗೆ ಅವರ ಪುಣ್ಯತಿಥಿಯ ಈ ಸಂದರ್ಭದಲ್ಲಿ ನನ್ನ ನಮನ. ಅವರ ಚಿಂತನೆಗಳು ಮತ್ತು ಆಲೋಚನೆಗಳು ತಲೆಮಾರುಗಳ ಮನಸ್ಸನ್ನು ರೂಪಿಸುವ ಕಾರ್ಯ ಮುಂದುವರಿಯುತ್ತಲೇ ಸಾಗುತ್ತದೆ.

ಅಭಿಷೇಕ್ ರಂಜನ್, ಸಾಮಾಜಿಕ ಕಾರ್ಯಕರ್ತ

25 ವರ್ಷಗಳ ಹಿಂದೆ

ಶುಕ್ರವಾರ, 5-7-1996

● **ಶಾಸಕರಿಗೆ ಹೆಗಡೆ ಕಿವಿಮಾತು**

ವಿಜಾಪುರ, ಜುಲೈ 4– 'ಖಾಲಿ ಹಾಳೆಗಳ ಮೇಲೆ ಸಹಿ ಹಾಕಬೇಡಿ'– ಜನತಾದಳದ ಉಚ್ಚಾಟಿತ ನಾಯಕ, ಮಾಜಿ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ ಅವರು ಜನತಾದಳದ ಶಾಸಕರಿಗೆ ಹೇಳಿದ ಕಿವಿಮಾತು ಇದು.

'ಜೆ.ಎಚ್.ಪಟೇಲರ ನೇತೃತ್ವದ ಸರ್ಕಾರ ಅಭದ್ರವಾಗಿದೆ ಎಂಬ ಭಯ ಬೇಡ. ಚುನಾವಣೆ ಸಮಯದಲ್ಲಿ ಜನರಿಗೆ ಕೊಟ್ಟಿರುವ ಮಾತನ್ನು ಉಳಿಸಿಕೊಳ್ಳಿ' ಎಂದು ಶಾಸಕರಿಗೆ ಸಲಹೆ ಮಾಡಿದರು.

ಸಾರ್ವಜನಿಕ ವೇದಿಕೆಗಳಲ್ಲಿ ಶಾಸಕರನ್ನು ಟೀಕಿಸುತ್ತಿದ್ದೀರಿ, ಪಟೇಲರ ಸರ್ಕಾರಕ್ಕೆ ನಮ್ಮಿಂದ ಗಂಡಾಂತರವಿಲ್ಲ ಎಂದು ಹೇಳುತ್ತಿದ್ದೀರಿ, ಹಾಗಾದರೆ ಶಾಸಕರು ಏನು ಮಾಡಬೇಕು ಎಂಬ ಪತ್ರಕರ್ತರ ಪ್ರಶ್ನೆಗೆ ಹೆಗಡೆ ಹೀಗೆ ಉತ್ತರಿಸಿದರು.

50 ವರ್ಷಗಳ ಹಿಂದೆ

ಸೋಮವಾರ, 5-7-1971

● **ನಿರುದ್ಯೋಗಿ ಎಂಜಿನಿಯರಿಂಗ್ ಪದವೀಧರರಿಗೆ ರೈಲ್ವೆ ಕಾಂಟ್ರ್ಯಾಕ್ಟ್, ಸಾಲದ ಸೌಲಭ್ಯ: ಕೆಂಗಲ್**

ಪುಣೆ, ಜುಲೈ 4– ರಾಷ್ಟ್ರದಲ್ಲಿ ನಿರುದ್ಯೋಗಿ ಎಂಜಿನಿಯರಿಂಗ್ ಪದವೀಧರರಿಗೆ ಸಾಕಷ್ಟು ಉದ್ಯೋಗಾವಕಾಶಗಳನ್ನು ಕಲ್ಪಿಸಲು ತಮ್ಮ ಇಲಾಖೆ ಯೋಜನೆ ಹಾಕಿಕೊಂಡಿರುವುದನ್ನು ರೈಲ್ವೆ ಸಚಿವ ಕೆ. ಹನುಮಂತಯ್ಯ ಅವರು ಇಂದು ಇಲ್ಲಿ ಪ್ರಕಟಿಸಿದರು.

ಇಲಾಖೆಯ ಭಾರಿ ನಿರ್ಮಾಣಗಳನ್ನು ಸಂಸ್ಥೆಗಳಿಗೆ ವಹಿಸುವ ಪುರಾತನ ಕಾಂಟ್ರ್ಯಾಕ್ಟ್ ಪದ್ಧತಿಯಿಂದ ಈಗ ದೂರ ಸರಿಯುತ್ತಿರುವುದಾಗಿ ಅವರು ಹೇಳಿದರು.

ನಿರ್ದಿಷ್ಟ ಕಾಲದಲ್ಲಿ ನಿರ್ಮಾಣ ಕಾರ್ಯಗಳನ್ನು ಮುಗಿಸಲು ನಿರುದ್ಯೋಗಿ ಎಂಜಿನಿಯರಿಂಗ್ ಪದವೀಧರರಿಗೆ ಕಾಂಟ್ರ್ಯಾಕ್ಟ್ ಮತ್ತು ಸುಲಭ ರೀತಿಯಲ್ಲಿ ಸಾಲ ಸೌಲಭ್ಯ ಕಲ್ಪಿಸುವುದನ್ನು ತಮ್ಮ ಇಲಾಖೆ ಪರಿಶೀಲಿಸುತ್ತಿರುವುದೆಂದು ಅವರು ತಿಳಿಸಿದರು.

● **ಗಂಗಾ, ಕಾವೇರಿ ಸಂಪರ್ಕಕ್ಕೆ ಸರ್ವೆ: ಕೇಂದ್ರದ ನಿರ್ಧಾರ**

ಪುಣೆ, ಜುಲೈ 4– ಗಂಗಾ ಮತ್ತು ಕಾವೇರಿ ನದಿಗಳಿಗೆ ಸಂಪರ್ಕ ಕಲ್ಪಿಸಲು ವಿಶ್ವರಾಷ್ಟ್ರ ಸಂಸ್ಥೆ ತಜ್ಞರ ನೆರವಿನಿಂದ ಸರ್ವೆ ಕಾರ್ಯ ನಡೆಸಲು ಕೇಂದ್ರ ಸರ್ಕಾರ ನಿರ್ಧರಿಸಿರುವುದಾಗಿ ಯೋಜನಾ ಖಾತೆ ರಾಜ್ಯ ಸಚಿವ ಶ್ರೀ ಮೋಹನ ಧಾರಿಯ ಇಂದು ಇಲ್ಲಿ ತಿಳಿಸಿದರು.

ಯೋಜನಾ ಆಯೋಗವು ಈಗಾಗಲೆ ಈ ಕಾರ್ಯಕ್ಕೆ ಅನುಮತಿ ನೀಡಿರುವುದಾಗಿಯೂ ಹಾಗೂ ಸರ್ವೆ ಕಾರ್ಯವನ್ನು ಕೇಂದ್ರ ನೀರಾವರಿ ಮತ್ತು ವಿದ್ಯುಚ್ಛಕ್ತಿ ಸಚಿವ ಖಾತೆಗೆ ವಹಿಸಿರುವುದಾಗಿಯೂ ಅವರು ಪತ್ರಕರ್ತರೊಡನೆ ಮಾತನಾಡುತ್ತ ತಿಳಿಸಿದರು.

ನಮ್ಮ ಪರಂಪರಾಗತ ಅರಿವನ್ನು ಕಾಪಿಡುತ್ತಿದೆ 'ಸಾಂಪ್ರದಾಯಿಕ ಜ್ಞಾನದ ಡಿಜಿಟಲ್ ಲೈಬ್ರರಿ'

ಸಾಂಪ್ರದಾಯಿಕ ಜ್ಞಾನ: ಮಹತ್ವದ ದೀವಿಗೆ

ವಿಶ್ಲೇಷಣೆ

ಡಾ. ಎಚ್.ಆರ್.ಕೃಷ್ಣಮೂರ್ತಿ

ಇಡೀ ದೇಶ ಕೋವಿಡ್ ಹಿಡಿತದಲ್ಲಿ ಸಿಲುಕಿ, ಅದನ್ನು ಸಮರ್ಥವಾಗಿ ಎದುರಿಸುವ ಪ್ರಯತ್ನದಲ್ಲಿ ನಿರತವಾಗಿರುವಾಗ, ಈ ವರ್ಷದ ಜನವರಿಯಲ್ಲಿ ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನಾ ಮಂಡಳಿಯ (ಕೌನ್ಸಿಲ್ ಆಫ್ ಸೈಂಟಿಫಿಕ್ ಆ್ಯಂಡ್ ಇಂಡಸ್ಟ್ರಿಯಲ್ ರಿಸರ್ಚ್-ಸಿಎಸ್‌ಐಆರ್) ನೇತೃತ್ವದ 'ಸಾಂಪ್ರದಾಯಿಕ ಜ್ಞಾನದ ಡಿಜಿಟಲ್ ಲೈಬ್ರರಿ' (ಟ್ರೆಡಿಶನಲ್ ನಾಲೆಜ್ ಡಿಜಿಟಲ್ ಲೈಬ್ರರಿ- ಟಿಕೆಡಿಎಲ್) ಸದ್ದುಗದ್ದಲವಿಲ್ಲದೇ ತನ್ನ ಉತ್ಕೃಷ್ಟ ಕೆಲಸದ ಎರಡು ದಶಕಗಳನ್ನು ಪೂರೈಸಿದೆ.

ಈ ಅವಧಿಯಲ್ಲಿ, ನಮ್ಮ ದೇಶದ ಜೈವಿಕ ಸಂಪನ್ಮೂಲವನ್ನು ಆಧರಿಸಿ, ನಮಗೆ ತಿಳಿಯದಂತೆಯೇ ಬೇರೆ ಬೇರೆ ದೇಶಗಳಲ್ಲಿ ವಿದೇಶಿ ಕಂಪನಿಗಳು ಪಡೆದಿದ್ದ 239 ಪೇಟೆಂಟ್‌ಗಳನ್ನು ರದ್ದುಪಡಿಸುವ ಉತ್ತಮ ಕೆಲಸವನ್ನು ಸಿಎಸ್‌ಐಆರ್ ಮತ್ತು ಟಿಕೆಡಿಎಲ್ ಮಾಡಿವೆ.

ಸ್ಥಳೀಯ ಜನಸಮುದಾಯದ ಮಧ್ಯದಿಂದ, ಅಲ್ಲಿನ ಸಂಸ್ಕೃತಿಯ ಭಾಗವಾಗಿ ರೂಪುಗೊಂಡು, ಅಭಿವೃದ್ಧಿಯಾಗಿ, ಪರಂಪರಾಗತವಾಗಿ ಸಾಗಿಬಂದ ಅರಿವು, ಅನುಭವ, ಜಾಣ್ಮೆ, ಆಚರಣೆಗಳು, ಕೌಶಲ ಮುಂತಾದವುಗಳ ಒಟ್ಟು ಸಾರವೇ ಸಾಂಪ್ರದಾಯಿಕ ಜ್ಞಾನ. ಪ್ರಕೃತಿಯನ್ನು ಗೌರವಿಸುವ, ಸಂಪನ್ಮೂಲಗಳನ್ನು ಹಿತಮಿತವಾಗಿ ಬಳಸುವ, ವ್ಯಾಪಾರೀ ಮನೋಭಾವದಿಂದ ಮುಕ್ತವಾದ ಸಾಂಪ್ರದಾಯಿಕ ಜ್ಞಾನಕ್ಕೆ ಹೆಚ್ಚಿನ ಮಹತ್ವವಿದೆ.

ಯಾವುದೇ ಸಂಶೋಧನೆಗೆ ಪೇಟೆಂಟ್ ದೊರೆಯಬೇಕಾದರೆ ಅದು ಮೂರು ಷರತ್ತುಗಳನ್ನು ಪೂರೈಸಬೇಕು. ಸಂಶೋಧನೆ ಹೊಸದಾಗಿರಬೇಕು, ಹೊಸ ಸೃಷ್ಟಿಯಲ್ಲಿ ಆವಿಷ್ಕಾರದ ಹೊಸ ಹೆಜ್ಜೆಯಿರಬೇಕು (ಇನ್ವೆಂಟಿವ್ ಸ್ಟೆಪ್) ಮತ್ತು ಆ ಸಂಶೋಧನೆಯು ಕೃಷಿ, ಕೈಗಾರಿಕೆ, ವೈದ್ಯಕೀಯ ಮುಂತಾದ ಕ್ಷೇತ್ರಗಳಲ್ಲಿ ಬಳಕೆಯಾಗುವಂತೆ ಇರಬೇಕು. ಇವುಗಳನ್ನು ನಾವೆಲ್ಟಿ, ನಾನ್ ಆಬ್‌ವಿಯಸ್‌ನೆಸ್ ಮತ್ತು ಯುಟಿಲಿಟಿಗಳೆಂದು ಕರೆಯುವುದು ವಾಡಿಕೆ. ಯಾವುದೇ ಸಂಶೋಧನೆಯ ಫಲಿತಾಂಶ ಈ ಮುಂಚೆಯೇ ಸಾರ್ವಜನಿಕವಾಗಿ ತಿಳಿದಿತ್ತು, ಸಾರ್ವಜನಿಕವಾಗಿ ಜನಬಳಕೆಯಲ್ಲಿ ಇತ್ತು ಎಂದಾದರೆ ಅದಕ್ಕೆ ಪೇಟೆಂಟ್ ದೊರೆಯುವುದಿಲ್ಲ. ಇದಕ್ಕೆ 'ಪ್ರಿಯರ್ ಆರ್ಟ್' ಎಂಬ ಹೆಸರಿದೆ.

1994ರಲ್ಲಿ ಯುರೋಪಿಯನ್ ಪೇಟೆಂಟ್ ಕಚೇರಿಯು ಅಮೆರಿಕದ ಕಂಪನಿಯೊಂದಕ್ಕೆ ಬೇವಿನ ಗಿಡದ ಶಿಲೀಂಧ್ರನಾಶಕ ಗುಣಕ್ಕೆ ಸಂಬಂಧಿಸಿದ ಸಂಶೋಧನೆಗೆ ಪೇಟೆಂಟ್ ನೀಡಿತು. 1995ರಲ್ಲಿ ಅಮೆರಿಕದ ಪೇಟೆಂಟ್ ಕಚೇರಿ ಅರಿಸಿನದ, ಗಾಯ ವಾಸಿ ಮಾಡುವ ಗುಣಕ್ಕೆ ಸಂಬಂಧಿಸಿದ ಸಂಶೋಧನೆಗೆ ಮಿಸಿಸಿಪಿ ವಿಶ್ವವಿದ್ಯಾಲಯದ ವೈದ್ಯಕೀಯ ಕೇಂದ್ರಕ್ಕೆ ಪೇಟೆಂಟನ್ನು ನೀಡಿತು. ಆದರೆ ಬೇವು ಮತ್ತು ಅರಿಸಿನದ ಈ ಗುಣಗಳು ನಮ್ಮ ಪರಂಪರಾಗತವಾದ ಸಾಂಪ್ರದಾಯಿಕ ಜ್ಞಾನದ ಅಂಗವಾಗಿ, ಸಾರ್ವಜನಿಕ ಸ್ವತ್ತಾಗಿ ಸಾವಿರಾರು ವರ್ಷಗಳಿಂದ ಬಳಕೆಯಲ್ಲಿ ಇದ್ದಂಥವು. ಅರ್ಥಾತ್ ಅವು ನಮ್ಮ ದೇಶದಲ್ಲಿ ಪ್ರಿಯರ್ ಆರ್ಟ್!

ಹಾಗಿದ್ದರೆ ಅವುಗಳಿಗೆ ವಿದೇಶದಲ್ಲಿ ಪೇಟೆಂಟ್ ದೊರೆತದ್ದು ಹೇಗೆ? ಕಾರಣ ಬಹು ಸರಳ. ಯುರೋಪ್ ಮತ್ತು ಅಮೆರಿಕ ಸೇರಿದಂತೆ ಪ್ರಪಂಚದ ಯಾವುದೇ ಪೇಟೆಂಟ್ ಕಚೇರಿಯಲ್ಲೂ ಅರಿಸಿನ ಮತ್ತು ಬೇವಿನ ವಿಶಿಷ್ಟ ಗುಣಗಳು ಭಾರತದಲ್ಲಿ ಸಾರ್ವಜನಿಕ ಸ್ವತ್ತಾಗಿರುವ ಜ್ಞಾನ ಎಂಬ ಮಾಹಿತಿ ಇರಲಿಲ್ಲ. ಅಷ್ಟೇಕೆ, ನಮ್ಮ ದೇಶದಲ್ಲಿಯೇ ಅದಕ್ಕೆ ಸಾಕ್ಷ್ಯಾಧಾರವಾಗಬಲ್ಲ, ಸಿದ್ಧಪಡಿಸಿದ ದಾಖಲೆಗಳಿರಲಿಲ್ಲ. ಸಿಎಸ್‌ಐಆರ್‌ನ ಸತತ ಪ್ರಯತ್ನಗಳ ನಂತರ ಅರಿಸಿನ ಮತ್ತು ಬೇವಿನ ಉತ್ಪನ್ನಗಳಿಗೆ ನೀಡಿದ್ದ ಪೇಟೆಂಟ್‌ಗಳನ್ನು ಆನಂತರ ರದ್ದುಗೊಳಿಸಲಾಯಿತು.

ಅರಿಸಿನ, ಬೇವು, ಬಾಸ್ಮತಿ ಮುಂತಾದವುಗಳಿಗೆ ವಿದೇಶಗಳಲ್ಲಿ ದೊರೆತ ಪೇಟೆಂಟ್‌ಗಳು ಎಚ್ಚರಿಕೆಯ ಗಂಟೆಯನ್ನು ಬಾರಿಸಿದವು. ನಮ್ಮ ಸಾಂಪ್ರದಾಯಿಕ ಜ್ಞಾನ ಆಧುನಿಕವಾದ ಡಿಜಿಟಲ್ ರೂಪದಲ್ಲಿ, ಜಾಗತಿಕ ಮಟ್ಟದ ಎಲ್ಲ ಪೇಟೆಂಟ್ ಕಚೇರಿಗಳಲ್ಲಿ, ಆಯಾ ದೇಶದ ಭಾಷೆಗಳಲ್ಲಿ ಲಭ್ಯವಾದ ಹೊರತು ನಮ್ಮ ಜೈವಿಕ ಸಂಪನ್ಮೂಲಗಳ ದುರ್ಬಳಕೆ ತಪ್ಪುವುದಿಲ್ಲ ಎಂಬುದನ್ನು ಅದು ಸ್ಪಷ್ಟಪಡಿಸಿತು. ಈ ಅರಿವೇ 'ಸಾಂಪ್ರದಾಯಿಕ ಜ್ಞಾನದ ಡಿಜಿಟಲ್ ಲೈಬ್ರರಿ'ಯ ಸ್ಥಾಪನೆಗೆ ಪ್ರೇರಣೆಯಾಯಿತು.

ಸಿಎಸ್‌ಐಆರ್, ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ, ಆಯುಷ್ ಸಚಿವಾಲಯ, ಪೇಟೆಂಟ್, ಡಿಸೈನ್ ಮತ್ತು ಟ್ರೇಡ್‌ಮಾರ್ಕ್ ನಿಯಂತ್ರಣ ನಿರ್ದೇಶನಾಲಯಗಳ ಸತತ ಪ್ರಯತ್ನಗಳಿಗೆ ವಿಶ್ವ ಬೌದ್ಧಿಕ ಆಸ್ತಿ ಸಂಸ್ಥೆ, ಯುರೋಪ್ ಮತ್ತು ಅಮೆರಿಕದ ಪೇಟೆಂಟ್ ಕಚೇರಿಗಳ ಸಲಹೆ, ಸೂಚನೆಗಳೂ ದೊರೆತು, 2001ರ ಜನವರಿಯಲ್ಲಿ ನಮ್ಮ ದೇಶದ ಮತ್ತು ಪ್ರಪಂಚದ ಮೊತ್ತ ಮೊದಲ 'ಸಾಂಪ್ರದಾಯಿಕ ಜ್ಞಾನದ ಡಿಜಿಟಲ್ ಲೈಬ್ರರಿ' ಅಸ್ತಿತ್ವಕ್ಕೆ ಬಂದಿತು.

ನಮ್ಮ ದೇಶದ ಸಾಂಪ್ರದಾಯಿಕ ಜ್ಞಾನ ಲಭ್ಯವಿರುವುದು ಭಾರತೀಯ ವೈದ್ಯ ಪದ್ಧತಿಗಳಾದ ಆಯುರ್ವೇದ, ಸಿದ್ಧ, ಯುನಾನಿ ಮತ್ತು ಯೋಗಾಸನಗಳಿಗೆ ಸಂಬಂಧಿಸಿದ ಪ್ರಾಚೀನ ಗ್ರಂಥಗಳಲ್ಲಿ. ಈ ಗ್ರಂಥಗಳ ಭಾಷೆ ಸಂಸ್ಕೃತ, ಅರೇಬಿಕ್, ಪರ್ಶಿಯನ್, ಉರ್ದು ಮತ್ತು ಕೆಲವು ಭಾರತೀಯ ಭಾಷೆಗಳು. ಆದರೆ ಅಂತರರಾಷ್ಟ್ರೀಯ ವ್ಯಾಪಾರೋದ್ಯಮದ ಮುಖ್ಯಭಾಷೆಗಳೆಂದರೆ ಇಂಗ್ಲಿಷ್, ಫ್ರೆಂಚ್, ಜರ್ಮನ್, ಜಪಾನೀಸ್ ಮತ್ತು ಸ್ಪ್ಯಾನಿಶ್. ಹೀಗಾಗಿ ನಮ್ಮ ಸಾಂಪ್ರದಾಯಿಕ ಜ್ಞಾನವನ್ನು ಈ ಭಾಷೆಗಳಲ್ಲಿ ಪ್ರಪಂಚದ ವಿವಿಧ ಪೇಟೆಂಟ್ ಕಚೇರಿಗಳಿಗೆ ಒದಗಿಸಬೇಕು. ಹೀಗೆ ಒದಗಿಸಿದ ಮಾಹಿತಿ ನಿರ್ದಿಷ್ಟ ರೂಪದಲ್ಲಿದ್ದು, ಪೇಟೆಂಟ್ ಅರ್ಜಿಗಳ ಪರಾಮರ್ಶೆಗೆ ಅನುಕೂಲವಾಗುವ ವಿನ್ಯಾಸದಲ್ಲಿರಬೇಕು. ಈ ಉದ್ದೇಶಕ್ಕಾಗಿಯೇ 'ಟ್ರೆಡಿಶನಲ್ ನಾಲೆಜ್ ರಿಸೋರ್ಸ್ ಕ್ಲಾಸಿಫಿಕೇಶನ್' ಎಂಬ ನವೀನ ವರ್ಗೀಕರಣ ವಿಧಾನವನ್ನು ಟಿಕೆಡಿಎಲ್ ಅಭಿವೃದ್ಧಿಪಡಿಸಿದೆ.

ಪ್ರಾಚೀನ ಪದ್ಧತಿಗಳ ವಿವಿಧ ಆಕರ ಗ್ರಂಥಗಳಿಂದ ಸುಮಾರು ನಾಲ್ಕು ಲಕ್ಷ ಸಸ್ಯಮೂಲ ಉತ್ಪನ್ನಗಳು, ಅವುಗಳನ್ನು ಪಡೆಯುವ ವಿಧಾನ, ಸಂಸ್ಕರಿಸುವ ರೀತಿ, ಬಳಸುವ ವಿಧಾನ ಮುಂತಾದ ಮಾಹಿತಿಗಳನ್ನು ಲಿಪ್ಯಂತರ ಮಾಡಿ, ವ್ಯಾಪಾರೋದ್ಯಮದ ಐದು ಮುಖ್ಯ ಭಾಷೆಗಳಲ್ಲಿ, ಎ-4 ಅಳತೆಯ 3.4 ಕೋಟಿ ಪುಟಗಳಲ್ಲಿ ಒದಗಿಸಲಾಗಿದೆ. ಈ ಮಾಹಿತಿಗಳನ್ನು ವಿಶೇಷ ಒಪ್ಪಂದವೊಂದರ ಮೂಲಕ ಯುರೋಪ್, ಅಮೆರಿಕ, ಕೆನಡಾ, ಚಿಲಿ, ಪೆರು, ಆಸ್ಟ್ರೇಲಿಯಾ, ಮಲೇಷ್ಯಾ, ರಷ್ಯಾ, ಜಪಾನ್, ಇಂಗ್ಲೆಂಡ್ ಮತ್ತು ಸ್ಪೇನ್ ದೇಶಗಳ ಪೇಟೆಂಟ್ ಕಚೇರಿಗಳಿಗೆ ಒದಗಿಸಲಾಗಿದೆ.

ಟಿಕೆಡಿಎಲ್‌ನ ಈ ವಿಶಿಷ್ಟ ಮಾಹಿತಿಯ ಭಂಡಾರ, ನಮ್ಮ ದೇಶದ ಸಾಂಪ್ರದಾಯಿಕ ಜ್ಞಾನದ 'ಪ್ರಿಯರ್ ಆರ್ಟ್' ಆಕರವಾಗಿ ವರ್ತಿಸುತ್ತದೆ. ವಿವಿಧ ದೇಶಗಳ ಪೇಟೆಂಟ್ ಪರಿಶೀಲಕರು ತಮಗೆ ಬಂದ ಅರ್ಜಿಗಳಲ್ಲಿ ಇರಬಹುದಾದ ಭಾರತ ಮೂಲದ ಸಾಂಪ್ರದಾಯಿಕ ಜ್ಞಾನವನ್ನು ಗುರುತಿಸಲು ಈ ವ್ಯವಸ್ಥೆ ನೆರವಾಗುತ್ತದೆ. ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುತ್ತದೆ.

2001ರಲ್ಲಿ ಟಿಕೆಡಿಎಲ್ ಅಸ್ತಿತ್ವಕ್ಕೆ ಬಂದ ಸಮಯದಲ್ಲಿ, ಪ್ರಪಂಚದ ವಿವಿಧ ಪೇಟೆಂಟ್ ಕಚೇರಿಗಳಲ್ಲಿ ಪ್ರತಿವರ್ಷ, ನಮ್ಮ ದೇಶದ ಪರಂಪರಾಗತವಾದ ಬೌದ್ಧಿಕ ಆಸ್ತಿಯ ಭಾಗವಾಗಿದ್ದ ಉತ್ಪನ್ನ, ಪ್ರಕ್ರಿಯೆಗಳಿಗೆ ಸಂಬಂಧಿಸಿದ ಸುಮಾರು 2,000 ಸಂಶೋಧನೆಗಳಿಗೆ ಪೇಟೆಂಟ್ ಕೋರಿ ಅರ್ಜಿಗಳು ಬರುತ್ತಿದ್ದವು. ಟಿಕೆಡಿಎಲ್ ವ್ಯವಸ್ಥೆ ಜಾರಿಗೆ ಬಂದ ನಂತರ ಅರ್ಜಿಗಳ ಸಂಖ್ಯೆ ಶೇ 44ರಷ್ಟು ಕಡಿಮೆಯಾಗಿದೆ. ಸಾಂಪ್ರದಾಯಿಕ ಜ್ಞಾನದ ಆಧಾರ ದತ್ತಾಂಶ ಇರದಿದ್ದ ಹಿಂದಿನ ಪರಿಸ್ಥಿತಿಯಲ್ಲಿ, ತಪ್ಪಾಗಿ ನೀಡಿದ ಯಾವುದೇ ಪೇಟೆಂಟನ್ನು ಪ್ರಶ್ನಿಸಿ, ವಿರೋಧಿಸಿ, ರದ್ದುಗೊಳಿಸಲು ಸರಾಸರಿ 5ರಿಂದ 7 ವರ್ಷಗಳು ಬೇಕಾಗಿದ್ದು, ಪ್ರತಿಯೊಂದು ಪ್ರಕರಣಕ್ಕೂ ಎರಡರಿಂದ ನಾಲ್ಕು ಕೋಟಿ ರೂಪಾಯಿ ವೆಚ್ಚವಾಗುತ್ತಿತ್ತು. ಆದರೆ ಈ ವ್ಯವಸ್ಥೆ ಬಂದ ನಂತರ ಅತ್ಯಲ್ಪ ಖರ್ಚಿನಲ್ಲಿ ಅತಿ ಶೀಘ್ರವಾಗಿ ಪ್ರಕರಣಗಳನ್ನು ನಿರ್ಧರಿಸಬಹುದಾಗಿದೆ.

ಟಿಕೆಡಿಎಲ್ ಬಹಳಷ್ಟು ಟೀಕೆಗಳಿಗೂ ಒಳಗಾಗಿದೆ. ಆಧಾರ ದತ್ತಾಂಶದಲ್ಲಿರುವ ಸಸ್ಯ ಪ್ರಭೇದಗಳನ್ನು ನಿಖರವಾಗಿ ಗುರುತಿಸುವಲ್ಲಿ ತಪ್ಪುಗಳಾದ ನಿದರ್ಶನಗಳಿವೆ. ಪೇಟೆಂಟ್ ಪರೀಕ್ಷಕರನ್ನು ಬಿಟ್ಟರೆ ವಿಜ್ಞಾನಿಗಳೂ ಸೇರಿದಂತೆ ಉಳಿದ ಯಾರಿಗೂ ಈ ವ್ಯವಸ್ಥೆ ಲಭ್ಯವಿಲ್ಲ. ಸಾರ್ವಜನಿಕರಿಗಂತೂ ಅದು ದೊರೆಯುವುದೇ ಇಲ್ಲ. ಆ ದತ್ತಾಂಶವನ್ನು ಆಧರಿಸಿ ಯಾವ ಹೊಸ ಸಂಶೋಧನೆಯೂ ಸಾಧ್ಯವಿಲ್ಲ. ಈ ಡಿಜಿಟಲ್ ಲೈಬ್ರರಿಯನ್ನು ಆಧರಿಸಿ, ವಿದೇಶದಲ್ಲಿ ತಿರಸ್ಕೃತವಾದ ಪೇಟೆಂಟ್ ಅರ್ಜಿಗೆ ನಮ್ಮ ದೇಶದಲ್ಲಿ ಪೇಟೆಂಟ್ ದೊರೆತಿದೆ! ನಮ್ಮ ದೇಶದ ಪೇಟೆಂಟ್ ಪರೀಕ್ಷಕರ ದಕ್ಷತೆ ಹೆಚ್ಚಬೇಕೆಂಬ ನಿರೀಕ್ಷೆಯಿದೆ.

ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬರುವ ಮುಂಚೆಯೇ, 1942ರಲ್ಲಿ ಅಸ್ತಿತ್ವಕ್ಕೆ ಬಂದ ಸಿಎಸ್‌ಐಆರ್ ಸಂಸ್ಥೆ, 2022ರಲ್ಲಿ ತನ್ನ 80ನೆಯ ಸ್ಥಾಪನಾ ದಿನವನ್ನು ಆಚರಿಸುವ ಮುನ್ನ ಈ ಅರೆಕೊರೆಗಳನ್ನು ಸರಿಪಡಿಸಬೇಕಾದ ಅಗತ್ಯವಿದೆ.

ಚುರುಮುರಿ

ಸೂತ್ರದ ಗೊಂಬೆಯಾಟ

● ಸುಮಂಗಲಾ

ಬೆಕ್ಕಣ್ಣ ದಾರ, ಚಿಕ್ಕ ಗೊಂಬೆಗಳನ್ನಿಟ್ಟುಕೊಂಡು ಏನೋ ಮಾಡುತ್ತಿತ್ತು.

'ಏನ್ ಹೊಸ ಕಾರುಬಾರು ನಡಿಸೀಯಲೇ' ಎಂದೆ ಗಾಬರಿಯಿಂದ.

'ಸೂತ್ರದ ಗೊಂಬೆಯಾಟ... ಇದು ಫಸ್ಟ್ ವರ್ಶನ್, ನೋಡು' ಎಂದು ವೇದಿಕೆ, ಪರದೆ ಸೆಟ್ ಮಾಡಿತು. ನೋಡುತ್ತ ಕುಳಿತೆ.

'ಆಡಿಸಿ ನೋಡು, ಬೀಳಿಸಿ ನೋಡು ತೆನೆ ಉರುಳದು ಅಂತ ಕುಮ್ಮಿ ಅಂಕಲ್ ಹಾಡಿಕೋತ ಬರತಾನ. ನನ್ನ ಆರೋಗ್ಯ ಉಳಿಸಕ್ಕಾಗಿ ದೇವರೇ ಕುರ್ಚಿಯಿಂದ ಇಳಿಸೋ ನಿರ್ಧಾರ ತಗಂಡ. ಮತ್ತೆ ಕುರ್ಚಿ ಮೇಲೆ ಕೂರಿಸೋ ನಿರ್ಧಾರವನ್ನೂ ದೇವರೇ ಮಾಡತಾನ ಅಂತ್ಹೇಳಿ ಕಣ್ಣೀರಾಗತಾನ'. ವೇದಿಕೆ ಮೇಲಿನ ಗೊಂಬೆ ಕಣ್ಣೊರೆಸಿಕೊಂಡು ಪಕ್ಕಕ್ಕೆ ಸರಿಯಿತು.

ಆಮೇಲೆ ನಾಲ್ಕಾರು ಸೂತ್ರದ ಗೊಂಬೆಗಳು ವೇದಿಕೆ ಮೇಲೆ ಬಂದು ಸರಬರನೆ ಓಡಾಡುತ್ತ, ಏನೋ ಅಳತೆ ಕೊಡುತ್ತ ಕಲಪಿಲ ಸದ್ದು ಮಾಡುತ್ತಿದ್ದವು. 'ಇವು ಕಾಂಗಿ ಗೊಂಬೆಗಳು. ತಮ್ಮತಮ್ಮ ಅಳತೆಗೆ ತಕ್ಕ ಮುಖ್ಯಮಂತ್ರಿ ಕುರ್ಚಿ ಮಾಡಿಸಿಕೊಳ್ಳಾಕ ಬಡಗಿಗಳ ಹತ್ರ, ಸೂಟು ಹೊಲೆಸಿಕೊಳ್ಳಾಕೆ ಟೈಲರ್ ಹತ್ರ ಅಡ್ಡಾಡತಾವ. ಆದರ ಮ್ಯಾಗಿರೋ ಹೈಕಮಾಂಡು ಅನ್ನೋ ಒಂದೇ ದಪ್ಪದಾರ ತಮ್ಮನ್ನೆಲ್ಲ ಕುಣಿಸತೈತೆ ಅಂತ ಗೊತ್ತಿದ್ದರೂ ಗೊತ್ತಿಲ್ಲದಂಗೆ ನಟಿಸತಾವ'.

ಈಗ ವೇದಿಕೆ ಮೇಲೆ ಕಮಲದ ಹೂವಿನ ಪಕಳೆಗಳಂತಹ ಗೊಂಬೆಗಳು ಬಂದವು. ಕೈಕೈ ಹಿಡಿದು 'ನಾವೆಲ್ಲರೂ ಒಂದೇ' ಎನ್ನುತ್ತ, ದೊಡ್ಡ ಕುರ್ಚಿಯ ಮೇಲೆ ಕೂತಿದ್ದ ಗೊಂಬೆಯ ಬಳಿ ಸಾರಿದವು. ಮರುಕ್ಷಣದಲ್ಲೇ ಮೂರುನಾಲ್ಕು ಗುಂಪುಗಳಾಗಿ ಕುರ್ಚಿಯ ಕಾಲು, ಕೈ ಎಲ್ಲೆಲ್ಲಿ ನಟ್ಟುಗಳಿವೆಯೋ ಅವನ್ನೆಲ್ಲ ಬಿಗಿ ಮಾಡುವ ನಟನೆ ಮಾಡುತ್ತ, ಖರೇ ಎಂದರೆ ಸಡಿಲ ಮಾಡುತ್ತಿದ್ದವು. 'ಇವು ಕಮಲಗೊಂಬೆಗಳು... ಇವನ್ನೂ ಮ್ಯಾಗಿರೋ ಒಂದೇ ದಪ್ಪದಾರ ಕುಣಿಸತೈತಿ. ಕಾಂಗಿ ಹೈಕಮಾಂಡು ದಾರಕ್ಕಿಂತ ಇನ್ನೂ ದಪ್ಪ, ಕಣ್ಣಿ ಹಗ್ಗದಂಗೆ'.

ಈಗ ವೇದಿಕೆ ಮೇಲೆ ಹ್ಯಾಪುಮೋರೆಯ ಒಂದಿಷ್ಟು ಗೊಂಬೆಗಳು ಬಂದವು. 'ಇವು ನೀವು, ಶ್ರೀಸಾಮಾನ್ಯರು. ನಿಮ್ಮನ್ನು ಮ್ಯಾಗಿಂದ ಯಾರು, ಎದಕ್ಕ ಕುಣಿಸತಾರೆ ಅಂತ ನಿಮಗೆ ಕೊನೇವರೆಗೂ ಗೊತ್ತಾಗಂಗಿಲ್ಲ' ಬೆಕ್ಕಣ್ಣ ಹಲ್ಲುಕಿಸಿಯಿತು!

ಸಂಗತ

ನೇರ ಮಾರಾಟದ 'ಸ್ಮಾರ್ಟ್' ಉಪಾಯ

ಬಂಗಾರದ ಬೆಳೆಯ ಲಾಭ ಕೈಸೇರಲು ರೈತರು ಉಪಾಯ ಹೂಡಬೇಕಾಗಿದೆ

● ಪ.ರಾಮಕೃಷ್ಣ ಶಾಸ್ತ್ರಿ

ಕೋಲಾರದ ರೈತರೊಬ್ಬರು ಟೊಮ್ಯಾಟೊಗೆ ಬೆಲೆಯಿಲ್ಲ ಎಂಬ ಕಾರಣಕ್ಕೆ, ಟಪ್ಪರ್‌ನಲ್ಲಿ ಅದನ್ನು ತುಂಬಿಕೊಂಡು ಬಂದು ರಸ್ತೆಗೆ ಸುರಿದು 'ಬೇಕೇ ಬೇಕು, ರೈತನಿಗೆ ಬೆಲೆ ಬೇಕು' ಎಂದು ಕೂಗಿಕೊಳ್ಳುವ ದೃಶ್ಯವನ್ನು ಮಾಧ್ಯಮಗಳು ಪ್ರಸಾರ ಮಾಡಿದವು. ಹಾಗೆಯೇ ಕೋವಿಡ್ ಕಾರಣದಿಂದ ಸಾಗಣೆ ಸಾಧ್ಯವಾಗದೆ, ಕಲ್ಲಂಗಡಿ, ಹೂವಿನ ಬೆಳೆಗಳು, ತರಕಾರಿಗಳ ಮೇಲೆ ಗಿಡಸಹಿತವಾಗಿ ಟ್ರ್ಯಾಕ್ಟರ್ ಓಡಾಡಿಸಿ ನಾಶ ಮಾಡಿದ್ದನ್ನು ಕಂಡಿದ್ದೆವು.

ಕೋಟ್ಯಂತರ ಮಂದಿಗೆ ಆಹಾರ ಪದಾರ್ಥ ಬೆಳೆದುಕೊಟ್ಟು ಒಡಲು ತಂಪು ಮಾಡುವ ರೈತ, ತಾನೇ ಕಷ್ಟಪಟ್ಟು ಬೆಳೆದ ಫಸಲನ್ನು ಯಾವುದಕ್ಕೂ ಬಳಸದೆ ಹೀಗೆ ನಾಶ ಮಾಡಲು ಮುಂದಾದರೆ, 'ಹರ ಕೊಲ್ಲಲ್ ಪರ ಕಾಯ್ವನೆ' ಎಂದು ಕೇಳಬೇಕಾಗುತ್ತದೆ.

ಬೆಳೆದ ಫಸಲಿಗೆ ಬೆಲೆಯಿಲ್ಲ, ಮಾರುಕಟ್ಟೆಗೆ ಒಯ್ಯುವಂತಿಲ್ಲ ಎಂಬ ಹತಾಶೆ ಮೂಡಿದಾಗ ಅದು ಆಕ್ರೋಶವಾಗಿ ಪರಿವರ್ತನೆಗೊಂಡರೆ ಇಂತಹ ಪ್ರತಿಕ್ರಿಯೆ ಅನಿರೀಕ್ಷಿತವಲ್ಲ. ಆದರೂ ಹತ್ತಾರು ಹೊಟ್ಟೆಗಳನ್ನು ತುಂಬಬೇಕಾದ ಆಹಾರ ಪದಾರ್ಥವನ್ನು ರೈತನ ಬೆವರಿಗೊಲಿದು ಭೂಮಿ ಕೊಟ್ಟಿರುವುದರ ಹಿಂದೆ ಒಂದು ಆಹಾರ ಸರಪಣಿಯ ಉದ್ದೇಶವೂ ಇದೆಯಲ್ಲವೇ?

ಬೆಲೆ ಇಲ್ಲದಾಗ ಸರ್ಕಾರ ಕಣ್ಮುಚ್ಚಿ ಕುಳಿತಿದೆ, ತರಕಾರಿಗಳನ್ನು ಕಾಪಿಡಲು ಸ್ಟೋರೇಜ್ ವ್ಯವಸ್ಥೆ ಕಲ್ಪಿಸಿಲ್ಲ... ಹೀಗೆ ಸರ್ಕಾರವನ್ನು ದೂಷಿಸುತ್ತ ಕುಳಿತುಕೊಳ್ಳುವ ಬದಲು, ಸಮಾನಮನಸ್ಕ ರೈತರು ಜೊತೆಗೂಡಿ, ಬೆಳೆದ ಫಸಲಿನ ಸದ್ಬಳಕೆಗೆ ಉಪಾಯ ಹುಡುಕಲು ಚಿಂತನೆ ಮಾಡಬೇಕಾಗಿದೆ.

ಅಡಿಕೆಗೆ ಬೆಲೆಯಿಲ್ಲದಾಗ ಅದರಿಂದ ಕಾಫಿಯಂತಹ ಪಾನೀಯದ ಹುಡಿ ತಯಾರಿಸಿದರು. ಕ್ಯಾಮ್ಕೋ ಸಂಸ್ಥೆ ಅಡಿಕೆ ಚೂರುಗಳನ್ನು ತುಪ್ಪದಲ್ಲಿ ಹುರಿದು ಗೋಡಂಬಿಯ ಜೊತೆಗೆ ಆಹಾರವಾಗಿ ತಿನ್ನುವ ಪ್ಯಾಕೆಟ್ಟುಗಳನ್ನು ಮಾರುಕಟ್ಟೆಗಿಳಿಸಿತು. ಕೋವಿಡ್ ಕಾರಣದಿಂದ ಹತ್ತಾರು ಎಕರೆಗಳಲ್ಲಿ ಕಲ್ಲಂಗಡಿ ಫಸಲು ಹಾಳಾಗುವ ಸ್ಥಿತಿ ಬಂದಾಗ ಶಿವಮೊಗ್ಗ ಜಿಲ್ಲೆಯ ಕಲ್ಲಂಗಡಿ ಬೆಳೆಗಾರರೊಬ್ಬರು ವಿಶಿಷ್ಟ ಉಪಾಯ ಕೈಗೊಂಡರು. ಕಲ್ಲಂಗಡಿ ಹಣ್ಣುಗಳಿಂದ ಬೆಲ್ಲ ತಯಾರಿಸಿ, ಕಬ್ಬಿನ ರಸದ ಬೆಲ್ಲಕ್ಕಿಂತಲೂ ಇದು ಸ್ವಾದಿಷ್ಟವಾಗಿದೆ ಎಂದು ತೋರಿಸಿಕೊಟ್ಟರು. ಅವರ ಮಾತಿನ ಪ್ರಕಾರ, ಕಲ್ಲಂಗಡಿಯ ಬೆಲ್ಲಕ್ಕೆ ಬೆಲೆ ಕೊಂಚ ಹೆಚ್ಚಾದರೂ ಜನ ಗೊಣಗದೆ ಕೊಳ್ಳುತ್ತಿದ್ದಾರೆ.

ಟೊಮ್ಯಾಟೊ ಬೆಳೆದವರೆಲ್ಲರಿಗೂ ಕೆಚಪ್, ಜಾಮ್ ತಯಾರಿಸಿ ಮಾರುಕಟ್ಟೆ ಹುಡುಕುವುದು ಸುಲಭವಲ್ಲ ಎಂಬುದು ನಿಜ. ಆದರೆ ಬೆಳೆಗಾರನಿಂದ ಚಿಕ್ಕಾಸಿಗೆ ಖರೀದಿಸಿದ ಯಾವುದೇ ತರಕಾರಿ ಬಳಕೆದಾರನ ಬಟ್ಟಲಿನ ಬಳಿಗೆ ಬರುವಾಗ ಹತ್ತಾರು ಪಟ್ಟು ಹೆಚ್ಚು ಬೆಲೆ ಪಡೆಯುತ್ತದೆ. ಸಾಗಣೆ ವೆಚ್ಚ ಮತ್ತು ಕೈಯಿಂದ ಕೈಗೆ ಬದಲಾದಾಗ ಪ್ರತಿಯೊಬ್ಬನೂ ಪಡೆಯುವ ಲಾಭವನ್ನು ಒಟ್ಟುಗೂಡಿಸಿ ಅದನ್ನು ಉಪಯೋಗಿಸುವ ಕಟ್ಟಕಡೆಯ ವ್ಯಕ್ತಿ ಕೊಡಬೇಕಾಗುತ್ತದೆ. ಮಧ್ಯವರ್ತಿಗಳಿಲ್ಲದೆ ರೈತ ನೇರವಾಗಿ ಕಟ್ಟಕಡೆಯ ವ್ಯಕ್ತಿಯನ್ನು ಯಾಕೆ ತಲುಪಬಾರದು? ಕೋಲಾರದ ಮಾವಿನ ಹಣ್ಣಿರಲಿ, ಟೊಮ್ಯಾಟೊ ಇರಲಿ ಇವೆರಡನ್ನೂ ಬೆಳೆಯದ ಉಡುಪಿ, ದಕ್ಷಿಣ ಕನ್ನಡದಂತಹ ಜಿಲ್ಲೆಗಳಿಗೆ ತಲುಪುವಾಗ ಅದು ಎಷ್ಟು ಕೈಗಳನ್ನು ದಾಟಿ ಬಂದಿದೆಯೋ ಅವರೆಲ್ಲರಿಗೂ ಬೆಳೆದವನಿಗಿಂತ ಹೆಚ್ಚು ಲಾಭ ಬಂದಿರುವುದು ನಿಸ್ಸಂಶಯ. ಹೀಗಿರುವಾಗ ಕೆಲವು ರೈತರು ಜತೆಗೂಡಿ, ತಾವು ಬೆಳೆದ ವಸ್ತುಗಳು ವಿರಳವಾಗಿರುವ ಹತ್ತಾರು ಊರುಗಳಿಗೆ ಹೋಗಿ ನೇರ ಮಾರಾಟ ಮಾಡಬಹುದಲ್ಲವೇ? ಇದರಿಂದ ಬಳಕೆದಾರರಿಗೂ ತಾಜಾ ತರಕಾರಿ, ಹಣ್ಣುಗಳು ಒಂದಿಷ್ಟು ಕಡಿಮೆ ಬೆಲೆಗೂ ಸಿಗಬಹುದು ತಾನೆ!



ದೊಡ್ಡಬಳ್ಳಾಪುರದ ಲೋಕವಿಖ್ಯಾತ ತೂಬುಗೆರೆ ಹಲಸಿನ ಹಣ್ಣಿಗೆ ದಲ್ಲಾಳಿಗಳು ಕೊಡುತ್ತಿದ್ದ ಬೆಲೆ ನಾಮಕಾವಾಸ್ತೆ ಆಗಿತ್ತು. ಅಲ್ಲಿರುವ ರೈತರು ಬೆಂಗಳೂರಿಗೆ ಹೋದಾಗ ಗೊತ್ತಾದದ್ದು ಒಂದು ತೊಳೆ ಹತ್ತು ರೂಪಾಯಿಗೆ ಮಾರಾಟವಾಗುತ್ತಿದ್ದ ನಿಜ ಸಂಗತಿ. ದಲ್ಲಾಳಿಯು ದೊಡ್ಡ ಹಣ್ಣಿಗೇ ಅಷ್ಟು ಬೆಲೆ ಕೊಡುತ್ತಿರಲಿಲ್ಲ. ರೈತರು ದೇಶದಲ್ಲೇ ಮೊದಲನೆಯದಾದ ಹಲಸು ಬೆಳೆಗಾರರ ಸಹಕಾರ ಸಂಘ ಕಟ್ಟಿದರು. ಇಡೀ ಊರಿನ ರೈತರು ಬೆಳೆದ ಹಲಸಿಗೆ ಬೆಲೆ ನಿರ್ಧರಿಸುವ ಹಕ್ಕು ಸಂಘದ ಕೈಗೆ ಬಂದಾಗ ದಲ್ಲಾಳಿಗಳು ಶರಣಾದರು. ಈಗ ಅಲ್ಲಿ ಹಲಸು ಬೆಳೆಯುವ ಯಾವ ರೈತನಿಗೂ ನಷ್ಟವಿಲ್ಲ.

ಕರ್ನಾಟಕಕ್ಕಿಂತ ಗಾತ್ರದಲ್ಲಿ ಇಸ್ರೇಲ್ ಚಿಕ್ಕದಾದರೂ ಕೃಷಿ ಉತ್ಪಾದನೆಯಲ್ಲಿ ಗಮನಾರ್ಹ ಸಾಧನೆ ಮಾಡುತ್ತಿದೆ. ಅಲ್ಲಿ ಯಾವ ತರಕಾರಿಗೆ ಅಧಿಕ ಬೇಡಿಕೆಯಿದೆ ಎಂಬುದನ್ನು ಜಾಗತಿಕ ಮಾರುಕಟ್ಟೆಗಳ ಸ್ಥಿತಿಗತಿ ಅಧ್ಯಯನ ಮಾಡಿದ ಬಳಿಕ ಅಂತಹ ವ್ಯವಸಾಯಕ್ಕೆ ರೈತರನ್ನು ತೊಡಗಿಸುವ ವ್ಯವಸ್ಥೆಯಿದೆ. ಬೀಜ ಬಿತ್ತನೆ, ಗೊಬ್ಬರ ಪೂರೈಕೆ, ಕೀಟನಾಶಕ ಬಳಕೆ ಎಲ್ಲವೂ ವಿಜ್ಞಾನಿಗಳ ಮಾರ್ಗದರ್ಶನದಲ್ಲಿ ನಡೆಯುತ್ತವೆ. ಹೀಗಾಗಿ ಫಸಲು ಖಚಿತವಾಗಿ ಕೈಸೇರುತ್ತದೆ. ಕಳಪೆ ಬೀಜ, ಖೊಟ್ಟಿ ಗೊಬ್ಬರ ಕೊಟ್ಟು ಅನ್ನದಾತನನ್ನು ಶೋಷಿಸುವ ಕಥೆಗಳಿಗೆ ಅಲ್ಲಿ ಅವಕಾಶವಿಲ್ಲ.

ಭಾರತದಲ್ಲಿ ರೈತನ ಜವಾಬ್ದಾರಿ ವಹಿಸಿಕೊಳ್ಳಬೇಕಾದ ಕೃಷಿ ಹಾಗೂ ತೋಟಗಾರಿಕೆ ಇಲಾಖೆಗಳ ವೈಫಲ್ಯವೇ ರೈತನ ಹತಾಶೆಗೆ ಒಂದು ಕಾರಣವಾಗಿದೆ. ಶ್ರಮಪಟ್ಟು ಉಳುಮೆ ಮಾಡುವ ರೈತ ತನ್ನ ಬೆಳೆಯ ಮಾರಾಟಕ್ಕೆ ತಾನೇ ಉಪಾಯ ಹುಡುಕಬೇಕಾಗಿದೆ. ಅದು ಬಿಟ್ಟು, ಬಂಗಾರದಂತಹ ಬೆಳೆಯನ್ನು ರಸ್ತೆಗೆ ತಂದು ಸುರಿಯುವುದು ಅಕ್ಷಮ್ಯ ಅಲ್ಲವೇ?

ವಾಚಕರ ವಾಣಿ

ಜನಸಂಖ್ಯಾ ನಿಯಂತ್ರಣ: ಚರ್ಚಾರ್ಹ ಸಂಗತಿ

'ಸದ್ಯದ ಸ್ಥಿತಿಯಲ್ಲಿ ಭಾರತದಲ್ಲಿ ಇಬ್ಬರು ಮಕ್ಕಳ ನೀತಿ ಜಾರಿಯ ಅಗತ್ಯ ಇದೆಯೇ?' ಎಂಬ ವಿಷಯ ಕುರಿತ ಚರ್ಚೆಯಲ್ಲಿ (ಪ್ರ.ವಾ., ಜುಲೈ 3) ಇಬ್ಬರು ಲೇಖಕರು ತಮ್ಮ ತಮ್ಮ ವಾದಗಳನ್ನು ಮಂಡಿಸಿದ್ದಾರೆ. ಈ ಕುರಿತು ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಚರ್ಚೆಯಾಗಬೇಕು. ಅಲ್ಲದೆ ಈ ರೀತಿಯ ನಿಯಂತ್ರಣಗಳಿಂದ ಚೀನಾವು ಆರ್ಥಿಕತೆಗೆ ಒಂದು ಯುವಸಮೂಹದ ಕೊಡುಗೆಯನ್ನು ಕಳೆದುಕೊಂಡು ಪರಿತಪಿಸುತ್ತಿರುವುದನ್ನು ನಾವು ಜ್ವಲಂತ ಉದಾಹರಣೆಯಾಗಿ ಕಾಣಬಹುದು. ಆದರೆ ವಿಚಾರ ಅದಲ್ಲ. ಭಾರತದಲ್ಲಿರುವ ನಾಗರಿಕರಿಗೆ ಸ್ಪಷ್ಟವಾದ ಸೌಲಭ್ಯಗಳನ್ನು ಒದಗಿಸಲಾಗಿದೆಯೇ ಎಂಬುದನ್ನು ಸರಿಯಾಗಿ ಅವಲೋಕಿಸಬೇಕಾದ ಸಮಯ ಇದು.

ಬಹುಮುಖ್ಯವಾದ ವಿಚಾರವೆಂದರೆ, ಭಾರತದಲ್ಲಿ ಪ್ರತೀ 1000ಕ್ಕೆ ಶಿಶುಮರಣ ಪ್ರಮಾಣ, ತಾಯಿ ಮರಣ ಪ್ರಮಾಣ ಎಷ್ಟಿದೆ, ಹಸಿವಿನ ಸೂಚ್ಯಂಕ, ಬಡತನದ ಸೂಚ್ಯಂಕದಲ್ಲಿ ಜಾಗತಿಕವಾಗಿ ಭಾರತ ಎಷ್ಟನೇ ಸ್ಥಾನದಲ್ಲಿದೆ, ಶೈಕ್ಷಣಿಕ ಕ್ಷೇತ್ರ, ಲಿಂಗ ಸಮಾನತೆಯಲ್ಲಿ ಎಷ್ಟು ಪ್ರಗತಿ ಸಾಧಿಸಿದೆ ಎಂಬಂತಹ ಅಂಶಗಳನ್ನು ನಾವು ಪರಿಗಣಿಸಿದಾಗ, ದೇಶವು ಇನ್ನೂ ಯಾವ ಹಂತದಲ್ಲಿದೆ, ನಾವು ಸಾಧಿಸಬೇಕಾದ ಸಂಗತಿಗಳೇನು ಎಂಬುದು ತಿಳಿಯುತ್ತದೆ. ಇದನ್ನು ಪರಿಗಣಿಸಿ, ಪ್ರಸ್ತುತ ನಾವು ಹೊಂದಿರುವ ಜನಸಮೂಹಕ್ಕೆ ನೀಡಬೇಕಾದಂತಹ ಸೌಕರ್ಯಗಳನ್ನು ಒದಗಿಸಿದರೆ, ಅದು ಸರ್ಕಾರದ ಬಹು ದೊಡ್ಡ ಸಾಧನೆ ಆಗಲಿದೆ.

ರಮೇಶ್, ಬೆಂಗಳೂರು

ಎಲ್ಲರ ಅನುಭವಕ್ಕೆ ಬಂದ ಸತ್ಯ

ವಿಶ್ವವಿದ್ಯಾಲಯಗಳಲ್ಲಿನ ಜಾತಿ ವ್ಯವಸ್ಥೆ ಕುರಿತ ರಾಜಕುಮಾರ ಕುಲಕರ್ಣಿ ಅವರ ಲೇಖನ (ಸಂಗತ, ಜೂನ್ 3) ನಿಜಕ್ಕೂ ಎಲ್ಲರ ಅನುಭವಕ್ಕೆ ಬಂದ ಸತ್ಯವನ್ನು ಎತ್ತಿ ತೋರಿದಂತಿದೆ. ಇದು ಕೇವಲ ಪಿಎಚ್.ಡಿ ಸಂಶೋಧನೆಗೆ ಸೀಮಿತವಲ್ಲ, ಎಲ್ಲ ಸ್ತರದ ಶಿಕ್ಷಣ ಸಂಸ್ಥೆಗಳಲ್ಲೂ ಹಬ್ಬಿದೆ ಎಂದರೂ ತಪ್ಪಾಗಲಾರದು. ನನ್ನ ಪದವಿ ಕಾಲೇಜಿನ ಬೋಧಕರೊಬ್ಬರಿಗೆ ಇತ್ತೀಚೆಗೆ ಕರೆ ಮಾಡಿ, ಸಹಜವಾಗಿ ಕಾಲೇಜಿನ ಬಗೆಗೆ ವಿಚಾರಿಸಿದಾಗ ಅವರು ಬೇಸರದಿಂದ 'ನೀವು ಇದ್ದ ಸಮಯದಲ್ಲಿನ ಕಾಲೇಜು ವ್ಯವಸ್ಥೆ ಈಗಿಲ್ಲ, ಚಿತ್ರಣ ಸಂಪೂರ್ಣ ಬದಲಾಗಿದೆ. ಕಾಲೇಜುಗಳು ಜಾತಿ ಹಾಗೂ ರಾಜಕೀಯದ ಪ್ರಭಾವಕ್ಕೊಳಗಾಗುತ್ತಿವೆ. ಆಯಾ ಜಾತಿಯವರು ತಾವು ಬೆಂಬಲಿಸುವ ರಾಜಕೀಯ ಪಕ್ಷಗಳತ್ತ ವಿದ್ಯಾರ್ಥಿಗಳನ್ನು ಪ್ರಚೋದಿಸುತ್ತಿದ್ದಾರೆ. ಅಧಿಕೃತವಾಗಿ ಮುಖಂಡತ್ವವನ್ನು ಘೋಷಿಸಿಕೊಂಡಿಲ್ಲವಷ್ಟೆ' ಎಂದರು. 'ಅಂತಹವರು ಬೋಧಿಸುವ ವಿಷಯಕ್ಕೂ ಅವರ ನಿಲುವಿಗೂ ಹೇಗೆ ತಾನೇ ತಾಳೆ ಆದೀತು' ಎಂಬ ನನ್ನ ಪ್ರಶ್ನೆಗೆ, 'ಆತ್ಮದಲ್ಲಿರುವ ಜಾತೀಯತೆ ಈಗ ಹೊರಹೊಮ್ಮಿದೆ. ಅವರೆಂದೂ ಅದರಿಂದ ಹೊರ ಉಳಿಯದವರು' ಎಂಬ ಉತ್ತರ ಅವರಿಂದ ಬಂತು.

ಈ ಸವಾಲುಗಳು ಇಂದು ನಿನ್ನೆಯವಲ್ಲ. ಆದರೆ ವಿದ್ಯಾರ್ಥಿಗಳು ವಾಸ್ತವಕ್ಕೆ ತಮ್ಮನ್ನು ತೆರೆದುಕೊಳ್ಳಬೇಕು. ಯಾವುದೇ ವಿಷಯವನ್ನು ಪರಾಮರ್ಶಿಸದೆ ಒಪ್ಪಬಾರದು. ವಿಶ್ವವಿದ್ಯಾಲಯಗಳು ಸಮಾಜವನ್ನು ತಿದ್ದುವ ಕೆಲಸಕ್ಕೆ ಬುನಾದಿ ಹಾಕಬೇಕೇ ಹೊರತು ತಮ್ಮ ನಿಲುವುಗಳನ್ನು ಅವರ ಮೇಲೆ ಹೇರಬಾರದು. ಅಂತಹವುಗಳನ್ನು ಕಠಿಣ ಕಾನೂನುಗಳಿಂದಾದರೂ ಸರಿಯೆ ತಡೆಯಬೇಕು. ವಿದ್ಯಾರ್ಥಿಗಳ ಸ್ವಂತ ಆಲೋಚನೆಗೆ ಸಹಕಾರಿಯಾಗುವ ಪರಿಸರ ಕಲ್ಪಿಸಬೇಕು. ಅದುವೇ ನಿಜ ಅರ್ಥದ ಸಾರ್ಥಕ ಬೋಧನೆ.

ಶ್ವೇತಾ ಎನ್. ಸೊರಬ, ಶಿವಮೊಗ್ಗ

ಕೆಡವದಿರಿ ಗಡಿಯಲ್ಲಿನ ಪರಂಪರೆ

'ಗಡಿನಾಡು ಕಾಸರಗೋಡಿನಲ್ಲಿ ಕನ್ನಡಕ್ಕೆ ಕುತ್ತು' ವಿಶೇಷ ವರದಿ (ಪ್ರ.ವಾ., ಜುಲೈ 2) ಓದಿ, ನನ್ನಂತೆ ಸಮಸ್ತ ಕನ್ನಡಿಗರು ವಿಷಾದಗೊಂಡಿದ್ದಾರೆ. ನಮ್ಮ ಮಕ್ಕಳನ್ನು ಪ್ರೀತಿಸುವುದೆಂದರೆ ನೆರೆಹೊರೆಯ ಮಕ್ಕಳನ್ನು ದ್ವೇಷಿಸುವುದಲ್ಲ, ಬದಲಾಗಿ ನಮ್ಮ ಮಕ್ಕಳ ವ್ಯಕ್ತಿತ್ವದ ಬೆಳವಣಿಗೆಗೆ ನೆರೆಹೊರೆಯ ಮಕ್ಕಳ ಸ್ನೇಹ, ಪ್ರೀತಿ, ಸಹಕಾರ ಅತ್ಯಗತ್ಯವಾಗಿರುತ್ತವೆ.

ಬರ್ಫಿಯನ್ನು ತಯಾರಿಸುವಾಗ ಬೇಯಿಸಿದ ಪದಾರ್ಥವನ್ನು ಆರಿಸಲು ತಟ್ಟೆಯಲ್ಲಿ ಪಸರಿಸಿದ ನಂತರ, ಸಣ್ಣ ಸಣ್ಣ ತುಂಡುಗಳನ್ನಾಗಿ ಕತ್ತರಿಸಿದಾಗ ತಿನ್ನಲು ಸರಳವಾಗುತ್ತದೆ. ಯಾವುದೇ ದೇಶದ ಆಡಳಿತಕ್ಕಾಗಿ ಅನುಕೂಲವಾಗುವಂತೆ ಪ್ರಾಂತಗಳನ್ನು ವಿಭಜಿಸಬೇಕಾಗುತ್ತದೆ. ಆದರೆ ಈ ಪ್ರಕ್ರಿಯೆಗಾಗಿ ಗಡಿರೇಖೆಯನ್ನು ಚಾಕುವಿನಿಂದ ಗೆರೆ ಕೊರೆಯಲು ಸಾಧ್ಯವಿಲ್ಲ. ಗಡಿರೇಖೆಯ ಆಚೆ ಈಚೆ ಎರಡು ಭಾಷೆ, ಸಂಸ್ಕೃತಿಗಳಿಗೆ ಜನರು ಒಗ್ಗಿಕೊಂಡಿರುತ್ತಾರೆ. ಗಡಿಯಲ್ಲಿ ಇರುವ ಜನರನ್ನು ಮಲತಾಯಿಯಂತೆ ಕಾಣದೆ, ಅಮ್ಮ, ಚಿಕ್ಕಮ್ಮನಂತೆ ಪಾಲಿಸಬೇಕಾಗುತ್ತದೆ, ಪೋಷಿಸಬೇಕಾಗುತ್ತದೆ. ಈ ಬಗೆಯಲ್ಲಿ ಎರಡು ರಾಜ್ಯಗಳ ಆಡಳಿತಗಳು ಕೂಡಿ ಮುನ್ನಡೆಯಬೇಕಾಗುತ್ತದೆ.

ಕೇರಳವು ಸುಂದರ ನಾಡು, ಕಲೆ, ಸಂಸ್ಕೃತಿ ಪರಂಪರೆಗಳ ಬೀಡು. ಕರ್ನಾಟಕ, ಕೇರಳ ಎಂಬ ಭಾಷಾವಾರು ಪ್ರಾಂತ ರಚನೆ ಆಗುವುದಕ್ಕೂ ಬಹಳ ಹಿಂದೆಯೇ ಈ ಎರಡು ಪ್ರದೇಶಗಳ ಜನರು ತಮ್ಮ ತಮ್ಮ ಸಾಹಿತ್ಯ, ಸಂಸ್ಕೃತಿ, ಕಲೆಗಳನ್ನು ಹಂಚಿಕೊಳ್ಳುತ್ತಿದ್ದರು. ಈಗ ಈ ದಿನಗಳಲ್ಲಿ ಕನ್ನಡದ ಮಕ್ಕಳು ವಿದ್ಯೆಗಾಗಿ, ಉದ್ಯೋಗಕ್ಕಾಗಿ ಕೇರಳದಲ್ಲಿರುತ್ತಾರೆ. ಮಲಯಾಳಿ ಮಕ್ಕಳು ಈ ಕಾರಣಕ್ಕಾಗಿ ಕರ್ನಾಟಕದಲ್ಲಿದ್ದಾರೆ. ಹೀಗೆ ಅನೇಕ ಜೀವತಂತುಗಳು ಎರಡು ರಾಜ್ಯಗಳನ್ನು ಬೆಸೆದುಕೊಂಡು ಸಮೃದ್ಧಿಯನ್ನು ಸಾಧಿಸುತ್ತಿರುವಾಗ ನಮ್ಮ ಕಾಸರಗೋಡಿನ ಊರುಗಳ ಕನ್ನಡ ಹೆಸರನ್ನು ತಿರುಚಿ ಮಲಯಾಳಿ ಭಾಷೆಗೆ ಪರಿವರ್ತನೆ ಮಾಡಲು ಹೊರಟಿರುವುದು ಅನಪೇಕ್ಷಿತ ಮತ್ತು ಅಸಂಬದ್ಧ. ಹೀಗೆ ಹೆಸರು ಬದಲಾಯಿಸಿ ಕನ್ನಡಿಗರಿಗೆ ಮಲಯಾಳಿ ದೀಕ್ಷೆ ಕೊಡುವ ನಿಷ್ಫಲ ಪ್ರಯತ್ನಗಳು ಆಗಬಾರದು. ಹಾಗೆ ಮಾಡಿದಲ್ಲಿ ಸಮಸ್ತ ಕನ್ನಡಿಗರ ಆತ್ಮಾಭಿಮಾನವನ್ನು ಕೆಣಕಿದಂತೆ ಆಗುತ್ತದೆ, ಸ್ನೇಹ ಸಂಬಂಧಗಳು ಕೆಡುತ್ತವೆ.

ನಮ್ಮ ನಮ್ಮ ಭಾಷಾಭಿಮಾನಗಳನ್ನು ತೋರಿಸಲು ಬೇಕಾದಷ್ಟು ರಚನಾತ್ಮಕ ಯೋಜನೆಗಳನ್ನು ರೂಪಿಸಬಹುದು. ಎರಡು ರಾಜ್ಯಗಳ ವಿಶ್ವವಿದ್ಯಾಲಯಗಳಲ್ಲಿ ಉಭಯ ಭಾಷೆ, ಇತಿಹಾಸ, ಸಾಹಿತ್ಯ, ಸಂಸ್ಕೃತಿ, ಕಲೆಗಳ ಅಧ್ಯಯನ ಪೀಠಗಳನ್ನು ಸ್ಥಾಪಿಸಬಹುದು. ಉಭಯ ಭಾಷೆಗಳಲ್ಲಿಯ ಸಾಹಿತ್ಯ ಕೃತಿಗಳ ಅನುವಾದಕ್ಕಾಗಿ ಪ್ರತ್ಯೇಕ ಪೀಠಗಳನ್ನು ಸ್ಥಾಪಿಸುವುದರ ಮೂಲಕ ಎರಡು ರಾಜ್ಯಗಳ ಸಂಸ್ಕೃತಿಯನ್ನು, ಸಾಹಿತ್ಯವನ್ನು ಪರಿಚಯಿಸಿಕೊಳ್ಳಬಹುದು. ಎರಡು ಸಂಸ್ಕೃತಿಗಳಲ್ಲಿ ಹೆಚ್ಚಿನ ಅಧ್ಯಯನಕ್ಕಾಗಿ ಮತ್ತು ತುಲನೆಗಾಗಿ ಸಂಶೋಧನೆಗಳನ್ನು ನಡೆಸಬಹುದು. ಹೀಗೆ ನಮ್ಮ ಭಾಷೆ, ಸಾಹಿತ್ಯ, ಸಂಸ್ಕೃತಿಗಳನ್ನು ಬೆಳೆಸಬೇಕೇ ಹೊರತು ಕೆಡಿಸಬಾರದು. ಕೆಡಿಸುವುದಕ್ಕಿಂತ ಕಟ್ಟುವ ಕೆಲಸಗಳು ನಮ್ಮ ರಾಜ್ಯಗಳ ಸಂಬಂಧಗಳನ್ನು ಬೆಳೆಸಬಲ್ಲವು.

ಮಾಲತಿ ಪಟ್ಟಣಶೆಟ್ಟಿ, ಧಾರವಾಡ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ರಾಜ್ಯದಲ್ಲಿ ಈಜುಕೊಳಗಳ ವ್ಯವಸ್ಥೆ– ಅವ್ಯವಸ್ಥೆ; ಸೌಲಭ್ಯಗಳೆಲ್ಲವೂ ಬೆಂಗಳೂರು ಕೇಂದ್ರಿತ

ನಗರಗಳಲ್ಲಿ ಕೊರತೆ ಇಲ್ಲ, ಗ್ರಾಮಗಳಲ್ಲಿ ಏನೂ ಇಲ್ಲ

ಪ್ರಜಾವಾಣಿ ವಾರ್ತೆ

ಉನ್ನತ ದರ್ಜೆಯ ಕ್ರೀಡಾಸೌಲಭ್ಯಗಳು ಮತ್ತು ತರಬೇತಿಗಾಗಿ ರಾಜಧಾನಿ ಬೆಂಗಳೂರಿನತ್ತಲೇ ರಾಜ್ಯದ ಎಲ್ಲ ಭಾಗಗಳ ಕ್ರೀಡಾಪಟುಗಳು ಮುಖ ಮಾಡುವುದು ಇಂದಿಗೂ ತಪ್ಪಿಲ್ಲ. ಅದು ಕ್ರಿಕೆಟ್ ಇರಬಹುದು ಅಥವಾ ಈಜು ಕ್ರೀಡೆಯೇ ಇರಬಹುದು. ಬಹುತೇಕ ಎಲ್ಲ ಜಿಲ್ಲೆಗಳಲ್ಲಿಯೂ ಈಜುಕೊಳಗಳು ಇವೆ. ಆದರೆ, ಕೆಲವೆಡೆ ತರಬೇತುದಾರರಿಲ್ಲ, ಕೆಲವೆಡೆ ನಿರ್ವಹಣೆ ಇಲ್ಲ. ಆದ್ದರಿಂದ ಪ್ರತಿಭಾವಂತರು ಬೇಸಿಗೆ ಶಿಬಿರಗಳು ಮತ್ತು ಸ್ಥಳೀಯ ಈಜು ಸ್ಪರ್ಧೆಗಳಿಗೆ ಸೀಮಿತವಾಗಿದ್ದಾರೆ.

ಬೆಂಗಳೂರು ನಗರದ ಈಜುಕೇಂದ್ರಗಳ ಪೈಕಿ ಹೆಚ್ಚಿನವುಗಳಲ್ಲಿ ಸಕಲ ಸೌಲಭ್ಯಗಳೂ ಇವೆ. ಯುವಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಒಂದು ಕೊಳ ಹಾಗೂ ಬಿಬಿಎಂಪಿಯ 12 ಕೊಳಗಳು ಮಾತ್ರವಲ್ಲದೆ ರಾಜ್ಯ ಈಜುಸಂಸ್ಥೆಯ ಮಾನ್ಯತೆ ಪಡೆದಿರುವ 26 ಕ್ಲಬ್‌ಗಳ ಕೊಳಗಳು ಇವೆ. ಆದರೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಇರುವ ಸೌಲಭ್ಯಗಳು ಶೂನ್ಯ.

ಮಧ್ಯ ಕರ್ನಾಟಕದ ದಾವಣಗೆರೆಯಲ್ಲಿ ಎರಡು ಕೊಳಗಳು ಇವೆ. ಸ್ಮಾರ್ಟ್ ಸಿಟಿ ಯೋಜನೆಯಡಿಯಲ್ಲಿ ದಾವಣಗೆರೆಯ ಎರಡು ಈಜುಕೊಳಗಳನ್ನು ₹2.05 ಕೋಟಿ ವೆಚ್ಚದಲ್ಲಿ ಅಭಿವೃದ್ಧಿಗೊಳಿಸಲಾಗುತ್ತಿದೆ. ಹರಿಹರದಲ್ಲಿ ಒಂದು ಈಜುಕೊಳ ಇದೆ. 2017ರ ಡಿಸೆಂಬರ್‌ನಲ್ಲಿ ದುಬೈನಲ್ಲಿ ನಡೆದ ಏಷ್ಯನ್ ಯೂಥ್ ಪ್ಯಾರಾ ಗೇಮ್ಸ್‌ನಲ್ಲಿ ರೇವತಿ ನಾಯಕ ಕಂಚಿನ ಪದಕ ಪಡೆದಿದ್ದರು. ದವನ್ ಕಾಲೇಜಿನ ವಿದ್ಯಾರ್ಥಿ ಮಣಿಕಂಠ ಎಲ್. ರಾಷ್ಟ್ರಮಟ್ಟಕ್ಕೆ ಆಯ್ಕೆಯಾಗಿದ್ದರು ಚಿತ್ರದುರ್ಗ ಜಿಲ್ಲೆಯಲ್ಲಿ ಎರಡು ಸರ್ಕಾರಿ ಹಾಗೂ ಎರಡು ಖಾಸಗಿ ಈಜುಕೊಳಗಳಿವೆ. ನಿರ್ವಹಣೆ ಕೊರತೆ ಇದೆ. ಶಿವಮೊಗ್ಗ ಜಿಲ್ಲೆಯಲ್ಲಿ ಇಲಾಖೆಯ ಎರಡು ಕೊಳಗಳು ಇವೆ.

ಕಲ್ಯಾಣ ಕರ್ನಾಟಕದ ಕಲಬುರ್ಗಿಯ ಚಂದ್ರಶೇಖರ ಪಾಟೀಲ ಕ್ರೀಡಾಂಗಣದಲ್ಲಿ ಅಂತರರಾಷ್ಟ್ರೀಯ ಗುಣಮಟ್ಟದ ಈಜುಕೊಳ ಇದೆ. 2014ರಲ್ಲಿ ಒಂದು ಬಾರಿ ಮಾತ್ರ ಮಾಸ್ಟರ್ಸ್ ಈಜು ಚಾಂಪಿಯನ್‌ಷಿಪ್ ನಡೆದಿದ್ದು ಬಿಟ್ಟರೆ ಸ್ಪರ್ಧೆಗಳು ನಡೆದಿಲ್ಲ. ತಾತ್ಕಾಲಿಕ ಕೋಚ್ ಇದ್ದಾರೆ. ಬೀದರ್ ಜಿಲ್ಲೆಯಲ್ಲಿ ಸರ್ಕಾರದ ಒಂದು ಈಜುಕೊಳ ಇದೆ. ಇದು ಮೂರು ವರ್ಷದಿಂದ ಸ್ಥಗಿತವಾಗಿದೆ. ಯಾದಗಿರಿಯ ಜಿಲ್ಲಾ ಕ್ರೀಡಾಂಗಣದಲ್ಲಿ 2019ರಲ್ಲಿ ಈಜುಕೊಳ ಉದ್ಘಾಟನೆ ಆಗಿದೆ. ಯಾವುದೇ ಸೌಲಭ್ಯಗಳು ಇಲ್ಲ. ರಾಯಚೂರಿನ ಈಜುಕೊಳದಲ್ಲಿ ಮೂರು ವರ್ಷಗಳ ಹಿಂದೆ ಆರಂಭಿಸಲಾದ ಕಾಮಗಾರಿ ಪೂರ್ಣಗೊಳ್ಳದೆ ಈಗ ಹಾಳುಬಿದ್ದಿದೆ. ಕೊಪ್ಪಳ ಜಿಲ್ಲಾ ಕ್ರೀಡಾಂಗಣದಲ್ಲಿ ಸುಸಜ್ಜಿತ ಈಜುಕೊಳ ಇದೆ. ಇಬ್ಬರು ತಾತ್ಕಾಲಿಕ ಕೋಚ್‌ಗಳು ಇದ್ದಾರೆ. ಗಂಗಾವತಿಯಲ್ಲಿ ಇರುವ ಈಜುಕೊಳ ಶಿಥಿಲಗೊಂಡಿದೆ.

ಮೈಸೂರಿನಲ್ಲಿ ಸದ್ಯಕ್ಕೆ ಸಾರ್ವಜನಿಕರಿಗೆ ಲಭ್ಯವಾಗುವಂಥ ಮೂರು ಈಜುಕೊಳಗಳಿವೆ. ನಿರ್ವಹಣೆ, ತರಬೇತಿ ಸೌಲಭ್ಯ ಪರವಾಗಿಲ್ಲ. ಕ್ರೀಡಾ ಇಲಾಖೆಯು ಮೈಸೂರಿನ ಚಾಮುಂಡಿವಿಹಾರ ಕ್ರೀಡಾಂಗಣದಲ್ಲಿ ಅಂತರರಾಷ್ಟ್ರೀಯ ದರ್ಜೆಯ ಈಜುಕೊಳ ನಿರ್ಮಿಸಿದೆ. ನಿರ್ವಹಣೆಯನ್ನು ಖಾಸಗಿಯವರಿಗೆ ನೀಡಲಾಗಿದೆ. ಮೈಸೂರು ವಿಶ್ವವಿದ್ಯಾಲಯದಲ್ಲಿ ಒಂದು ಕೊಳ ಇದೆ. ಜೆ.ಪಿ. ನಗರದಲ್ಲಿರುವ ಪಂಡಿತ ಪುಟ್ಟರಾಜು ಗವಾಯಿ ಕ್ರೀಡಾ ಸಂಕೀರ್ಣದಲ್ಲಿಯೂ ಒಂದು ಕೊಳ ಇದೆ. ಪಾಲಿಕೆಯು ಇದರ ನಿರ್ವಹಣೆಯನ್ನು 30 ವರ್ಷಗಳ ಅವಧಿಗೆ ಖಾಸಗಿ ಸಂಸ್ಥೆಯವರಿಗೆ ಗುತ್ತಿಗೆ ನೀಡಿದೆ. ಚಾಮರಾಜನಗರದಲ್ಲಿ ಒಂದೂ ಈಜುಕೊಳ ಇಲ್ಲ. ಹಾಸನದಲ್ಲಿ ಎರಡು ಈಜುಕೊಳಗಳಿದ್ದು, ನಿರ್ವಹಣೆ ಅಷ್ಟಕಷ್ಟೆ. ಮಂಡ್ಯದಲ್ಲೂ ಪಿಇಟಿ ಸಂಸ್ಥೆಯಲ್ಲಿ ಅಂತರರಾಷ್ಟ್ರೀಯ ದರ್ಜೆಯ ಖಾಸಗಿ ಈಜುಕೊಳವಿದೆ. ಮಡಿಕೇರಿಯ ಜನರಲ್ ತಿಮ್ಮಯ್ಯ ಜಿಲ್ಲಾ ಕ್ರೀಡಾಂಗಣದಲ್ಲಿ ಈಜುಕೊಳವಿದೆ. ಇಬ್ಬರು ತರಬೇತುದಾರರು ಇದ್ದಾರೆ.

ಉತ್ತರ ಕರ್ನಾಟದಲ್ಲಿ ಡೈವಿಂಗ್ ಮತ್ತು ಅಂತರರಾಷ್ಟ್ರೀಯ ದರ್ಜೆಯ ಈಜುಕೊಳ ಇರುವುದು ಹುಬ್ಬಳ್ಳಿಯಲ್ಲಿ ಮಾತ್ರ. ಆದರೆ ತರಬೇತುದಾರರ ಕೊರತೆ ಇದೆ. ಸ್ಮಾರ್ಟ್ ಸಿಟಿ ಯೋಜನೆಯಲ್ಲಿ 2018ರಿಂದ ಎರಡು ವರ್ಷ ನವೀಕರಣ ಕೆಲಸ ನಡೆದಿದೆ. ಉತ್ತರ ಕನ್ನಡ ಜಿಲ್ಲೆಯ ಈಜುಕೊಳ ಮುಚ್ಚಿದೆ. ಬಾಗಲಕೋಟೆಯಲ್ಲಿ ಹೆಸರಿಗಷ್ಟೇ ಅಂತರರಾಷ್ಟ್ರೀಯ ಈಜುಕೊಳವಿದೆ. ಎರಡು ವರ್ಷಗಳಿಂದ ದುರಸ್ತಿಯಲ್ಲಿದೆ. ವಿಜಯಪುರದಲ್ಲಿ ಹೊಸ ಈಜುಕೊಳ ಕಾಮಗಾರಿ ನಡೆಯುತ್ತಿದೆ. ಗದುಗಿನಲ್ಲಿ ಎರಡು ಕೊಳಗಳು ಇವೆ. ಹಾವೇರಿಯಲ್ಲಿ ಇರುವ ಈಜುಕೊಳ ಎರಡು ವರ್ಷದಿಂದ ಮುಚ್ಚಿದೆ.

ಬೆಳಗಾವಿಯಲ್ಲಿ ಇದುವರೆಗೂ ಅಂತರರಾಷ್ಟ್ರೀಯ ಗುಣಮಟ್ಟದ ಈಜುಕೊಳವಿಲ್ಲ. ವಿಜಯನಗರ (ಹೊಸಪೇಟೆ) ಹಾಗೂ ಬಳ್ಳಾರಿ ಜಿಲ್ಲೆಗಳಲ್ಲಿ ಈಜುಕೊಳವಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 8 ಹೈಟೆಕ್ ಮಾದರಿ ಈಜುಕೊಳ ಇವೆ. ಮೂಡುಬಿದಿರೆ, ಪುತ್ತೂರು, ಮಂಗಳೂರು ಸೇರಿದಂತೆ ಕೆಲ, ಸಿಬಿಎಸ್‌ಸಿ ಶಾಲೆಗಳಲ್ಲಿ ಕೂಡ ಈಜುಕೊಳ ಇವೆ. ಮೂಡುಬಿದಿರೆ ಈಜುಕೊಳವನ್ನು ಕ್ರೀಡಾ ಇಲಾಖೆ ನಿರ್ವಹಣೆ ಮಾಡುತ್ತಿದ್ದು, ಮಂಗಳೂರಿನ ಮಂಗಳಾ ಈಜುಕೊಳದ ನಿರ್ವಹಣೆ ಮಹಾನಗರ ಪಾಲಿಕೆ ವ್ಯಾಪ್ತಿಗೆ ಸೇರಿದೆ. ಸೌಲಭ್ಯಗಳೂ ಇವೆ. ತರಬೇತುದಾರರು ಇದ್ದಾರೆ.

ಮಾಹಿತಿ: ಮಹೇಶ್ ಕನ್ನೇಶ್ವರ, ಓಂಕಾರ್ ಮೂರ್ತಿ, ಡಿ.ಕೆ. ಬಸವರಾಜು, ಪ್ರಮೋದ್, ವಿಕ್ರಂ ಕಾಂತಿಕೆರೆ, ಸತೀಶ ಬಿ.

ಹುಬ್ಬಳ್ಳಿ ಈಜುಕೊಳ ದೃಶ್ಯ. ಪ್ರಜಾವಾಣಿ ಚಿತ್ರ: ಗೋವಿಂದರಾಜ್ ಜವಳಿ

28 ರಾಜ್ಯದಲ್ಲಿರುವ ಡಿವೈಇಎಸ್ ಈಜುಕೊಳಗಳು

12 ಬೆಂಗಳೂರಿನಲ್ಲಿರುವ ಪಾಲಿಕೆ ಈಜುಕೊಳಗಳು

1 ಬೆಂಗಳೂರಿನಲ್ಲಿರುವ ಡಿವೈಇಎಸ್ ಕೊಳ

ಶ್ರೀಹರಿ ನಟರಾಜ್

‘ಎರಡು ವರ್ಷ ಇದ್ದಾಗಲೇ ಈಜುಕೊಳಕ್ಕಿಳಿಸಿದ್ದ ಅಪ್ಪ’

• ಗಿರೀಶ ದೊಡ್ಡಮನಿ

‘ನಾನು ಎರಡು ವರ್ಷದವನಿದ್ದೆ. ತುಂಟಾಟ ಜಾಸ್ತಿ ಮಾಡುತ್ತಿದ್ದೆ. ಅದಕ್ಕೆ ಅಪ್ಪ ನನಗೆ ಬೇಬಿ ಪೂಲ್‌ನಲ್ಲಿ ಇಳಿಸಿ ಈಜಲು ಕಲಿಸಿದರು. ಅಣ್ಣನೂ ಅದೇ ಈಜುಕೊಳದಲ್ಲಿ ಈಜುತ್ತಿದ್ದ. ಹಾಗೇ ಈಜು ಇಷ್ಟವಾಯಿತು. ಇಲ್ಲಿಯವರೆಗೂ ಬೆಳೆದೆ’–

ಹೀಗೆಂದವರು ಇದೇ ತಿಂಗಳು ಟೋಕಿಯೊ ಒಲಿಂಪಿಕ್ಸ್‌ನ ಈಜು ಸ್ಪರ್ಧೆಯ ಪುರುಷರ 100 ಮೀಟರ್ ಬ್ಯಾಕ್‌ಸ್ಟ್ರೋಕ್‌ನಲ್ಲಿ ಭಾರತವನ್ನು ಪ್ರತಿನಿಧಿಸಲಿರುವ ಶ್ರೀಹರಿ. ಈಚೆಗೆ ರೋಮ್‌ನಲ್ಲಿ ನಡೆದ ಕೂಟದಲ್ಲಿ 20 ವರ್ಷದ ಶ್ರೀಹರಿ ‘ಎ’ ಅರ್ಹತೆ ಗಳಿಸಿದರು. ಈ ಸಾಧನೆ ಮಾಡಿದ ಭಾರತದ ಕಿರಿಯ ವಯಸ್ಸಿನ ಈಜುಪಟುವೆಂಬ ಹೆಗ್ಗಳಿಕೆ ಅವರದ್ದು. ಸಿಟ್ಟು ತಣಿಸಲು ಈಜುಕೊಳಕ್ಕೆ ಪುಟ್ಟ ಕಂದನನ್ನು ಇಳಿಸಿದ್ದ ಶ್ರೀಹರಿ ಅವರ ತಂದೆಗೂ ಇಂತಹದೊಂದು ಸಂಭ್ರಮದ ದಿನದ ನಿರೀಕ್ಷೆಯೇ ಇದ್ದಿರಲಿಕ್ಕಿಲ್ಲ. ಎಲ್ಲರ ನಿರೀಕ್ಷೆಯನ್ನೂ ಮೀರಿ ಶ್ರೀಹರಿ ಟೋಕಿಯೊದತ್ತ ಸಾಗುತ್ತಿದ್ದಾರೆ. 18 ವರ್ಷಗಳಲ್ಲಿ ತಮ್ಮ ಪರಿಶ್ರಮ, ನಲಿವು, ನಿರಾಶೆಗಳನ್ನು ‘ಪ್ರಜಾವಾಣಿ’ಯೊಂದಿಗೆ ಹಂಚಿಕೊಂಡಿದ್ದಾರೆ. ಅದರ ಸಾರಾಂಶ ಇಲ್ಲಿದೆ.

‘10ನೇ ವಯಸ್ಸಿನಲ್ಲಿ ರಾಷ್ಟ್ರಮಟ್ಟದಲ್ಲಿ ಭಾಗವಹಿಸಿದೆ. ಗೆದ್ದಾಗ ಆಸಕ್ತಿ, ಆತ್ಮವಿಶ್ವಾಸ ಹೆಚ್ಚಿತು. ಸ್ಪರ್ಧಾತ್ಮಕವಾಗಿ ಗಂಭೀರವಾಗಿ ಪ್ರಯತ್ನಿಸತೊಡಗಿದೆ. ಕೋಚ್ ಬಿನೇಶ್ ಅವರ ಮಾರ್ಗದರ್ಶನವೂ ದೊಡ್ಡದು. ಈಗಲೂ ಅವರು ನನ್ನೊಂದಿಗೆ ಇದ್ದಾರೆ. ಹಣಕಾಸು, ಸೌಲಭ್ಯಗಳ ಇತಿಮಿತಿಯ ಸವಾಲುಗಳ ನಡುವೆಯೂ ಪ್ರಯತ್ನ ಮಾಡಿದೆ. ಡಾಲ್ಫಿನ್ ಕ್ಲಬ್‌ನಲ್ಲಿ ಉತ್ತಮ ಸೌಲಭ್ಯಗಳು ಮತ್ತು ತರಬೇತಿ ನೆರವಾಯಿತು.

‘2018ರಲ್ಲಿ ಕಾಮನ್‌ವೆಲ್ತ್ ಕೂಟ ಮತ್ತು ಏಷ್ಯನ್ ಗೇಮ್ಸ್‌ನಲ್ಲಿ ಭಾಗವಹಿಸಿದ್ದ ಅನುಭವ ಅವಿಸ್ಮರಣೀಯ. ಅಂತರರಾಷ್ಟ್ರೀಯ ಮಟ್ಟದಲ್ಲಿರುವ ಸೌಲಭ್ಯಗಳು ಮತ್ತು ಏಷ್ಯಾದ ಶ್ರೇಷ್ಠ ಈಜುಪಟುಗಳೊಂದಿಗೆ ಸ್ಪರ್ಧೆ ಮಾಡಿದ್ದು ಹೊಸ ಅನುಭವ ನೀಡಿತು. ಭಾರತ ಕ್ರೀಡಾ ಪ್ರಾಧಿಕಾರದ ಟಾಪ್ ಯೋಜನೆಯ ನೆರವಿನಿಂದಾಗಿ ಹಣಕಾಸು ಸಮಸ್ಯೆ ನೀಗಿತು. ಒಲಿಂಪಿಕ್ಸ್‌ನಲ್ಲಿ ಎ ಅರ್ಹತೆ ಪಡೆಯುವುದು ಕಷ್ಟ. ಆ ಮಟ್ಟ ಸಾಧಿಸಿರುವೆ.

‘ಮಾನಸಿಕವಾಗಿ ಸದೃಢರಾಗಿರುವುದು ಬಹಳ ಮುಖ್ಯ. ಸೋತಾಗ ಕುಗ್ಗಿದರೆ ಮುಂದಿನ ಅವಕಾಶಗಳನ್ನು ಕಳೆದುಕೊಳ್ಳಬೇಕಾಗುತ್ತದೆ. ಈಗ ಸೋತರೆ ಸೋಲಲಿ, ಮುಂದಿನ ಬಾರಿ ಗೆಲ್ಲುತ್ತೇನೆ ಎಂಬ ಮನೋಭಾವ ಮುಖ್ಯ. ನನಗೆ ಮೆಂಟಲ್ ಕಂಡಿಷನಿಂಗ್ ಕೋಚ್ ಇಲ್ಲ. ಆದರೆ, ಆಗಿದ್ದನ್ನು ಬಿಟ್ಟು ಮುಂದೆ ಸಾಗುವುದೇ ಉತ್ತಮ. ಅದೇ ನಮ್ಮನ್ನು ಸದೃಢವಾಗಿಡುತ್ತದೆ.

‘ಈ ಹಾದಿಯಲ್ಲಿ ಬಹಳಷ್ಟು ವೈಯಕ್ತಿಕ ವಿಷಯಗಳಲ್ಲಿ ರಾಜಿ ಮಾಡಿಕೊಳ್ಳಬೇಕಾಗುತ್ತದೆ. ಜೀವನಶೈಲಿ ಮತ್ತು ಸಾಮಾಜಿಕ ಒಡನಾಟಗಳನ್ನು ನಿಯಂತ್ರಿಸಬೇಕು. ಕಳೆದ ಹತ್ತು ವರ್ಷಗಳಿಂದ ನಾನು ಕುಟುಂಬದೊಂದಿಗೆ ಪ್ರವಾಸ ಮಾಡಿಲ್ಲ. ಈಜು, ಮನೆ, ಶಾಲೆ ಇಷ್ಟೇ ಜಗತ್ತು. ಬೇರೆ ದೇಶಗಳಿಗೆ ಸ್ಪರ್ಧೆಗಳಿಗೆ ಹೋದಾಗಲೂ ಹೊರಗಡೆ ವಿಹಾರಕ್ಕೆ ಹೋಗುವುದು ಕಡಿಮೆ. ನಾನು ಭಾಗವಹಿಸುವ ಸ್ಪರ್ಧೆಗಳ ಮೇಲೆ ಹೆಚ್ಚು ನಿಗಾವಹಿಸುತ್ತೇನೆ’ ಎಂದು ಹೇಳುತ್ತಾರೆ ಶ್ರೀಹರಿ.

ಶ್ರೀಹರಿ ಜೈನ್ ಕಾಲೇಜಿನಲ್ಲಿ ಅರ್ಥಶಾಸ್ತ್ರದಲ್ಲಿ ಬಿಎ ಓದುತ್ತಿದ್ದಾರೆ.

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

ಈಸಬೇಕು ವೃತ್ತಿಪರವಾಗಿ ಜೈಸಬೇಕು

• ಸುಂದರೇಶ್ ಸತ್ಯನಾರಾಯಣ

ಮೂರು ದಶಕಗಳಿಂದ ಐವರು ಒಲಿಂಪಿಯನ್ ಈಜುಪಟುಗಳು ಮತ್ತು ಅಂತರರಾಷ್ಟ್ರೀಯ ಸ್ಪರ್ಧಿಗಳನ್ನು ಕಾಣಿಕೆಯಾಗಿ ನೀಡಿದ ಹೆಗ್ಗಳಿಕೆ ಕನ್ನಡ ನಾಡಿನದ್ದು. ಇದೀಗ ಶ್ರೀಹರಿ ನಟರಾಜ್ ಕೀರ್ತಿಕಿರೀಟಕ್ಕೆ ಮತ್ತೊಂದು ರತ್ನವಾಗಿ ಸೇರ್ಪಡೆಯಾಗಿದ್ದಾರೆ.

ಇದೇ ತಿಂಗಳು ನಡೆಯುವ ಒಲಿಂಪಿಕ್ಸ್‌ಗೆ ತೆರಳುತ್ತಿರುವ ಮತ್ತೊಬ್ಬ ಈಜುಪಟು ಸಜನ್ ಪ್ರಕಾಶ್ ಕೆಲ ವರ್ಷಗಳ ಹಿಂದೆ ಇಲ್ಲಿಯೇ ತರಬೇತಿ ಪಡೆದಿದ್ದರು. ಮಹಿಳಾ ವಿಭಾಗದಲ್ಲಿ ಆಯ್ಕೆಯಾಗಿರುವ ಗುಜರಾತ್‌ನ ಮಾನಾ ಪಟೇಲ್ ಕೂಡ ಬೆಂಗಳೂರಿನಲ್ಲಿ ಈಜು ಕಲಿತವರು.

ಇಂದಿನವರೆಗೂ ಈಜು ಕಲೆ, ಕ್ರೀಡೆ ಮತ್ತು ಫಿಟ್‌ನೆಸ್ ಸಾಧನವಾಗಿದೆ. ಆದರೆ ಇದರ ವಾಣಿಜ್ಯ ಅಂಶಗಳನ್ನು ಗುರುತಿಸಿ, ಬಳಸಿಕೊಳ್ಳುವ ಪ್ರಯತ್ನ ಇನ್ನಷ್ಟೇ ಆಗಬೇಕಿದೆ. ಮೊದಲಿನಿಂದಲೂ ಸರ್ಕಾರದ ನೆರವಿನ ಮೇಲೆ ಅವಲಂಬಿತರಾಗಿದ್ದೇವೆ. ಇಂಡಿಯನ್ ಪ್ರಿಮಿಯರ್ ಲೀಗ್ ಕ್ರಿಕೆಟ್, ಇಂಡಿಯನ್ ಫುಟ್‌ಬಾಲ್ ಲೀಗ್, ಇಂಡಿಯನ್ ಹಾಕಿ ಲೀಗ್, ಪ್ರೊ ಕಬಡ್ಡಿ ಲೀಗ್‌ಗಳಂತೆ ಈಜನ್ನು ಕೂಡ ವೃತ್ತಿಪರಗೊಳಿಸಬಹುದು.

ಈಜು, ವಾಟರ್‌ಪೋಲೊ, ಡೈವಿಂಗ್, ಕಲಾತ್ಮಕ ಈಜು ಮತ್ತು ಓಪನ್ ವಾಟರ್ ಈಜು ಎಂಬ ಐದು ವಿಭಾಗಗಳಿವೆ. ಪ್ರಸ್ತುತ ನಾವು ಈ ಎಲ್ಲಾ ಐದು ವಿಭಾಗಗಳನ್ನು ಒಂದೇ ಚಾಂಪಿಯನ್‌ಷಿಪ್‌ನಲ್ಲಿ ಸೇರಿಸಿದ್ದೇವೆ. ನಾವು ಎಲ್ಲಾ ವಿಭಾಗಗಳನ್ನು ಒಟ್ಟಿಗೆ ಸೇರಿಸಿದ್ದರಿಂದ, ಈಜು ಸ್ಪರ್ಧೆಗಳು ಇತರ ನಾಲ್ಕು ಸ್ಪರ್ಧಾತ್ಮಕ ವಿಭಾಗಗಳ ಮಹತ್ವವನ್ನು ಮರೆಮಾಡಿದೆ. ಒಮ್ಮೆ ನಾವು ಪ್ರತ್ಯೇಕವಾಗಿ ಚಾಂಪಿಯನ್‌ಶಿಪ್‌ಗಳನ್ನು ನಡೆಸಲು ಪ್ರಾರಂಭಿಸಿದಾಗ ಪ್ರತಿಯೊಂದು ವರ್ಗಕ್ಕೂ ಮೌಲ್ಯ ಸಿಗುತ್ತದೆ.

ಅಂತರರಾಷ್ಟ್ರೀಯ ಈಜು ಲೀಗ್ (ಐಎಸ್‌ಎಲ್) ಆಯೋಜಿಸುವ ಮೂಲಕ ಅಮೆರಿಕವು ಪ್ರಯೋಗಕ್ಕೆ ಮುಂದಡಿ ಇಟ್ಟಿದೆ. ಈ ಲೀಗ್‌ನಲ್ಲಿ ಭಾಗವಹಿಸುವಾಗ, ಪ್ರತಿ ಈಜುಗಾರನನ್ನು ಅನೇಕ ದೊಡ್ಡ ಕಂಪನಿಗಳು ಪ್ರಾಯೋಜಿಸುತ್ತವೆ, ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ (CSR) ಯೋಜನೆಯಡಿ ಹಣ ವಿನಿಯೋಗಿಸುತ್ತವೆ. ಈಜು ಕ್ರೀಡೆಗಳ ವಿವಿಧ ವಿಭಾಗಗಳಲ್ಲಿರುವ ರೋಚಕ ಗುಣಗಳಿಂದಾಗಿ ಪ್ರೇಕ್ಷಕರು ಟಿಕೆಟ್ ಖರೀದಿಸಿ ಬರುವುದರಲ್ಲಿ ಸಂಶಯವಿಲ್ಲ.

ಇದರಿಂದ ಬರುವ ಸಂಪನ್ಮೂಲದಲ್ಲಿ ಬೇರುಮಟ್ಟದಲ್ಲಿ ಪ್ರತಿಭಾನ್ವೇಷಣೆ ನಡೆಸಬೇಕು. ರಾಜ್ಯದಲ್ಲಿರುವ ಪ್ರತಿಯೊಂದು ಸರ್ಕಾರಿ ಈಜುಕೊಳವನ್ನು ಪೂರ್ಣವಾಗಿ ಬಳಸಿಕೊಳ್ಳಬೇಕು. ತರಬೇತುದಾರರು ಮತ್ತು ನೆರವು ಸಿಬ್ಬಂದಿಯನ್ನು ನೇಮಿಸಿಕೊಳ್ಳಬೇಕು.

ಕೊರೊನಾದಿಂದಾಗಿ ಬಾಧಿತವಾದ ಕ್ರೀಡೆಗಳಲ್ಲಿ ಈಜು ಕೂಡ ಒಂದು. ಈಜುವುದರಿಂದ ಕೊರೊನಾ ಹರಡುವುದಿಲ್ಲವೆಂಬುದು ವೈಜ್ಞಾನಿಕ ಸತ್ಯ. ಅಷ್ಟೇ ಅಲ್ಲ, ಸರ್ವಾಂಗ ಸುಂದರ ವ್ಯಾಯಾಮವೆಂದರೆ ಈಜು ಮಾತ್ರ. ಇವತ್ತು ಅತ್ಯಂತ ಅಗತ್ಯವಾಗಿರುವ ಆರೋಗ್ಯದ ಜೊತೆಗೆ ಉದ್ಯೋಗ ಸೃಷ್ಟಿಗೂ ಈಜು ಕೈಜೋಡಿಸಬಹುದು. ಆ ಕೈಗೆ ಬಲ ತುಂಬುವವರು ಬೇಕಷ್ಟೇ.

ಲೇಖಕ: ಈಜು ಕೋಚ್ ಮತ್ತು ಮೈಕೆಲ್ ಪೆಲ್ಪ್ಸ್ ಫೌಂಡೇಷನ್ ಸದಸ್ಯ

ಬೆಂಗಳೂರಿನಲ್ಲಿ ಈಜುಕೊಳಗಳ ಸುಸ್ಥಿರ ಅಭಿವೃದ್ಧಿಗೆ ಖಾಸಗಿ ಸಹಭಾಗಿತ್ವ ನಾಂದಿಯಾಯಿತು. ರಾಜ್ಯದ ಎಲ್ಲ ಕಡೆಗಳಲ್ಲೂ ಈಜುಕೊಳಗಳು ಇವೆ. ಆದರೆ ನಿರ್ವಹಣೆ ಸಮರ್ಪಕವಾಗಿಲ್ಲದ ಕಾರಣ ಅವು ಶೋಚನೀಯ ಸ್ಥಿತಿಯಲ್ಲಿವೆ. ವೃತ್ತಿಪರರ ಕೊರತೆ ಕ್ರೀಡಾ ಇಲಾಖೆಯನ್ನೂ ಸ್ಥಳೀಯಾಡಳಿತ ಸಂಸ್ಥೆಗಳನ್ನೂ ಕಾಡುತ್ತಿದೆ. ಆದ್ದರಿಂದ ನಿರ್ವಹಣೆಯ ಹೊಣೆಯನ್ನು ಖಾಸಗಿಯವರಿಗೆ ಗುತ್ತಿಗೆ ಆಧಾರದಲ್ಲಿ ಕೊಡುವಂತೆ ಸರ್ಕಾರವನ್ನು ಅನೇಕ ವರ್ಷಗಳಿಂದ ಕೋರುತ್ತಿದ್ದೇವೆ

ಗೋಪಾಲ ಹೊಸೂರು, ಅಧ್ಯಕ್ಷ, ರಾಜ್ಯ ಈಜು ಸಂಸ್ಥೆ

ನಮ್ಮ ಇಲಾಖೆಯ ಅಧೀನದಲ್ಲಿ ರಾಜ್ಯದಲ್ಲಿ 28 ಈಜುಕೊಳಗಳು ಇವೆ. ಬೆಂಗಳೂರು ನಗರ ಜಿಲ್ಲೆಯ ಈಜುಕೊಳದ ನಿರ್ವಹಣೆಯನ್ನು ಖಾಸಗಿಯವರಿಗೆ ವಹಿಸಿಕೊಡಲಾಗಿದೆ. ಉಳಿದ ಕಡೆಗಳಲ್ಲೂ ಖಾಸಗಿ ಸಹಭಾಗಿತ್ವದಲ್ಲಿ ನಿರ್ವಹಣೆಗೆ ಚಿಂತನೆ ನಡೆದಿದೆ. ಮೈಸೂರು ಮತ್ತು ರಾಮನಗರದಲ್ಲಿ ಮೊದಲ ಹಂತದ ಪ್ರಯೋಗ ನಡೆದಿದೆ. ಅಲ್ಲಿ ಜಿಲ್ಲಾ ಕ್ರೀಡಾಂಗಣ ಸಮಿತಿಯವರು ನಿರ್ವಹಣೆ ಮಾಡುತ್ತಿದ್ದಾರೆ

ರಮೇಶ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಜಂಟಿ ನಿರ್ದೇಶಕ

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ

9606038256

‘ಮುಸ್ಲಿಮರ ಪವಿತ್ರ ಕ್ಷೇತ್ರ ಮೆಕ್ಕಾ ಮತ್ತು ಮದೀನಾದಲ್ಲಿ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಶಿವಲಿಂಗ ಬಹಿರಂಗವಾಗಿದೆ. ಎರಡೂ ಚಿತ್ರಗಳಲ್ಲಿ ಇರುವ ಶಿವಲಿಂಗವನ್ನು ಗಮನಿಸಿ. ಎಲ್ಲಾ ಹಿಂದೂಗಳಿಗೆ ತಲುಪುವವರೆಗೆ ಈ ಚಿತ್ರಗಳನ್ನು ಷೇರ್ ಮಾಡಿ’ ಎಂಬ ವಿವರ ಇರುವ ಪೋಸ್ಟ್ ಫೇಸ್‌ಬುಕ್‌ನಲ್ಲಿ ವೈರಲ್ ಆಗಿದೆ. ಈ ಪೋಸ್ಟ್‌ನ ಜತೆಗೆ ಮೆಕ್ಕಾದ ಒಂದು ಚಿತ್ರ ಮತ್ತು ಶಿವಲಿಂಗದ ಒಂದು ಚಿತ್ರವನ್ನು ಹಂಚಿಕೊಳ್ಳಲಾಗಿದೆ.

‘ಇದು ಸುಳ್ಳು ಸುದ್ದಿ. ಮೆಕ್ಕಾ ಮತ್ತು ಮದೀನಾ ಎರಡು ಪ್ರತ್ಯೇಕ ನಗರಗಳು. ಮೆಕ್ಕಾದಲ್ಲಿರುವ ಕಾಬಾದ ನಾಲ್ಕು ಮೂಲೆಗಳಲ್ಲಿ ಯೆಮನ್ ಮೂಲೆಯ ಚಿತ್ರವನ್ನು ಈ ಪೋಸ್ಟ್‌ನಲ್ಲಿ ಹಂಚಿಕೊಳ್ಳಲಾಗಿದೆ. ಆ ಚಿತ್ರದಲ್ಲಿ ಇರುವ ಶಿಲೆಯನ್ನು ಮುಸ್ಲಿಮರು ಮುಟ್ಟಿ ಪ್ರಾರ್ಥನೆ ಮಾಡುತ್ತಾರೆ. ಭಾರತದ ಹಜ್ ಸಮಿತಿ ಸಿದ್ಧಪಡಿಸುವ ಹಜ್ ಯಾತ್ರೆ ಕೈಪಿಡಿಯಲ್ಲೂ ಈ ಮಾಹಿತಿ ಇದೆ. ಮತ್ತೊಂದು ಚಿತ್ರದಲ್ಲಿರುವ ಶಿವಲಿಂಗವು ರಾಜಸ್ಥಾನದಲ್ಲಿ ಇದೆ. ಅದು ವೀರತ್‌ಪುರದಲ್ಲಿರುವ 12 ಮುಖಗಳಿರುವ ಶಿವಲಿಂಗದ ಚಿತ್ರ. ಎರಡೂ ಚಿತ್ರಗಳ ಮಾಹಿತಿಯನ್ನು ತಿರುಚಿ ಈ ಸುಳ್ಳು ಸುದ್ದಿ ಸೃಷ್ಟಿಸಲಾಗಿದೆ’ ಎಂದು ಆಲ್ಟ್‌ನ್ಯೂಸ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ದೊರೆತ ವರಗಳು

ರಾಮಣೀಯಕದಿ ನಲಿವಕ್ಷಿಯೊಡನಚಲಮನ |
ಪ್ರೇಮಮಯಮನದೊಡನೆ ಮೋಹಬಡದಾತ್ಮ ||
ಭೀಮಬಲದೊಡನೆ ರಾಮನ ಅಭಯ ನಿಯಮವಿರೆ|
ಯಾಮಳ ವರಂಗಳವು – ಮಂಕುತಿಮ್ಮ || 435 ||

ಪದ-ಅರ್ಥ: ರಾಮಣೀಯಕ = ಸುಂದರವಾದದ್ದು, ರಮಣೀಯವಾದದ್ದು, ನಲಿವಕ್ಷಿಯೊಡನಚಲಮನ = ನಲಿವ + ಅಕ್ಷಿಯೊಡನೆ (ಕಣ್ಣುಗಳೊಡನೆ) + ಅಚಲ + ಮನ, ಪ್ರೇಮಮಯಮನದೊಡನೆ = ಪ್ರೇಮಮಯ + ಮನದೊಡನೆ, ಯಾಮಳ = ಎರಡು

ವಾಚ್ಯಾರ್ಥ: ರಮಣೀಯವಾದದ್ದನ್ನು ಕಂಡು ಕಣ್ಣುಗಳು ಅಲೆದರೂ ಅಚಲವಾದ ಮನಸ್ಸು, ಪ್ರೇಮಮಯವಾದದ್ದರ ಜೊತೆಗಿದ್ದು ಅದನ್ನು ಮೋಹವಾಗಿಸಿಕೊಳ್ಳದ ಆತ್ಮ, ಅಸಾಮಾನ್ಯವಾದ ಭೀಮಬಲವಿದ್ದರೂ ಅದನ್ನು ರಾಮನ ಅಭಯದಂತೆ ಬಳಸುವ ನಿಯಮಗಳೇ ಬದುಕಿಗೆ ಎರಡು ವರಗಳು.

ವಿವರಣೆ: ಈ ಕಗ್ಗದ ಮೊದಲ ಮೂರು ಸಾಲುಗಳಲ್ಲಿ ಎರಡೆರಡು, ತೋರಿಕೆಗೆ ವಿರೋಧಗಳಂತೆ ಕಾಣುವ ಗುಣಗಳನ್ನು ತಿಳಿಸುತ್ತವೆ. ರಮಣೀಯವಾದ ವಸ್ತು, ಪ್ರಸಂಗಳನ್ನು ಕಂಡಾಗ ಕಣ್ಣು ಅರಳುತ್ತವೆ. ಅತ್ತಲೇ ಆಕರ್ಷಿತವಾಗಿ ಚಲಿಸುತ್ತವೆ. ಕಣ್ಣನ್ನೇ ಹಿಂಬಾಲಿಸಿ ಮನಸ್ಸು ಓಡುತ್ತದೆ. ಹೀಗೆ ಮನಸ್ಸು ದಿಕ್ಕುದಿಕ್ಕಿಗೆ ಓಡುತ್ತಿದ್ದರೆ ಚಂಚಲವಾಗಿ ಯಾವುದು ಒಳ್ಳೆಯದು, ಯಾವುದು ಕೆಟ್ಟದ್ದು ಎಂಬುದರ ತಿಳಿವಳಿಕೆಯನ್ನು ಕಳೆದುಕೊಳ್ಳುತ್ತದೆ. ವಿವೇಕಹೀನವಾಗುತ್ತದೆ. ಹಾಗಾದರೆ ಯಾವುದನ್ನೂ ಕಾಣದೆ, ಮೆಚ್ಚದೆ ಭಾವಶೂನ್ಯರಾಗಿ ಕುಳಿತುಕೊಳ್ಳಬೇಕೇ? ಬೇಕಿಲ್ಲ. ಸುಂದರವಾದದ್ದನ್ನು ಕಂಡು ಸಂತೋಷಪಡೋಣ. ಆದರೆ ಮನಸ್ಸು ಅದರಲ್ಲೇ ಕೊಚ್ಚಿ ಹೋಗಿ ವಿವೇಕವನ್ನು ಕಳೆದುಕೊಳ್ಳದಂತೆ ಅಚಲವಾಗಬೇಕು.

ಇದರಂತೆ, ಕೆಲವು ವಸ್ತು, ವ್ಯಕ್ತಿಗಳಲ್ಲಿ ಪ್ರೇಮವುಂಟಾಗುವುದು ಸ್ವಾಭಾವಿಕ. ಆದರೆ ಪ್ರೇಮವೂ ಒಂದು ಮಿತಿಯಲ್ಲಿದ್ದರೆ ಕ್ಷೇಮ. ಅದು ಅತಿಯಾದರೆ ಮೋಹವಾಗಿ ಕಾಡೀತು. ಮಕ್ಕಳು ಮತ್ತು ಪರಿವಾರದವರ ಬಗ್ಗೆ ಪ್ರೇಮವಿರುವುದು ಸರಿ ಆದರೆ ಅದು ಅತಿಯಾದಾಗ ಧೃತರಾಷ್ಟ್ರ ಮೋಹವಾಗಿ ವಿನಾಶಕ್ಕೆ ಕಾರಣವಾಗುತ್ತದೆ. ಮಕ್ಕಳ ಬಗ್ಗೆ ಪ್ರೀತಿ ಇದ್ದು ಅದನ್ನು ಮಿತಿಯೊಳಗಿಟ್ಟ ಗಾಂಧಿ ಮಹಾತ್ಮರಾದರು. ಮನಸ್ಸಿನಲ್ಲಿ ಎಲ್ಲರ ಬಗ್ಗೆ, ಎಲ್ಲದರ ಬಗ್ಗೆ ಪ್ರೇಮವಿರಲಿ ಆದರೆ ಅದು ಆತ್ಮಕ್ಕೆ ಮೋಹದ ಮುಸುಕು ಹಾಕದಿರಲಿ. ಮೂರನೆಯದು ಇನ್ನೂ ಮುಖ್ಯವಾದದ್ದು. ಅಪಾರವಾದ ಶಕ್ತಿಯನ್ನು ಹೊಂದುವುದು ಒಳ್ಳೆಯದೆ. ಆದರೆ ಅದು ರಾಕ್ಷಸ ಶಕ್ತಿಯಾಗಿ ವಿನಾಶಕಾರಿಯಾಗದಿರಲಿ. ಇದಕ್ಕೆ ಸಂವಾದಿಯಾಗಿ ಇಂಗ್ಲೀಷಿನಲ್ಲಿ ಒಂದು ಮಾತಿದೆ. ‘It is good to have giant's strength but not good to use it like a giant’.

ಮನುಷ್ಯ ವೈಜ್ಞಾನಿಕವಾಗಿ ಅವಿಷ್ಕಾರಗಳನ್ನು ಮಾಡುತ್ತ ಅಪಾರ ಶಕ್ತಿಯನ್ನು ಸಂಪಾದಿಸಿದ. ಆಕಾಶಕ್ಕೆ ನೆಗೆದ, ಭೂಮಿಯನ್ನು ಕೊರೆದು ಪಾತಾಳಕ್ಕಿಳಿದ. ಅಣುವನ್ನು ವಿಭಾಗಿಸಿ ಅದರಲ್ಲಿ ಅವಿತಿದ್ದ ಕಲ್ಪನಾತೀತವಾದ ಶಕ್ತಿಯನ್ನು ಹೊರತೆಗೆಯುವುದರಲ್ಲಿ ಯಶಸ್ವಿಯಾದ. ಅದೊಂದು ರಾಕ್ಷಸೀ ಶಕ್ತಿ. ಅದನ್ನು ಸಂಯಮದಿಂದ ಬಳಸಿದರೆ ಜಗತ್ತಿಗೆ ಅತ್ಯಂತ ಪ್ರಯೋಜನಕಾರಿಯಾಗುತ್ತದೆ. ಆದರೆ ಅದನ್ನು ಹಿಡಿತದಲ್ಲಿಟ್ಟುಕೊಳ್ಳದೆ ಪ್ರಯೋಗಿಸಿದರೆ ಹಿರೋಶಿಮಾ ಮತ್ತು ನಾಗಾಸಾಕಿಗಳಂತಹ ಮಾರಣಹೋಮಗಳು ನಡೆಯುತ್ತವೆ. ತಂದೆ ದ್ರೋಣರು, ಮೋಹ ಅತಿಯಾದಾಗ ಮಗ ಅಶ್ವತ್ಥಾಮನಿಗೆ ನೀಡಿದ ನಾರಾಯಣಾಸ್ತ್ರ ಒಂದು ಅಪರಿಹಾರ್ಯವಾದ ಆಯುಧ. ಆತ ಅದನ್ನು ನಿಗ್ರಹಿಸಲರಿಯದೆ ಪ್ರಯೋಗ ಮಾಡಿ ಅನಾಹುತ ಮಾಡಿದ್ದು ಅಕ್ಷಮ್ಯ.

ಸುಂದರವಾದದ್ದನ್ನು ಕಂಡೂ ಅಚಲವಾಗದ ಮನಸ್ಸು, ಪ್ರೇಮ ಮೋಹವಾಗದಂತೆ ನೋಡಿಕೊಂಡ ಆತ್ಮಪ್ರಜ್ಞೆ, ಅಪಾರಶಕ್ತಿಯನ್ನು ಹೊಂದಿಯೂ ಸಂಯಮವನ್ನು ಕಾಯ್ದುಕೊಳ್ಳುವ ವಿವೇಕವೇ ನಮಗೆ ದೊರೆತ ವರಗಳು.

ದಿನ ಭವಿಷ್ಯ

ಸೋಮವಾರ ಜುಲೈ 5, 2021

ಶ್ರೀ ಪ್ಲವ ನಾಮ ಸಂವತ್ಸರ ದಕ್ಷಿಣಾಯನ ಗ್ರೀಷ್ಮ ಋತು ಜ್ಯೇಷ್ಠ ಮಾಸ ಕೃಷ್ಣ ಪಕ್ಷ ಮಳೆ ನಕ್ಷತ್ರ ಆರ್ದ್ರೆ ಏಕಾದಶಿ ಗಂ. 40-39 (ರಾ. 10-21) ಸೋಮವಾರ ನಿತ್ಯ ನಕ್ಷತ್ರ ಭರಣಿ ಗಂ. 17-25 (ಹ. 1-04) ಧೃತಿ ನಾಮ ಯೋಗ ಗಂ. 22-15 ಬವ ಕರಣ ಗಂ. 8-18 ವಿಷ ಗಂ. 50-39 ಅಮೃತ ಗಂ. 4-32 ರಾಹುಕಾಲ: ಬೆ. ಗಂ. 7-30 ರಿಂದ 9-00 ಗುಳಿಕ ಮ. ಕಾಲ ಗಂ 1-30 ರಿಂದ 3-00 ಯಮಗಂಡ ಕಾಲ ಬೆ. ಗಂ 10-30 ರಿಂದ 12-00 ಸೂರ್ಯೋದಯ: 6-02 ಸೂರ್ಯಾಸ್ತ: 6-46 ಅದೃಷ್ಟ ಸಂಖ್ಯೆ 3, 7

ಮೇಷ: ಉದ್ಯಮ ಮತ್ತು ವ್ಯವಹಾರಗಳಲ್ಲಿ ಅಭಿವೃದ್ಧಿ. ಆರೋಗ್ಯದಲ್ಲಿ ಸ್ವಲ್ಪಮಟ್ಟಿನ ತೊಂದರೆ ಎದುರಾಗುವ ಸಾಧ್ಯತೆ. ರೈತಾಪಿ ವರ್ಗದವರಿಗೆ, ಸ್ವಂತ ಉದ್ದಿಮೆ ಇರುವವರಿಗೆ ಕೂಲಿಕಾರರ ಸಮಸ್ಯೆ ಎದುರಾಗುವ ಸಾಧ್ಯತೆ.

ವೃಷಭ: ವ್ಯವಹಾರದಲ್ಲಿ ಹೆಚ್ಚಿನ ಹಣ ತೊಡಗಿಸಲಿದ್ದೀರಿ. ಬಂಧುಗಳ ಸಹಕಾರ ದೊರಕುವುದು. ಪ್ರಯಾಣದಲ್ಲಿಯೂ ಸುಖಾನುಭವ ನಿಮ್ಮದಾಗಲಿದೆ. ಮನೆಯಲ್ಲಿ ಸುಖ ಶಾಂತಿಯ ನೆಮ್ಮದಿಯ ಬದುಕನ್ನು ಕಾಣುವಿರಿ.

ಮಿಥುನ: ನೌಕರರಿಗೆ ಪದೋನ್ನತಿಯ ಸಾಧ್ಯತೆ. ಕೈಗೊಂಡ ಕಾರ್ಯಗಳಲ್ಲಿ ಯಶಸ್ಸು. ಉದ್ಯೋಗಾಕಾಂಕ್ಷಿಗಳಿಗೆ ಉದ್ಯೋಗ ಲಭ್ಯವಾಗುವ ಸಾಧ್ಯತೆ. ಸ್ತ್ರೀಯರಿಗೆ ಉತ್ತಮ ಅವಕಾಶಗಳು ದೊರೆತು ಶ್ರೇಯಸ್ಸು.

ಕರ್ಕಾಟಕ: ಕೈಗಾರಿಕೋದ್ಯಮಿಗಳಿಗೆ, ವಿದ್ಯಾಸಂಸ್ಥೆಗಳನ್ನು ನಡೆಸುತ್ತಿರುವವರಿಗೆ, ವನಸ್ಪತಿ ವ್ಯಾಪಾರಸ್ಥರಿಗೆ ವ್ಯವಹಾರ ವೃದ್ಧಿ. ಸಂಗಾತಿಯ ಕಡೆಯಿಂದ ಆಸ್ತಿ-ಸಂಪತ್ತು ಕೂಡಿಬರುವ ಸಾಧ್ಯತೆ. ಹಿರಿಯರ ಮಾತುಗಳನ್ನು ಪುರಸ್ಕರಿಸಿ.

ಸಿಂಹ: ಆಮದು–ರಫ್ತುದಾರರಿಗೆ, ಮಾರ್ಗನಿರ್ಮಾಣ ಗುತ್ತಿಗೆದಾರರಿಗೆ ಹೆಚ್ಚಿನ ಆರ್ಥಿಕ ಅನುಕೂಲ. ಸಣ್ಣ ವಿಷಯಕ್ಕೆ ಹಿರಿಯರ ವಿರೋಧವನ್ನು ಎದುರಿಸಬೇಕಾದ ಸಂದರ್ಭಗಳು ಕಂಡುಬರುವುದು. ತಾಳ್ಮೆಯಿಂದ ನೆಮ್ಮದಿ.

ಕನ್ಯಾ: ನೌಕರರಿಗೆ ಸ್ಥಾನ ಬದಲಾವಣೆ ಅಥವಾ ವರ್ಗಾವಣೆ ಸಾಧ್ಯತೆ. ರಾಜಕೀಯ ಮುಖಂಡರುಗಳಿಗೆ ಹೆಚ್ಚಿನ ಅಧಿಕಾರ. ವ್ಯವಹಾರದಲ್ಲಿ ವೃದ್ಧಿಯೊಂದಿಗೆ ಸಂಪಾದನೆಯಲ್ಲಿ ಹೆಚ್ಚಳ. ಆರೋಗ್ಯದಲ್ಲಿ ಸುಧಾರಣೆ.

ತುಲಾ: ವಿದ್ಯುತ್ ಉಪಕರಣಗಳ ರಿಪೇರಿ, ಮಾರಾಟ ವ್ಯವಹಾರಸ್ಥರಿಗೆ ಹೆಚ್ಚಿನ ಲಾಭ. ಆಸ್ತಿ ಸಂಬಂಧದ ತಗಾದೆಗಳಿಗಾಗಿ ನ್ಯಾಯವಾದಿಗಳ ಸಲಹೆ ಪಡೆಯಬೇಕಾದೀತು. ಕಲಾವಿದರಿಗೆ ಆದಾಯದಲ್ಲಿ ಹೆಚ್ಚಳ.

ವೃಶ್ಚಿಕ: ಸ್ವ ಉದ್ಯೋಗ ವ್ಯವಹಾರಗಳಲ್ಲಿ ಸ್ವಲ್ಪಮಟ್ಟಿನ ಹಿನ್ನಡೆ. ಸ್ತ್ರೀಯರಿಗೆ ವಿವಾಹ ಸಂಬಂಧ ಕೂಡಿಬರಲಿದೆ. ಎಂಜಿನಿಯರ್ ಮುಂತಾದ ತಾಂತ್ರಿಕ ಪರಿಣತರು ಯಶಸ್ಸನ್ನು ನಿರೀಕ್ಷಿಸಬಹುದು.

ಧನು: ಕೆಲಸ–ಕಾರ್ಯಗಳಲ್ಲಿ ಬಂಧು ಮಿತ್ರರ ಸಲಹೆಯಿಂದಾಗಿ ಅನುಕೂಲವಾಗಲಿದೆ. ಉಲ್ಲಾಸಮಯ ಕೌಟುಂಬಿಕ ಜೀವನ ನಡೆಸಲಿದ್ದೀರಿ. ಉದ್ಯೋಗದಲ್ಲಿ ಬದಲಾವಣೆ ಸಾಧ್ಯತೆ. ಅಧಿಕಾರಿಗಳಿಂದ ಕಿರಿಕಿರಿ.

ಮಕರ: ಲೇವಾದೇವಿ ವ್ಯವಹಾರದಲ್ಲಿ ಧನಲಾಭ. ನಟ-ನಟಿಯರಿಗೆ ಗೌರವಾದರಗಳು ಲಭಿಸಲಿವೆ. ರಾಜಕಾರಣಿಗಳಿಗೆ ಹಿನ್ನಡೆ ಸಾಧ್ಯತೆ. ಮಕ್ಕಳಿಂದ ಕೀರ್ತಿ. ಪತ್ನಿಯ ಸಹಕಾರದಿಂದ ನೆಮ್ಮದಿಯ ಬದುಕು.

ಕುಂಭ: ಗೃಹ ನಿರ್ಮಾಣ ಕಾರ್ಯಗಳು ಭರದಿಂದ ಸಾಗಲಿದೆ. ಮನೆಗೆ ಹೊಸ ಸದಸ್ಯರ ಸೇರ್ಪಡೆಯಾಗುವ ಸಾಧ್ಯತೆ. ಆರೋಗ್ಯದಲ್ಲಿ ಸುಧಾರಣೆ. ಬಟ್ಟೆ ವ್ಯಾಪಾರಿಗಳಿಗೆ ಹೆಚ್ಚಿನ ಧನಲಾಭ. ಹಣಕಾಸು ವಿಷಯದಲ್ಲಿ ಎಚ್ಚರಿಕೆ ಅಗತ್ಯ.

ಮೀನ: ವ್ಯವಹಾರದಲ್ಲಿ ಸಾಧಾರಣವಾದ ಆದಾಯ ನಿರೀಕ್ಷೆ. ನೆರೆ ಹೊರೆಯವರ ಕಿರುಕುಳದಿಂದಾಗಿ ನೆಮ್ಮದಿ, ಶಾಂತಿ ಕದಡುವ ಸಾಧ್ಯತೆ. ಸಮಾಧಾನದಿಂದ ವ್ಯವಹರಿಸಿ. ವಿದ್ಯಾರ್ಥಿಗಳಿಗೆ ನಿರಾಸಕ್ತಿ ಸಾಧ್ಯತೆ.

ನಿಮ್ಮ ಜನ್ಮದಿನ 5-ಜುಲೈ ಇಂದು ಅತ್ಯಂತ ಶುಭದಾಯಕ. ವ್ಯವಹಾರದಲ್ಲಿ ಸಾಧಾರಣ ಪ್ರಗತಿ. ಕ್ರೀಡಾಪಟುಗಳಿಗೆ ಹರ್ಷದ ವರ್ಷ. ಬರಹಗಾರರಿಗೆ ಎಡರು ತೊಡರುಗಳ ಮಧ್ಯೆಯೂ ಗೌರವಾದರಗಳು ಪ್ರಾಪ್ತವಾಗುವವು. ಆರೋಗ್ಯ ಭಾಗ್ಯ ನಿಮ್ಮಪಾಲಿಗೆ ಉತ್ತಮವಾಗಿದೆ. ವಿದ್ಯಾಭ್ಯಾಸದಲ್ಲಿ ಸಾಧಾರಣ ಪ್ರಗತಿಯನ್ನು ನಿರೀಕ್ಷಿಸಬಹುದು.

ಪದಬಂಧ 4648

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಮರ ಆವರಿಸಿರುವ ದೊಡ್ಡ ಪ್ರವಾಹ (4)
3.ಗುಣಿಸುವ ಸಂಖ್ಯೆ (3)
5.ಲಕ್ಷಣವಿದ್ದರೂ ಇದು ವಿಚಿತ್ರ! (4)
7.ವರದಿಗಾಗಿ ಹಚ್ಚಿರುವ ಪಾಳಿ! (3)
9.ಅಗಲ ಬಾಯಿಯುಳ್ಳ ಲೋಹದ ಪಾತ್ರೆ (3)
10.ಒಕ್ಕಿರುವ ಧಾನ್ಯವನ್ನು ಶೇಖರಿಸಿಟ್ಟ ಬಿದಿರಿನ ಗೂಡೆ (3)
12.ಮುಸುರೆಯವಳು ಕೊಡತಕ್ಕ ಶುಲ್ಕ (3)
14.ಈತ ಎಲ್ಲಾ ರಂಗದಲ್ಲೂ ನುರಿತವ (4)
16.ಒಡಲನ್ನು ಬರಿದಾಗಿಸದ ಸಮುದ್ರ (3)
17.ನಮಸ್ಕಾರವನ್ನೂ ಕಡೆಗಣಿಸುವಿಕೆ! (4)

ಮೇಲಿಂದ ಕೆಳಕ್ಕೆ

1.ಜೇನನ್ನು ಸಂಗ್ರಹಿಸಿರುವ ತಿಂಗಳು (4)
2.ವಿರಹದಲ್ಲಿದ್ದಾಗ ಸೂರ್ಯ ಕಂಡಾನೆಯೇ? (2)
3.ನಡತೆ ಅಥವಾ ಸ್ವಭಾವ (2)
4.ಇನ್ನೂ ಬಲಿಯದ ಕಾಯಿ (4)
6.ಬಳ್ಳಿಯಂತೆ ಬಳುಕುವ ಮೈಯುಳ್ಳವಳು (3)
8.ವಿಜಯದ ದಿನ ಪ್ರತ್ಯಕ್ಷ್ಯವಾದ ದೇವತೆ (3)
9.ಕದ್ದಿರುವ ಧಾನ್ಯದ ತೆನೆ (3)
10.ಲೆಕ್ಕ ಬರೆಯುವವ, ಕೈ ಮುಂದಿರಿಸಿದ್ದಾನೆ (4)
11.ನಲ್ವತ್ತೊಂದನೆ ಸಂವತ್ಸರ (3)
13.ಜರೂರಾಗಿ ಮುರ ಬೇಕೆನ್ನಲು ಈ ಕಸವಿಸಿ! (4)
14.ಟಪಾಲು ಬಂದ ಮೇಲೆ ದೊರೆತ ಹಿಸ್ಸೆ (2)
15.ತತ್ತಿಯ ಸಲುವಾಗಿ ನೆರೆದ ಗುಂಪು (2)



4647ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 3.ಅವಕಾಶ 5.ದಡಿಯ 6.ಮನೋರಥ 8.ನಡುಮನೆ 11.ಜನತಂತ್ರ 14.ಪರಧನ 15.ದಶಮ 16.ಗಟವಾಣಿ

ಮೇಲಿಂದ ಕೆಳಕ್ಕೆ: 1.ಮದನಿಕೆ 2.ಜಾಯಮಾನ 3.ಅರಮನೆ 4.ಶಪಥ 7.ರಹಸ್ಯ 9.ಮನನ 10.ತತ್ವಾರ 11.ಜನವಾಣಿ 12.ತ್ರಯೋದಶಿ 13.ಅನುಮತಿ 14.ಪಲ್ಲಂಗ

ಸುಡೊಕು 5034

3				8		9		1
							6	
	4		9			3		8
6								9
	5		7	6	9		8	
8						6		
9			2			7		6
	6			9	7		3	
		7				4		5

ಆಡುವುದು ಹೇಗೆ? ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5033 ಸುಡೊಕು

4	5	6	9	7	1	8	3	2
1	9	2	6	8	3	5	7	4
8	7	3	4	2	5	9	6	1
7	2	1	3	4	9	6	5	8
3	8	5	1	6	2	4	9	7
6	4	9	7	5	8	2	1	3
2	3	8	5	1	6	7	4	9
9	6	4	8	3	7	1	2	5
5	1	7	2	9	4	3	8	6

ರಾಜ್ಯದಲ್ಲಿ ಕೋವಿಡ್ ಸ್ಥಿತಿಗತಿ: 44,846ಕ್ಕೆ ಇಳಿದ ಸಕ್ರಿಯ ಪ್ರಕರಣ

ದೃಢ ಪ್ರಮಾಣ ಶೇ 1.02ಕ್ಕೆ ಇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಹೊಸದಾಗಿ 1,564 ಮಂದಿ ಕೊರೊನಾ ಸೋಂಕಿತರಾಗಿರುವುದು ಭಾನುವಾರ ದೃಢಪಟ್ಟಿದ್ದು, ಸೋಂಕು ದೃಢ ಪ್ರಮಾಣ ದರವು ಶೇ 1.02ರಷ್ಟಕ್ಕೆ ಇಳಿಕೆಯಾಗಿದೆ.

ಇವು ಕೋವಿಡ್ ಎರಡನೇ ಅಲೆಯ ಅವಧಿಯಲ್ಲಿ ವರದಿಯಾದ ಕನಿಷ್ಠ ಪ್ರಕರಣಗಳು ಹಾಗೂ ದೃಢ ಪ್ರಮಾಣವಾಗಿದೆ. ರಾಜ್ಯದಲ್ಲಿ ಕಳೆದ ಮಾ.23ಕ್ಕೆ ಹೊಸ ಪ್ರಕರಣಗಳ ಸಂಖ್ಯೆ ಎರಡು ಸಾವಿರದ ಗಡಿ ದಾಟಿತ್ತು. ಕಳೆದೊಂದು ತಿಂಗಳಿನಿಂದ ಹೊಸ ಪ್ರಕರಣ ಹಾಗೂ ದೃಢ ಪ್ರಮಾಣ ಇಳಿಮುಖ ಮಾಡಿದೆ.

ಮೂರು ತಿಂಗಳಲ್ಲಿ ಮೊದಲ ಬಾರಿ ಹೊಸ ಪ್ರಕರಣಗಳು ಎಲ್ಲ ಜಿಲ್ಲೆಗಳಲ್ಲಿ 500ರ ಗಡಿಯೊಳಗಡೆ ವರದಿಯಾಗಿವೆ. ಬೆಂಗಳೂರಿನಲ್ಲಿ 352, ಮೈಸೂರಿನಲ್ಲಿ 162, ದಕ್ಷಿಣ ಕನ್ನಡದಲ್ಲಿ 154, ಕೊಡಗಿನಲ್ಲಿ 150, ತುಮಕೂರಿನಲ್ಲಿ 116 ಮಂದಿ ಕೋವಿಡ್ ಪೀಡಿತರಾಗಿದ್ದಾರೆ. 15 ಜಿಲ್ಲೆಗಳಲ್ಲಿ ಈ ಸಂಖ್ಯೆ ಎರಡಂಕಿ ಹಾಗೂ 8 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ. ಬಾಗಲಕೋಟೆ ಹಾಗೂ ಯಾದಗಿರಿಯಲ್ಲಿ ಹೊಸ ಪ್ರಕರಣ ವರದಿಯಾಗಿಲ್ಲ. ಈವರೆಗೆ ಕೋವಿಡ್ ಪೀಡಿತರಾದವರ ಒಟ್ಟು ಸಂಖ್ಯೆ 28.53 ಲಕ್ಷ ದಾಟಿದೆ.

ಕೋವಿಡ್ ಮರಣ ಪ್ರಕರಣಗಳ ಸಂಖ್ಯೆ ಕೂಡ ಇಳಿಕೆ ಕಂಡಿದ್ದು, ಸೋಂಕಿತರಲ್ಲಿ 59 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ. ಮರಣ ಪ್ರಮಾಣ ದರವು ಶೇ 3.77 ರಷ್ಟು ವರದಿಯಾಗಿದೆ. ರಾಜ್ಯದ 19 ಜಿಲ್ಲೆಗಳಲ್ಲಿ ಹೊಸದಾಗಿ ಮರಣ ಪ್ರಕರಣಗಳು ವರದಿಯಾಗಿವೆ. ಮೈಸೂರಿನಲ್ಲಿ 9, ದಕ್ಷಿಣ ಕನ್ನಡದಲ್ಲಿ 8, ಬಳ್ಳಾರಿಯಲ್ಲಿ 7, ಧಾರವಾಡದಲ್ಲಿ 5 ಮಂದಿ ಸಾವಿಗೀಡಾಗಿದ್ದಾರೆ. ಬೆಂಗಳೂರು ಸೇರಿದಂತೆ ಉಳಿದ ಜಿಲ್ಲೆಗಳಲ್ಲಿ 5ಕ್ಕಿಂತ ಕಡಿಮೆ ಸಂಖ್ಯೆಯಲ್ಲಿ ಮರಣ ಪ್ರಕರಣಗಳು ವರದಿಯಾಗಿವೆ. ಈವರೆಗೆ ಕೋವಿಡ್‌ನಿಂದ ಮೃತಪಟ್ಟವರ ಒಟ್ಟು ಸಂಖ್ಯೆ 35,367ಕ್ಕೆ ತಲುಪಿದೆ.

ಸಕ್ರಿಯ ಪ್ರಕರಣಗಳ ಸಂಖ್ಯೆ 44,846 ಲಕ್ಷಕ್ಕೆ ಇಳಿಕೆಯಾಗಿದೆ. ಸೋಂಕಿತರಲ್ಲಿ 4,775 ಮಂದಿಗೆ ಕಾಯಿಲೆ ವಾಸಿಯಾಗಿದೆ. ಈವರೆಗೆ ಗುಣಮುಖರಾದವರ ಒಟ್ಟು ಸಂಖ್ಯೆ 27.73 ಲಕ್ಷ ದಾಟಿದೆ.

ಮೀಸಲು ಹಾಸಿಗೆ ಸಂಖ್ಯೆಯಲ್ಲಿ ಕಡಿತ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಹೊಸ ಪ್ರಕರಣಗಳ ಸಂಖ್ಯೆ ಇಳಿಕೆಯಾಗಿರುವುದರಿಂದ ಕೋವಿಡ್‌ಗೆ ಮೀಸಲಿರಿಸಿದ ಹಾಸಿಗೆಗಳಲ್ಲಿ ಶೇ 30ರಷ್ಟನ್ನು ಅನ್ಯ ರೋಗಿಗಳಿಗೆ ಬಳಸಲು ಅವಕಾಶ ಮಾಡಿಕೊಡಲಾಗಿದೆ.

ಫೆಬ್ರುವರಿಯಲ್ಲಿ ಕೆಲ ದಿನಗಳು 500ರ ಆಸುಪಾಸಿನಲ್ಲಿದ್ದ ಹೊಸ ಪ್ರಕರಣಗಳ ಸಂಖ್ಯೆ ಏಪ್ರಿಲ್ ತಿಂಗಳಲ್ಲಿ 50 ಸಾವಿರದ ಆಸುಪಾಸು ತಲುಪಿತ್ತು. ಸಕ್ರಿಯ ಪ್ರಕರಣಗಳ ಸಂಖ್ಯೆ ಆರು ಲಕ್ಷದ ಗಡಿ ದಾಟಿತ್ತು. ಇದರಿಂದಾಗಿ ಸರ್ಕಾರಿ ಆಸ್ಪತ್ರೆಗಳಲ್ಲಿ ಹಾಸಿಗೆಗಳ ಸಂಖ್ಯೆಯನ್ನು ಹೆಚ್ಚಳ ಮಾಡುವ ಜತೆಗೆ ಖಾಸಗಿ ಆಸ್ಪತ್ರೆಗಳಲ್ಲಿನ ಶೇ 50ರಷ್ಟು ಹಾಸಿಗೆಗಳನ್ನು ಕೋವಿಡ್ ಚಿಕಿತ್ಸೆಗೆ ಸರ್ಕಾರವು ಗುರುತಿಸಿತ್ತು.

ಕಳೆದೊಂದು ತಿಂಗಳಿನಿಂದ ಸೋಂಕಿತರ ಸಂಖ್ಯೆ ಇಳಿಮುಖ ಮಾಡಿರುವ ಪರಿಣಾಮ ಆಸ್ಪತ್ರೆಗಳಲ್ಲಿ ಕೋವಿಡ್ ಚಿಕಿತ್ಸೆಗೆ ಮೀಸಲಿಟ್ಟಿದ್ದ ಹಾಸಿಗೆಗಳಲ್ಲಿ ಶೇ 86 ರಷ್ಟು ಹಾಸಿಗೆಗಳು ಖಾಲಿ ಉಳಿದಿವೆ. ಹೀಗಾಗಿ, ಹಂತ ಹಂತವಾಗಿ ಹಾಸಿಗೆಗಳ ಸಂಖ್ಯೆಯನ್ನು ಕಡಿತ ಮಾಡಿ, ಕೋವಿಡೇತರ ಚಿಕಿತ್ಸೆಗೆ ಬಳಸಿಕೊಳ್ಳಲು ಆರೋಗ್ಯ ಇಲಾಖೆ ಯೋಜನೆ ರೂಪಿಸಿದೆ.

ಕೋವಿಡ್ ಚಿಕಿತ್ಸೆಗೆ ಜೂನ್ ಮೊದಲ ವಾರದಲ್ಲಿ 63,761 ಹಾಸಿಗೆಗಳು ಮೀಸಲಿದ್ದವು. ಆ ಸಂಖ್ಯೆ ಈಗ 45,720ಕ್ಕೆ ಇಳಿಕೆಯಾಗಿದೆ. 18,041 ಹಾಸಿಗೆಗಳನ್ನು ಈಗಾಗಲೇ ಕೋವಿಡೇತರ ಚಿಕಿತ್ಸೆಗೆ ಬಳಸಿಕೊಳ್ಳಲಾಗಿದೆ. ಐಸಿಯು ಹಾಸಿಗೆಗಳ ಸಂಖ್ಯೆಯನ್ನು 3,321ರಿಂದ 2,799ಕ್ಕೆ, ವೆಂಟಿಲೇಟರ್ ಸಹಿತ ಐಸಿಯು ಹಾಸಿಗೆಗಳ ಸಂಖ್ಯೆಯನ್ನು 3,014ರಿಂದ 2,203ಕ್ಕೆ ಹಾಗೂ ಎಚ್‌ಡಿಯು ಹಾಸಿಗೆಗಳ ಸಂಖ್ಯೆಯನ್ನು 26,817ರಿಂದ 10,569ಕ್ಕೆ ಇಳಿಕೆ ಮಾಡಲಾಗಿದೆ.

ಕೊರೊನಾ ಸೋಂಕಿತರಲ್ಲಿ ಶೇ 90ರಷ್ಟು ಮಂದಿ ಮನೆ ಆರೈಕೆಗೆ ಒಳಗಾಗುತ್ತಿದ್ದಾರೆ. ಶೇ 5ರಷ್ಟು ಮಂದಿ ಮಾತ್ರ ಆಸ್ಪತ್ರೆ ಚಿಕಿತ್ಸೆಗೆ ಒಳಪಡುತ್ತಿದ್ದಾರೆ. ಹಾಗಾಗಿ, ಕೋವಿಡ್ ಚಿಕಿತ್ಸೆಗೆ ಮೀಸಲಿರಿಸಿದ ಹಾಸಿಗೆಗಳ ಸಂಖ್ಯೆಯನ್ನು ಇನ್ನಷ್ಟು ಇಳಿಕೆ ಮಾಡಿ, ಮೂರನೇ ಅಲೆ ಮುನ್ಸೂಚನೆ ದೊರೆತರೆ ಮತ್ತೆ ಹೆಚ್ಚಳ ಮಾಡಲು ಯೋಜನೆ ರೂಪಿಸಲಾಗಿದೆ ಎಂದು ಇಲಾಖೆಯ ಮೂಲಗಳು ತಿಳಿಸಿವೆ.

ದ್ವಿತೀಯ ಪಿಯುಸಿ ಪುನರಾವರ್ತಿತರಿಗೆ ಕೃಪಾಂಕ?

ಬೆಂಗಳೂರು: ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಗೆ ನೋಂದಾಯಿಸಿರುವ ಪುನರಾವರ್ತಿತ ವಿದ್ಯಾರ್ಥಿಗಳನ್ನು ಕೃಪಾಂಕ ನೀಡಿ ತೇರ್ಗಡೆ ಮಾಡಲು ಪದವಿ ಪೂರ್ವ ಶಿಕ್ಷಣ ಇಲಾಖೆ ಚಿಂತನೆ ನಡೆಸಿದೆ. ಈ ಬಗ್ಗೆ ಒಂದೆರಡು ದಿನದಲ್ಲಿ ಅಧಿಸೂಚನೆ ಹೊರಡಿಸುವ ಸಾಧ್ಯತೆಯಿದೆ.

ದ್ವಿತೀಯ ಪಿಯುಸಿ ವಿದ್ಯಾರ್ಥಿಗಳನ್ನು ಅವರ ಪ್ರಥಮ ಪಿಯುಸಿ ಹಾಗೂ ಎಸ್ಸೆಸ್ಸೆಲ್ಸಿ ಅಂಕಗಳ ಆಧಾರದಲ್ಲಿ ತೇರ್ಗಡೆ ಮಾಡಲು ಈಗಾಗಲೇ ನಿರ್ಧರಿಸಲಾಗಿದೆ. ಅಲ್ಲದೆ, ಫಲಿತಾಂಶ ನೀಡಲು ಅನುಸರಿಸಬೇಕಾದ ಮಾನದಂಡದ ಬಗ್ಗೆ ಸಲಹೆ ನೀಡಲು ತಜ್ಞರ ಸಮಿತಿಯನ್ನು ಇಲಾಖೆ ರಚಿಸಿದೆ.

ಈ ನಡುವೆ, ಪುನರಾವರ್ತಿತ ಅಭ್ಯರ್ಥಿಗಳನ್ನು ತೇರ್ಗಡೆ ಮಾಡುವ ಬಗ್ಗೆ ಅಭಿಪ್ರಾಯ ನೀಡುವಂತೆ ಸರ್ಕಾರವನ್ನು ಹೈಕೋರ್ಟ್ ಕೇಳಿತ್ತು. ಹೀಗಾಗಿ, ಪುನರಾವರ್ತಿತ ಅಭ್ಯರ್ಥಿಗಳಿಗೆ ಕೃಪಾಂಕ ನೀಡಿ ಅಥವಾ ಹಿಂದಿನ ತರಗತಿಯ ಫಲಿತಾಂಶದ ಆಧಾರದಲ್ಲಿ ತೇರ್ಗಡೆ ಮಾಡಲು ಚಿಂತನೆ ನಡೆಯುತ್ತಿದೆ ಎಂದು ಮೂಲಗಳು ತಿಳಿಸಿವೆ.

ಪುನರಾವರ್ತಿತ ಅಭ್ಯರ್ಥಿಗಳಲ್ಲಿ ಒಂದು ಅಥವಾ ಎರಡನೇ ಬಾರಿ ಪರೀಕ್ಷೆ ಬರೆಯುವವರ ಮಾಹಿತಿ ಇಲಾಖೆಗೆ ಸುಲಭವಾಗಿ ಸಿಗಲಿದೆ. ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ ಹಾಗೂ ಪಿಯು ಇಲಾಖೆ ಡಿಜಿಟಲೀಕರಣಕ್ಕೆ ಒಳಗೊಳ್ಳುವ ಮೊದಲಿನ ಅಭ್ಯರ್ಥಿಗಳಾಗಿದ್ದರೆ, ಅವರ ಹಿಂದಿನ ಫಲಿತಾಂಶದ ಆಧಾರದಲ್ಲಿ ತೇರ್ಗಡೆ ಮಾಡುವುದು ಕಷ್ಟ. ಹೀಗಾಗಿ, ಕೃಪಾಂಕ ನೀಡಿ ತೇರ್ಗಡೆ ಮಾಡುವ ಬಗ್ಗೆ ಅಧಿಕಾರಿಗಳು ಚಿಂತನೆ ನಡೆಸುತ್ತಿದ್ದು, ಸರ್ಕಾರ ಒಪ್ಪಿಗೆ ಸೂಚಿಸುವ ಸಾಧ್ಯತೆಯೂ ಇದೆ ಎಂದು ಇಲಾಖೆಯ ಮೂಲಗಳು ಹೇಳಿವೆ.

43,071 ಹೊಸ ಪ್ರಕರಣ, 955 ಮಂದಿ ಸಾವು

ನವದೆಹಲಿ (ಪಿಟಿಐ): ದೇಶದಲ್ಲಿ ಭಾನುವಾರ ಬೆಳಿಗ್ಗೆ 8ಗಂಟೆಗೆ ಕೊನೆಗೊಂಡ 24 ಗಂಟೆಗಳಲ್ಲಿ ಕೋವಿಡ್–19 ದೃಢಪಟ್ಟ 43,071 ಹೊಸ ಪ್ರಕರಣಗಳು ದಾಖಲಾಗಿವೆ. ಇದೇ ಅವಧಿಯಲ್ಲಿ 955 ಮಂದಿ ಸಾವಿಗೀಡಾಗಿದ್ದಾರೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.

ಮತ್ತೆ ಉತ್ಸಾಹ

ಕೋವಿಡ್ ಲಾಕ್‌ಡೌನ್ ನಿರ್ಬಂಧ ಸಡಿಲಗೊಂಡ ಬಳಿಕ ಜಲಂಧರ್‌ನ ನಿಕ್ಕು ಉದ್ಯಾನದಲ್ಲಿ ಭಾನುವಾರ ಯುವತಿಯರು ಆಟವಾಡಿ ಖುಷಿಪಟ್ಟರು– ಪಿಟಿಐ ಚಿತ್ರ

ಕೋವಿಡ್: ಶೇ 40.06ರಷ್ಟು ಪದವಿ ಕಾಲೇಜು ವಿದ್ಯಾರ್ಥಿಗಳಿಗೆ ಲಸಿಕೆ

ಬೆಂಗಳೂರು: ರಾಜ್ಯದಲ್ಲಿರುವ ಸರ್ಕಾರಿ ಮತ್ತು ಅನುದಾನಿತ ಪದವಿ ಕಾಲೇಜುಗಳಲ್ಲಿರುವ ಒಟ್ಟು ವಿದ್ಯಾರ್ಥಿಗಳ ಪೈಕಿ ಶೇ 40.06 ಮಂದಿಗೆ ಈವರೆಗೆ (ಜುಲೈ 3) ಕೋವಿಡ್ ಲಸಿಕೆ ಹಾಕಲಾಗಿದೆ. ಈ ಕಾಲೇಜುಗಳ ಸಿಬ್ಬಂದಿಯ ಪೈಕಿ ಶೇ 59.79 ಮಂದಿಗೆ ಲಸಿಕೆ ನೀಡಲಾಗಿದೆ.

'ಎಲ್ಲ ಆರು ವಲಯಗಳಲ್ಲಿ- (ಬೆಂಗಳೂರು, ಮೈಸೂರು, ಧಾರವಾಡ, ಮಂಗಳೂರು, ಶಿವಮೊಗ್ಗ ಮತ್ತು ಕಲಬುರ್ಗಿ) ಸರ್ಕಾರಿ ಮತ್ತು ಅನುದಾನಿತ ಪದವಿ ಕಾಲೇಜುಗಳಲ್ಲಿ ಲಸಿಕೆ ಅಭಿಯಾನ ಕೈಗೊಳ್ಳಲಾಗಿದೆ. ಈವರೆಗೆ ಉತ್ತಮ ಸಾಧನೆ ಮಾಡಲಾಗಿದ್ದು, ಮುಂದಿನ 3–4 ದಿನಗಳಲ್ಲಿ ಬಹುತೇಕ ವಿದ್ಯಾರ್ಥಿಗಳು ಮತ್ತು ಸಿಬ್ಬಂದಿಗೆ ಲಸಿಕೆ ನೀಡಲು ಉದ್ದೇಶಿಸಲಾಗಿದೆ' ಎಂದು ಕಾಲೇಜು ಶಿಕ್ಷಣ ಇಲಾಖೆಯ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ಒಟ್ಟು 4,90,799 ವಿದ್ಯಾರ್ಥಿಗಳ ಪೈಕಿ ಈವರೆಗೆ 1,96,614 ಮಂದಿಗೆ ಲಸಿಕೆ ಹಾಕಲಾಗಿದೆ. ಎಲ್ಲ ಆರೂ ವಲಯಗಳಲ್ಲಿ ಖಾಸಗಿ ಕಾಲೇಜುಗಳ ವಿದ್ಯಾರ್ಥಿಗಳಿಗೆ ಹೋಲಿಸಿದರೆ ಸರ್ಕಾರಿ ಕಾಲೇಜುಗಳ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಲಸಿಕೆ ಪಡೆದಿದ್ದಾರೆ. ಅದರಲ್ಲೂ ಧಾರವಾಡ (ಶೇ 70.99) ಮತ್ತು ಶಿವಮೊಗ್ಗ (ಶೇ 50.38) ವಲಯದ ವಿದ್ಯಾರ್ಥಿಗಳು ಲಸಿಕೆ ಪಡೆದ ಪಟ್ಟಿಯಲ್ಲಿ ಮುಂಚೂಣಿಯಲ್ಲಿದ್ದಾರೆ.

ಒಟ್ಟು 29,241 ಸಿಬ್ಬಂದಿ ಪೈಕಿ 17,484 ಮಂದಿ ಲಸಿಕೆ ಹಾಕಿಸಿಕೊಂಡಿದ್ದಾರೆ. ಈವರೆಗೆ ಲಸಿಕೆ ಪಡೆದಿರುವ ಸಿಬ್ಬಂದಿಯ ಪಟ್ಟಿಯಲ್ಲಿ ಅನುದಾನಿತ ಕಾಲೇಜುಗಳ ಸಿಬ್ಬಂದಿ ಮುಂದಿದ್ದಾರೆ. ಧಾರವಾಡ ವಲಯದಲ್ಲಿ ಶೇ 90.32ರಷ್ಟು, ಕಲಬುರ್ಗಿ ವಲಯದಲ್ಲಿ ಶೇ 78.76ರಷ್ಟು ಸಿಬ್ಬಂದಿ ಲಸಿಕೆ ಹಾಕಿಸಿಕೊಂಡಿದ್ದಾರೆ. ಮಂಗಳೂರು ವಲಯದ ಸರ್ಕಾರಿ ಕಾಲೇಜುಗಳ ಸಿಬ್ಬಂದಿಯ ಪೈಕಿ ಶೇ 79.22ರಷ್ಟು ಮಂದಿ ಲಸಿಕೆ ಪಡೆದಿದ್ದಾರೆ.

'ಕಾಲೇಜುಗಳನ್ನು ಆರಂಭಿಸುವ ಬಗ್ಗೆ ಈವರೆಗೂ ಯಾವುದೇ ಅಂತಿಮ ತೀರ್ಮಾನ ಕೈಗೊಂಡಿಲ್ಲ. ಆದರೆ, ಲಸಿಕೀಕರಣ ಪ್ರಕ್ರಿಯೆ ಪೂರ್ಣಗೊಂಡ ಬಳಿಕ ಈ ಬಗ್ಗೆ ತೀರ್ಮಾನ ಕೈಗೊಳ್ಳುವ ಸಾಧ್ಯತೆ. ಸದ್ಯ ಆನ್‌ಲೈನ್ ತರಗತಿಗಳು ನಡೆಯುತ್ತಿದೆ' ಎಂದೂ ಅಧಿಕಾರಿ ತಿಳಿಸಿದರು.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:

Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

'ಅಪ್ಪ ಅಂಬಾರಿ ಹೊತ್ತ ಎಂದು ಮರಿಯಾನೆಗೆ ಹೊರಿಸಲಾಗದು'

ಒಂದನೇ ಪುಟದಿಂದ

'ಅವರು ಮುಖ್ಯಮಂತ್ರಿ ಆಗಲಿ ಎಂದು ಬಹಳ ಕಷ್ಟಪಟ್ಟು ಕೆಲಸ ಮಾಡಿದವ ನಾನು. ಆದರೆ, ನಮ್ಮ ಶ್ರಮ ಈಗ ಯಾರಿಗೂ ಕಾಣಿಸುತ್ತಿಲ್ಲ. ದೇವಸ್ಥಾನದ ರಾಜಗೋಪುರದ ಕೆಳಗಿನ ಚಪ್ಪಡಿ ಕಲ್ಲಿನ ಸ್ಥಿತಿ ನಮ್ಮದಾಗಿದೆ. ಜನರು ಚಪ್ಪಡಿ ಕಲ್ಲುಗಳ ಮೇಲೆ ನಿಂತು ರಾಜಗೋಪುರ ನೋಡಿ ಕೈ ಮುಗಿಯುತ್ತಾರೆ' ಎಂದು ಅಸಮಾಧಾನ ಹೊರಹಾಕಿದರು.

'ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿ ಚುನಾವಣೆಗೆ ಮೀಸಲಾತಿ ಪ್ರಕಟವಾಗಿದೆ. ಎಚ್.ಡಿ.ಕುಮಾರಸ್ವಾಮಿ ಅವರಿಗೆ ಅನುಕೂಲವಾಗುವ ರೀತಿಯಲ್ಲಿ ಮೀಸಲಾತಿ ನಿಗದಿ ಮಾಡಲಾಗಿದೆ. ವಿರೋಧ ಪಕ್ಷಗಳ ಕೈ ಮೇಲಾಗುತ್ತಿದೆ. ನಮ್ಮದೇ ಸರ್ಕಾರವಿದ್ದರೂ ಯಾವುದೇ ಪ್ರಯೋಜನವಿಲ್ಲ. ನಮಗೆ ಆಗುವ ಚಿತ್ರಹಿಂಸೆ, ನೋವನ್ನು ಒಮ್ಮೊಮ್ಮೆ ಹೊರಹಾಕುತ್ತೇವೆ' ಎಂದರು.

ಪ್ರಸಾದ್ ನಿವಾಸಕ್ಕೆ ಭೇಟಿ: ಯೋಗೇಶ್ವರ್ ಅವರು ಸಂಸದ ವಿ.ಶ್ರೀನಿವಾಸಪ್ರಸಾದ್ ಅವರ ಮನೆಗೆ ಭೇಟಿ ನೀಡಿದರು. ಇಬ್ಬರೂ ಕೆಲಹೊತ್ತು ಗೋಪ್ಯವಾಗಿ ಮಾತುಕತೆ ನಡೆಸಿದರು.

'ಯೋಗೇಶ್ವರ್ ಮೈಸೂರಿಗೆ ಬಂದಾಗಲೆಲ್ಲಾ ನನ್ನನ್ನು ಭೇಟಿ ಮಾಡುವರು. ಅವರ ಜತೆ ಯಾವುದೇ ರಾಜಕೀಯ ಚರ್ಚೆ ನಡೆದಿಲ್ಲ. ಹಿಂದೆ ಸಿದ್ದರಾಮಯ್ಯ ಅವರನ್ನು ಸೋಲಿಸಲು ನನ್ನ ಮನೆಯಲ್ಲೇ ಕಾರ್ಯತಂತ್ರ ನಡೆದದ್ದು ಎಲ್ಲರಿಗೂ ಗೊತ್ತಿರುವ ವಿಚಾರ. ಈಗಲೂ ಎಲ್ಲ ಕಾರ್ಯತಂತ್ರ ನನ್ನ ಮನೆಯಲ್ಲೇ ನಡೆಯುತ್ತದೆ ಎಂಬುದನ್ನು ಒಪ್ಪಲಾರೆ' ಎಂದು ಶ್ರೀನಿವಾಸಪ್ರಸಾದ್ ಪ್ರತಿಕ್ರಿಯಿಸಿದರು.

ಪ್ರಮುಖ ದೇವಸ್ಥಾನಗಳಲ್ಲಿ ಇಂದಿನಿಂದ ದರ್ಶನ

ಒಂದನೇ ಪುಟದಿಂದ

ಬಾಗಲಕೋಟೆ ಜಿಲ್ಲೆಯ ಹುನಗುಂದ ತಾಲ್ಲೂಕಿನ ಕೂಡಲ ಸಂಗಮದ ಬಸವಣ್ಣನ ಐಕ್ಯಮಂಟಪ, ಸಂಗಮೇಶ್ವರ ದೇವಾಲಯ, ಬಾದಾಮಿಯ ಬನಶಂಕರಿ ದೇವಸ್ಥಾನ, ಮೈಸೂರಿನ ಚಾಮುಂಡಿಬೆಟ್ಟದ ಚಾಮುಂಡೇಶ್ವರಿ ದೇಗುಲ, ನಂಜನಗೂಡಿನ ಶ್ರೀಕಂಠೇಶ್ವರ ದೇವಾಲಯ. ಗೋಕರ್ಣ ಮಹಾಬಲೇಶ್ವರ ದೇವಸ್ಥಾನಗಳಲ್ಲೂ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿದೆ.

ದರ್ಶನಕ್ಕೆ ಬರುವ ಭಕ್ತರು ಕೋವಿಡ್ ನಿಯಮಾವಳಿ ಪಾಲಿಸುವುದು ಕಡ್ಡಾಯ ಎಂದು ಎಲ್ಲ ದೇವಸ್ಥಾನಗಳ ಸಮಿತಿಗಳು ತಿಳಿಸಿವೆ.

ಸದ್ಯಕ್ಕೆ ದರ್ಶನವಿಲ್ಲ: ಉಡುಪಿಯ ಕೃಷ್ಣಮಠದಲ್ಲಿ ಸದ್ಯ ಭಕ್ತರಿಗೆ ದರ್ಶನಕ್ಕೆ ಅವಕಾಶ ನೀಡಲಾಗಿಲ್ಲ. ಒಂದು ವಾರ ಪರಿಸ್ಥಿತಿ ನೋಡಿಕೊಂಡು ದೇವಸ್ಥಾನದ ಬಾಗಿಲು ತೆರೆಯಬೇಕೆ, ಬೇಡವೆ ಎಂಬ ನಿರ್ಧಾರ ತೆಗೆದುಕೊಳ್ಳಲಾಗುವುದು ಎಂದು ಪರ್ಯಾಯ ಅದಮಾರು ಮಠದ ಈಶಪ್ರಿಯ ತೀರ್ಥ ಸ್ವಾಮೀಜಿ ತಿಳಿಸಿದ್ದಾರೆ.

ಸವದತ್ತಿ ಯಲ್ಲಮ್ಮ ದೇವಸ್ಥಾನ- ಸಾರ್ವಜನಿಕ ದರ್ಶನ ನಿಷೇಧ ಮುಂದುವರಿಕೆ: ಬೆಳಗಾವಿ ಜಿಲ್ಲೆಯ ಸವದತ್ತಿ ತಾಲ್ಲೂಕಿನ ರೇಣುಕಾ ಯಲ್ಲಮ್ಮ ದೇವಸ್ಥಾನ ಹಾಗೂ ಜೋಗುಳಭಾವಿ ಸತ್ತೆಮ್ಮದೇವಿ ದೇವಸ್ಥಾನಗಳಲ್ಲಿ ಸಾರ್ವಜನಿಕ ದರ್ಶನವನ್ನು ನಿಷೇಧಿಸಿ ಜಿಲ್ಲಾಧಿಕಾರಿ ಎಂ.ಜಿ. ಹಿರೇಮಠ ಭಾನುವಾರ ಆದೇಶಿಸಿದ್ದಾರೆ.

ಯಲ್ಲಮ್ಮ ದೇವಸ್ಥಾನಕ್ಕೆ ನೆರೆಯ ಮಹಾರಾಷ್ಟ್ರದ ಭಕ್ತರು ಹೆಚ್ಚಾಗಿ ಬರುವುದರಿಂದ ಮುಂಜಾಗ್ರತಾ ಕ್ರಮವಾಗಿ ಸಾರ್ವಜನಿಕ ದರ್ಶನ ನಿಷೇಧ ಮುಂದುವರಿಸಲಾಗಿದೆ. ಆ ರಾಜ್ಯದಲ್ಲಿ ಕೋವಿಡ್ ಮತ್ತು ಡೆಲ್ಟಾ ಪ್ಲಸ್ ಪ್ರಕರಣಗಳು ಹೆಚ್ಚಿರುವುದು ಇದಕ್ಕೆ ಕಾರಣ ಎಂದು ಹೇಳಲಾಗಿದೆ.

ಮೈಸೂರು ಅರಮನೆ, ಮೃಗಾಲಯ ವೀಕ್ಷಣೆಗೆ ಮುಕ್ತ: ಮೈಸೂರು ಅರಮನೆ ಹಾಗೂ ಚಾಮರಾಜೇಂದ್ರ ಮೃಗಾಲಯವು ಜುಲೈ 5 ರಿಂದ ಸಾರ್ವಜನಿಕರ ವೀಕ್ಷಣೆಗೆ ಮುಕ್ತವಾಗಲಿದೆ.

'ಪ್ರತಿದಿನ ಬೆಳಿಗ್ಗೆ 10 ರಿಂದ ಸಂಜೆ 5.30ರ ವರೆಗೆ ಅರಮನೆಯನ್ನು ಸಾರ್ವಜನಿಕರ ವೀಕ್ಷಣೆಗೆ ತೆರೆಯಲಾಗುವುದು. ಪ್ರವಾಸಿಗರು ಅರಮನೆಯ ವೆಬ್‌ಸೈಟ್‌ನಲ್ಲಿ (www.mysorepalace.gov.in) ಆನ್‌ಲೈನ್ ಮೂಲಕ ಟಿಕೆಟ್ ಕಾಯ್ದಿರಿಸಬಹುದು. ಅರಮನೆ ದ್ವಾರದ ಬಳಿಯ ಟಿಕೆಟ್ ಕೌಂಟರ್‌ನಲ್ಲೂ ಟಿಕೆಟ್ ಖರೀದಿಸಬಹುದು' ಎಂದು ಅರಮನೆ ಮಂಡಳಿಯ ಉಪನಿರ್ದೇಶಕ ಟಿ.ಎಸ್. ಸುಬ್ರಮಣ್ಯ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೃಗಾಲಯ, ಕಾರಂಜಿ ಕೆರೆ ಮುಕ್ತ: 'ಮೈಸೂರು ಮೃಗಾಲಯ ಮತ್ತು ಕಾರಂಜಿ ಕೆರೆಯನ್ನು ಸೋಮವಾರದಿಂದ ಸಾರ್ವಜನಿಕರ ವೀಕ್ಷಣೆಗೆ ತೆರೆಯಲಾಗುವುದು' ಎಂದು ಮೃಗಾಲಯದ ಕಾರ್ಯನಿರ್ವಾಹಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಎಚ್.ಡಿ.ಕೋಟೆ ತಾಲ್ಲೂಕಿನ ದಮ್ಮನಕಟ್ಟೆ ಸಫಾರಿ ಕೇಂದ್ರ ಸಹ ಆರಂಭಗೊಳ್ಳಲಿದೆ.

ಸಹಜ ಸ್ಥಿತಿಯತ್ತ ಕರ್ನಾಟಕ

ಒಂದನೇ ಪುಟದಿಂದ

ಖಾಸಗಿ ಬಸ್‌ಗಳೂ ಸೋಮವಾರದಿಂದ ಹೆಚ್ಚಿನ ಸಂಖ್ಯೆಯಲ್ಲಿ ಸೇವೆಗೆ ಲಭ್ಯವಾಗುವ ಸಾಧ್ಯತೆ ಇದೆ.

ಬೆಂಗಳೂರು ನಗರದಲ್ಲಿ ಮೆಟ್ರೊ ರೈಲು ಸೇವೆ ಪೂರ್ಣ ಪ್ರಮಾಣದಲ್ಲಿ ದೊರೆಯಲಿದೆ. ಬಿಎಂಟಿಸಿ ಬಸ್‌ಗಳ ಸಂಚಾರದಲ್ಲೂ ಸೋಮವಾರದಿಂದ ಹೆಚ್ಚಳ ಆಗಲಿದೆ. ರಾತ್ರಿ 9ರವರೆಗೂ ಮೆಟ್ರೊ ರೈಲು ಮತ್ತು ಬಿಎಂಟಿಸಿ ಬಸ್‌ಗಳನ್ನು ಓಡಿಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ. ಮೆಟ್ರೊ ರೈಲು ಸೇವೆ ಬೆಳಿಗ್ಗೆ 7ರಿಂದ ರಾತ್ರಿ 8ರವರೆಗೆ ಲಭ್ಯವಿರಲಿದೆ.

ಮದುವೆ ಮತ್ತಿತರ ಕೌಟುಂಬಿಕ ಸಮಾರಂಭಗಳಿಗೆ ಇದ್ದ ನಿರ್ಬಂಧಗಳು ಇನ್ನು ಮತ್ತಷ್ಟು ಸಡಿಲಿಕೆ ಆಗಲಿವೆ. ಇದರಿಂದ ರಾಜ್ಯದಾದ್ಯಂತ ಶುಭ ಸಮಾರಂಭಗಳಲ್ಲಿ ಏರಿಕೆಯಾಗುವ ಸಾಧ್ಯತೆ ಇದೆ. ಮದ್ಯ ಮಾರಾಟಕ್ಕೆ ಇದ್ದ ನಿರ್ಬಂಧಗಳಲ್ಲೂ ಬದಲಾವಣೆ ತರಲಾಗಿದೆ.

ಕೊಡಗಿನಲ್ಲಿ ಈ ಹಿಂದೆ ಇದ್ದ ನಿರ್ಬಂಧಗಳು ಮುಂದುವರಿದರೆ, ಹಾಸನದಲ್ಲಿ ವಾರದಲ್ಲಿ ಮೂರು ದಿನ ಅಗತ್ಯ ಸಾಮಗ್ರಿ ಖರೀದಿಗೆ ಅವಕಾಶ ನೀಡಲಾಗಿದೆ.

ಮೇಕೆದಾಟು ಯೋಜನೆ ಕೈಬಿಡಿ; ಸ್ಟಾಲಿನ್ ಆಗ್ರಹ

ಚೆನ್ನೈ (ಪಿಟಿಐ): ಮೇಕೆದಾಟು ಯೋಜನೆ ಕೈಬಿಡಬೇಕು ಎಂದು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಒತ್ತಾಯಿಸಿದ್ದಾರೆ. ಯೋಜನೆಗೆ ವಿರೋಧ ವ್ಯಕ್ತಪಡಿಸಬಾರದು ಎಂದು ಕೋರಿ ಕರ್ನಾಟಕದ ಮುಖ್ಯಮಂತ್ರಿ ಯಡಿಯೂರಪ್ಪ ಬರೆದಿದ್ದ ಪತ್ರಕ್ಕೆ ಉತ್ತರಿಸಿ ಸ್ಟಾಲಿನ್ ಪತ್ರ ಬರೆದಿದ್ದಾರೆ.

ಕುಡಿಯುವ ನೀರು ಸರಬರಾಜು ಉದ್ದೇಶವನ್ನು ಹೊಂದಿರುವ ಮೇಕೆದಾಟು ಯೋಜನೆ ಜಾರಿಯಿಂದ ತಮಿಳುನಾಡು ರಾಜ್ಯದ ರೈತರ ಹಿತಾಸಕ್ತಿಗೆ ಧಕ್ಕೆ ಆಗುವುದಿಲ್ಲ ಎಂಬ ಕರ್ನಾಟಕದ ಮುಖ್ಯಮಂತ್ರಿ ಅವರ ಪ್ರತಿಪಾದನೆಯನ್ನು ಸ್ಟಾಲಿನ್ ತಳ್ಳಿಹಾಕಿದ್ದಾರೆ.

ಉದ್ದೇಶಿತ ಮೇಕೆದಾಟು ಯೋಜನೆಯು ಕೃಷ್ಣರಾಜಸಾಗರ, ಶಿಂಸಾ, ಅರ್ಕಾವತಿ, ಸುವರ್ಣಾವತಿ ನದಿಯ ಅಚ್ಚುಕಟ್ಟು ಭಾಗದಿಂದ ತಮಿಳುನಾಡುವಿಗೆ ಹರಿದುಬರುವ ನೀರಿಗೆ ತಡೆಯೊಡ್ಡಲಿದೆ. ಕಾವೇರಿ ನ್ಯಾಯಮಂಡಳಿ ತೀರ್ಪಿನ ಅನುಸಾರ ತಮಿಳುನಾಡಿಗೆ ಸಲ್ಲಬೇಕಾದ ನೀರೂ ಇದರಲ್ಲಿ ಸೇರಿದೆ. ಈ ಕಾರಣದಿಂದ ಯೋಜನೆ ಜಾರಿಯಿಂದ ತಮಿಳುನಾಡು ರೈತರ ಹಿತಕ್ಕೆ ಧಕ್ಕೆಯಾಗದು ಎಂಬ ವಾದವನ್ನು ಒಪ್ಪಲಾಗದು ಎಂದೂ ಹೇಳಿದ್ದಾರೆ.

ತಮಿಳುನಾಡುವಿನ ಎರಡು ಜಲವಿದ್ಯುತ್ ಯೋಜನೆ ಕುರಿತ ಯಡಿಯೂರಪ್ಪ ಅವರ ಹೇಳಿಕೆಕೆ ಪ್ರತಿಕ್ರಿಯಿಸಿ, ಮೇಕೆದಾಟು ಯೋಜನೆಯು 67.13 ಟಿಎಂಸಿ ನೀರು ಸಂಗ್ರಹಿಸುವ ಉದ್ದೇಶವನ್ನು ಹೊಂದಿದೆ. ಆದರೆ, ಜಲವಿದ್ಯುತ್ ಯೋಜನೆಗೆ ಲಭ್ಯವಿರುವ ನೀರನ್ನೇ ಎತ್ತುವಳಿ ಮೂಲಕ ಬಳಸಲಾಗುತ್ತದೆ. ಹೀಗಾಗಿ, ವಿಭಿನ್ನವಾದ ಯೋಜನೆಗಳನ್ನು ಪರಸ್ಪರ ಹೋಲಿಸುವುದು ಸರಿಯಾದ ಕ್ರಮವಲ್ಲ ಎಂದೂ ಪ್ರತಿಪಾದಿಸಿದ್ದಾರೆ. ವಿಷಯದ ಸೂಕ್ಷ್ಮತೆಯನ್ನು ಪರಿಗಣಿಸಿ ಮೇಕೆದಾಟು ಯೋಜನೆಯನ್ನು ಕೈಬಿಡಲು ಒತ್ತಾಯಿಸುತ್ತೇನೆ. ಉಭಯ ರಾಜ್ಯಗಳ ನಡುವೆ ಉತ್ತಮ ಬಾಂಧವ್ಯ ಇರಬೇಕು ಎಂದೂ ಪತ್ರದಲ್ಲಿ ಹೇಳಿದ್ದಾರೆ.

ಸ್ಕ್ರ್ಯಾಪ್ ಮಾರಾಟ: ರೈಲ್ವೆಗೆ ಆದಾಯ

ನವದೆಹಲಿ (ಪಿಟಿಐ): ಕೊರೊನಾ ವೈರಸ್‌ನಿಂದಾಗಿ ಪ್ರಯಾಣಿಕರ ವಿಭಾಗದಲ್ಲಿ ತೀವ್ರವಾದ ಆದಾಯ ನಷ್ಟ ಅನುಭವಿಸಿದ್ದರೂ, ಭಾರತೀಯ ರೈಲ್ವೆಯು ಸ್ಕ್ರ್ಯಾಪ್ (ನಿರುಪಯುಕ್ತವೆಂದು ಬಿಟ್ಟ ವಸ್ತುಗಳು) ಮಾರಾಟದಿಂದ ದಾಖಲೆಯ ಆದಾಯ ಗಳಿಸಿದೆ. 2020–2021ರ ಅವಧಿಯಲ್ಲಿ ಸ್ಕ್ರ್ಯಾಪ್ ಮಾರಾಟದಿಂದ ₹4,575 ಕೋಟಿ ಆದಾಯ ಗಳಿಸಿದೆ.

ಸ್ಕ್ರ್ಯಾಪ್ ಮಾರಾಟದಿಂದ 2010–11ರಲ್ಲಿ ಭಾರತೀಯ ರೈಲ್ವೆಯು ₹ 4,409 ಕೋಟಿ ಆದಾಯಗಳಿಸಿತ್ತು. ಆ ನಂತರ 2020–2021ರಲ್ಲಿ ದಾಖಲೆಯ ಆದಾಯ ಗಳಿಸಿದೆ. ಮಧ್ಯಪ್ರದೇಶದ ಚಂದ್ರಶೇಖರ್ ಗೌರ್ ಅವರು ಮಾಹಿತಿ ಹಕ್ಕು (ಆರ್‌ಟಿಐ) ಕಾಯ್ದೆಯಡಿ ಸಲ್ಲಿಸಿದ ಅರ್ಜಿಗೆ ಪ್ರತಿಕ್ರಿಯೆ ನೀಡಿರುವ ರೈಲ್ವೆ ಮಂಡಳಿ ಈ ಮಾಹಿತಿ ನೀಡಿದೆ.

ವಿವಿಧ ರೀತಿಯ ಸ್ಕ್ರ್ಯಾಪ್ ವಸ್ತುಗಳ ಮಾರಾಟದಿಂದ 2019-2020ರಲ್ಲಿ ₹4,333 ಕೋಟಿ ಆದಾಯ ಗಳಿಸಲಾಗಿತ್ತು. 2020-21ರ ಅವಧಿಯಲ್ಲಿ ಶೇ 5 ರಷ್ಟು ಆದಾಯ ಹೆಚ್ಚಾಗಿದೆ ಎಂದು ರೈಲ್ವೆ ತಿಳಿಸಿದೆ.

ಕೆಪಿಎಸ್‌ಸಿ: 168 ಅಧಿಕಾರಿಗಳ ಹುದ್ದೆ ಬದಲು: 16 ಮಂದಿ 'ಸ್ಥಾನ ಪಲ್ಲಟ' ಆದೇಶ

ಮುಗಿಯದ ಗೋಳು: ಅಧಿಕಾರಿಗಳ ಅಳಲು

• ರಾಜೇಶ್ ರೈ ಚಟ್ಲ

ಬೆಂಗಳೂರು: ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳಿಗೆ 2006ರಲ್ಲಿ ನೇಮಕಗೊಂಡಿದ್ದ 1998ನೇ ಸಾಲಿನ 383 ಅಧಿಕಾರಿಗಳ ಆಯ್ಕೆ ಪಟ್ಟಿಯನ್ನು 15 ವರ್ಷಗಳ ಬಳಿಕ ಕೆಪಿಎಸ್‌ಸಿ ಜ. 30ರಂದು ಮೂರನೇ ಬಾರಿಗೆ ಪರಿಷ್ಕರಿಸಿದೆ. ಹೊಸ ಪಟ್ಟಿಯ ಪ್ರಕಾರ 168 ಅಧಿಕಾರಿಗಳ ಇಲಾಖೆ, ಹುದ್ದೆ, ವೃಂದ ಬದಲಾಗಿದ್ದು, ಅಧಿಕಾರಿಗಳ ಮರು ನೇಮಕಕ್ಕೆ ಸರ್ಕಾರ ಮುಂದಾಗಿದೆ.

ಆದರೆ, ಹುದ್ದೆ ಬದಲಾದವರ ಪೈಕಿ ಅರ್ಧಕ್ಕೂ ಹೆಚ್ಚು ಅಧಿಕಾರಿಗಳು ಕರ್ನಾಟಕ ಆಡಳಿತ ನ್ಯಾಯಮಂಡಳಿಯಿಂದ (ಕೆಎಟಿ) ತಡೆಯಾಜ್ಞೆ ತಂದಿದ್ದಾರೆ. ತಡೆಯಾಜ್ಞೆ ಇಲ್ಲದವರ ಪೈಕಿ, ಉಪ ವಿಭಾಗಾಧಿಕಾರಿ, ತಹಶೀಲ್ದಾರ್, ವಾಣಿಜ್ಯ ತೆರಿಗೆ ಅಧಿಕಾರಿ, ಮಾರುಕಟ್ಟೆ ಅಧಿಕಾರಿ ಮುಂತಾದ ಹುದ್ದೆಗಳಲ್ಲಿರುವ 16 ಅಧಿಕಾರಿಗಳನ್ನು ಹಾಲಿ ಹುದ್ದೆಯಿಂದ ತಕ್ಷಣದಿಂದ ಬಿಡುಗಡೆ ಮಾಡಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಡಿಪಿಎಆರ್) ಆದೇಶ ಹೊರಡಿಸಿದೆ.

ಕೆಎಟಿ ಮೆಟ್ಟಿಲೇರಿದ 43 ಅಧಿಕಾರಿಗಳು

ಜ. 30ರಂದು ಪ್ರಕಟಿಸಿರುವ ಪರಿಷ್ಕತ ಪಟ್ಟಿಯನ್ನು ಪ್ರಶ್ನಿಸಿ 43 ಅಧಿಕಾರಿಗಳು ಕೆಎಟಿ ಮೆಟ್ಟಿಲೇರಿದ್ದಾರೆ. ಈ ಅಧಿಕಾರಿಗಳ ಹುದ್ದೆಯ ವಿಷಯದಲ್ಲಿ ಯಥಾಸ್ಥಿತಿ ಕಾಪಾಡುವಂತೆ ಕೆಎಟಿ ಆದೇಶಿಸಿದೆ. ಜ. 30ರ ಪಟ್ಟಿಯಲ್ಲಿರುವ 33 ಅಧಿಕಾರಿಗಳು ನಿಧನ, ಹುದ್ದೆಗೆ ರಾಜೀನಾಮೆ, ವರದಿ ಮಾಡಿಕೊಂಡಿಲ್ಲ ಮುಂತಾದ ಕಾರಣಗಳಿಗೆ ಸದ್ಯ ಹುದ್ದೆಯಲ್ಲಿ ಇಲ್ಲ. 15 ಅಧಿಕಾರಿಗಳು 2019ರ ಜ. 25 ಮತ್ತು ಆಗಸ್ಟ್ 28ರ ಪರಿಷ್ಕೃತ ಆಯ್ಕೆ ಪಟ್ಟಿಯನ್ನು ಪ್ರಶ್ನಿಸಿ ಕೆಎಟಿಯಲ್ಲಿ ಅರ್ಜಿ ದಾಖಲಿಸಿದ್ದಾರೆ. 8 ಪ್ರಕರಣಗಳಲ್ಲಿ ಕೆಎಟಿ ಏಕರೂಪದ ಆದೇಶ ನೀಡಿದ್ದು, ಮರುಮೌಲ್ಯಮಾಪನ ಪ್ರಕ್ರಿಯೆ ಪೂರ್ಣಗೊಳ್ಳುವವರೆಗೆ ಈ ಅರ್ಜಿದಾರರು ಹಾಲಿ ಹುದ್ದೆಯಲ್ಲಿಯೇ ಮುಂದುವರಿಸುವಂತೆ ಆದೇಶಿಸಿದೆ.

ಪ್ರಜಾವಾಣಿ ವಿಶೇಷ

'ಕೆಪಿಎಸ್‌ಸಿಯ ತಪ್ಪು ನಡೆಯಿಂದ ಈ ಸಾಲಿನ ಆಯ್ಕೆ ಪಟ್ಟಿ ಈಗಾಗಲೇ ಮೂರು ಬಾರಿಗೆ ಪರಿಷ್ಕರಣೆಗೊಂಡಿದೆ. ಅಲ್ಲದೆ, ಹೈಕೋರ್ಟ್ ನೀಡಿರುವ ತೀರ್ಪುಗಳನ್ನು ಅನುಷ್ಠಾನಗೊಳಿಸುವ ವಿಷಯದಲ್ಲಿ ಸರ್ಕಾರ ವಿಳಂಬ ಧೋರಣೆ ಅನುಸರಿಸುತ್ತಿದೆ. ನಮ್ಮದು ಮುಗಿಯದು ಗೋಳು' ಎಂದು ಹುದ್ದೆ ಬದಲಾಗುತ್ತಿರುವ ಅಧಿಕಾರಿಗಳು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಈ ಸಾಲಿನ ಆಯ್ಕೆ ಪಟ್ಟಿಯನ್ನು ಕೆಪಿಎಸ್‌ಸಿ ಮೊದಲ ಬಾರಿಗೆ 2006ರ ಫೆ. 28ರಂದು ಪ್ರಕಟಿಸಿತ್ತು. ಬಳಿಕ, ಹೈಕೋರ್ಟ್ ನಿರ್ದೇಶನದಂತೆ 2019 ಜ. 25ರಂದು ಪರಿಷ್ಕರಿಸಿತ್ತು. ಅದೇ ವರ್ಷ ಆಗಸ್ಟ್ 28ರಂದು ಮತ್ತೊಮ್ಮೆ ಪರಿಷ್ಕರಿಸಿತ್ತು. ಆದರೆ, ಹೈಕೋರ್ಟ್ ನೀಡಿದ್ದ ತೀರ್ಪನ್ನು ತಪ್ಪಾಗಿ ಭಾವಿಸಿ 91 ಉತ್ತರ ಪತ್ರಿಕೆಗಳ ಬದಲು 91 ಅಭ್ಯರ್ಥಿಗಳ ಉತ್ತರ ಪತ್ರಿಕೆಯನ್ನು ಮರುಮೌಲ್ಯಮಾಪನ ಮಾಡಿದ ಕಾರಣ ಆಗಸ್ಟ್ 28ರ ಆಯ್ಕೆ ಪಟ್ಟಿಯನ್ನು ಪ್ರಶ್ನಿಸಿ ಕೆಲವರು ಮೇಲ್ಮನವಿ ಸಲ್ಲಿಸಿದ್ದರು. ಹೀಗಾಗಿ, ಕೆಪಿಎಸ್‌ಸಿ ಮೂರನೇ ಬಾರಿ ಆಯ್ಕೆ ಪಟ್ಟಿ ಪರಿಷ್ಕರಿಸಿ ಜ. 30ರಂದು ಪ್ರಕಟಿಸಿದೆ.

ಮೊದಲ ಆಯ್ಕೆ ಪಟ್ಟಿಯ ಪ್ರಕಾರ ನೇಮಕಗೊಂಡಿದ್ದ ಅಧಿಕಾರಿಗಳ ಇಲಾಖೆ, ಹುದ್ದೆ, ವೃಂದ, ಮೂರನೇ ಬಾರಿ ಪರಿಷ್ಕರಿಸಿದ್ದ (ಜ. 30ರಂದು) ಪಟ್ಟಿಯಲ್ಲಿ ಬದಲಾಗಿದೆ. ಆದರೆ, ಮೊದಲ ಎರಡು ಬಾರಿ (2019 ಜ. 25 ಮತ್ತು ಆಗಸ್ಟ್ 28) ಪರಿಷ್ಕರಿಸಿದ್ದ ಪಟ್ಟಿ ಪ್ರಕಾರ ಹುದ್ದೆ ಬಲಾಗಿದ್ದ 79 ಅಧಿಕಾರಿಗಳ ಪೈಕಿ 67 ಅಧಿಕಾರಿಗಳ ಹುದ್ದೆಗಳು ಮೂರನೇ ಪಟ್ಟಿಯಲ್ಲಿ ಬದಲಾವಣೆ ಆಗಿಲ್ಲ.

'ನ್ಯಾಯಾಲಯದಿಂದ ತಡೆಯಾಜ್ಞೆ ತಂದವರನ್ನು ಬಿಟ್ಟು, ಉಳಿದಂತೆ ಹುದ್ದೆ ಬದಲಾದ ಎಲ್ಲ ಅಧಿಕಾರಿಗಳನ್ನು ಬದಲಾದ ಹುದ್ದೆಗಳಿಗೆ ನೇಮಿಸಿ ಆದೇಶ ಹೊರಡಿಸಲಾಗುತ್ತಿದೆ. ಎಂದು ಡಿಪಿಎಆರ್ ಅಧಿಕಾರಿಯೊಬ್ಬರು ತಿಳಿಸಿದರು.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಭವಿಷ್ಯ

Astrology

★॥ಶ್ರೀಆಂಜನೇಯಸ್ವಾಮಿ॥★ ಆರಾಧನೆಯಿಂದ ಪ್ರೀತಿಪ್ರೇಮ, ವಶೀಕರಣ, ಸಾಲದಬಾದೆ, ಕೋರ್ಟ್‌ಕೇಸ್, ವ್ಯಾಪಾರ, ಸಂತಾನ ಇನ್ನೂಯಾವುದೇ ಗುಪ್ತ ಸಮಸ್ಯೆಗಳಿಗೆ ಫೋನಿನ ಮೂಲಕ ಪರಿಹಾರ. 9972550137

★ಮಂತ್ರದುರ್ಗಿ ಮಾಂತ್ರಿಕರು★ ಕೇರಳ, ಕೊಳ್ಳೆಗಾಲದ ಮಂತ್ರಸಿದ್ಧ_ವಾಕ್ಸಿದ್ಧಿಯಿಂದ ಸ್ತ್ರೀಪುರುಷ ವಶೀಕರಣ ಕೆಲವೇ_ಗಂಟೆಗಳಲ್ಲಿ.ಫೋನಿನ_ಮೂಖಾಂತರ ಶಾಶ್ವತ_ಪರಿಹಾರ. (ಸ್ತ್ರೀಪುರುಷ ವಶೀಕರಣ_ಸ್ಪೆಷಲಿಸ್ಟ್) ಪಂ.ರಾಮಚಂದ್ರಭಟ್. 9008711329

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೇಷಲಿಸ್ಟ್ 100% ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್.ಉಚಿತ ಭವಿಷ್ಯ ಖಚಿತ ಪರಿಹಾರ ಶ್ರೀಕ್ಷೇತ್ರ ಧರ್ಮಸ್ಥಳ, 7022443071

★॥ಶ್ರೀಶಾಕಂಬರಿದೇವಿ॥★ ಜ್ಯೋತಿಷ್ಯರು ಸ್ತ್ರೀಪುರುಷ ವಶೀಕರಣ, ಸಂಭೋಗ ವಶೀಕರಣ ಇನ್ನೂಯಾವುದೇ ಸಮಸ್ಯೆಗಳಿಗೆ 11ನಿಮಿಷದಲ್ಲಿ ಶಾಶ್ವತ ಪರಿಹಾರ. ಡಾ॥ ವಿವೇಕಾನಂದ ಜೋಶಿ 7899899949

ರಿಯಲ್ ಎಸ್ಟೇಟ್ ಬೈಯಿಂಗ್

Agricultural Land

General

ಸುಮಾರು ೫ ರಿಂದ 10 ವರ್ಷಗಳ ಕಾಲ ಕೃಷಿ ಚಟುವಟಿಕೆಗಳಿಗಾಗಿ 100 - 200 ಎಕರೆ ಜಮೀನು ಭೋಗ್ಯಕ್ಕೆ ಬೇಕಾಗಿದೆ . info@hameedindia.com + 91 - 9388605345 (ಹಿಂದಿ ಅಥವಾ ಇಂಗ್ಲೀಷ್ ಮಾತನಾಡಿ) .

ವ್ಯಾಪಾರ

Business to Business

Finance

ಮುದ್ರಾ ಯೋಜನೆಯಲ್ಲಿ ಕೃಷಿ ಸ್ಥಿರಾಸ್ತಿ ವೈಯಕ್ತಿಕ ಬಿಸಿನೆಸ್ ವಿದ್ಯಾ, ವಾಹನ ಸಾಲ 4% ವಾರ್ಷಿಕ ಬಡ್ಡಿಯಲ್ಲಿ ಸಾಲ ಲಭ್ಯ. 7057624634, 9767335494

ಸಾಲಗಳು ನಾವು ಎಲ್ಲಾ ರೀತಿಯ ಸಾಲಗಳನ್ನು ನೀಡುತ್ತೇವೆ. ವೈಯಕ್ತಿಕ, ವ್ಯವಹಾರ, ಆಸ್ತಿ, ವಸತಿ, ಕೃಷಿ, ಸ್ವಾಧೀನ ಮತ್ತು ಆಸ್ತಿಗಾಗಿ ಸಾಲ ನೀಡಲಾಗುತ್ತದೆ. ಮೊಬೈಲ್: 7837015557

ಉದ್ಯೋಗಾವಕಾಶ

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

ನಿಮ್ಮ ಬಿಡುವಿನ ವೇಳೆಯಲ್ಲಿ ಮನೆಯಿಂದಲೇ ಕುಳಿತು ಬುಕ್ ಬರೆಯುವ ಫಾರಂ ತುಂಬುವ ಎಕ್ಸಲ್ ಶೀಟ್ ಡೇಟಾ ಎಂಟ್ರಿ ಕೆಲಸ ಮಾಡಿ ಗಳಿಸಿ ತಿಂಗಳಿಗೆ 12,000-15,000 ಕನ್ನಡ,ಇಂಗ್ಲೀಷ್ ಓದಲು ಬರೆಯಲು ಬರುವ ಎಲ್ಲರಿಗೂ ಮುಕ್ತ ಅವಕಾಶ. 9902603707, 9686114647

ಮನೆಯಿಂದಲೇ ಕುಳಿತು ಫಾರಂನಲ್ಲಿ ಅಂಕಿಗಳು ತುಂಬುವ ಮೂಲಕ,ಗಳಿಸಿ 15,000-25,000/-. ಕೊರಿಯರ್ ಬುಕ್,ಪೆನ್ ಚಾರ್ಜಸ್ ನಾವೇ ಕೊಡುತ್ತೇವೆ. 9108059956, 9901929956

Wanted

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ, ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು, ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು ಉಚಿತ ಊಟ ವಸತಿ ಸಂಬಳ 10,000 ರಿಂದ 15,000/- ESI & PF ಸೌಲಭ್ಯವಿರುತ್ತದೆ. ಬೆಂಗಳೂರು-56 ಸಂಪರ್ಕಿಸಿ : 9606385001, 9606523337

ಬೆಂಗಳೂರಿನ ಪ್ರತಿಷ್ಠಿತ ಕಂಪನಿಯ Security Task Force ವಿಭಾಗಕ್ಕೆ ನಿವೃತ್ತ/ARMY / BSF/ CRPF / CISF ಸಿಬ್ಬಂದಿಯವರುಗಳು ತಕ್ಷಣ ಬೇಕಾಗಿದ್ದಾರೆ Age: below 50 years, ಸಂಪರ್ಕಿಸಿ : 9035348529, 9035348522.

General

TVS ಬ್ರಿಟಾನಿಯಾ ವಿಡಿಯೋಕಾನ್ ಗಳಿಗೆ 7th,SSLC,PUC, ಡಿಗ್ರಿಯವರು ITI ನವರುಗಳು ಕರ್ನಾಟಕದ ಎಲ್ಲಾ ಜಿಲ್ಲೆಗಳಿಗೆ ನೇರನೇಮಕಾತಿಯಿರುತ್ತದೆ. ESI, PF ನೊಂದಿಗೆ 16,600-60,000/- ವಸತಿಯೂಟವಿರುತ್ತದೆ. ಸಂಪರ್ಕಿಸಿ:7760014526, 9739544856

ಕರ್ನಾಟಕದಾದ್ಯಂತ ಪುನರಾರಂಭವಾಗಿರುವ ಪ್ರಸಿದ್ಧಕಂಪನಿ ಹಾಗೂ ಆಫೀಸ್ ಕೆಲಸಗಳಿಗೆಯುವಕ ಯುವತಿಯರು ಬೇಕಾಗಿದ್ದಾರೆ ವಸತಿಯೂಟದೊಂದಿಗೆ Salary+OT 16,800-45000/-.8792155097, 8792156697

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆಕೆಲಸಕ್ಕೆ, ಅಡುಗೆಗೆ ಮಹಿಳೆಯರು ಹೋಂನರ್ಸಗಳು ಹುಡುಗಿಯರು ಬೇಕಾಗಿದ್ದಾರೆ. ಊಟ ವಸತಿಯಿದೆ. 10,000-15,000. 8951315839, 9141634619

WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8884875553/ 8884875554

ಬೆಂಗಳೂರಿನಲ್ಲಿರುವ ಆರ್ಯುವೇದಿಕ್ ಕಂಪನಿಗೆ ಪ್ರತಿ ಜಿಲ್ಲೆಯಿಂದ ಅರ್ಯುವೇದಿಕ್ ವೈದ್ಯರು, ನೇರ ಮಾರಾಟ ಪ್ರತಿನಿದಿಗಳು ಬೇಕಾಗಿದ್ದಾರೆ. ಆಕರ್ಷಕ ಸಂಬಳ. 8892501007/ 9606701007

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

DH DECCAN HERALD
ಪ್ರಜಾವಾಣಿ ಕ್ಲಾಸಿಫೈಡ್ಸ್
SELL, RENT, BUY PROPERTY
THROUGH PROPERTY CLASSIFIEDS ADS IN DECCAN HERALD & PRAJAVANI NEWS PAPER

BOOK YOUR CLASSIFIEDS ADS ONLINE
WWW.DHCLASSIFIEDS.COM
FOR MORE INFORMATION
CONTACT 9880856233 | 9886213331
Email: santhoshkumar@deccanherald.co.in

ರಫೇಲ್ ಖರೀದಿ: ಕೇಂದ್ರದ ನಡೆ ಪ್ರಶ್ನಿಸಿದ ಕಾಂಗ್ರೆಸ್

ಫ್ರಾನ್ಸ್‌ನಲ್ಲಿ 'ಅಕ್ರಮ'ದ ತನಿಖೆ: ಕೇಂದ್ರ ಸರ್ಕಾರದ ಮೌನವೇಕೆ?

ಪ್ರಜಾವಾಣಿ ವಾರ್ತೆ

ನವದೆಹಲಿ: ರಫೇಲ್ ಯುದ್ಧವಿಮಾನ ಖರೀದಿ ಒಪ್ಪಂದವನ್ನು ತನಿಖೆಗೆ ಒಳಪಡಿಸಿರುವ ಫ್ರಾನ್ಸ್ ಸರ್ಕಾರದ ನಿರ್ಧಾರದ ಬಗ್ಗೆ ಯಾವ ಪ್ರತಿಕ್ರಿಯೆಯನ್ನೂ ನೀಡದ ಕೇಂದ್ರ ಸರ್ಕಾರದ ಮೌನವನ್ನು ಕಾಂಗ್ರೆಸ್ ಪ್ರಶ್ನಿಸಿದೆ. ರಫೇಲ್ ಒಪ್ಪಂದವನ್ನು ಜಂಟಿ ಸಂಸದೀಯ ಸಮಿತಿಯ (ಜೆಪಿಸಿ) ತನಿಖೆಗೆ ಒಳಪಡಿಸಲು ನರೇಂದ್ರ ಮೋದಿ ನೇತೃತ್ವದ ಸರ್ಕಾರ ಹಿಂದೇಟು ಹಾಕುತ್ತಿರುವುದು ಏಕೆ ಎಂದು ಕಾಂಗ್ರೆಸ್ ಮುಖಂಡರು ಪ್ರಶ್ನಿಸಿದ್ದಾರೆ.

ರಫೇಲ್ ಯುದ್ಧವಿಮಾನ ಮಾರಾಟ ಒಪ್ಪಂದದಲ್ಲಿ ಅಕ್ರಮ ನಡೆದಿದೆ ಎಂದು ಫ್ರಾನ್ಸ್‌ನಲ್ಲಿ ಶನಿವಾರ ನ್ಯಾಯಾಂಗ ತನಿಖೆ ಆರಂಭಿಸಲಾಗಿದೆ. ಈ ಒಪ್ಪಂದದಲ್ಲಿ ಭ್ರಷ್ಟಾಚಾರ ಮತ್ತು ಲಾಬಿ ನಡೆದಿರುವ ಬಗ್ಗೆ ತನಿಖೆ ನಡೆಸಲಾಗುತ್ತಿದೆ ಎನ್ನಲಾಗಿದೆ. ಮೀಡಿಯಾಪಾರ್ಟ್ ಸಂಸ್ಥೆಯು ಪ್ರಕಟಿಸಿದ ತನಿಖಾ ವರದಿಗಳ ಆಧಾರದಲ್ಲಿ ನ್ಯಾಯಾಂಗ ತನಿಖೆ ಆರಂಭಿಸಲಾಗಿದೆ.

'ರಫೇಲ್ ಒಪ್ಪಂದದಲ್ಲಿ ಭ್ರಷ್ಟಾಚಾರ, ಅಕ್ರಮ ಹಣ ವರ್ಗಾವಣೆ, ಲಾಬಿ ಮತ್ತು ಪ್ರಭಾವ ಬೀರುವಿಕೆ ಕುರಿತು ತನಿಖೆ ನಡೆಸಲು ಫ್ರಾನ್ಸ್ ಆದೇಶಿಸಿ 24 ಗಂಟೆ ಕಳೆದಿದೆ. ಇಡೀ ದೇಶ ಮತ್ತು ಇಡೀ ಜಗತ್ತು ಈಗ ದೆಹಲಿಯತ್ತ ನೋಡುತ್ತಿದೆ. ಆದರೆ ಕೇಂದ್ರ ಸರ್ಕಾರದ ಈ ಮೌನವೇಕೆ' ಎಂದು ಕಾಂಗ್ರೆಸ್ ವಕ್ತಾರ ಪವನ್ ಖೇರಾ ಪ್ರಶ್ನಿಸಿದ್ದಾರೆ.

> **₹ 570 ಕೋಟಿ ಬೆಲೆಯ ಯುದ್ಧವಿಮಾನಗಳನ್ನು ₹ 1,670 ಕೋಟಿ ಕೊಟ್ಟು ಖರೀದಿ ಮಾಡಿರುವುದೇ ರಫೇಲ್ ಒಪ್ಪಂದ ಎಂಬುದು ಮತ್ತಷ್ಟು ಸ್ಪಷ್ಟವಾಗುತ್ತಿದೆ**
> **ಪವನ್ ಖೇರಾ,** ಕಾಂಗ್ರೆಸ್ ವಕ್ತಾರ

'ಇಲ್ಲಿ ಅಕ್ರಮ ನಡೆದಿರುವುದು ಸ್ಪಷ್ಟವಾಗಿದೆ. ಭ್ರಷ್ಟಾಚಾರ ನಿಯಂತ್ರಣಕ್ಕೆ ಸಂಬಂಧಿಸಿದ ಷರತ್ತುಗಳನ್ನು ಒಪ್ಪಂದದಲ್ಲಿ ಕೈಬಿಡಲಾಗಿದೆ. ಈ ಒಪ್ಪಂದದಲ್ಲಿ ಮಧ್ಯವರ್ತಿಯಾಗಿದ್ದ ವ್ಯಕ್ತಿಯನ್ನು ಬೇರೆ ಪ್ರಕರಣದ ಕಾರಣ ಇದೇ ಏಪ್ರಿಲ್‌ನಲ್ಲಿ ಬಂಧಿಸಲಾಗಿತ್ತು. ರಫೇಲ್ ಒಪ್ಪಂದದಲ್ಲಿ ಆತನಿಗೆ ಕೋಟ್ಯಂತರ ರೂಪಾಯಿ ಉಡುಗೊರೆಯಾಗಿ ಬಂದಿದ್ದಕ್ಕೆ ಸಂಬಂಧಿಸಿದ ದಾಖಲೆಗಳನ್ನು ಜಾರಿ ನಿರ್ದೇಶನಾಲಯ ಆತನಿಂದ ವಶಕ್ಕೆ ಪಡೆದಿತ್ತು. ಜಾರಿ ನಿರ್ದೇಶನಾಲಯವು ಆ ದಾಖಲೆಗಳನ್ನು ಏನು ಮಾಡಿತು ಎಂಬುದು ಗೊತ್ತಿಲ್ಲ. ಆದರೆ ಫ್ರಾನ್ಸ್ ಸರ್ಕಾರ ಈ ಒಪ್ಪಂದದ ಬಗ್ಗೆ ಈಗ ತನಿಖೆ ಆರಂಭಿಸಿದೆ' ಎಂದು ಪವನ್ ಲೇವಡಿ ಮಾಡಿದ್ದಾರೆ.

ಕಾಂಗ್ರೆಸ್‌ನ ಆರೋಪಗಳನ್ನು ಬಿಜೆಪಿಯ ವಕ್ತಾರ ಸಂಬಿತ್ ಪಾತ್ರಾ ಅವರು ಶನಿವಾರವೇ ಅಲ್ಲಗಳೆದಿದ್ದರು. 'ಕಾಂಗ್ರೆಸ್ ಸುಳ್ಳು ಹೇಳುತ್ತಿದೆ. ಡಾಸೊ ಏವಿಯೇಷನ್‌ನ ಪ್ರತಿಸ್ಪರ್ಧಿ ಕಂಪನಿಗಳು ರಾಹುಲ್ ಗಾಂಧಿ ಅವರನ್ನು ದಾಳವಾಗಿ ಬಳಸಿಕೊಳ್ಳುತ್ತಿವೆ' ಎಂದು ಪಾತ್ರಾ ಹೇಳಿದ್ದರು.

ಮುಖ್ಯಾಂಶಗಳು

- ರಫೇಲ್ ಒಪ್ಪಂದವನ್ನು ಜೆಪಿಸಿ ತನಿಖೆಗೆ ಒಪ್ಪಿಸಲು ಒತ್ತಾಯ
- ಮಧ್ಯವರ್ತಿಯಿಂದ ವಶಕ್ಕೆ ಪಡೆದ ದಾಖಲೆಗಳ ಬಗ್ಗೆ ಕಾಂಗ್ರೆಸ್ ಪ್ರಶ್ನೆ

ಉತ್ತರಾಖಂಡ ಸಿಎಂ ಆಗಿ ಧಾಮಿ ಅಧಿಕಾರ ಸ್ವೀಕಾರ

ಡೆಹ್ರಾಡೂನ್ (ಪಿಟಿಐ): ಉತ್ತರಾಖಂಡ ರಾಜ್ಯದ 11ನೇ ಮುಖ್ಯಮಂತ್ರಿಯಾಗಿ 45 ವರ್ಷದ ಪುಷ್ಕರ್ ಸಿಂಗ್ ಧಾಮಿ ಅವರು ಭಾನುವಾರ ಪ್ರಮಾಣವಚನ ಸ್ವೀಕರಿಸಿದರು.

ಇದೇ ಸಂದರ್ಭದಲ್ಲಿ ಸಚಿವರಾಗಿ ಸತ್ಪಾಲ್ ಮಹಾರಾಜ್, ಹರಕ್ ಸಿಂಗ್ ರಾವತ್, ಬನ್‌ಸಿಧರ್ ಭಗತ್, ಬಿಷನ್ ಸಿಂಗ್ ಚುಫಲ್, ಸುಬೋಧ್ ಉನಿಯಾ ಹಾಗೂ ಇತರ ಐವರೂ ಪ್ರಮಾಣವಚನ ಸ್ವೀಕರಿಸಿದರು.

ಶ್ರೀನಗರ: ಡ್ರೋನ್ ಬಳಕೆ ನಿಷೇಧ

ಶ್ರೀನಗರ (ಪಿಟಿಐ): ಜಮ್ಮುವಿನ ವಾಯುನೆಲೆಯ ಮೇಲೆ ಡ್ರೋನ್ ದಾಳಿ ನಡೆದ ವಾರದ ಬಳಿಕ, ಶ್ರೀನಗರದ ಅಧಿಕಾರಿಗಳು ನಗರದಲ್ಲಿ ಡ್ರೋನ್ ಸೇರಿದಂತೆ ಮಾನವರಹಿತ ವೈಮಾನಿಕ ವಾಹನಗಳ ಮಾರಾಟ, ಸ್ವಾಧೀನ ಮತ್ತು ಬಳಕೆಯನ್ನು ಭಾನುವಾರ ನಿಷೇಧಿಸಿದ್ದಾರೆ.

ವೈಮಾನಿಕ ಪ್ರದೇಶ ಮತ್ತು ಹೆಚ್ಚು ಜನರಿರುವ ಪ್ರದೇಶಗಳಲ್ಲಿ ಸುರಕ್ಷತೆ ದೃಷ್ಟಿಯಿಂದ ಡ್ರೋನ್‌ನಂತಹ ಹಾರಾಟದ ವಾಹನಗಳನ್ನು ನಿರ್ಬಂಧಿಸಲಾಗಿದೆ. ಸಭೆ, ಸಮಾರಂಭಗಳಲ್ಲಿ ಯಾವುದೇ ದುರ್ಘಟನೆಗಳು ಸಂಭವಿಸದಂತೆ ತಡೆಯಲು ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಶ್ರೀನಗರದ ಜಿಲ್ಲಾ ಮ್ಯಾಜಿಸ್ಟ್ರೇಟ್ ಮೊಹಮ್ಮದ್ ಐಜಾಜ್ ಹೇಳಿದ್ದಾರೆ.

ಜಮ್ಮುವಿನಲ್ಲಿ ಡ್ರೋನ್ ದಾಳಿಯ ನಂತರ ರಜೌರಿ ಮತ್ತು ಕತುವಾ ಪ್ರದೇಶದಲ್ಲಿ ಡ್ರೋನ್ ಮತ್ತು ಮಾನವರಹಿತ ವೈಮಾನಿಕ ವಾಹನಗಳ ಬಳಕೆಯನ್ನು ನಿರ್ಬಂಧಿಸಲಾಗಿದೆ.

ಹೋಟೆಲ್‌ಗಳಲ್ಲಿ ಉಳಿಯುವವರ ಸಂಖ್ಯೆ ಹೆಚ್ಚಳ

ಬಿಸಿಗಾಳಿ: ಹಿಮಾಚಲದತ್ತ ಪ್ರವಾಸಿಗರು

ಶಿಮ್ಲಾ (ಪಿಟಿಐ): ಹಲವು ರಾಜ್ಯಗಳಲ್ಲಿ ಬಿಸಿಗಾಳಿ ಅಪ್ಪಳಿಸುತ್ತಿದ್ದು, ದೇಶದಲ್ಲಿ ಕೋವಿಡ್ ಎರಡನೇ ಅಲೆಯ ತೀವ್ರತೆಯು ಕಡಿಮೆಯಾಗುತ್ತಿರುವುದರಿಂದ ಹಿಮಾಚಲ ಪ್ರದೇಶದತ್ತ ಪ್ರವಾಸಿಗರ ಚಿತ್ತ ಹರಿದಿದೆ.

ಬಿಸಿಗಾಳಿ ಹೆಚ್ಚಾಗಿರುವ ರಾಜ್ಯಗಳಿಂದ ಜನರು ಪ್ರವಾಸಿಗರ ನೆಚ್ಚಿನ ತಾಣಗಳಾದ ಶಿಮ್ಲಾ, ಕುಫ್ರಿ, ನರ್ಕಂದ, ಡಾಲ್ ಹೌಸಿ, ಮನಾಲಿ, ಲಾಹೌಲ್ ಸೇರಿದಂತೆ ಇತರ ಪ್ರದೇಶಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಿದ್ದಾರೆ.

ಮನಾಲಿಯಲ್ಲಿ ಪ್ರವಾಸಿಗರ ದಂಡು —ಪಿಟಿಐ ಚಿತ್ರ

ಕೋವಿಡ್ 2ನೇ ಅಲೆಯ ತೀವ್ರತೆ ಕಡಿಮೆಯಾಗುತ್ತಿರುವುದನ್ನು ಮನಗಂಡು ಪ್ರವಾಸೋದ್ಯಮದ ಚೇತರಿಕೆಗಾಗಿ ಅಲ್ಲಿನ ಸರ್ಕಾರ ಕೋವಿಡ್ ನಿಯಮಗಳನ್ನು ಸಡಿಲಗೊಳಿಸಿದೆ. ಹಾಗಾಗಿ, ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರು ವಾರಾಂತ್ಯದ ದಿನಗಳಲ್ಲಿ ಇಲ್ಲಿನ ಹೋಟೆಲ್‌ಗಳಲ್ಲಿ ಉಳಿಯುತ್ತಿದ್ದಾರೆ.

'ಕಳೆದ ಕೆಲವು ದಿನಗಳಿಂದ ಹೋಟೆಲ್‌ಗಳಲ್ಲಿ ಉಳಿಯುವವರ ಸಂಖ್ಯೆ ಹೆಚ್ಚಾಗಿದೆ. ಆದರೆ, ಪೂರ್ಣಪ್ರಮಾಣದಲ್ಲಿ ಇನ್ನೂ ಹೋಟೆಲ್‌ಗಳು ಭರ್ತಿಯಾಗಿಲ್ಲ' ಎಂದು ಪ್ರವಾಸೋದ್ಯಮ ಉದ್ಯಮ ಪಾಲುದಾರರ ಸಂಘದ ಅಧ್ಯಕ್ಷ ಮೊಹಿಂದರ್ ಸೇಥ್ ಹೇಳುತ್ತಾರೆ.

'ಆರ್‌ಟಿಪಿಸಿಆರ್ ವರದಿ ಮತ್ತು ಕೋವಿಡ್ ಪಾಸ್‌ಗಳಂತಹ ಷರತ್ತುಗಳನ್ನು ಸರ್ಕಾರವು ಹಿಂತೆಗೆದುಕೊಂಡಿರುವುದು ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡಿದಂತಾಗಿದೆ' ಎಂದು ಶಿಮ್ಲಾ ಹೋಟೆಲ್ ಮತ್ತು ರೆಸ್ಟೋರೆಂಟ್ ಅಸೋಸಿಯೇಷನ್ ಅಧ್ಯಕ್ಷ ಸಂಜಯ್ ಸೂದ್ ಅವರು ತಿಳಿಸಿದ್ದಾರೆ.

ಮತ್ತೊಂದೆಡೆ ಪ್ರವಾಸಿಗರ ಸಂಖ್ಯೆಯಲ್ಲಿನ ಹೆಚ್ಚಳವು ಕೋವಿಡ್ ಮೂರನೇ ಅಲೆ ಭೀತಿ ಉಂಟುಮಾಡಿದೆ. ರಾಜ್ಯಕ್ಕೆ ಭೇಟಿ ನೀಡುತ್ತಿರುವ ಪ್ರವಾಸಿಗರು ಕೋವಿಡ್ ಮಾರ್ಗಸೂಚಿಗಳನ್ನು ಪಾಲಿಸುತ್ತಿದ್ದಾರೆಯೇ, ಇಲ್ಲವೇ ಎಂಬುದನ್ನು ಖಚಿತಪಡಿಸಿಕೊಳ್ಳುವುದು ರಾಜ್ಯ ಸರ್ಕಾರಕ್ಕೆ ಸವಾಲಾಗಿದೆ.

ಯೋಗಿಗೆ ಅಭಿನಂದನೆ: ಆರ್‌ಎಲ್‌ಡಿ ಮುಖಂಡ ಜಯಂತ್ ಲೇವಡಿ

'ಸೈನಾ ನೆಹ್ವಾಲ್ ಸರ್ಕಾರಿ ಶಟ್ಲರ್'

ಲಖನೌ (ಪಿಟಿಐ): ಬ್ಯಾಡ್ಮಿಂಟನ್ ಆಟಗಾರ್ತಿ ಸೈನಾ ನೆಹ್ವಾಲ್ ಅವರನ್ನು 'ಸರ್ಕಾರಿ ಶಟ್ಲರ್' ಎಂದು ಆರ್‌ಎಲ್‌ಡಿ ಮುಖ್ಯಸ್ಥ ಜಯಂತ್ ಚೌಧರಿ ಅವರು ಕರೆದಿದ್ದಾರೆ. ಉತ್ತರ ಪ್ರದೇಶದಲ್ಲಿ ಜಿಲ್ಲಾ ಪಂಚಾಯಿತ್ ಅಧ್ಯಕ್ಷರ ಸ್ಥಾನಗಳಿಗೆ ನಡೆದ ಚುನಾವಣೆಗಳಲ್ಲಿ ಬಿಜೆಪಿ ಭಾರಿ ಗೆಲುವು ಸಾಧಿಸಿದೆ ಎಂದು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರನ್ನು ಸೈನಾ ಅಭಿನಂದಿಸಿದ್ದರು. ಇದಕ್ಕಾಗಿ ಜಯಂತ್ ಹೀಗೆ ವ್ಯಂಗ್ಯವಾಡಿದ್ದಾರೆ.

ಶನಿವಾರ ರಾತ್ರಿ ಟ್ವೀಟ್ ಮೂಲಕ ಯೋಗಿ ಆದಿತ್ಯನಾಥ್ ಅವರಿಗೆ ಅಭಿನಂದನೆ ಹೇಳಿದ್ದ ಸೈನಾ, 'ಜಿಲ್ಲಾ ಪಂಚಾಯತ್ ಅಧ್ಯಕ್ಷೀಯ ಚುನಾವಣೆಯಲ್ಲಿ ದೊಡ್ಡ ಮಟ್ಟದ ಜಯ ಸಾಧಿಸಿದ್ದಕ್ಕಾಗಿ ಯೋಗಿ ಆದಿತ್ಯನಾಥ್ ಅವರಿಗೆ ಹೃತ್ಪೂರ್ವಕ ಅಭಿನಂದನೆಗಳು' ಎಂದಿದ್ದರು.

ಸೈನಾ ಅವರ ಟ್ವೀಟ್‌ಗೆ ಒಂದೂವರೆ ಗಂಟೆಗಳ ಬಳಿಕ ಪ್ರತಿ ಟ್ವೀಟ್ ಮಾಡಿರುವ ಜಯಂತ್ ಚೌಧರಿ, 'ಜನರ ತೀರ್ಪನ್ನು ಛಿದ್ರಗೊಳಿಸುವ ಬಿಜೆಪಿಯ ಕೌಶಲವನ್ನು ಸರ್ಕಾರಿ ಶಟ್ಲರ್ ಗುರುತಿಸಿದ್ದಾರೆ. ಸೆಲೆಬ್ರಿಟಿಗಳು ಜನಾಭಿಪ್ರಾಯದ ಮೇಲೆ ಪ್ರಭಾವ ಬೀರಲು ಪ್ರಯತ್ನಿಸಿದಾಗ ಜನರು ಅದನ್ನು ಡ್ರಾಪ್ ಶಾಟ್ (ಬ್ಯಾಡ್ಮಿಂಟನ್ ಆಟದ ಒಂದು ಕ್ರಮ) ರೀತಿ ಆಡಬೇಕು' ಎಂದಿದ್ದಾರೆ.

> **ಜಿಲ್ಲಾ ಪಂಚಾಯಿತಿ ಚುನಾವಣೆಯಲ್ಲಿ ನಮ್ಮ ಪಕ್ಷದ ಪರವಾಗಿ ಫಲಿತಾಂಶ ಬಂದಿತ್ತು. ಆದರೆ ಅಧ್ಯಕ್ಷರ ಚುನಾವಣೆಯಲ್ಲಿ ಬಿಜೆಪಿ ಗೆದ್ದಿದೆ. ಇದೆಂಥಾ ಆಶ್ಚರ್ಯ**
> **ಅಖಿಲೇಶ್ ಯಾದವ್,** ಎಸ್‌ಪಿ ಮುಖ್ಯಸ್ಥ

ಜಿಲ್ಲಾ ಪಂಚಾಯಿತಿ ಅಧ್ಯಕ್ಷ ಚುನಾವಣೆಯಲ್ಲಿ ಭಾರಿ ಜಯ ಸಾಧಿಸಿರುವುದಾಗಿ ಬಿಜೆಪಿ ಘೋಷಿಸಿದೆ. ಆದರೆ, ಬಿಜೆಪಿ ಮತದಾರರನ್ನು ಅಪಹರಿಸಿದೆ ಮತ್ತು ಮತದಾನ ಮಾಡದಂತೆ ತಡೆದಿದೆ ಸಮಾಜವಾದಿ ಪಕ್ಷ ಆರೋಪಿಸಿದೆ.

ಪಂಚಾಯಿತಿ ಚುನಾವಣೆಗಳು ಪಕ್ಷದ ಚಿಹ್ನೆಯ ಅಡಿ ನಡೆದಿರಲಿಲ್ಲ. ಗೆದ್ದಿರುವ ಅಭ್ಯರ್ಥಿಗಳು ಯಾವ ಪಕ್ಷದ ಪರ ಅಭ್ಯರ್ಥಿಗಳು ಎಂದು ರಾಜ್ಯ ಚುನಾವಣಾ ಆಯೋಗ ಇನ್ನೂ ಘೋಷಣೆ ಹೊರಡಿಸಿಲ್ಲ. ಆದರೆ, 75 ಸ್ಥಾನಗಳಲ್ಲಿ 67 ಸ್ಥಾನಗಳನ್ನು ತಮ್ಮ ಪಕ್ಷದ ಬೆಂಬಲದ ಅಭ್ಯರ್ಥಿಗಳು ಗೆದ್ದಿದ್ದಾರೆ ಎಂದು ಬಿಜೆಪಿ ಘೋಷಿಸಿದೆ.

> **ಉತ್ತರ ಪ್ರದೇಶದಲ್ಲಿ ಬದಲಾವಣೆಯ ಗಾಳಿ ಬೀಸುತ್ತಿದೆ. ಆ ಚಂಡಮಾರುತದ ಹೆಸರು ಪ್ರಿಯಾಂಕಾ ಗಾಂಧಿ**
> **ಅಜಯ್ ಕುಮಾರ್ ಲಲ್ಲು,** ಉತ್ತರ ಪ್ರದೇಶ ಕಾಂಗ್ರೆಸ್ ಘಟಕದ ಅಧ್ಯಕ್ಷ

> **ಬಿಜೆಪಿಯ ವಕ್ತಾರನ ರೀತಿ ಬಿಎಸ್‌ಪಿ ಕೆಲಸ ಮಾಡುತ್ತಿದ್ದು, ಮಾಯಾವತಿ ಈ ಸತ್ಯ ಸಂಗತಿ ಒಪ್ಪಿಕೊಳ್ಳಬೇಕು**
> **ಅಶೋಕ್ ಸಿಂಗ್,** ಉತ್ತರ ಪ್ರದೇಶ ಕಾಂಗ್ರೆಸ್ ವಕ್ತಾರ

> **ಕಾಂಗ್ರೆಸ್ ಪದದಲ್ಲಿರುವ 'ಸಿ' ಅಕ್ಷರವು 'ಕುತಂತ್ರ' (ಕನ್ನಿಂಗ್) ಎಂಬುದನ್ನು ಪ್ರತಿನಿಧಿಸುತ್ತದೆ**
> **ಮಾಯಾವತಿ,** ಬಿಎಸ್‌ಪಿ ನಾಯಕಿ

ಸವಾಲಿಗೆ ಸಿದ್ಧ: ಯೋಗಿ: ಲಖನೌವರದಿ: 2022ರ ಉತ್ತರ ಪ್ರದೇಶ ವಿಧಾನ ಸಭಾ ಚುನಾವಣೆಯಲ್ಲಿ ಬಿಜೆಪಿ ಗೆಲ್ಲುವುದರಲ್ಲಿ ಅನುಮಾನವಿಲ್ಲ ಎಂದು ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಹೇಳಿದ್ದಾರೆ. ಬಿಜೆಪಿ ಅಧಿಕಾರ ಹಿಡಿಯುವುದಿಲ್ಲ ಎಂದು ಎಐಎಂಐಎಂ ಮುಖ್ಯಸ್ಥ ಅಸಾದುದ್ದೀನ್ ಒವೈಸಿ ನೀಡಿದ ಹೇಳಿಕೆಗೆ ಈ ಪ್ರತಿಕ್ರಿಯೆ ನೀಡಿದ್ದಾರೆ.

'ಎಸ್‌ಪಿ, ಬಿಎಸ್‌ಪಿ ಸಖ್ಯ ಅನಗತ್ಯ'

ನವದೆಹಲಿ (ಪಿಟಿಐ): ಉತ್ತರ ಪ್ರದೇಶದಲ್ಲಿ ಪ್ರಮುಖ ಪಕ್ಷಗಳ ಜೊತೆ ಹೊಂದಾಣಿಕೆ ಮಾಡಿಕೊಳ್ಳದೇ ಸ್ವಂತ ಬಲದ ಮೇಲೆ ಚುನಾವಣೆ ಎದುರಿಸಿ ಅಧಿಕಾರ ಹಿಡಿಯುವ ಶಕ್ತಿ ಪಕ್ಷಕ್ಕೆ ಇದೆ ಎಂದು ರಾಜ್ಯ ಕಾಂಗ್ರೆಸ್ ಘಟಕದ ಅಧ್ಯಕ್ಷ ಅಜಯ್ ಕುಮಾರ್ ಲಲ್ಲು ಅವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಮುಂಬರುವ ಚುನಾವಣೆಯಲ್ಲಿ ಯಾವುದೇ ಪ್ರಮುಖ ಪಕ್ಷಗಳ ಜೊತೆ ಹೊಂದಾಣಿಕೆ ಮಾಡಿಕೊಳ್ಳುವುದಿಲ್ಲ ಎಂದು ಬಿಎಸ್‌ಪಿ ಹಾಗೂ ಎಸ್‌ಪಿ ನಾಯಕರು ಹೇಳಿಕೆ ನೀಡಿದ ಕೆಲ ದಿನಗಳಲ್ಲಿ ಕಾಂಗ್ರೆಸ್ ಈ ಪ್ರತಿಕ್ರಿಯೆ ನೀಡಿದೆ.

ಪ್ರಿಯಾಂಕಾ ಗಾಂಧಿ ವಾದ್ರಾ ಅವರ ಮೇಲ್ವಿಚಾರಣೆಯಲ್ಲಿ ಕಾಂಗ್ರೆಸ್ ಪಕ್ಷವು ಉತ್ತರ ಪ್ರದೇಶದಲ್ಲಿ ಚುನಾವಣೆ ಎದುರಿಸಲಿದೆ. ಅವರ ನಾಯಕತ್ವದಲ್ಲಿ ಪಕ್ಷವು ಮೂರು ದಶಕಗಳ ನಂತರ ರಾಜ್ಯದಲ್ಲಿ ಪುನರಾಗಮನ ಮಾಡಲಿದೆ ಎಂದು ಅವರು ಹೇಳಿದರು.

ದಬ್ಬಾಳಿಕೆ ಮೂಲಕ ಆಡಳಿತ ನಡೆಸುತ್ತಿರುವ ರಾಜ್ಯ ಸರ್ಕಾರಕ್ಕೆ ಕಾಂಗ್ರೆಸ್ ಪಕ್ಷವು ದೊಡ್ಡ ಸವಾಲಾಗಿದೆ. 49 ಶಾಸಕರನ್ನು ಹೊಂದಿರುವ ಸಮಾಜವಾದಿ ಪಕ್ಷಕ್ಕೆ ಹೋಲಿಸಿದರೆ, ಕೇವಲ ಐವರು ಶಾಸಕರೊಂದಿಗೆ ತಮ್ಮ ಪಕ್ಷವು ಹೆಚ್ಚು ಪರಿಣಾಮಕಾರಿ ಪ್ರತಿಪಕ್ಷವಾಗಿ ಕೆಲಸ ಮಾಡಿರುವುದು ಸಾಬೀತಾಗಿದೆ ಎಂದು ಲಲ್ಲು ಹೇಳಿದ್ದಾರೆ.

ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವು 50 ಲಕ್ಷ, ವಿಧಾನಸಭಾ ಚುನಾವಣೆಯಲ್ಲಿ 51 ಲಕ್ಷ ಹಾಗೂ ಜಿಲ್ಲಾ ಪಂಚಾಯಿತಿ ಚುನಾವಣೆಯಲ್ಲಿ 1.52 ಕೋಟಿ ಮತಗಳನ್ನು ಪಡೆದಿದೆ. ಆದರೆ ಸಮಾಜವಾದಿ ಪಕ್ಷವು ಗೆದ್ದ ಅಭ್ಯರ್ಥಿಗಳ ಪಟ್ಟಿ ಪ್ರಕಟಿಸಿ ದೊಡ್ಡ ಸುದ್ದಿ ಮಾಡುತ್ತಿದೆ ಎಂದು ಲಲ್ಲು ಹೇಳಿದರು.

ವಿಧಾನಸಭಾ ಚುನಾವಣೆಗೆ ಪಕ್ಷವು ಸಿದ್ಧತೆ ನಡೆಸುತ್ತಿದ್ದು, ಬ್ಲಾಕ್ ಅಧ್ಯಕ್ಷರು, ಜಿಲ್ಲಾಧ್ಯಕ್ಷರು ಮತ್ತು ಇತರ ಪದಾಧಿಕಾರಿಗಳ ವಲಯವಾರು ತರಬೇತಿ ಶಿಬಿರಗಳನ್ನು ಆಯೋಜಿಸಿದೆ.

ಸಂಕ್ಷಿಪ್ತ ಸುದ್ದಿ

ಅಸ್ಸಾಂ: ಕಾಂಗ್ರೆಸ್‌ಗೆ ಮತ್ತೆ ಹಿನ್ನಡೆ

ಗುವಾಹಟಿ: ಕಾಂಗ್ರೆಸ್ ನೇತೃತ್ವದ ಏಳು ಪಕ್ಷಗಳ ಮೈತ್ರಿಕೂಟದಿಂದ ಹೊರನಡೆಯಲು ಬೋಡೊಲ್ಯಾಂಡ್ ಪೀಪಲ್ಸ್ ಫ್ರಂಟ್ (ಬಿಪಿಎಫ್) ನಿರ್ಧರಿಸಿದೆ. ಅಸ್ಸಾಂ ವಿಧಾನಸಭೆ ಚುನಾವಣೆಯಲ್ಲಿ ವಿರೋಧ ಪಕ್ಷಗಳ ಮೈತ್ರಿಕೂಟ ಸೋತ ಎರಡೇ ತಿಂಗಳುಗಳಲ್ಲಿ ಈ ಬೆಳವಣಿಗೆ ನಡೆದಿದೆ.

'ಬೋಡೊಲ್ಯಾಂಡ್ ಪ್ರದೇಶದ ಅಭಿವೃದ್ಧಿಗಾಗಿ ಸರ್ಕಾರದ ಜೊತೆ ಇರಲು ನಿರ್ಧರಿಸಿದ್ದೇವೆ. ಅಭಿವೃದ್ಧಿಗಾಗಿ ನಮಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಬೆಂಬಲ ಅಗತ್ಯವಿದೆ' ಎಂದು ಬಿಪಿಎಫ್ ನಾಯಕ, ಶಾಸಕ ದುರ್ಗದಾಸ್ ಬೋರೊ ಮಾಧ್ಯಮ ಪ್ರತಿನಿಧಿಗಳಿಗೆ ತಿಳಿಸಿದರು.

ನಿತ್ಯವೂ ಪ್ರತಿಭಟನೆ ರೈತ ಮುಖಂಡರ ಘೋಷಣೆ

ನವದೆಹಲಿ (ಪಿಟಿಐ): ಮೂರು ಕೃಷಿ ಕಾಯ್ದೆಗಳನ್ನು ವಿರೋಧಿಸಿ ಸಂಸತ್ತಿನ ಮುಂಗಾರು ಅಧಿವೇಶನದ ಅವಧಿಯಲ್ಲಿ ಸುಮಾರು 200 ಮಂದಿ ರೈತರು ಪ್ರತಿನಿತ್ಯ ಸಂಸತ್ ಭವನದ ಎದುರು ಪ್ರತಿಭಟಿಸುವರು ಎಂದು ಸಂಯುಕ್ತ ಕಿಸಾನ್ ಮೋರ್ಚಾ (ಎಸ್‌ಕೆಎಂ) ಭಾನುವಾರ ಪ್ರಕಟಿಸಿದೆ.

40 ವಿವಿಧ ಕೃಷಿಕ ಸಂಘಟನೆಗಳ ಒಕ್ಕೂಟವಾದ ಎಸ್‌ಕೆಎಂನ ಮುಖಂಡರು ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ್ದು, ಮೂರು ಕೃಷಿ ಕಾಯ್ದೆಗಳ ವಿರುದ್ಧ ಸಂಸತ್ತಿನ ಒಳಗೂ ಪ್ರತಿಭಟಿಸಬೇಕು ಎಂದು ಕೋರಿ ವಿರೋಧಪಕ್ಷದ ಎಲ್ಲ ಸಂಸದರಿಗೂ ಎಚ್ಚರಿಕೆ ಪತ್ರವನ್ನು ನೀಡಲಾಗುವುದು ಎಂದು ಅವರು ತಿಳಿಸಿದರು.

ಉಚಿತ ವಿದ್ಯುತ್ ಕೊಡಿ: ಸಿಧು ಪ್ರತಿಪಾದನೆ

ಚಂಡೀಗಡ (ಪಿಟಿಐ): ಪಂಜಾಬ್ ಸರ್ಕಾರದ ವಿರುದ್ಧ ಹರಿಹಾಯುವ ಕೆಲಸವನ್ನು ಕಾಂಗ್ರೆಸ್ ಮುಖಂಡ ನವಜೋತ್ ಸಿಂಗ್ ಸಿಧು ಅವರು ಭಾನುವಾರವೂ ಮುಂದುವರಿಸಿದ್ದಾರೆ.

ರಾಜ್ಯದಲ್ಲಿ ಪ್ರತಿ ಮನೆಗೆ 300 ಯೂನಿಟ್ ವಿದ್ಯುತ್ ಉಚಿತವಾಗಿ ನೀಡಬೇಕು ಮತ್ತು ದಿನದ 24 ಗಂಟೆಯೂ ವಿದ್ಯುತ್ ಸರಬರಾಜು ಇರುವಂತೆ ನೋಡಿಕೊಳ್ಳಬೇಕು ಎಂದು ಸಿಧು ಹೇಳಿದ್ದಾರೆ. ಜತೆಗೆ, ಗೃಹ ಮತ್ತು ಕೈಗಾರಿಕಾ ಬಳಕೆಯ ವಿದ್ಯುತ್ ದರ ಕಡಿತ ಮಾಡಬೇಕು ಎಂದೂ ಒತ್ತಾಯಿಸಿದ್ದಾರೆ.

ಕಛ್ ಜಿಲ್ಲೆಯಲ್ಲಿ ಲಘು ಭೂಕಂಪ

ಅಹಮದಾಬಾದ್ (ಪಿಟಿಐ): ಗುಜರಾತ್‌ನ ಕಛ್ ಜಿಲ್ಲೆಯಲ್ಲಿ ಭಾನುವಾರ ಬೆಳಿಗ್ಗೆ ಲಘು ಭೂಕಂಪ ಸಂಭವಿಸಿದೆ. ಬೆಳಿಗ್ಗೆ 7.40ರ ವೇಳೆಗಯಲ್ಲಿ ಭೂಕಂಪ ಸಂಭವಿಸಿದ್ದು, ರಿಕ್ಟರ್ ಮಾಪಕದಲ್ಲಿ 3.7 ತೀವ್ರತೆ ದಾಖಲಾಗಿದೆ ಎಂದು ಗಾಂಧಿನಗರದ ರಾಷ್ಟ್ರೀಯ ಭೂಕಂಪ ಮಾಪನ ಕೇಂದ್ರ ದೃಢಪಡಿಸಿದೆ. ಯಾವುದೇ ಸಾವು–ನೋವು ಸಂಭವಿಸಿದ ವರದಿಯಾಗಿಲ್ಲ. ಕಛ್ ಜಿಲ್ಲೆಯ ದುಧೈ ಈಶಾನ್ಯ ದಿಕ್ಕಿನಲ್ಲಿ 19 ಕಿ.ಮೀ ದೂರದಲ್ಲಿ, 11.8 ಕಿ.ಮೀ ಆಳದಲ್ಲಿ ಭೂಕಂಪನದ ಕೇಂದ್ರಬಿಂದುವನ್ನು ಗುರುತಿಸಲಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಆರ್‌ಒ ಶುದ್ಧೀಕರಣ ನಿಷೇಧಿಸಿ

ಹೆಚ್ಚು ನೀರು ವ್ಯರ್ಥ: ಹಸಿರು ನ್ಯಾಯಮಂಡಳಿ ಸೂಚನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಆರ್‌ಒ ನೀರು ಶುದ್ಧೀಕರಣದಲ್ಲಿ ನೀರು ಹೆಚ್ಚು ವ್ಯರ್ಥವಾಗುವುದನ್ನು ತಡೆಯುವ ಉದ್ದೇಶದಿಂದ ಶೀಘ್ರ ಕ್ರಮ ತೆಗೆದುಕೊಳ್ಳಿ ಎಂದು ಕೇಂದ್ರ ಪರಿಸರ ಮತ್ತು ಅರಣ್ಯ ಸಚಿವಾಲಯಕ್ಕೆ ಹಸಿರು ನ್ಯಾಯಮಂಡಳಿ (ಎನ್‌ಜಿಟಿ) ಸೂಚನೆ ನೀಡಿದೆ. ಪ್ರತಿ ಲೀಟರ್ ನೀರಿನಲ್ಲಿ 500 ಮಿಲಿಗ್ರಾಂಗಿಂತ ಕಡಿಮೆ ಟಿಡಿಎಸ್ (ನೀರಿನಲ್ಲಿ ಕರಗಿದ ಘನವಸ್ತುಗಳು) ಇರುವಲ್ಲಿ ಆರ್‌ಒ ಶುದ್ಧೀಕರಣಗಳನ್ನು ನಿಷೇಧಿಸಲು ಶೀಘ್ರವೇ ಅಧಿಸೂಚನೆ ಹೊರಡಿಸಿ ಎಂದು ನ್ಯಾಯಮಂಡಳಿಯು ಸಚಿವಾಲಯಕ್ಕೆ ಸೂಚನೆ ನೀಡಿದೆ.

ಹೆಚ್ಚು ನೀರು ವ್ಯರ್ಥ ಮಾಡುವ ಆರ್‌ಒ ಶುದ್ಧೀಕರಣ ಘಟಕಗಳನ್ನು ನಿಷೇಧಿಸಲು ನಿರ್ದೇಶನ ನೀಡಿ ಎಂದು ಫ್ರೆಂಡ್ಸ್ ಸ್ವಯಂಸೇವಾ ಸಂಸ್ಥೆ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ವೇಳೆ ನ್ಯಾಯಮಂಡಳಿಯ ಪ್ರಧಾನ ಪೀಠವು ಈ ಸೂಚನೆ ನೀಡಿದೆ. ಪ್ರತಿ ಲೀಟರ್ ನೀರಿನಲ್ಲಿ 500 ಮಿಲಿಗ್ರಾಂಗಿಂತ ಕಡಿಮೆ ಟಿಡಿಎಸ್ ಇರುವ ಆರ್‌ಒ ಘಟಕಗಳನ್ನು ನಿಷೇಧಿಸಿ ಎಂದು ಎನ್‌ಜಿಟಿ ಈ ಹಿಂದೆಯೇ ಸೂಚನೆ ನೀಡಿತ್ತು. ಆದರೆ ಸರ್ಕಾರವು ಕಾಲಾವಕಾಶ ಕೇಳಿತ್ತು. ಈಗ ಮುಂದಿನ ಜನವರಿ 25ರವರೆಗೆ ಒಳಗೆ ಈ ಕ್ರಮ ತೆಗೆದುಕೊಳ್ಳಿ ಎಂದು ಎನ್‌ಜಿಟಿ ಸೂಚನೆ ನೀಡಿದೆ.

> **ಆರ್‌ಒ ಶುದ್ಧೀಕರಣ ಘಟಕಗಳು ಕನಿಷ್ಠ ಶೇ 60ರಷ್ಟು ನೀರನ್ನು ಶುದ್ಧೀಕರಿಸಿಕೊಡಬೇಕು. ಆ ಮೂಲಕ ನೀರು ಅನಗತ್ಯವಾಗಿ ವ್ಯರ್ಥವಾಗುವುದನ್ನು ತಡೆಯಬಹುದು**
> **ಎನ್‌ಜಿಟಿ**

'ಅಂತರ್ಜಲದಲ್ಲಿ ಟಿಡಿಎಸ್‌ನ ಪ್ರಮಾಣ ಅತ್ಯಧಿಕ ಪ್ರಮಾಣದಲ್ಲಿ ಇದ್ದಾಗ, ಅದನ್ನು ಶುದ್ಧೀಕರಿಸಲು ಆರ್‌ಒ ಘಟಕಗಳ ಅಗತ್ಯವಿದೆ. ಆದರೆ ಈ ಘಟಕಗಳು ಅತಿಹೆಚ್ಚು ಪ್ರಮಾಣದ ನೀರನ್ನು ವ್ಯರ್ಥ ಮಾಡುತ್ತವೆ. ಇಂತಹ ಶುದ್ಧೀಕರಣಗಳಿಂದ ವಾಣಿಜ್ಯ ಹಿತಾಸಕ್ತಿಯಷ್ಟೇ ಸಾಧ್ಯವಾಗುತ್ತದೆ. ಪರಿಸರಕ್ಕೆ ಹಾನಿಯಾಗುತ್ತದೆ. ಇದನ್ನು ತಪ್ಪಿಸುವ ಮಹತ್ವದ ಉದ್ದೇಶವನ್ನು ವಿಳಂಬ ನೀತಿಯ ಮೂಲಕ ಪರಿಸರ ಸಚಿವಾಲಯವು ಸೋಲಿಸುತ್ತಿದೆ' ಎಂದು ಎನ್‌ಜಿಟಿ ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ.

'ಅತಿಹೆಚ್ಚು ನೀರು ವ್ಯರ್ಥ ಮಾಡುವ ಆರ್‌ಒ ಶುದ್ಧೀಕರಣ ಘಟಕಗಳಿಗೆ ಸಾರಾಸಗಟಾಗಿ ಅನುಮತಿ ನೀಡುವುದಕ್ಕಿಂತ, ಅವು ವ್ಯರ್ಥ ಮಾಡುವ ನೀರಿನ ಪ್ರಮಾಣವನ್ನು ನಿಯಂತ್ರಿಸುವುದು ಮುಖ್ಯ. ಇದಕ್ಕಾಗಿ ಜಲ ಸಂಪನ್ಮೂಲ ಇಲಾಖೆಗಳು, ಪಾಲಿಕೆಗಳು ಮುಂದಾಗಬೇಕು. ಆ ಮೂಲಕ ಭಾರಿ ಪ್ರಮಾಣದಲ್ಲಿ ಅನಗತ್ಯವಾಗಿ ನೀರು ವ್ಯರ್ಥವಾಗುವುದನ್ನು ತಪ್ಪಿಸಬಹುದು' ಎಂದು ಎನ್‌ಜಿಟಿ ಅಭಿಪ್ರಾಯಪಟ್ಟಿದೆ.

ಹೊಸ ಇ–ವಾಣಿಜ್ಯ ನಿಯಮ: ಟಾಟಾ, ಅಮೆಜಾನ್ ಕಳವಳ

ನವದೆಹಲಿ (ರಾಯಿಟರ್ಸ್): ಆನ್‌ಲೈನ್ ಮೂಲಕ ಉತ್ಪನ್ನಗಳನ್ನು ಮಾರಾಟ ಮಾಡುವವರಿಗೆ ಕಠಿಣ ನಿಯಮಗಳನ್ನು ಜಾರಿಗೆ ತರುವುದರಿಂದ ಇ-ವಾಣಿಜ್ಯ ವಹಿವಾಟಿನ ಮೇಲೆ ಕೆಟ್ಟ ಪರಿಣಾಮ ಉಂಟಾಗಬಹುದು ಎಂದು ಟಾಟಾ ಸಮೂಹ ಹಾಗೂ ಅಮೆಜಾನ್ ಕಂಪನಿ ಪ್ರತಿನಿಧಿಗಳು ಕೇಂದ್ರ ಸರ್ಕಾರಕ್ಕೆ ಹೇಳಿದ್ದಾರೆ.

ಇ–ವಾಣಿಜ್ಯ ವಹಿವಾಟಿಗೆ ಸಂಬಂಧಿಸಿದಂತೆ ಜಾರಿಗೆ ತರಲು ಕೇಂದ್ರವು ಪ್ರಸ್ತಾಪ ಮಾಡಿರುವ ಹೊಸ ನಿಯಮಗಳ ವಿಚಾರವಾಗಿ ಈ ಪ್ರತಿನಿಧಿಗಳು ತಮ್ಮಲ್ಲಿ ಇರುವ ಗೊಂದಲ ಹಾಗೂ ಕಳವಳವನ್ನು ಹಂಚಿಕೊಂಡಿದ್ದಾರೆ, ಪ್ರಸ್ತಾವಿತ ನಿಯಮಗಳಿಗೆ ಪ್ರತಿಕ್ರಿಯೆ ಸಲ್ಲಿಸಲು ನಿಗದಿ ಮಾಡಿರುವ ಗಡುವನ್ನು (ಜುಲೈ 6) ವಿಸ್ತರಿಸಬೇಕು ಎಂದು ಮನವಿ ಮಾಡಿದ್ದಾರೆ.

ಗ್ರಾಹಕರಿಗೆ ಹೆಚ್ಚಿನ ರಕ್ಷಣೆ ನೀಡುವ ಉದ್ದೇಶದಿಂದ ಜೂನ್ 21ರಂದು ಪ್ರಕಟಿಸಿರುವ ನಿಯಮಗಳ ಬಗ್ಗೆ ಇ–ಕಾಮರ್ಸ್ ಕಂಪನಿಗಳು ಕಳವಳ ವ್ಯಕ್ತಪಡಿಸಿವೆ. ಫ್ಲ್ಯಾಶ್ ಸೇಲ್‌ಗಳ ಮೇಲೆ ನಿಯಂತ್ರಣ ಹೇರುವುದು, ತಪ್ಪುದಾರಿಗೆ ಎಳೆಯುವ ಜಾಹೀರಾತುಗಳನ್ನು ನಿರ್ಬಂಧಿಸುವುದು ಹಾಗೂ ದೂರು ಸಲ್ಲಿಸುವ ವ್ಯವಸ್ಥೆಯೊಂದು ಕಡ್ಡಾಯವಾಗಿ ಇರಬೇಕು ಎಂಬ ಪ್ರಸ್ತಾವನೆಗಳು ಅಮೆಜಾನ್, ಫ್ಲಿಪ್‌ಕಾರ್ಟ್‌ನಂತಹ ಕಂಪನಿಗಳು ತಮ್ಮ ವಹಿವಾಟಿನ ಸ್ವರೂಪದ ಬಗ್ಗೆ ಮರುಪರಿಶೀಲನೆ ನಡೆಸುವ ಅಗತ್ಯವನ್ನು ಸೃಷ್ಟಿಸಬಹುದು.

'ಕೋವಿಡ್‌ನಿಂದಾಗಿ ಸಣ್ಣ ಪ್ರಮಾಣದ ವರ್ತಕರು ಈಗಾಗಲೇ ತೊಂದರೆಗೆ ಒಳಗಾಗಿದ್ದಾರೆ. ತನ್ನ ಮೂಲಕ ವಸ್ತುಗಳನ್ನು ಮಾರಾಟ ಮಾಡುವವರ ಮೇಲೆ ಹೊಸ ನಿಯಮಗಳು ಭಾರಿ ಪರಿಣಾಮ ಉಂಟುಮಾಡುತ್ತವೆ' ಎಂಬ ಅಭಿಪ್ರಾಯವನ್ನು ಅಮೆಜಾನ್ ವ್ಯಕ್ತಪಡಿಸಿದೆ ಎಂದು ಮೂಲಗಳು ತಿಳಿಸಿವೆ.

ಇ–ವಾಣಿಜ್ಯ ವಹಿವಾಟಿನಲ್ಲಿ ಇರುವ ಕಂಪನಿಗಳು ತಮಗೆ ಸಂಬಂಧಿಸಿದ ಇತರ ಕಂಪನಿಗಳ ವಸ್ತುಗಳನ್ನು ಮಾರಾಟ ಮಾಡುವಂತಿಲ್ಲ ಎಂದೂ ಹೊಸ ನಿಯಮಗಳಲ್ಲಿ ಹೇಳಲಾಗಿದೆ. ಇದರಿಂದ ಅಮೆಜಾನ್‌ಗೆ ತೊಂದರೆ ಆಗಲಿದೆ ಎನ್ನಲಾಗಿದೆ. ಅಮೆಜಾನ್ ಮೂಲಕ ವಸ್ತುಗಳನ್ನು ಮಾರಾಟ ಮಾಡುವ ಕ್ಲೌಡ್‌ಟೇಲ್ ಮತ್ತು ಅಪ್ಯಾರಿಯೊ ಕಂಪನಿಗಳಲ್ಲಿ ಅಮೆಜಾನ್ ಪರೋಕ್ಷವಾಗಿ ಪಾಲು ಹೊಂದಿದೆ.

ಹೊಸ ನಿಯಮಗಳಲ್ಲಿ ಸಮಸ್ಯೆಗಳಿವೆ. ಇದೇ ನಿಯಮ ಜಾರಿಗೆ ಬಂದರೆ ಟಾಟಾದ ಆನ್‌ಲೈನ್ ಮಾರುಕಟ್ಟೆ ಮೂಲಕ ಸ್ಟಾರ್‌ಬಕ್ಸ್‌ನ ಉತ್ಪನ್ನಗಳ ಮಾರಾಟವನ್ನು ನಿಲ್ಲಿಸಬೇಕಾಗುತ್ತದೆ. ಏಕೆಂದರೆ, ಅದರಲ್ಲಿ ಟಾಟಾದ ಪಾಲು ಇದೆ ಎಂದು ಟಾಟಾ ಸಮೂಹದ ಪ್ರತಿನಿಧಿಯೊಬ್ಬರು ಹೇಳಿದ್ದಾರೆ ಎಂದು ಗೊತ್ತಾಗಿದೆ. ಈ ಕುರಿತು ಪ್ರತಿಕ್ರಿಯೆಗೆ ಟಾಟಾ ಸಮೂಹ ನಿರಾಕರಿಸಿದೆ.

ಗ್ರಾಹಕರ ಹಿತ ರಕ್ಷಣೆಯನ್ನು ಗಮನದಲ್ಲಿ ಇರಿಸಿಕೊಂಡು ಈ ನಿಯಮಗಳನ್ನು ರೂಪಿಸಲಾಗಿದೆ. ಬೇರೆ ಕೆಲವು ದೇಶಗಳಲ್ಲಿ ಇರುವಷ್ಟು ಕಠಿಣವಾಗಿ ಇವು ಇಲ್ಲ ಎಂದು ಕೇಂದ್ರ ಗ್ರಾಹಕರ ವ್ಯವಹಾರಗಳ ಸಚಿವಾಲಯದ ಅಧಿಕಾರಿಗಳು ಕಂಪನಿಗಳ ಪ್ರತಿನಿಧಿಗಳ ಬಳಿ ಹೇಳಿದ್ದಾರೆ ಎಂದು ಮೂಲಗಳು ವಿವರಿಸಿವೆ. ಈ ಕುರಿತು ಪ್ರತಿಕ್ರಿಯೆ ಕೇಳಿದಾಗ ಸಚಿವಾಲಯವು ಉತ್ತರಿಸಲಿಲ್ಲ.

ಜನವರಿಗೂ ಮೊದಲು ಎಲ್‌ಐಸಿ ಐಪಿಒ

ನವದೆಹಲಿ (ಪಿಟಿಐ): ಭಾರತೀಯ ಜೀವ ವಿಮಾ ನಿಗಮದ (ಎಲ್‌ಐಸಿ) ಷೇರುಗಳನ್ನು ಜನವರಿಗೂ ಮೊದಲೇ ಸಾರ್ವಜನಿಕರಿಗೆ ಖರೀದಿಗೆ (ಐಪಿಒ) ಮುಕ್ತವಾಗಿಸುವ ಗುರಿಯನ್ನು ಕೇಂದ್ರ ಸರ್ಕಾರ ಹೊಂದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಇದರ ಭಾಗವಾಗಿ, ಎಲ್‌ಐಸಿ ಷೇರು ವಿಕ್ರಯವನ್ನು ನಿರ್ವಹಿಸಲು ಮರ್ಚೆಂಟ್ ಬ್ಯಾಂಕರ್‌ಗಳಿಂದ ಈ ತಿಂಗಳಿನಲ್ಲಿ ಬಿಡ್ ಆಹ್ವಾನಿಸುವ ಸಾಧ್ಯತೆ ಇದೆ.

ಐಪಿಒಗೂ ಮುನ್ನ ಎಲ್‌ಐಸಿಯ ಮೌಲ್ಯವನ್ನು ನಿರ್ಣಯಿಸಲು ಹೂಡಿಕೆ ಮತ್ತು ಸಾರ್ವಜನಿಕ ಸ್ವತ್ತು ನಿರ್ವಹಣಾ ಇಲಾಖೆಯು (ಡಿಐಪಿಎಎಂ) ಮಿಲಿಮನ್ ಅಡ್ವೈಸರ್ಸ್ ಎಲ್‌ಎಲ್‌ಪಿ ಇಂಡಿಯಾ ಕಂಪನಿಯನ್ನು ನೇಮಕ ಮಾಡಿದೆ. ಈ ಕಂಪನಿಯು ಮುಂದಿನ ಕೆಲವೇ ವಾರಗಳಲ್ಲಿ ಎಲ್‌ಐಸಿಯ ಮೌಲ್ಯವನ್ನು ನಿರ್ಣಯಿಸಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಷೇರುವಿಕ್ರಯ ಗುರಿ ತಲುಪಲು ಎಲ್‌ಐಸಿಯ ಐಪಿಒ ಕೇಂದ್ರ ಸರ್ಕಾರಕ್ಕೆ ಬಹಳ ಮುಖ್ಯವಾಗಿದೆ. ಪ್ರಸಕ್ತ ಹಣಕಾಸು ವರ್ಷದಲ್ಲಿ ಷೇರು ಮಾರಾಟ ಮತ್ತು ಖಾಸಗೀಕರಣದಿಂದ ಒಟ್ಟಾರೆ ₹ 1.75 ಲಕ್ಷ ಕೋಟಿ ಸಂಗ್ರಹಿಸುವ ಗುರಿಯನ್ನು ಸರ್ಕಾರ ಇಟ್ಟುಕೊಂಡಿದೆ.

ಮಧ್ಯಪ್ರದೇಶ: ₹ 100ರ ಗಡಿ ದಾಟಿದ ಡೀಸೆಲ್ ದರ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ದೇಶದಾದ್ಯಂತ ಭಾನುವಾರ ಪೆಟ್ರೋಲ್, ಡೀಸೆಲ್ ದರ ಹೆಚ್ಚಿಸಿವೆ. ಇದರಿಂದಾಗಿ ಮಧ್ಯಪ್ರದೇಶದಲ್ಲಿ ಡೀಸೆಲ್ ದರವು ₹ 100ರ ಗಡಿ ದಾಟಿದ್ದರೆ, ಸಿಕ್ಕಿಂನಲ್ಲಿ ಪೆಟ್ರೋಲ್ ದರವು ₹ 100ಕ್ಕಿಂತ ಜಾಸ್ತಿ ಆಗಿದೆ.

ತೈಲ ಕಂಪನಿಗಳು ಭಾನುವಾರ ಪೆಟ್ರೋಲ್ ದರವನ್ನು ಲೀಟರಿಗೆ 35 ಪೈಸೆ ಮತ್ತು ಡೀಸೆಲ್ ದರವನ್ನು 18 ಪೈಸೆ ಹೆಚ್ಚಿಸಿವೆ. ಎರಡು ತಿಂಗಳಲ್ಲಿ ಪೆಟ್ರೋಲ್ ದರವು 34 ಬಾರಿ ಮತ್ತು ಡೀಸೆಲ್ ದರವು 33 ಬಾರಿ ಹೆಚ್ಚಾದಂತಾಗಿದೆ.

ಸಿಕ್ಕಿಂನ ಗ್ಯಾಂಗ್ಟಾಕ್‌ನಲ್ಲಿ ಪೆಟ್ರೋಲ್ ದರವು ₹ 100.15ರಷ್ಟಾಗಿದ್ದು, ಡೀಸೆಲ್ ದರ ₹ 91.55ಕ್ಕೆ ತಲುಪಿದೆ.

ಆಗಸ್ಟ್‌ನಿಂದ ಬೆಲೆ ಏರಿಕೆಗೆ ಹೋಂಡಾ ಚಿಂತನೆ

ನವದೆಹಲಿ (ಪಿಟಿಐ): ತಯಾರಿಕಾ ವೆಚ್ಚ ಹೆಚ್ಚುತ್ತಿರುವ ಕಾರಣದಿಂದಾಗಿ ಆಗಸ್ಟ್‌ನಿಂದ ಎಲ್ಲ ಮಾದರಿ ವಾಹನಗಳ ಬೆಲೆ ಹೆಚ್ಚಿಸುವ ಆಲೋಚನೆ ನಡೆಸಿರುವುದಾಗಿ ಹೋಂಡಾ ಕಾರ್ಸ್ ಇಂಡಿಯಾದ ಹಿರಿಯ ಉಪಾಧ್ಯಕ್ಷ ರಾಜೇಶ್ ಗೋಯಲ್ ಹೇಳಿದ್ದಾರೆ.

ಉಕ್ಕು, ಅಲ್ಯುಮಿನಿಯಂ ಮತ್ತು ಇತರ ಲೋಹಗಳ ಬೆಲೆ ಗಣನೀಯವಾಗಿ ಹೆಚ್ಚಾಗುತ್ತಿದೆ. ಕೆಲವು ಲೋಹಗಳ ಬೆಲೆ ದಾಖಲೆ ಮಟ್ಟದಲ್ಲಿದ್ದು, ತಯಾರಿಕಾ ವೆಚ್ಚ ಹೆಚ್ಚಳಕ್ಕೆ ಕಾರಣವಾಗುತ್ತಿದೆ ಎಂದು ಅವರು ತಿಳಿಸಿದ್ದಾರೆ.

ಕಂಪನಿಯು ಸಿಟಿ ಮತ್ತು ಅಮೇಜ್ ಕಾರುಗಳನ್ನೂ ಒಳಗೊಂಡಂತೆ ಹಲವು ಮಾದರಿಯ ಕಾರುಗಳನ್ನು ಮಾರಾಟ ಮಾಡುತ್ತಿದೆ.

'ಹೆಚ್ಚುವರಿ ವೆಚ್ಚದಲ್ಲಿ ಎಷ್ಟನ್ನು ಕಂಪನಿಯೇ ಹೊರಲು ಸಾಧ್ಯವಿದೆ ಹಾಗೂ ಗ್ರಾಹಕರಿಗೆ ಎಷ್ಟು ವೆಚ್ಚವನ್ನು ದಾಟಿಸುವುದು ಅನಿವಾರ್ಯ ಆಗಬಹುದು ಎಂಬುದರ ಕುರಿತು ಚರ್ಚಿಸುತ್ತಿದ್ದೇವೆ. ಪರಿಷ್ಕೃತ ಬೆಲೆಗಳನ್ನು ಮುಂದಿನ ತಿಂಗಳಿನಿಂದ ಅನ್ವಯಿಸಲಾಗುವುದು' ಎಂದು ಅವರು ಹೇಳಿದ್ದಾರೆ.

ಎಂಎಫ್: ಏಳು ತಪ್ಪು ಕಲ್ಪನೆಗಳು

ಬಂಡವಾಳ ಮಾರುಕಟ್ಟೆ

ಅವಿನಾಶ್ ಕೆ.ಟಿ.

ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡುವವರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಳವಾಗುತ್ತಿದೆ. 2011ರಲ್ಲಿ ಮ್ಯೂಚುವಲ್ ಫಂಡ್‌ಗಳಲ್ಲಿ ಸುಮಾರು ₹ 6 ಲಕ್ಷ ಕೋಟಿ ಮೊತ್ತ ಹೂಡಿಕೆಯಾಗಿತ್ತು. ಈಗ, ಅಂದರೆ 2021ರಲ್ಲಿ, ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಆಗಿರುವ ಮೊತ್ತ (AUM- Asset Under Management) ₹ 31 ಲಕ್ಷ ಕೋಟಿಗೆ ಏರಿಕೆಯಾಗಿದೆ. ಇಷ್ಟೆಲ್ಲಾ ಆಗಿದ್ದರೂ ಮ್ಯೂಚುವಲ್ ಫಂಡ್‌ಗಳ ಬಗ್ಗೆ ಹಲವರಲ್ಲಿ ತಪ್ಪು ಕಲ್ಪನೆಗಳಿವೆ. ಈ ಕುರಿತು ಬೆಳಕು ಚೆಲ್ಲುವ ಮಾಹಿತಿ ಇಲ್ಲಿದೆ.

1) ಮ್ಯೂಚುವಲ್ ಫಂಡ್ ಹೂಡಿಕೆ ತಜ್ಞರಿಗೆ ಮಾತ್ರ!: ಮ್ಯೂಚವಲ್ ಫಂಡ್ ಮೂಲಕ ಹೂಡಿಕೆ ಮಾಡುವುದು ಜನಸಾಮಾನ್ಯರಿಗೆ ಹೇಳಿ ಮಾಡಿಸಿದ್ದಲ್ಲ, ಮಾರುಕಟ್ಟೆ ಬಗ್ಗೆ ಸರಿಯಾಗಿ ಜ್ಞಾನವಿರುವವರಿಗೆ ಮಾತ್ರ ಅದು ಎನ್ನುವ ತಪ್ಪು ಕಲ್ಪನೆಯಿದೆ. ಮ್ಯೂಚುವಲ್ ಫಂಡ್ ರೂಪುಗೊಂಡಿರುವುದೇ ಹಣಕಾಸು ನಿರ್ವಹಣೆ ಅಷ್ಟಾಗಿ ಗೊತ್ತಿಲ್ಲದ, ಷೇರು ಮಾರುಕಟ್ಟೆ ಬಗ್ಗೆ ಕಲಿತು ಹೂಡಿಕೆ ಮಾಡಲು ಆಗದ ಜನರಿಗಾಗಿ. ಇಲ್ಲಿ ನಿಮ್ಮ ಹಣವನ್ನು ಎಲ್ಲಿ ಹೂಡಿಕೆ ಮಾಡಬೇಕು ಎಂಬುದನ್ನು ನಿಮ್ಮ ಪರವಾಗಿ ವೃತ್ತಿಪರ ಫಂಡ್ ಮ್ಯಾನೇಜರ್‌ಗಳು ನೋಡಿಕೊಳ್ಳುತ್ತಾರೆ.

ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡಬೇಕಾದರೆ ಕಂಪನಿಗಳ ಬಗ್ಗೆ ಅಧ್ಯಯನ ಮಾಡಬೇಕು, ನಿರ್ದಿಷ್ಟ ಕಂಪನಿ ಭವಿಷ್ಯದಲ್ಲಿ ಹೇಗೆ ಮುನ್ನಡೆಯಲಿದೆ ಎಂಬ ಅಂದಾಜು ಮಾಡಿಕೊಳ್ಳಬೇಕು. ಆದರೆ ಮ್ಯೂಚುವಲ್ ಫಂಡ್‌ಗಳಲ್ಲಿ ಉತ್ತಮವಾದ ಒಂದು ಫಂಡ್ ಆಯ್ಕೆ ಮಾಡಿ ನಿರ್ದಿಷ್ಟ ಸಮಯಕ್ಕೆ ಹಣ ಹಾಕಿದರೆ ಆಯಿತು. ಇನ್ನುಳಿದ ಕೆಲಸವನ್ನು ಫಂಡ್ ಮ್ಯಾನೇಜರ್ ಮಾಡುತ್ತಾರೆ.

2) ಮ್ಯೂಚುವಲ್ ಫಂಡ್ ಹೂಡಿಕೆ ಅಂದರೆ ಷೇರು ಮಾರುಕಟ್ಟೆ ಹೂಡಿಕೆ!: ಮ್ಯೂಚುವಲ್ ಫಂಡ್ ಅಂದ ತಕ್ಷಣ ಅದು ಷೇರು ಮಾರುಕಟ್ಟೆ ಹೂಡಿಕೆಯಷ್ಟೇ ಎಂಬ ತಪ್ಪು ಕಲ್ಪನೆಯಿದೆ. ಆದರೆ, ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡುವುದರ ಜತೆಗೆ ನಿರ್ದಿಷ್ಟ ಆದಾಯ ತಂದುಕೊಡುವ ಇತರ ಹೂಡಿಕೆ ಆಯ್ಕೆಗಳು ಕೂಡ ಮ್ಯೂಚುವಲ್ ಫಂಡ್‌ಗಳಲ್ಲಿ ಇವೆ. ಸರ್ಕಾರಿ ಬಾಂಡ್‌ಗಳು, ಕಾರ್ಪೊರೇಟ್ ಬಾಂಡ್‌ಗಳು, ಟ್ರೆಷರಿ ಬಿಲ್‌ಗಳು, ಅವಧಿ ಠೇವಣಿಗಳಲ್ಲೂ ಮ್ಯೂಚುವಲ್ ಫಂಡ್‌ಗಳು ಹೂಡಿಕೆ ಮಾಡುತ್ತವೆ. ಇಷ್ಟೇ ಅಲ್ಲ ಚಿನ್ನ, ಕಮಾಡಿಟಿ ಮತ್ತು ರಿಯಲ್ ಎಸ್ಟೇಟ್ ಹೂಡಿಕೆ ಆಯ್ಕೆಗಳನ್ನು ಕೂಡ ಮ್ಯೂಚುವಲ್ ಫಂಡ್‌ಗಳು ಒದಗಿಸುತ್ತವೆ.

3) ಮ್ಯೂಚುವಲ್ ಫಂಡ್ ದೀರ್ಘಾವಧಿಗೆ ಮಾತ್ರ: ಮ್ಯೂಚುವಲ್ ಫಂಡ್ ಹೂಡಿಕೆಗಳು ದೀರ್ಘಾವಧಿಗೆ ಮಾತ್ರ ಎನ್ನುವ ಅಭಿಪ್ರಾಯ ಕೆಲವರಲ್ಲಿದೆ. ಆದರೆ ಮ್ಯೂಚುವಲ್ ಫಂಡ್ ಅಲ್ಪಾವಧಿ, ದೀರ್ಘಾವಧಿ, ಮಧ್ಯಮ ಅವಧಿಗೂ ಸರಿ ಹೊಂದುತ್ತದೆ. ನೀವು ಮೂರು ವರ್ಷಗಳಿಗಿಂತ ಕಡಿಮೆ ಅವಧಿಗೆ ಹೂಡಿಕೆ ಮಾಡುತ್ತೀರಿ ಎಂದಾದಲ್ಲಿ ಡೆಟ್ ಫಂಡ್ ಅಥವಾ ಹೈಬ್ರೀಡ್ ಫಂಡ್ ಆಯ್ಕೆ ಮಾಡಿಕೊಳ್ಳಬಹುದು. ಮೂರು ವರ್ಷಗಳಿಗಿಂತ ಹೆಚ್ಚು ಅವಧಿಗೆ ಹೂಡಿಕೆ ಮಾಡುವ ಮನಸ್ಸಿದ್ದರೆ ಈಕ್ವಿಟಿ ಫಂಡ್‌ಗಳನ್ನು ಪರಿಗಣಿಸಬಹುದು. ಡೆಟ್ ಫಂಡ್‌ಗಳಲ್ಲಿ 1 ದಿನ, 1 ತಿಂಗಳ ಅವಧಿಗೂ ಹೂಡಿಕೆ ಸಾಧ್ಯವಿದೆ.

4) ಮ್ಯೂಚುವಲ್ ಫಂಡ್‌ನಲ್ಲಿ ರಿಸ್ಕ್ ಜಾಸ್ತಿ: ಯಾವ ಮ್ಯೂಚುವಲ್ ಫಂಡ್ ಕೂಡ ಹೂಡಿಕೆ ಮೊತ್ತಕ್ಕೆ ಪೂರ್ವನಿರ್ಧರಿತ ಲಾಭದ ಖಾತರಿ ನೀಡುವುದಿಲ್ಲ ಎನ್ನುವುದು ನಿಜ. ಆದರೆ ಮ್ಯೂಚುವಲ್ ಫಂಡ್ ಅಂದರೆ ಬರೀ ರಿಸ್ಕ್ ಅನ್ನುವುದು ವಾಸ್ತವವಲ್ಲ. ಲಿಕ್ವಿಡ್ ಫಂಡ್‌ಗಳು ತೀರಾ ಕಡಿಮೆ ರಿಸ್ಕ್ ಹೊಂದಿದ್ದರೆ, ಈಕ್ವಿಟಿ ಸ್ಮಾಲ್ ಕ್ಯಾಪ್ ಫಂಡ್ ಮತ್ತು ಸೆಕ್ಟೋರಲ್ ಫಂಡ್‌ಗಳು ಅತಿ ಹೆಚ್ಚು ರಿಸ್ಕ್ ಹೊಂದಿವೆ.

5) ಮ್ಯೂಚುವಲ್ ಫಂಡ್ ಶೇ 12ರಿಂದ ಶೇ 16ರಷ್ಟು ಲಾಭಾಂಶ ಕೊಡುತ್ತದೆ: ಮ್ಯೂಚುವಲ್ ಫಂಡ್‌ಗಳು ಇಂತಿಷ್ಟೇ ಲಾಭಾಂಶ ಕೊಡುತ್ತವೆ ಎಂದು ಹೇಳುವುದು ತಪ್ಪು. ಉದಾಹರಣೆಗೆ ಹೇಳುವುದಾದರೆ 2018-19ರಲ್ಲಿ ಮ್ಯೂಚುವಲ್ ಫಂಡ್‌ಗಳು ನಕಾರಾತ್ಮಕ ಲಾಭ ಕೊಟ್ಟಿದ್ದವು. ಆದರೆ 2020ರಲ್ಲಿ ಶೇ 80ರಷ್ಟು ಲಾಭಾಂಶ ಕೊಟ್ಟಿವೆ. ಅಂದರೆ ಮ್ಯೂಚುವಲ್ ಫಂಡ್ ಲಾಭದ ಲೆಕ್ಕಾಚಾರ ಮಾರುಕಟ್ಟೆ ಮತ್ತು ಇನ್ನಿತರ ಹಲವು ಅಂಶಗಳ ಮೇಲೆ ಅವಲಂಬಿತವಾಗಿದೆ.

6) ಮ್ಯೂಚುವಲ್ ಫಂಡ್ ಹೂಡಿಕೆಗೆ ಹೆಚ್ಚು ಹಣ ಬೇಕು: ₹ 100 ಇದ್ದರೂ ಸಾಕು ಮ್ಯೂಚುವಲ್ ಫಂಡ್ ಮೂಲಕ ಹೂಡಿಕೆ ಮಾಡಬಹುದು. ಆದರೆ, ಮ್ಯೂಚುವಲ್ ಫಂಡ್ ಹೂಡಿಕೆಗೆ ದೊಡ್ಡ ಮೊತ್ತ ಬೇಕು ಎಂಬ ತಪ್ಪು ಕಲ್ಪನೆ ಅನೇಕರಲ್ಲಿದೆ.

7) ಡೈರೆಕ್ಟ್ ಪ್ಲ್ಯಾನ್‌ಗಿಂತ ರೆಗ್ಯುಲರ್ ಪ್ಲ್ಯಾನ್‌ಗಳು ಅಗ್ಗ: ಡೈರೆಕ್ಟ್ ಮ್ಯೂಚುವಲ್ ಫಂಡ್ ಪ್ಲ್ಯಾನ್‌ಗಳಲ್ಲಿ ಕಮಿಷನ್ ಇರುವುದಿಲ್ಲ. ಹಾಗಾಗಿ, ಹೂಡಿಕೆದಾರನಿಗೆ ಲಾಭ ಹೆಚ್ಚು. ರೆಗ್ಯೂಲರ್ ಮ್ಯೂಚುವಲ್ ಫಂಡ್‌ಗಳಲ್ಲಿ ಕಮಿಷನ್ ಇರುವುದರಿಂದ ಹೂಡಿಕೆದಾರನ ಕೈಸೇರುವ ಲಾಭದ ಮೊತ್ತ ಕಡಿಮೆ. ಆದರೆ ಕೆಲವು ಏಜೆಂಟರು ಡೈರೆಕ್ಟ್ ಪ್ಲ್ಯಾನ್‌ಗಳೇ ದುಬಾರಿ ಎಂದು ಹೂಡಿಕೆದಾರರ ಹಾದಿ ತಪ್ಪಿಸುತ್ತಾರೆ.

(ಲೇಖಕ: ಇಂಡಿಯನ್ ಮನಿ ಡಾಟ್ ಕಾಂನ ಹಣಕಾಸು ಸಲಹಾ ವಿಭಾಗದ ಮುಖ್ಯಸ್ಥ)

ಷೇರುಪೇಟೆ

ಷೇರುಪೇಟೆಯಲ್ಲಿ ಅನಿಶ್ಚಿತತೆಯ ಓಟ

ಸಾರ್ವಕಾಲಿಕ ದಾಖಲೆಯ ಏರಿಕೆ ಕಂಡರೂ ಜುಲೈ 2ಕ್ಕೆ ಕೊನೆಗೊಂಡ ವಾರದಲ್ಲಿ ಷೇರುಪೇಟೆ ಸೂಚ್ಯಂಕಗಳು ಕುಸಿತ ಕಂಡಿವೆ. 52,484 ಅಂಶಗಳಲ್ಲಿ ವಹಿವಾಟು ಮುಗಿಸಿರುವ ಸೆನ್ಸೆಕ್ಸ್ ವಾರದ ಅವಧಿಯಲ್ಲಿ ಶೇ 0.83ರಷ್ಟು ಇಳಿಕೆ ಕಂಡಿದೆ. 17,722 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ನಿಫ್ಟಿ ವಾರಾಂತ್ಯಕ್ಕೆ ಶೇ 0.87ರಷ್ಟು ತಗ್ಗಿದೆ.

ಕೋವಿಡ್ ಮೂರನೇ ಅಲೆಯ ಆತಂಕ, ಡೆಲ್ಟಾ ಪ್ಲಸ್ ರೂಪಾಂತರಿ ತಳಿಯ ಪ್ರಕರಣಗಳಲ್ಲಿ ಹೆಚ್ಚಳ, 2022ರಲ್ಲಿ ವಸೂಲಾಗದ ಸಾಲದ ಪ್ರಮಾಣ ಹೆಚ್ಚಳವಾಗುವ ಬಗ್ಗೆ ಆರ್‌ಬಿಐ ಹೇಳಿರುವ ಮಾತುಗಳು ಸೇರಿ ಪ್ರಮುಖ ಬೆಳವಣಿಗೆಗಳು ನಕಾರಾತ್ಮಕ ಪರಿಣಾಮ ಬೀರಿವೆ. ಆದರೆ ವಾಹನ ಮಾರಾಟ ಅಂಕಿ-ಅಂಶದಲ್ಲಿ ಸಕಾರಾತ್ಮಕತೆ, ಕೋವಿಡ್ ಲಸಿಕೆಗೆ ವೇಗ, ಲಾಕ್‌ಡೌನ್ ಸಡಿಲ ಸೇರಿ ಕೆಲವು ಬೆಳವಣಿಗೆಗಳು ಮಾರುಕಟ್ಟೆಯಲ್ಲಿ ಆಗಬಹುದಾಗಿದ್ದ ಮತ್ತಷ್ಟು ನಷ್ಟವನ್ನು ತಡೆಯುವಲ್ಲಿ ನೆರವಾಗಿವೆ.

ವಲಯವಾರು ಪ್ರಗತಿಯಲ್ಲಿ ನಿಫ್ಟಿ ಫಾರ್ಮಾ ಶೇ 3ರಷ್ಟು ಗಳಿಕೆ ಕಂಡಿದೆ, ಬ್ಯಾಂಕ್ ಸೂಚ್ಯಂಕ ಶೇ 1.6ರಷ್ಟು, ಲೋಹ ವಲಯ ಮತ್ತು ಮಾಧ್ಯಮ ವಲಯ ಸುಮಾರು ಶೇ 2ರಷ್ಟು ಕುಸಿದಿವೆ.

ಏರಿಕೆ–ಇಳಿಕೆ: ನಿಫ್ಟಿಯಲ್ಲಿ ಡಿವೀಸ್ ಲ್ಯಾಬ್ಸ್ ಶೇ 6ರಷ್ಟು, ಡಾ ರೆಡ್ಡೀಸ್ ಶೇ 5ರಷ್ಟು, ಸಿಪ್ಲಾ ಶೇ 2ರಷ್ಟು, ಹಿಂದೂಸ್ಥಾನ್ ಯುನಿಲಿವರ್ ಶೇ 1.5ರಷ್ಟು, ಟಾಟಾ ಮೋಟರ್ಸ್ ಶೇ 1.5ರಷ್ಟು, ಎನ್‌ಟಿಪಿಸಿ ಶೇ 1.2ರಷ್ಟು, ರಿಲಯನ್ಸ್ ಶೇ 1.1ರಷ್ಟು ಗಳಿಸಿವೆ. ಎಚ್‌ಡಿಎಫ್‌ಸಿ ಲೈಫ್ ಶೇ 6ರಷ್ಟು, ಶ್ರೀ ಸಿಮೆಂಟ್ ಶೇ 6ರಷ್ಟು, ಬಜಾಜ್ ಫಿನ್‌ಸರ್ವ್ ಶೇ 6ರಷ್ಟು, ಬ್ರಿಟಾನಿಯಾ ಶೇ 3ರಷ್ಟು, ಜೆಎಸ್‌ಡಬ್ಲ್ಯು ಸ್ಟೀಲ್ ಶೇ 3ರಷ್ಟು, ಎಲ್‌ಆ್ಯಂಡ್‌ಟಿ ಶೇ 3ರಷ್ಟು, ಅಲ್ಟ್ರಾಟೆಕ್ ಸಿಮೆಂಟ್ ಶೇ 3ರಷ್ಟು ಮತ್ತು ಟಾಟಾ ಸ್ಟೀಲ್ ಶೇ 3ರಷ್ಟು ಕುಸಿದಿವೆ.

ಮುನ್ನೋಟ: ಕಳೆದ ನಾಲ್ಕು ವಾರಗಳಿಂದ ನಿಫ್ಟಿ 15,500ರಿಂದ 15,900 ಅಂಶಗಳ ಆಸುಪಾಸಿನಲ್ಲೇ ಏರಿಳಿತ ಕಾಣುತ್ತಿದೆ. ಅಂದರೆ ಅನಿಶ್ಚಿತ ಸ್ಥಿತಿಯಲ್ಲಿ ಮಾರುಕಟ್ಟೆ ಇದೆ ಎನ್ನುವುದು ಸ್ಪಷ್ಟವಾಗುತ್ತದೆ. ಈ ವಾರ ಅಮೆರಿಕದ ಉದ್ಯೋಗಾವಕಾಶಗಳ ಬಗ್ಗೆ ದತ್ತಾಂಶ ಹೊರಬೀಳಲಿದೆ. ಕಂಪನಿಗಳ ಒಂದನೇ ತ್ರೈಮಾಸಿಕ ಅವಧಿಯ ಫಲಿತಾಂಶಗಳ ಸರಣಿಯೂ ಇನ್ನೇನು ಶುರುವಾಗಲಿದೆ. ಜುಲೈನಲ್ಲಿ ವಿವಿಧ ಕಂಪನಿಗಳು ಐಪಿಒ ನಡೆಸುತ್ತಿದ್ದು ಒಟ್ಟು ಸುಮಾರು ₹ 24,000 ಕೋಟಿ ಬಂಡವಾಳ ಸಂಗ್ರಹಕ್ಕೆ ಮುಂದಾಗಿವೆ, ಈ ಎಲ್ಲ ಅಂಶಗಳು ಸೂಚ್ಯಂಕಗಳ ಮೇಲೆ ಪರಿಣಾಮ ಬೀರಲಿವೆ.

ರಿಲೇ: ಟ್ರಯಲ್ಸ್ ನಡೆಸಿದ ಎಎಫ್‌ಐ

ಪಟಿಯಾಲ (ಪಿಟಿಐ): ಒಲಿಂಪಿಕ್ಸ್‌ನಲ್ಲಿ ಪಾಲ್ಗೊಳ್ಳುವ ಪುರುಷರ ಮತ್ತು ಮಿಶ್ರ 4x400 ಮೀಟರ್ಸ್ ರಿಲೆ ತಂಡದ ಆಯ್ಕೆಗಾಗಿ ಭಾರತ ಅಥ್ಲೆಟಿಕ್ಸ್ ಫೆಡರೇಷನ್ (ಎಎಫ್‌ಐ) ಭಾನುವಾರ ಟ್ರಯಲ್ಸ್ ಹಮ್ಮಿಕೊಂಡಿತ್ತು.

ಪಟಿಯಾಲದ ರಾಷ್ಟ್ರೀಯ ಕ್ರೀಡಾಸಂಸ್ಥೆಯಲ್ಲಿ ತರಬೇತಿ ಪಡೆಯುತ್ತಿರುವ ಕ್ರೀಡಾಪಟುಗಳು ಈಚೆಗೆ ನಡೆದ ಅಂತರರಾಜ್ಯ ಅಥ್ಲೆಟಿಕ್ಸ್ ಕೂಟದ ರಿಲೆಯಲ್ಲಿ ನೀರಸ ಪ್ರದರ್ಶನ ತೋರಿದ್ದರು.

ತರಬೇತಿ ಶಿಬಿರದಲ್ಲಿ ಇರುವವರನ್ನು ಮಾತ್ರ ರಿಲೆ ತಂಡಕ್ಕೆ ಆಯ್ಕೆ ಮಾಡುವ ಪದ್ಧತಿಯನ್ನು ಎಎಫ್‌ಐ ಪಾಲಿಸಿಕೊಂಡು ಬಂದಿದೆ.

ಅಂತರರಾಜ್ಯ ಕ್ರೀಡಾಕೂಟದ 400 ಮೀಟರ್ಸ್ ಓಟದಲ್ಲಿ ಕರ್ನಾಟಕದ ಪ್ರಿಯಾ ಮೋಹನ್ ಚಿನ್ನ ಗೆದ್ದಿದ್ದರು. ಆದರೆ ಅವರು ತರಬೇತಿ ಶಿಬಿರದಲ್ಲಿ ಇಲ್ಲ. ಶಿಬಿರದಲ್ಲಿರುವ ಜಿಶ್ನಾ ಮ್ಯಾಥ್ಯೂ ಏಳನೇ ಸ್ಥಾನಕ್ಕೆ ಕುಸಿದಿದ್ದರು. ವಿ.ಕೆ. ವಿಸ್ಮಯ ಫೈನಲ್‌ಗೂ ಅರ್ಹತೆ ಗಳಿಸಿರಲಿಲ್ಲ. ಈ ಹಿನ್ನೆಲೆಯಲ್ಲಿ ಟ್ರಯಲ್ಸ್ ನಡೆಯಿತು.

ಇದರಲ್ಲಿ ರೇವತಿ ಮೊದಲಿಗರಾಗಿದ್ದು ಶುಭಾ ವೆಂಕಟೇಶನ್, ಎಸ್. ಧನಲಕ್ಷ್ಮಿ, ಜಿಶ್ನಾ ಮತ್ತು ವಿಸ್ಮಯ ಕ್ರಮವಾಗಿ ಎರಡರಿಂದ ಐದನೇ ಸ್ಥಾನ ಗಳಿಸಿದರು. ಪುರುಷರ ವಿಭಾಗದಲ್ಲಿ ಸಾರ್ಥಕ್ ಭಾಂಬ್ರಿ, ಅಲೆಕ್ಸ್ ಆ್ಯಂಟನಿ ಮತ್ತು ನಾಗನಾಥ ಕ್ರಮವಾಗಿ ಮೊದಲ ಮೂರು ಸ್ಥಾನ ಗಳಿಸಿದರು.

ಒಲಿಂಪಿಕ್ಸ್‌ನಲ್ಲಿ ಭಾಗವಹಿಸಲು ವೈಯಕ್ತಿಕ ವಿಭಾಗದಲ್ಲಿ 15 ಅಥ್ಲೀಟ್‌ಗಳು ಮತ್ತು ಎರಡು ರಿಲೆ ತಂಡಗಳನ್ನು ಈಗಾಗಲೇ ಆಯ್ಕೆ ಮಾಡಲಾಗಿದೆ.

ಮಹಿಳಾ ಕ್ರಿಕೆಟ್: ಅತಿ ಹೆಚ್ಚು ರನ್ ಗಳಿಸಿದ ಆಟಗಾರ್ತಿಯ ಗೌರವ

ರನ್ ಶಿಖರದ ಒಡತಿ ಮಿಥಾಲಿ

ವೂಸ್ಟರ್ (ಪಿಟಿಐ): ಭಾರತ ಮಹಿಳಾ ಕ್ರಿಕೆಟ್ ತಂಡದ ನಾಯಕಿ ಮಿಥಾಲಿ ರಾಜ್ ನೂತನ ದಾಖಲೆ ಬರೆದರು.

ಕ್ರಿಕೆಟ್ ಮೂರು ಮಾದರಿಗಳಲ್ಲಿಯೂ ಸೇರಿ ಅತಿ ಹೆಚ್ಚು ರನ್ ಗಳಿಸಿದ ಆಟಗಾರ್ತಿಯಾದರು. ಶನಿವಾರ ನಡೆದ ಇಂಗ್ಲೆಂಡ್ ವಿರುದ್ಧದ ಪಂದ್ಯದಲ್ಲಿ ಅವರು ಅಜೇಯ 75 ರನ್ ಗಳಿಸಿದರು. ಈ ಸಂದರ್ಭದಲ್ಲಿ ಅವರು ಇಂಗ್ಲೆಂಡ್‌ನ ಶಾರ್ಲೆಟ್ ಎಡ್ವರ್ಡ್ ಅವರ ದಾಖಲೆಯನ್ನು ಮುರಿದರು. ಒಟ್ಟು 10,337 ರನ್‌ಗಳನ್ನು ಗಳಿಸಿದ ಮಿಥಾಲಿ ಅವರು ಶಾರ್ಲೆಟ್ (10273) ಅವರನ್ನು ಹಿಂದಿಕ್ಕಿದರು.

ಇಂಗ್ಲೆಂಡ್ ವಿರುದ್ಧದ ಸರಣಿಯಲ್ಲಿ ಸತತ ಮೂರು ಪಂದ್ಯಗಳಲ್ಲಿಯೂ ಅವರು ಅರ್ಧಶತಕಗಳನ್ನು ದಾಖಲಿಸಿದರು. ಪಂದ್ಯಶ್ರೇಷ್ಠ ಗೌರವ ಗಳಿಸಿದರು.

ಸರಣಿಯ ಮೊದಲ ಎರಡು ಪಂದ್ಯಗಳಲ್ಲಿ ಭಾರತ ಸೋತಿತ್ತು. ಕೊನೆಯ ಪಂದ್ಯದಲ್ಲಿ ಮಿಥಾಲಿ ಮತ್ತು ಸ್ಮೃತಿ ಮಂದಾನ ಅವರ ಅಮೋಘ ಬ್ಯಾಟಿಂಗ್‌ನಿಂದ 'ಸಮಾಧಾನಕರ' ಜಯ ಸಾಧಿಸಿತು. ಆದರೆ, ಇಂಗ್ಲೆಂಡ್ 2–1ರಿಂದ ಸರಣಿಯನ್ನು ತನ್ನದಾಗಿಸಿಕೊಂಡಿತು.

38 ವರ್ಷದ ಮಿಥಾಲಿ ಅವರ ಸಾಧನೆಯನ್ನು ಹಲವು ಕ್ರಿಕೆಟ್ ಆಟಗಾರ್ತಿಯರು ಶ್ಲಾಘಿಸಿದ್ದಾರೆ.

'ಮಿಥಾಲಿಯವರ ಉತ್ಕೃಷ್ಟ ಪ್ರತಿಭೆಯ ದ್ಯೋತಕ ಈ ದಾಖಲೆಯಾಗಿದೆ. ಅವರು ಈ ದಿನ ತಾರೆಯಾಗಿ ಬೆಳೆದಿರುವುದು ಅಚ್ಚರಿಯೇನಲ್ಲ. ಅವರ ಕೌಶಲ, ಸಾಮರ್ಥ್ಯದಿಂದಾಗಿಯೇ ನಿರಂತರವಾಗಿ ದಾಖಲೆಗಳನ್ನು ಬರೆಯುತ್ತಿದ್ದಾರೆ' ಎಂದು ಕ್ರಿಕೆಟ್ ವೀಕ್ಷಕ ವಿವರಣೆಗಾರ್ತಿ ಲಿಸಾ ಸ್ಥಳೇಕರ್ ಹೇಳಿದ್ದಾರೆ.

'ರನ್ ಮೊತ್ತವನ್ನು ಚೇಸ್ ಮಾಡುವಾಗ ಅವರು ಬಹಳ ಎಚ್ಚರಿಕೆ ಮತ್ತು ಏಕಾಗ್ರತೆಯಿಂದ ಆಡುತ್ತಾರೆ. ಅವರು ಯಾವ ಸಮಯದಲ್ಲಿ ರನ್ ಗಳಿಸಬೇಕು ಮತ್ತು ರಕ್ಷಣಾತ್ಮಕವಾಗಿ ಆಡಬೇಕೆಂದು ಚುರುಕಾಗಿ ಅರಿತುಕೊಳ್ಳುತ್ತಾರೆ' ಎಂದು ಹೇಳಿದರು.

ಈ ದಾಖಲೆ ಸುದೀರ್ಘ ಆಗಿರಲಿದೆ: ಶಾಂತಾ

ಮಹಿಳಾ ಕ್ರಿಕೆಟ್ ರಂಗದಲ್ಲಿ ಮಿಥಾಲಿ ರಾಜ್ ಸಚಿನ್ ತೆಂಡೂಲ್ಕರ್ ಇದ್ದಂತೆ. ಮಿಥಾಲಿ ಅವರ ದಾಖಲೆ ಬಹಳ ದೀರ್ಘ ಕಾಲದವರೆಗೆ ಇರಲಿದೆ ಎಂದು ಭಾರತ ಮಹಿಳಾ ತಂಡದ ಮಾಜಿ ನಾಯಕಿ ಶಾಂತಾ ರಂಗಸ್ವಾಮಿ ಹೇಳಿದ್ದಾರೆ.

'ದಾಖಲೆಗಳನ್ನು ನೋಡಿದರೆ ಮಿಥಾಲಿಯವರ ಸಾಮರ್ಥ್ಯದ ಬಗ್ಗೆ ಸ್ಪಷ್ಟ ಅರಿವು ಮೂಡುತ್ತದೆ. ಅವರ ಸಾಧನೆಗಳೇ ಮಾತನಾಡುತ್ತವೆ. ಇಷ್ಟು ದೀರ್ಘ ಕಾಲದವರೆಗೆ ಅಗ್ರಸ್ಥಾನದಲ್ಲಿರುವ ಏಕೈಕ ಆಟಗಾರ್ತಿ ಅವರು. ಅವರ ದಾಖಲೆಯನ್ನು ಬಹುಬೇಗದಲ್ಲಿ ಮುರಿಯುವವರು ಸದ್ಯಕ್ಕೆ ಕಾಣುತ್ತಿಲ್ಲ' ಎಂದರು.

ಮಿಥಾಲಿ ರಾಜ್ ಸಾಧನೆ (ಭಾರತ)

ಮಾದರಿ	ಪಂದ್ಯ	ರನ್	ಶ್ರೇಷ್ಠ	ಶತಕ	ಅರ್ಧಶತಕ
ಏಕದಿನ	217	7304	125*	7	58
ಟೆಸ್ಟ್	11	669	214	1	4
ಟಿ20	89	2364	97*	0	17

ಶಾರ್ಲೆಟ್ ಎಡ್ವರ್ಡ್ಸ್ ಸಾಧನೆ (ಇಂಗ್ಲೆಂಡ್)

ಮಾದರಿ	ಪಂದ್ಯ	ರನ್	ಶ್ರೇಷ್ಠ	ಶತಕ	ಅರ್ಧಶತಕ
ಏಕದಿನ	191	5992	173*	9	46
ಟೆಸ್ಟ್	23	1676	117	4	9
ಟಿ20	95	2605	92*	0	12

ಹೆಚ್ಚುವರಿ ಆಟಗಾರರಿಗೆ ಐಒಸಿ ಅನುಮತಿ

ನವದೆಹಲಿ (ಪಿಟಿಐ): ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಸ್ಪರ್ಧಿಸಲಿರುವ ತಂಡಗಳು ತಮ್ಮೊಂದಿಗೆ ಬದಲಿ ಕ್ರೀಡಾಪಟುಗಳನ್ನು ಕರೆದುಕೊಂಡು ಹೋಗಲು ಅಂತರರಾಷ್ಟ್ರೀಯ ಒಲಿಂಪಕ್ ಸಮಿತಿ (ಐಒಸಿ) ಅನುಮತಿ ನೀಡಿದೆ.

ತಂಡದಲ್ಲಿರುವ ಅಥ್ಲೀಟ್‌ಗಳಿಗೆ ಸ್ಪರ್ಧೆಗಿಳಿಯಲು ತೊಂದರೆಯಾದರೆ ಬದಲಿ ಆಟಗಾರರಿಗೆ ಅವಕಾಶ ಕೊಡುವ ಉದ್ದೇಶ ಇದಾಗಿದೆ ಎಂದು ಐಒಸಿ ತಿಳಿಸಿದೆ.

'ಈ ಮೊದಲು ಫುಟ್‌ಬಾಲ್, ಹಾಕಿ, ಹ್ಯಾಂಡ್‌ಬಾಲ್, ರಗ್ಬಿ, ವಾಟರ್ ಪೋಲೋ ಕ್ರೀಡೆಗಳಲ್ಲಿ ಬದಲಿ ಆಟಗಾರರನ್ನು ಸೇರ್ಪಡೆ ಮಾಡಿಕೊಳ್ಳಲು ಅವಕಾಶ ಇತ್ತು. ತಂಡದ ಆಯ್ಕೆಯಲ್ಲಿ ಹೆಚ್ಚು ಅವಕಾಶಗಳಿಗಾಗಿ ಈ ನಿಯಮ ಮಾಡಲಾಗಿದೆ' ಎಂದು ತಿಳಿಸಲಾಗಿದೆ.

ಪ್ರಜ್ಞೆ ತಪ್ಪಿ ಬಿದ್ದ ಆಟಗಾರ್ತಿಯರು

ಆ್ಯಂಟಿಗಾ (ಪಿಟಿಐ): ಪಾಕಿಸ್ತಾನ ವಿರುದ್ಧದ ಅಂತರರಾಷ್ಟ್ರೀಯ ಮಹಿಳಾ ಟಿ20 ಕ್ರಿಕೆಟ್ ಪಂದ್ಯದಲ್ಲಿ ವೆಸ್ಟ್ ಇಂಡೀಸ್‌ನ ಇಬ್ಬರು ಆಟಗಾರ್ತಿಯರು ತಲೆಸುತ್ತು ಬಂದು ಬಿದ್ದರು. ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದ್ದು, ಚೇತರಿಸಿಕೊಳ್ಳುತ್ತಿದ್ದಾರೆ.

ಕ್ರಿಕೆಟ್ ಗ್ರೌಂಡ್‌ನಲ್ಲಿ ಶುಕ್ರವಾರ ಪಾಕಿಸ್ತಾನ ಎದುರು ನಡೆದ ಪಂದ್ಯದಲ್ಲಿ ವೆಸ್ಟ್ ಇಂಡೀಸ್‌ನ ಶಿನ್ಲೆ ಹೆನ್ರಿ ಮತ್ತು ಚೆಡಿಯಾನ್ ನೇಷನ್ ಬಿದ್ದಿದ್ದಾರೆ. ಗೆಲುವಿಗೆ ಬೇಕಾದ 125 ರನ್‌ಗಳ ಗುರಿ ಬೆನ್ನತ್ತಿದ ಪಾಕಿಸ್ತಾನ ಬ್ಯಾಟಿಂಗ್ ಮಾಡುವಾಗ ಪ್ರತ್ಯೇಕ ಸಂದರ್ಭಗಳಲ್ಲಿ ಘಟನೆಗಳು ನಡೆದವು.

ಪ್ರಜಾವಾಣಿ
ಕ್ಯಾಚ್ ಇಟ್.. ಕ್ರೀಡಾ ಕಥೆಗಳು
ವೀರೂ ಆಟಕ್ಕೆ ಹಾಡುಗಳ ಜೊತೆಯಾಟ
ಸ್ಫೋಟಕ ಶೈಲಿಯ ಬ್ಯಾಟಿಂಗ್‌ಗೆ ಹೆಸರಾದ ವೀರೇಂದ್ರ ಸೆಹ್ವಾಗ್ ಈಗ ಸಾಮಾಜಿಕ ಜಾಲತಾಣಗಳಲ್ಲಿಯೂ ಸೂಪರ್ ಸ್ಟಾರ್ ಆಗಿದ್ದಾರೆ. ಅವರು ಚೆನ್ನೈನಲ್ಲಿ ತ್ರಿಶತಕ ಬಾರಿಸಿದ್ದಾಗ ಹಾಡು ಹೇಳಿಕೊಂಡೇ ಆಡಿದ್ದರಂತೆ. ಅದ್ಯಾವ ಹಾಡು? ಅವರಿಗೆ ಇಷ್ಟವಾದ ಹಾಡು ಯಾವುದು? ಗಾಯಕ ಯಾರು? ಇಲ್ಲಿದೆ ನೋಡಿ...
QR ಕೋಡ್ ಸ್ಕ್ಯಾನ್ ಮಾಡಿ



ಬಾಪು ಹನುಮಂತರಾವ್ ನಿಧನ

ಬೆಂಗಳೂರು: ದೇಶಿ ಕ್ರಿಕೆಟ್ ಅಂಪೈರ್ ಮತ್ತು ವೀಕ್ಷಕ ವಿವರಣೆಗಾರ ಬಾಪು ಹನುಮಂತರಾವ್ (86) ಶುಕ್ರವಾರ ರಾತ್ರಿ ಅಮೆರಿಕದಲ್ಲಿ ನಿಧನರಾದರು. ಅವರಿಗೆ ಮಗ ಮತ್ತು ಮಗಳು ಇದ್ದಾರೆ.

'ಇಂಡಸ್ಟ್ರಿಯಲ್ ಎಂಜಿನಿಯರ್ ಆಗಿದ್ದ ಅವರು ಉತ್ತಮ ಕ್ರಿಕೆಟ್ ಆಟಗಾರನೂ ಆಗಿದ್ದರು. ಬೆಂಗಳೂರಿನ ಸಿಟಿ ಕ್ರಿಕೆಟರ್ಸ್ ಮತ್ತು ಬೆಂಗಳೂರು ಡೈನಾಮೋಸ್ ತಂಡಗಳಲ್ಲಿ ಆಡಿದ್ದರು. ಆಕಾಶವಾಣಿ, ದೂರದರ್ಶನದಲ್ಲಿ ಕ್ರಿಕೆಟ್ ವೀಕ್ಷಕ ವಿವರಣೆಗಾರನಾಗಿ ಕಾರ್ಯನಿರ್ವಹಿಸಿದ್ದರು. ಕಳೆದ 50 ವರ್ಷಗಳಿಗಿಂತಲೂ ಹೆಚ್ಚು ಸಮಯದಿಂದ ಅಮೆರಿಕದಲ್ಲಿ ನೆಲೆಸಿದ್ದರು' ಎಂದು ಅವರ ಸಹೋದರ ಬಾಪು ಪಾಂಡುರಂಗ ತಿಳಿಸಿದರು.

ಡ್ಯಾನಿಯಲ್ ಮೆಡ್ವೆಡೆವ್ ಚೆಂಡನ್ನು ರಿಟರ್ನ್ ಮಾಡಿದ ರೀತಿ –ರಾಯಿಟರ್ಸ್ ಚಿತ್ರ

ಮೆಡ್ವೆಡೆವ್‌ಗೆ ಗೆಲುವು

ವಿಂಬಲ್ಡನ್: ನಾಲ್ಕನೇ ಸುತ್ತಿಗೆ ಬಾರ್ಟಿ

ಲಂಡನ್ (ರಾಯಿಟರ್ಸ್): ಎರಡನೇ ಶ್ರೇಯಾಂಕಿತ, ರಷ್ಯಾ ಆಟಗಾರ ಡ್ಯಾನಿಯಲ್ ಮೆಡ್ವೆಡೆವ್ ವಿಂಬಲ್ಡನ್ ಟೆನಿಸ್ ಟೂರ್ನಿಯ ನಾಲ್ಕನೇ ಸುತ್ತು ಪ್ರವೇಶಿಸಿದರು. ಶನಿವಾರ ರಾತ್ರಿ ನಡೆದ ಪಂದ್ಯದಲ್ಲಿ ಅವರು ಮಾಜಿ ರನ್ನರ್ ಅಪ್ ಕ್ರೊವೇಷ್ಯಾದ ಮರಿನ್ ಚಿಲಿಚ್ ಸವಾಲು ಮೀರಿದರು.

25 ವರ್ಷದ ಮೆಡ್ವೆಡೆವ್ ಮೊದಲ ಸೆಟ್‌ನಲ್ಲಿ ಪ್ರಬಲ ಪೈಪೋಟಿ ನೀಡಿದರೂ ಟೈಬ್ರೇಕರ್‌ನಲ್ಲಿ ಮಣಿದರು. ಎರಡನೇ ಸೆಟ್‌ನಲ್ಲಿ ನೀರಸ ಆಟವಾಡಿದರು. ಆದರೆ ನಂತರ ಚೇತರಿಸಿಕೊಂಡು ಎದುರಾಳಿಯನ್ನು ಕಂಗೆಡಿಸಿ 6-7(3) 3-6 6-3 6-3 6-2 ಗೆಲುವಿನ ನಗೆ ಬೀರಿದರು.

ಈ ವರ್ಷ ಮೆಡ್ವೆಡೆವ್ ಪಾಲಿಗೆ ಸಾಧನೆ ಅದೃಷ್ಟದ್ದಾಗಿದೆ. ಆಸ್ಟ್ರೇಲಿಯನ್ ಓಪನ್ ಟೂರ್ನಿಯಲ್ಲಿ ವೃತ್ತಿಜೀವನದ ಶ್ರೇಷ್ಠ ಸಾಧನೆ ಮಾಡಿ ರನ್ನರ್ ಅಪ್ ಆಗಿದ್ದ ಅವರು ಫ್ರೆಂಚ್ ಓಪನ್‌ನಲ್ಲಿ ಇದೇ ಮೊದಲು ಕ್ವಾರ್ಟರ್ ಫೈನಲ್ ಪ್ರವೇಶಿಸಿದ್ದರು. ನಾಲ್ಕನೇ ಸುತ್ತು ಪ್ರವೇಶಿಸುವ ಮೂಲಕ ವಿಂಬಲ್ಡನ್‌ನಲ್ಲೂ ಜೀವನ ಶ್ರೇಷ್ಠ ಸಾಧನೆ ಮಾಡಿದಂತಾಗಿದೆ.

ಜೆಕ್ ಗಣರಾಜ್ಯದ ಕ್ಯಾತರಿನಾ ಸಿನಿಯಾಕೋವ ಅವರನ್ನು ಮಣಿಸಿದ ಅಗ್ರ ಶ್ರೇಯಾಂಕದ ಆಸ್ಟ್ರೇಲಿಯಾದ ಆ್ಯಶ್ಲಿ ಬಾರ್ಟಿ ಮಹಿಳೆಯರ ವಿಭಾಗದ ನಾಲ್ಕನೇ ಸುತ್ತು ಪ್ರವೇಶಿಸಿದರು.

ವಿಶ್ವ ರ‍್ಯಾಂಕಿಂಗ್‌ನ ಒಂದನೇ ಸ್ಥಾನದಲ್ಲಿರುವ ಬಾರ್ಟಿ ಶನಿವಾರ ರಾತ್ರಿ ನಡೆದ ಪಂದ್ಯದಲ್ಲಿ 6-3 7-5ರಲ್ಲಿ ಗೆಲುವು ಸಾಧಿಸಿದರು. 2019ರ ಟೂರ್ನಿಯಲ್ಲೂ ನಾಲ್ಕನೇ ಸುತ್ತು ಪ್ರವೇಶಿಸಿದ್ದು ಬಾರ್ಟಿ ಅವರ ಶ್ರೇಷ್ಠ ಪ್ರದರ್ಶನವಾಗಿತ್ತು.

ಕ್ರಿಕೆಟ್: ದಕ್ಷಿಣ ಆಫ್ರಿಕಾಕ್ಕೆ ಜಯ

ಗ್ರೆನೆಡಾ (ಪಿಟಿಐ): ದಕ್ಷಿಣ ಆಫ್ರಿಕಾ ತಂಡವು ವೆಸ್ಟ್ ಇಂಡೀಸ್ ಎದುರಿನ ಟಿ20 ಸರಣಿಯಲ್ಲಿ 3–2ರಿಂದ ಜಯಿಸಿತು. ಶನಿವಾರ ತಡರಾತ್ರಿ ನಡೆದ ಸರಣಿಯ ಐದನೇ ಪಂದ್ಯದಲ್ಲಿ ದಕ್ಷಿಣ ತಂಡವು 25 ರನ್‌ಗಳಿಂದ ಜಯಿಸಿತು.

ಏಡನ್ ಮರ್ಕರಂ

ಮೊದಲು ಬ್ಯಾಟಿಂಗ್ ಮಾಡಿದ ದಕ್ಷಿಣ ಆಫ್ರಿಕಾ ತಂಡವು ಕ್ವಿಂಟನ್ ಡಿಕಾಕ್ (60; 42ಎ) ಮತ್ತು ಏಡನ್ ಮರ್ಕರಂ (70; 48ಎ) ಅವರ ಅರ್ಧಶತಕಗಳ ಬಲದಿಂದ 20 ಓವರ್‌ಗಳಲ್ಲಿ 4ಕ್ಕೆ 168 ರನ್ ಗಳಿಸಿತು. ಅದಕ್ಕುತ್ತರವಾಗಿ ವಿಂಡೀಸ್ ತಂಡವು 20 ಓವರ್‌ಗಳಲ್ಲಿ 9 ಕ್ಕೆ 143 ರನ್ ಗಳಿಸಿತು. ಎವಿನ್ ಲೂಯಿಸ್ ಅರ್ಧಶತಕ ವ್ಯರ್ಥವಾಯಿತು.

ದಕ್ಷಿಣ ಆಫ್ರಿಕಾದ ಲುಂಗಿ ಗಿಡಿ (32ಕ್ಕೆ3) ಮತ್ತು ಕಗಿಸೊ ರಬಾಡ (24ಕ್ಕೆ2) ಅಮೋಘ ಬೌಲಿಂಗ್ ಮಾಡಿದರು

ಸಂಕ್ಷಿಪ್ತ ಸ್ಕೋರು: ದಕ್ಷಿಣ ಆಫ್ರಿಕಾ: 20 ಓವರ್‌ಗಳಲ್ಲಿ 4ಕ್ಕೆ 168 (ಕ್ವಿಂಟನ್ ಡಿ ಕಾಕ್ 60, ಏಡನ್ ಮರ್ಕರಂ 70, ಎಡ್ವರ್ಡೊ 19ಕ್ಕೆ2) **ವೆಸ್ಟ್ ಇಂಡೀಸ್:** 20 ಓವರ್‌ಗಳಲ್ಲಿ 9ಕ್ಕೆ 143 (ಎವಿನ್ ಲೂಯಿಸ್ 52, ಶಿಮ್ರೊನ್ ಹೆಟ್ಮೆಯರ್ 33, ಕಗಿಸೊ ರಬಾಡ 24ಕ್ಕೆ2, ಲುಂಗಿ ಗಿಡಿ 32ಕ್ಕೆ3) **ಫಲಿತಾಂಶ:** ದಕ್ಷಿಣ ಆಫ್ರಿಕಾ ತಂಡಕ್ಕೆ 25 ರನ್‌ಗಳ ಜಯ.

ಯೂರೊ ಕಪ್ ಫುಟ್‌ಬಾಲ್: ಎರಡು ಗೋಲು ಗಳಿಸಿದ ಹ್ಯಾರಿ ಕೇನ್

ಇಂಗ್ಲೆಂಡ್ ಸೆಮಿಫೈನಲ್‌ಗೆ; ಉಕ್ರೇನ್‌ಗೆ ನಿರಾಸೆ

ರೋಮ್ (ಎಪಿ): ಇಂಗ್ಲೆಂಡ್ ತಂಡ ಯೂರೊ ಕಪ್ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನ ನಾಲ್ಕರ ಘಟ್ಟ ಪ್ರವೇಶಿಸಿತು. ಸೆಮಿಫೈನಲ್‌ನಲ್ಲಿ ಹ್ಯಾರಿ ಕೇನ್ ಬಳಗ ಡೆನ್ಮಾರ್ಕ್ ವಿರುದ್ಧ ಕಣಕ್ಕಿಳಿಯಲಿದ್ದು ಸ್ಪೇನ್ ಎದುರು ಇಟಲಿ ಸೆಣಸಲಿದೆ.

ಶನಿವಾರ ತಡರಾತ್ರಿ ನಡೆದ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಉಕ್ರೇನ್ ವಿರುದ್ಧ 4–0ಯಿಂದ ಇಂಗ್ಲೆಂಡ್ ಗೆಲುವು ಸಾಧಿಸಿತು. ಬಾಕುವಿನಲ್ಲಿ ನಡೆದ ಮತ್ತೊಂದು ಪಂದ್ಯದಲ್ಲಿ ಡೆನ್ಮಾರ್ಕ್ 2–1ರಲ್ಲಿ ಜೆಕ್ ಗಣರಾಜ್ಯವನ್ನು ಸೋಲಿಸಿತ್ತು.

ಗುಂಪು ಹಂತದ ಮೂರು ಪಂದ್ಯಗಳು ಸೇರಿದಂತೆ ಕ್ವಾರ್ಟರ್ ಫೈನಲ್‌ಗೂ ಮೊದಲಿನ ಎಲ್ಲ ಪಂದ್ಯಗಳನ್ನೂ ಇಂಗ್ಲೆಂಡ್ ತವರಿನ ವೆಂಬ್ಲಿ ಕ್ರೀಡಾಂಗಣದಲ್ಲಿ ಆಡಿತ್ತು. ತವರಿನಾಚೆ ಆಡಿದ ಏಕೈಕ ಪಂದ್ಯದಲ್ಲಿ ತಂಡ ಶ್ರೇಷ್ಠ ಪ್ರದರ್ಶನ ನೀಡಿ ಎದುರಾಳಿ ತಂಡವನ್ನು ಕಂಗೆಡಿಸಿತು. ಎರಡು ಗೋಲು ಗಳಿಸಿದ ನಾಯಕ ಹ್ಯಾರಿ ಕೇನ್ ಭರ್ಜರಿ ಜಯಕ್ಕೆ ಕಾರಣರಾದರು. ಹ್ಯಾರಿ ಮ್ಯಾಗ್ಯುರೆ ಮತ್ತು ಜೋರ್ಡಾನ್ ಹೆಂಡರ್ಸನ್ ತಲಾ ಒಂದೊಂದು ಗೋಲು ಗಳಿಸಿದರು.

1966ರ ವಿಶ್ವಕಪ್ ನಂತರ ಪ್ರಮುಖ ಟೂರ್ನಿಯೊಂದರ ನಾಕೌಟ್ ಹಂತದಲ್ಲಿ ಇಂಗ್ಲೆಂಡ್ ನಾಲ್ಕು ಗೋಲು ಗಳಿಸಿದ್ದು ಇದೇ ಮೊದಲು. 1966ರ ವಿಶ್ವಕಪ್ ಫೈನಲ್‌ನಲ್ಲಿ ವೆಸ್ಟ್ ಜರ್ಮನಿಯನ್ನು 4–2ರಲ್ಲಿ ಮಣಿಸಿತ್ತು. ಯುರೋಪಿಯನ್ ಚಾಂಪಿಯನ್‌ಷಿಪ್‌ನಲ್ಲಿ 1996ರಲ್ಲಿ ಇಂಗ್ಲೆಂಡ್ ಕೊನೆಯದಾಗಿ ನಾಲ್ಕರ ಘಟ್ಟ ಪ್ರವೇಶಿಸಿತ್ತು. ನಾಲ್ಕನೇ ನಿಮಿಷದಲ್ಲಿ ರಹೀಂ ಸ್ಟರ್ಲಿಂಗ್ ನೀಡಿದ ಪಾಸ್‌ನಲ್ಲಿ ಚೆಂಡನ್ನು ನಿಯಂತ್ರಿಸಿದ ಕೇನ್ ಸುಲಭವಾಗಿ ಗೋಲುಪೆಟ್ಟಿಗೆಯ ಒಳಗೆ ತಳ್ಳಿದರು. ತಡೆಯಲು ಪ್ರಯತ್ನಿಸಿದ ಗೋಲ್‌ಕೀಪರ್ ಜಾರ್ಜಿ ಬುಚಾನ್ ಅವರ ತೋಳಿಗೆ ಸೋಕುತ್ತ ಚೆಂಡು ಬಲೆಯೊಳಗೆ ಸೇರಿತು. ಇದು ಟೂರ್ನಿಯಲ್ಲಿ ಕೇನ್ ಗಳಿಸಿದ ಎರಡನೇ ಗೋಲಾಗಿತ್ತು. ನಂತರ ಮೊದಲಾರ್ಧದಲ್ಲಿ ಎರಡೂ ತಂಡಗಳು ಜಿದ್ದಾಜಿದ್ದಿಯ ಹೋರಾಟ ನಡೆಸಿದವು.

ದ್ವಿತೀಯಾರ್ಧದ ಆರಂಭದಲ್ಲೇ ಇಂಗ್ಲೆಂಡ್ ಮುನ್ನಡೆ ಹೆಚ್ಚಿಸಿತು. 46ನೇ ನಿಮಿಷದಲ್ಲಿ ಲ್ಯೂಕ್ ಶಾ ಅವರ ಫ್ರೀ ಕಿಕ್‌ನಲ್ಲಿ ಹೆಡರ್ ಮೂಲಕ ಹ್ಯಾರಿ ಮ್ಯಾಗ್ಯುರೆ ಗೋಲು ಗಳಿಸಿದರು.

ನಾಲ್ಕು ನಿಮಿಷಗಳ ನಂತರ ಶಾ ಅವರ ಕ್ರಾಸ್‌ನಲ್ಲಿ ಹ್ಯಾರಿ ಕೇನ್ ಹೆಡರ್ ಮೂಲಕ ಚೆಂಡನ್ನು ಗುರಿ ಮುಟ್ಟಿಸಿದರು. ಹೆಂಡರ್ಸನ್ 63ನೇ ನಿಮಿಷದಲ್ಲಿ ಮುನ್ನಡೆ ಹೆಚ್ಚಿಸಿದರು.

ಪ್ರೀ ಕ್ವಾರ್ಟರ್ ಫೈನಲ್‌ನಲ್ಲಿ ಹೆಚ್ಚುವರಿ ಅವಧಿಯಲ್ಲಿ ಸ್ವೀಡನ್ ವಿರುದ್ಧ 2–1ರಲ್ಲಿ ಜಯ ಗಳಿಸಿದ್ದ ಉಕ್ರೇನ್ ಮೊದಲಾರ್ಧದಲ್ಲಿ ಆಗಾಗ ಪ್ರತಿದಾಳಿಯ ಮೂಲಕ ಇಂಗ್ಲೆಂಡ್‌ಗೆ ಪೈಪೋಟಿ ನೀಡಿತ್ತು. ತಂಡಕ್ಕೆ ಗೋಲು ಗಳಿಸಲು ಸಾಕಷ್ಟು ಅವಕಾಶಗಳು ಸೃಷ್ಟಿಯಾಗಿದ್ದವು. ಆದರೆ ಅವುಗಳನ್ನು ಸದುಪಯೋಗಪಡಿಸಿಕೊಳ್ಳಲು ಇಂಗ್ಲೆಂಡ್ ಡಿಫೆಂಡರ್‌ಗಳು ಬಿಡಲಿಲ್ಲ.

ಇಂಗ್ಲೆಂಡ್ ಪರ ಗೋಲು ಗಳಿಸಿದ ಹ್ಯಾರಿ ಮ್ಯಾಗ್ಯುರೆ –ರಾಯಿಟರ್ಸ್ ಚಿತ್ರ

ಬೈದ್ಯನಾಥ್
ಅಸಲಿ ಆಯುರ್ವೇದ
ಇಮ್ಯುನಿಟಿ ಇಂದ ಆಯುರಾರೋಗ್ಯ
ಸ್ವಾಸ್ಥ್ಯ ನಿರ್ವಹಣೆಗೆ



ಆಯಾಸ,
ಮೈ ಕೈ ನೋವು,
ಬೆನ್ನುನೋವು
ಆಲಸ್ಯ, ಒತ್ತಡ?
ಅಶ್ವಗಂಧಾಮೃತ
(ಅಶ್ವಗಂಧಾರಿಷ್ಟ)



ಶಕ್ತಿ ಮತ್ತು ಸಾಮರ್ಥ್ಯ ನಿರ್ವಹಣೆಗೆ ಸಹಕಾರಿ
ಅಶ್ವಗಾಧ ಮಾತ್ರೆ ಕೂಡ ಲಭ್ಯ
ವೈದ್ಯರ ಸಮಾಲೋಚನೆ : 8448444935
www.baidyanath.co

ಫಿಲಿಪ್ಪಿನ್ಸ್: ಸೇನಾ ವಿಮಾನ ಅಪಘಾತ: 45 ಮಂದಿ ಸಾವು

ಮನಿಲಾ (ಎಪಿ): ಮುಸ್ಲಿಂ ಉಗ್ರರ ವಿರುದ್ಧ ಹೋರಾಡಲು ನಿಯೋಜಿಸಲಾಗಿದ್ದ ಯೋಧರನ್ನು ಹೊತ್ತಿದ್ದ ಫಿಲಿಪ್ಪಿನ್ಸ್ ವಾಯುಪಡೆಯ ಸಿ–130 ವಿಮಾನವು ಭಾನುವಾರ ಅಪಘಾತಕ್ಕೀಡಾಗಿದ್ದು ಒಟ್ಟು 45 ಜನರು ಮೃತಪಟ್ಟಿದ್ದಾರೆ. ವಿಮಾನದಲ್ಲಿದ್ದ 42 ಯೋಧರು ಮತ್ತು ನೆಲದ ಮೇಲಿದ್ದ ಮೂವರು ನಾಗರಿಕರು ಮೃತಪಟ್ಟಿದ್ದಾರೆ. 49 ಜನರನ್ನು ರಕ್ಷಿಸಲಾಗಿದೆ ಎಂದು ಫಿಲಿಪ್ಪಿನ್ಸ್‌ನ ಸೇನಾ ಮುಖ್ಯಸ್ಥರು ತಿಳಿಸಿದರು.

'ಫಿಲಿಪ್ಪಿನ್ಸ್‌ನ ಸುಲು ಪ್ರಾಂತ್ಯದ ಪಾಟಿಕುಲ್ ನಗರದಲ್ಲಿ ಈ ದುರಂತ ಸಂಭವಿಸಿದೆ. ವಿಮಾನವು ರನ್‌ವೇಯಲ್ಲಿ ಇಳಿಯಲು ಸಾಧ್ಯವಾಗದೆ, ಅಪಘಾತ ಸಂಭವಿಸಿದೆ. ವಿಮಾನದ ಭಗ್ನಾವಶೇಷಗಳಡಿ ಸಿಲುಕಿದ್ದ ಕನಿಷ್ಠ 49 ಮಂದಿಯನ್ನು ರಕ್ಷಿಸಲಾಗಿದೆ' ಎಂದು ಸೇನಾ ಮುಖ್ಯಸ್ಥ ಜನರಲ್ ಸಿರಿಲಿಟೊ ಸೊಬೆಜಾನಾ ಹೇಳಿದರು.

ವಿಮಾನದಲ್ಲಿ ಒಟ್ಟು 96 ಜನರಿದ್ದರು. ಇದರಲ್ಲಿ ಮೂವರು ಪೈಲಟ್‌ಗಳು, ಐವರು ಸಿಬ್ಬಂದಿಯಾಗಿದ್ದು, ಉಳಿದವರು ಸೇನಾ ಸಿಬ್ಬಂದಿ ಮತ್ತು ಮಿಲಿಟರಿ ಅಧಿಕಾರಿಗಳು. ಪೈಲಟ್‌ಗಳು ಬದುಕುಳಿದಿದ್ದು, ಅವರ ಸ್ಥಿತಿ ಗಂಭೀರವಾಗಿದೆ ಎಂದು ಅವರು ಮಾಹಿತಿ ನೀಡಿದರು. ವಿಮಾನವು ನೆಲಕ್ಕೆ ಅಪ್ಪಳಿಸಿದಾಗ ಅಲ್ಲಿದ್ದ ಮೂವರು ನಾಗರಿಕರು ಮೃತಪಟ್ಟಿದ್ದಾರೆ. ವಿಮಾನದಲ್ಲಿದ್ದ ಐವರು ಯೋಧರ ಲೆಕ್ಕ ಇನ್ನೂ ಸಿಕ್ಕಿಲ್ಲ ಎಂದು ಅವರು ತಿಳಿಸಿದರು.

ವಿಮಾನ ನೆಲಕ್ಕೆ ಅಪ್ಪಳಿಸುವುದಕ್ಕೂ ಮೊದಲು ಹಲವು ಸೈನಿಕರು ಹೊರಗೆ ಹಾರಿ ಜೀವ ಉಳಿಸಿಕೊಂಡಿದ್ದಾರೆ ಎಂದು ಪ್ರತ್ಯಕ್ಷದರ್ಶಿಗಳು ನೀಡಿರುವ ಹೇಳಿಕೆಯನ್ನು ಉಲ್ಲೇಖಿಸಿ ಸೇನೆ ಪ್ರಕಟಣೆ ಹೊರಡಿಸಿದೆ.

ವಿಮಾನ ಅಪಘಾತಕ್ಕೀಡಾದ ಸ್ಥಳದಲ್ಲಿ ರಕ್ಷಣಾ ಕಾರ್ಯ ನಡೆಯಿತು

ಭಾರತೀಯ, 9 ಗೆಳೆಯರಿಗೆ ಒಲಿದ ₹ 40 ಕೋಟಿ ಬಹುಮಾನ

ದುಬೈ (ಪಿಟಿಐ): 37 ವರ್ಷದ ಭಾರತೀಯ ಮತ್ತು ವಿವಿಧ ದೇಶಗಳ ಅವರ ಇತರೆ ಒಂಬತ್ತು ಮಂದಿ ಗೆಳೆಯರಿಗೆ ಒಟ್ಟಾಗಿ ಇಲ್ಲಿನ ರ‍್ಯಾಫೆಲ್ ಡ್ರಾನಲ್ಲಿ ಸುಮಾರು ₹ 40 ಕೋಟಿ ಜಾಕ್‌ಪಾಟ್ (20 ಮಿಲಿಯನ್ ಡಿರ್ರಂ) ಬಹುಮಾನ ಬಂದಿದೆ. ಅಬುಧಾಬಿಯಲ್ಲಿ ಚಾಲಕರಾಗಿರುವ ಕೇರಳ ಮೂಲದ ರಂಜಿತ್ ಸೋಮರಾಜನ್ ಈ ಅದೃಷ್ಟಶಾಲಿ.

ಇವರು ಕಳೆದ ಮೂರು ವರ್ಷಗಳಿಂದ, ಜಾಕ್‌ಪಾಟ್ ಸೇರಿದಂತೆ ವಿವಿಧ ಲಾಟರಿ ಖರೀದಿಸುತ್ತಿದ್ದರು ಎಂದು ಇಲ್ಲಿನ ಖಲೀಜ್ ಟೈಮ್ಸ್ ಶನಿವಾರ ವರದಿ ಮಾಡಿದೆ. 'ನನಗೆ ಜಾಕ್‌ಪಾಟ್ ಒಲಿಯಬಹುದು ಎಂದು ಎಣಿಸಿರಲಿಲ್ಲ. 2 ಅಥವಾ 3ನೇ ಬಹುಮಾನ ಸಿಗುವ ಆಶಾವಾದಿಯಾಗಿದ್ದೆ' ಎಂಬ ಅವರ ಹೇಳಿಕೆಯನ್ನು ಪತ್ರಿಕೆ ಉಲ್ಲೇಖಿಸಿದೆ.

'ಕೆಲಸ ಕಳೆದುಕೊಂಡಿದ್ದ ನಾನು ಸಂಕಷ್ಟದಲ್ಲಿದ್ದೆ. ಹೊಸ ಉದ್ಯೋಗದ ನಿರೀಕ್ಷೆಯಲ್ಲಿದೆ. 2008ರಿಂದಲೂ ಇಲ್ಲಿಯೇ ಇದ್ದೇನೆ. ವಿವಿಧ ಕಂಪನಿಗಳಿಗೆ ಟ್ಯಾಕ್ಸಿ ಚಾಲಕನಾಗಿ ಕೆಲಸ ಮಾಡುತ್ತಿದ್ದೆ' ಎಂದೂ ತಿಳಿಸಿದರು.

ದಕ್ಷಿಣ ಆಫ್ರಿಕಾ: ಜುಮಾ ಅರ್ಜಿ ವಿಚಾರಣೆಗೆ ನ್ಯಾಯಾಲಯ ಒಪ್ಪಿಗೆ

ಜೋಹಾನ್ಸ್‌ಬರ್ಗ್ (ಪಿಟಿಐ): ಭ್ರಷ್ಟಾಚಾರ ಆರೋಪಕ್ಕೆ ಸಂಬಂಧಿಸಿದಂತೆ ವಿಚಾರಣೆಗೆ ಗೈರು ಹಾಜರಾದ ಕಾರಣ ದಕ್ಷಿಣ ಆಫ್ರಿಕಾದ ಮಾಜಿ ಅಧ್ಯಕ್ಷ ಜಾಕೊಬ್ ಜುಮಾಗೆ ವಿಧಿಸಿರುವ 15 ತಿಂಗಳ ಜೈಲು ಶಿಕ್ಷೆ ಪ್ರಶ್ನಿಸಿ ಸಲ್ಲಿಸಿರುವ ಅರ್ಜಿಯ ವಿಚಾರಣೆಗೆ ದಕ್ಷಿಣ ಆಫ್ರಿಕಾದ ಉನ್ನತ ನ್ಯಾಯಾಲಯ ಒಪ್ಪಿಗೆ ನೀಡಿದ್ದು, ಅವರನ್ನು ಬಂಧಿಸುವುದಕ್ಕೂ ತಡೆ ನೀಡಿದೆ.

ಅಧಿಕಾರಾವಧಿಯಲ್ಲಿ ಭ್ರಷ್ಟಾಚಾರ ನಡೆದಿದೆ ಎಂಬ ಆರೋಪದ ಹಿನ್ನೆಲೆಯಲ್ಲಿ ಮಾಜಿ ಅಧ್ಯಕ್ಷ ಜಾಕೋಬ್ ಅವರ ವಿರುದ್ಧ ದೂರು ದಾಖಲಾಗಿತ್ತು. ಈ ಸಂಬಂಧ ವಿಚಾರಣೆಗೆ ಹಾಜರಾಗುವಂತೆ ತನಿಖಾ ಆಯೋಗ ಹಲವು ಬಾರಿ ಸೂಚನೆ ನೀಡಿತ್ತು. ಆದರೆ, ವಿಚಾರಣೆಗೆ ಗೈರಾದ ಹಿನ್ನೆಲೆಯಲ್ಲಿ ಮಂಗಳವಾರ ಜಾಕೋಬ್ ಜೈಲು ಶಿಕ್ಷೆ ವಿಧಿಸಿ ತೀರ್ಪು ನೀಡಿತ್ತು. ಭಾನುವಾರದೊಳಗೆ ಬಂಧಿಸುವಂತೆ ಸೂಚಿಸಿತ್ತು.

ಜಾಕೋಬ್ ತನಗೆ ನೀಡಿರುವ ಶಿಕ್ಷೆಯನ್ನು ರದ್ದುಪಡಿಸುವಂತೆ ಕೋರಿ ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ಇದೇ 12 ರಂದು ನಡೆಸುವುದಾಗಿ ನ್ಯಾಯಾಲಯ ಶನಿವಾರ ಹೇಳಿದೆ.

ಚೀನಾ ಗಗನಯಾತ್ರಿಗಳಿಂದ ಬಾಹ್ಯಾಕಾಶದಲ್ಲಿ ನಡಿಗೆ

ಬೀಜಿಂಗ್ (ಎಪಿ): ಚೀನಾದ ಇಬ್ಬರು ಗಗನಯಾತ್ರಿಗಳು ಭಾನುವಾರ ಚೀನಾದ ನೂತನ ಬಾಹ್ಯಾಕಾಶ ಕೇಂದ್ರದ ಹೊರಗೆ ನಡೆದಾಡಿದ್ದು, 15 ಮೀಟರ್ ಉದ್ದದ ರೊಬೊಟಿಕ್ ರೆಕ್ಕೆ ಸರಿಪಡಿಸುವ ಕಾರ್ಯ ನಡೆಸಿದರು.

ಲಿಯು ಬೊಮಿಂಗ್, ತಂಗ್ ಹಾಂಗ್‌ಬೊ ಈ ಗಗನಯಾತ್ರಿಗಳು. ಚೀನಾ ಟಿ.ವಿ. ಇದನ್ನು ಪ್ರಸಾರ ಮಾಡಿದ್ದು, ಗಗನಯಾತ್ರಿಗಳು ಹೊರಬಂದಾಗ ಬಾಹ್ಯಾಕಾಶ ಕೇಂದ್ರದ ಕೆಳಗೆ ಭೂಮಿಯ ಪರಿಭ್ರಮಣವೂ ದಾಖಲಾಗಿದೆ. ಮತ್ತೊಬ್ಬ ಗಗನಯಾತ್ರಿನೇ ಹೈಶೆಂಗ್ ಕೇಂದ್ರದ ಒಳಗಿದ್ದರು. ಚೀನಾದ ಮೂರನೇ ಬಾಹ್ಯಾಕಾಶ ಕೇಂದ್ರದಲ್ಲಿ ಈ ಮೂವರು ಮಂಗಳ ಗ್ರಹದ ಮೇಲೆ ರೊಬೋಟ್ ರೋವರ್ ಇಳಿಸುವ ಮಿಷನ್‌ನ ಭಾಗವಾಗಿ ಜೂನ್ 17ರಂದು ಬಂದಿದ್ದರು. ಚೀನಾದ ಕಮ್ಯುನಿಸ್ಟ್ ಪಕ್ಷದ 100ನೇ ವರ್ಷದ ಸಂದರ್ಭದಲ್ಲಿ ಇದು ಕಾರ್ಯಗತವಾಗುತ್ತಿದೆ.

ಬಾಹ್ಯಾಕಾಶ ಕೇಂದ್ರದ ಮೊದಲ ಮಾದರಿ 'ಟಿಯಾನೆ' ಅನ್ನು ಏಪ್ರಿಲ್ 29ರಂದು ಉಡಾವಣೆ ಮಾಡಲಾಗಿತ್ತು. ತದನಂತರ ಆಹಾರ ಮತ್ತು ಇಂಧನವನ್ನು ಹೊತ್ತ ಸ್ವಯಂಚಾಲಿಯ ಅಂತರಿಕ್ಷ ನೌಕೆಯನ್ನು ಕಳುಹಿಸಲಾಗಿತ್ತು. ಜೂನ್ 17ರಂದು ಮೂವರು ಗಗನಯಾತ್ರಿಗಳು ಬಾಹ್ಯಾಕಾಶ ಕೇಂದ್ರವನ್ನು ಸೇರಿಕೊಂಡಿದ್ದರು.

ಚೀನಾ ಮುಂದಿನ ವರ್ಷದ ಅಂತ್ಯದ ವೇಳೆಗೆ 11 ಅಂತರಿಕ್ಷ ನೌಕೆ ಉಡಾವಣೆ ಮಾಡುವ ಉದ್ದೇಶ ಹೊಂದಿದೆ.

ಖಾಸಗಿ ವಿಮಾನ ಪತನ; 6 ಸಾವು

ಪೋರ್ಟ್-ಒ-ಪ್ರಿನ್ಸ್ (ಹೈಟಿ): ಹೈಟಿಯಲ್ಲಿ ಸಂಭವಿಸಿದ ಖಾಸಗಿ ವಿಮಾನ ಅಪಘಾತದಲ್ಲಿ ಅಮೆರಿಕದ ಇಬ್ಬರು ಧರ್ಮಪ್ರಚಾರಕರು ಸೇರಿದಂತೆ ಎಲ್ಲ ಆರು ಪ್ರಯಾಣಿಕರು ಮೃತಪಟ್ಟಿದ್ದಾರೆ ಎಂದು ಮಾಧ್ಯಮಗಳು ವರದಿ ಮಾಡಿವೆ.

ಹೈಟಿಯ ನೈರುತ್ಯ ರಾಜಧಾನಿ ಪೋರ್ಟ್-ಒ-ಪ್ರಿನ್ಸ್‌ನಲ್ಲಿ ಈ ದುರಂತ ಸಂಭವಿಸಿದೆ. ಪೋರ್ಟ್-ಒ-ಪ್ರಿನ್ಸ್ ವಿಮಾನ ನಿಲ್ದಾಣದಿಂದ ದಕ್ಷಿಣ ಕರಾವಳಿ ನಗರವಾದ ಜಾಕ್ಮೆಲ್‌ಗೆ ಹೋಗುವಾಗ ಈ ಸಣ್ಣ ಗಾತ್ರದ ವಿಮಾನ ಪತನಗೊಂಡಿದೆ ಎಂದು ರಾಷ್ಟ್ರೀಯ ನಾಗರಿಕ ವಿಮಾನಯಾನ ಕಚೇರಿಯ (ಎನ್‌ಸಿಎಬಿ) ಪ್ರಕಟಣೆ ತಿಳಿಸಿರುವುದಾಗಿ ಮಿಯಾಮಿ ಹೆರಾಲ್ಡ್ ಪ್ರಕಟಿಸಿದೆ. ವಿಮಾನ ದುರ್ಘಟನೆಗೆ ನಿಖರ ಕಾರಣಗಳು ತಿಳಿದು ಬಂದಿಲ್ಲ.

ಉತ್ತರ ಅಫ್ಗಾನಿಸ್ತಾನ: ಹಲವು ಜಿಲ್ಲೆ ತಾಲಿಬಾನ್ ವಶಕ್ಕೆ

ಕಾಬೂಲ್ (ಎಪಿ): ಸುಮಾರು ಎರಡು ದಶಕಗಳ ಬಳಿಕ ಅಫ್ಗಾನಿಸ್ತಾನದ ಬಗ್ರಾಮ್ ವಾಯುನೆಲೆಯನ್ನು ಅಮೆರಿಕ ತೊರೆದ ಬೆನ್ನಲ್ಲೇ, ಇತ್ತ ಉತ್ತರ ಅಫ್ಗಾನಿಸ್ತಾನದ ಕೆಲವು ಜಿಲ್ಲೆಗಳನ್ನು ತಾಲಿಬಾನ್ ಉಗ್ರಪಡೆಗಳು ವಶಪಡಿಸಿಕೊಂಡಿವೆ.

ತಾಲಿಬಾನ್ ಪಡೆಗಳಿಗೆ ಬೆದರಿದ ಅಫ್ಗಾನಿಸ್ತಾನದ ಸುಮಾರು 300 ಸೈನಿಕರು ಸ್ಥಳದಿಂದ ಪಲಾಯನಗೈದಿದ್ದು, ತಜಕಿಸ್ತಾನದ ಗಡಿ ಪ್ರವೇಶಿಸಿದ್ದಾರೆ ಎಂದು ತಜಕಿಸ್ತಾನದ ರಾಷ್ಟ್ರೀಯ ಭದ್ರತಾ ರಾಜ್ಯ ಸಮಿತಿ ತಿಳಿಸಿದೆ.

'ಮಾನವತಾವಾದ ಮತ್ತು ಉತ್ತಮ ನೆರೆಹೊರೆಯ ತತ್ವಗಳ' ಕಾರಣಕ್ಕಾಗಿ ತಜಕಿಸ್ತಾನದ ಅಧಿಕಾರಿಗಳು ಅಫ್ಗಾನಿಸ್ತಾನದ ರಾಷ್ಟ್ರೀಯ ರಕ್ಷಣಾ ಮತ್ತು ಭದ್ರತಾ ಪಡೆಗಳಿಗೆ ತಜಕಿಸ್ತಾನಕ್ಕೆ ಪ್ರವೇಶಿಸಲು ಅವಕಾಶ ಮಾಡಿಕೊಟ್ಟಿದ್ದಾರೆ ಎಂದೂ ಹೇಳಿಕೆಯಲ್ಲಿ ತಿಳಿಸಲಾಗಿದೆ. ಅಫ್ಗಾನಿಸ್ತಾನದ ಎಲ್ಲಾ 421 ಜಿಲ್ಲೆಗಳು, ಜಿಲ್ಲಾ ಕೇಂದ್ರಗಳಲ್ಲಿ ಮೂರನೇ ಒಂದು ಭಾಗ ತಾಲಿಬಾನ್ ನಿಯಂತ್ರಣದಲ್ಲಿದೆ.

Dr. Juneja's
ಡಾ.ಆರ್ಥೋ®
Ayurvedic Oil, Capsules, Spray & Ointment
ದೀರ್ಘಕಾಲಿನ ಕೀಲು ನೋವಿಗೆ
ಪರಿಣಾಮಕಾರಿ ಪರಿಹಾರ
ಇದು ತಾತ್ಕಾಲಿಕ ನೋವು ನಿವಾರಕವಲ್ಲ
ಇದೊಂದು ಆಯುರ್ವೇದಿಕ ಔಷಧ

ಉಪಯುಕ್ತ 8 ಆಯುರ್ವೇದಿಕ ತೈಲಗಳ ಮಿಶ್ರಣದಿಂದ ತಯಾರಿಸಲಾದ ಡಾ. ಆರ್ಥೋ ವಿಶೇಷ ತೈಲವು, ಕೀಲು ನೋವನ್ನು ಆಳದಿಂದ ಶಮನಗೊಳಿಸಲು ಸಹಕಾರಿಯಾಗಿದೆ.
ದಿನಕ್ಕೆ ಒಂದು ಅಥವಾ ಎರಡು ಬಾರಿ 8–10 ಎಂ.ಎಲ್ ತೈಲವನ್ನು ನೋವಿನ ಭಾಗದ ಮೇಲೆ ಮೃದುವಾಗಿ ಮಸಾಜ್ ಮಾಡಿರಿ.
Helpline : 7876977777 | Available at all medical & general stores
ಹಳೆಯ ಮತ್ತು ದೀರ್ಘಕಾಲಿನ ಕೀಲು ನೋವಿಗೆ, ಡಾ.ಆರ್ಥೋ ಆಯುರ್ವೇದಿಕ ಕ್ಯಾಪ್ಸೂಲ್ಸ್ ಕೂಡ ಬಳಸಲು ಶಿಫಾರಸ್ಸು ಮಾಡಲಾಗಿದೆ.